to the House that two petitions have been received by me, one from the President of the Bangalore Hotels Association in respect of the Mysore Sales Tax (Amendment) Bill, 1954, and the other from the President of the Rayat Sangha of Sringeri Jahagir in respect of the Mysore (Religious and Charitable) Inams Abolition Bill, 1954.

Mr. DEPUTY SPEAKER.—As required by rule 98 of the Rules of Procedure and Conduct of Business in the Mysore Legislative Assembly, I refer the two petitions reported by the Secretary to the Committee on Petitions.

BUDGET FOR 1954-55—GENERAL DISCUSSION—(*Contd.*)

Mr. DEPUTY SPEAKER.—Now, General Discussion on the Budget will be resumed. There are so many members, as many as 30, who have expressed their desire to speak today. I do not know how to adjust the time. At the same time, I would like to know from the Leader of the House what time the Government would require for answering.

Sri K. HANUMANTHAIYA (Leader of the House).—Sir, two Ministers have to reply today, that is, the Minister for Public Works as well as the Chief Minister. I think you may kindly give me one hour, and the Minister for Public Works about half an hour. The discussion would be facilitated much if the Hon'ble Minister for Public Works is given an opportunity to speak straightaway or after one speaker so that some other speakers may intervene and I am given the opportunity for final reply.

Mr. DEPUTY SPEAKER.—Then would you like to summarise as Leader of the House or will any other Minister reply on behalf of Government?

Sri K. HANUMANTHAIYA.—At the end, I require about an hour and half an hour for the Revenue Minister; he may be given an opportunity either straightaway or after one member speaks so that between the Revenue Minister's speech and mine some other members may be given opportunity to speak.

Mr. DEPUTY SPEAKER.—Shall we sit till one o'clock?

Sri Mulka GOVINDA REDDY (Chitaldrug).—I have one suggestion to make, Sir. I had said that we can hold a night session if necessary. In view of the fact that we are having a holiday to-morrow (Sunday), is it not desirable that we should have a session to-morrow because it would facilitate Members expressing their views on the important Budget proposals.

ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ-ಹೆಗ್ಗಡದೇವನ ಕೋಟೆ).—ಮೊದಮೊದಲು ಹೆಚ್ಚು ಹೆಚ್ಚು ಕಾಲಾವಕಾಶ ಕೊಟ್ಟು ಈಗ ಇತರರಿಗೆ ಮಾತನಾಡಲೂ ಅವಕಾಶ ಕೊಡದಿದ್ದರೆ ಅನೇಕರಿಗೆ disappoint ಆಗುತ್ತದೆ. ಆದ್ದರಿಂದ ಮಧ್ಯಾಹ್ನ ಪುನಃ ಸಭೆ ಕುಳಿತುಕೊಂಡು ಆದಷ್ಟು ಜನರಿಗೆ ಅವಕಾಶ ಕೊಡುವುದು ಉತ್ತಮ ಎಂದು ಕಾಣುತ್ತದೆ. ಇದನ್ನು ಯೋಚನೆ ಮಾಡಬಹುದು.

Sri M. PALANIYAPPAN (Ulsoor).—We may have Government reply on Monday, Sir.

Sri K. HANUMANTHAIYA.—No, Sir. In fact originally Budget discussion was fixed only for three days; and when the Members made a request, the Speaker thereupon took a decision to extend it by one more day. Even if you extend it by one more day, it is not as though every Member will have the satisfaction of having spoken. Therefore, as is the practice, it is not possible for all Members to speak and it is not necessary also. Therefore, we may adhere to the schedule and we have to close I suppose at 12 NOON according to schedule or at 12-30, five minutes this side or that. Regarding the night session, we will consider it on its merits on some other occasion.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸದಸ್ಯರು ಮಾತನಾಡುವ ಅವಶ್ಯಕತೆ ಇದೆಯೋ ಇಲ್ಲವೇ ಎಂಬುದನ್ನು ಯಾರು ತೀರ್ಮಾನ ಮಾಡುವವರು?

Mr. DEPUTY SPEAKER.—I think you need not worry about it.

Sri J. MOHAMED IMAM (Jagalur).—In view of the large number of Members who are anxious to speak, I would suggest, by way of a compromise, that we can meet for two hours to hear the Government reply so that the whole of this morning will be available for the Members to offer their views on the Budget. That is the compromise and *via media* which I can suggest and

(Sri J. MOHAMED IMAM.)

which I am sure the Hon'ble Leader of the House will also accept.

Sri M. LINGANNA (Nanjangud).—Sir, I want to give a suggestion, Sir. There is a petition presented which is signed by 31 Members of this House. I believe the Budget Session is most important and probably every one of us is aware that it is an important part of the business of this House to pass the Budget and in so doing to offer their observations. This House also has the powers of legislation and that is also important. My idea is to have an evening session and I believe the Leader of the House is also agreeable to it, because he is a democrat and I know he will not easily brush aside and over-rule the wishes of 31 members representing this House expressed through a petition which has already been presented. There are important taxation proposals which will have to be discussed and there is scope for a lot of adjustment in regard to them and other administrative matters. So, I most earnestly appeal to the Leader of the House to agree to hold an evening session today and thereby facilitate the Members to express their opinion on this most paramount part of the work of this House.

Sri K. HANUMANTHAIYA.—Sir, the appeal is most persuasive no doubt. The difficulty is this. In view of the availability of time which was known beforehand, I have several engagements fixed at Mysore. I have to go. I will give my reply at about 11 o'clock and the other Ministers will be here and if you can dispense with my presence and hold an evening session, I have no objection.

Mr. DEPUTY SPEAKER.—Is it the desire of the Hon'ble House to have an afternoon session today?

HON'BLE MEMBERS.—Yes.

Mr. DEPUTY SPEAKER.—Shall we meet at 3 o'clock?

Sri Kadidal MANJAPPA (Minister for Revenue and Public Works).—In the morning we can sit till 12-30 only because we are meeting once again in the afternoon. We can commence in the afternoon at 4 o'clock, Sir.

Mr. DEPUTY SPEAKER.—We will rise today at 12-30 and again meet at 4 o'clock in the afternoon.

And so far as Budget discussion is concerned, the Chair will have to use its discretion very strictly however unpleasant and unwelcome to Members. I cannot help it. We will have to fix a time limit and I think each Member will not have more than five minutes.

Sri Mulka Govinda Reddy will speak now.

Sri Mulka GOVINDA REDDY.—Mr. Speaker, Sir, the Budget Estimates have been presented to us in an atmosphere of stress and strain as has been presented by the Centre in Parliament. Sir, people of India and people of Asia thought that after the Berlin Conference of the Four Big Foreign Ministers, the World tension is going to ease; and in the wake of the Berlin Conference, it was decided to hold a conference of the Big Five Powers at Geneva in April to solve the world problems and reduce tension and establish peace in Korea and Indo-China. The proposed American Military Aid and the supply of weapons for mass murder to Pakistan has created a bitter tension in the minds of the people of Asia and especially of India. This American aid to Pakistan is not a mere aid to Pakistan, is not an attempt to curtail Communism, but is an aid which in its implication is going to intervene in the internal affairs of India and is going to put a stop to the friendly negotiations that were undertaken by the Prime Ministers of India and Pakistan. When such is the case and when the American intervention has come in our affairs, should we merely protest and stop at that? Is it not desirable Sir, that we should suggest to the Government of India that some very positive steps be taken to prevent a further intervention of America in the internal affairs of Asia where people are struggling for preservation of the independence that they have won and where people are struggling for liberating themselves from the foreign yoke of French and British imperialisms. Sir, we join with the Government and with all forces of peace-loving people and say that we are one with the

Government of India with regard to this American......

Sri K. HANUMANTHAIYA (Chief Minister).—Be one with regard to all matters.

Sri Mulka GOVINDA REDDY.—......this American aid to Pakistan.

Sir, when the people of Mysore were in dire need due to the continuous occurrence of famine in Mysore State, we had timely help from the people of Russia and China. The people of Russia and China made kindly aid in foodgrains costing Rs. 16,94,500 and cash grants to the extent of Rs. 1,25,000. I convey on behalf of this House our deep debt of gratitude to these generous minded benefactors. I join with the Chief Minister in conveying our gratitude to the people of Russia and China.

The recent tour of the Soviet Cultural Delegation in India and their visit to Bangalore and Mysore has strengthened the bonds of friendship between India and Russia.

Sir, a very peculiar stand was taken by the Hon'ble Member from Maddur, Sri Veeranna Gowdh, the other day, that the Opposition is criticising the Government's policies for the sake of opposition and that the Opposition and some members of the Opposition who were against freedom movement have no right to criticise the policies of the Government.

Sri K. HANUMANTHAIYA.—You have to be fair. He did not say that they have no right to criticise. He only said that they are criticising in this fashion. Please be fair. Do not impute motives, which he did not have.

Sri Mulka GOVINDA REDDY.—Whatever might be the position, Sir, it is equally true that members who were opposed to freedom movement and who worked against the freedom movement are within the Congress. The Congress that fought for the liberation of India, for the establishment of freedom in India is not the Congress that is existing today. The Congress that fought British Imperialists is dead. The Congress which fought for the independence of India died along with the assassination of Mahatma Gandhi. Let me tell you......

Sri K. HANUMANTHAIYA.—Is it necessary to use such strong language, especially when he has appealed that all of us are one in the matter of foreign policy and all that? It is hardly necessary to use such extreme language.

Mr. DEPUTY SPEAKER.—He can conveniently avoid such language. Unfortunately, it has become the practice of some members to use strong language.

Sri Mulka GOVINDA REDDY.—I am in agreement......

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಕಾಂಗ್ರೆಸ್ಸನ್ನು dissolve ಮಾಡಬೇಕೆಂದು ಗಾಂಧೀಜಿ ಹೇಳಿರಲಿಲ್ಲವೇ ?

Mr. DEPUTY SPEAKER.—Sri Mulka Govinda Reddy is on his legs.

Sri Mulka GOVINDA REDDY.—I am in agreement with the Chief Minister when he said that he welcomed the appointment of the Commission regarding the redistribution or re-organisation of States in India. The anachronism, the division into Part A, B and C States is not desirable to be continued. As early as possible these distinctions should be done away with and equal powers should be invested in all States.

Mr. DEPUTY SPEAKER.—Sri Mulka Govinda Reddy, you must remember your time-limit. You should have taken your chance on the first day itself.

Sri Mulka GOVINDA REDDY.—I have got to catch the train also, Sir.

Sri K. HANUMANTHAIYA.—Do not miss the bus.

Sri Mulka GOVINDA REDDY.—Though I am in agreement with what has been stated by the Chief Minister on page 8 of his speech, regarding administrative services, it is a very dangerous weapon to invest such power with the Government.

Sri K. HANUMANTHAIYA.—Even now we have that power.

Sri Mulka GOVINDA REDDY.—"The question of compulsory retirement or demotion of inefficient persons will also be examined and suitable action taken." Here it is stated that promotions will not be given on the basis of seniority and length of service and that a radical change is necessary. "In promoting persons to higher posts

(SRI MULKA GOVINDA REDDY.)

greater emphasis should be placed on merit and integrity in order to encourage really competent persons. Seniority will not be the only consideration. In order to give recognition for good and honest work, a periodical survey will be conducted in all Departments to draw up a list of persons of outstanding merit and integrity." That is what he has stated. In addition to that "realistic approach and real service rendered," he has stated, should be the main criterion for promoting officers. It is quite likely that they may be efficient officers, who can write very good notes and speak also very well, but they may be incompetent just the same to administer when they go to districts or when they are entrusted with executive jobs. This rule of real service rendered should be the criterion that should be taken into consideration while promoting officers.

The question of prohibition is a very vexed problem. As I have been suggesting and as my party has been suggesting, it is better we appoint a committee, not a committee which will sit for years, to come to some sort of judgment regarding the working of prohibition. The Rama Murthy Committee took only six weeks to assess the present position of prohibition in Andhra. Such a committee should be appointed to assess the progress or the working of prohibition so that we may take further steps either to extend or to scrap prohibition.

Sri Srinivasa Iyengar, the other day, stated emphatically that there should be some improvement, some re-organisation ragarding the sales agencies of Government Industrial concerns. The sale of the products of the Government Soap Factory and the Sandal Oil Factory has been entrusted to some agents, which policy is not very desirable. This should be developed by the Government themselves and they must have their sales offices in Mysore State and in some important cities in India so that we may get better returns. Regarding the Medical Department, Sir, seven mobile dispensaries have been undertaken. This is a very important thing. Sir, it is very difficult to have enough dispensaries and hospitals in all the villages wherever we want. But these mobile dispensaries will serve the interest of the rural population if we have them in larger number.

10 A.M.

Mr. DEPUTY SPEAKER.—Your time is up.

Sri Mulka GOVINDA REDDY.—Yes, Sir, I am finishing. Regarding the taxation measures that have been heaped on us, we must emphatically protest that these measures are going to uproot the agricultural community in Mysore State. On the one hand you say that you are helping the agriculturist to grow more food. On the other hand you are crushing it. You have already squeezed the life out of him and you want to impose this crushing taxes on him whose power has not been enhanced and for which you have done pretty little. This is really amazing. As some of the Hon'ble Members said, this is really obstinacy on the part of the Government which has forfeited all rights to serve the rural people and they have no right to impose such taxes. These taxes will be opposed tooth and nail......

Sri K. HANUMANTHAIYA.—Do not use your tooth and nail; only use argument.

Sri Mulka GOVINDA REDDY.—...... and if necessary a tearing and raging no-tax campaign would be undertaken and we will see that ryots do not yield to such imposition, arbitrary imposition of taxes by the Government. They should protest with all their might and if necessary to uproot the Government itself. Sir, I have done; thank you.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಮಾನ್ಯ ಹಣಕಾಸಿನ ಸಚಿವರು ಈಗ ನಮ್ಮ ಮುಂದೆ ಮಂಡಿಸಿರುವ ಆಯವ್ಯಯ ಪಟ್ಟಿಯು ಸ್ವಾಗತಾರ್ಹವಾಗಿದೆಯೆಂದು ಧಾರಾಳ ವಾಗಿ ಹೇಳಬಹುದು. ಅವರ ಭಾಷಣದ 29ನೆಯ ಪುಟದಲ್ಲಿ ತೋರಿಸಿರುವ ಅಂಕಿ ಅಂಶಗಳನ್ನು ನೋಡಿ ದರೆ 1946-47ನೆಯ ಇಸವಿಯಿಂದ ಇಲ್ಲಿಯವರೆಗೆ ಯಾವ ರೀತಿಯಲ್ಲಿ ಅನೇಕ ಇಲಾಖೆಗಳ ಬಾಬುಗಳಿಗೆ ಹಣವನ್ನು ಹೆಚ್ಚಿಸುತ್ತಾ ಬಂದಿದೆ, ಜನರಿಗೆ ಮುಖ್ಯ ವಾಗಿ ಹಳ್ಳಿಗಾಡಿನ ಜನರಿಗೆ, ಸಹಾಯವಾಗುವ ಹಾಗೆ ಹಣವನ್ನು ಒದಗಿಸಿದ್ದಾರೆ ಎಂಬುದು ಗೊತ್ತಾಗು ತ್ತದೆ. ಇಷ್ಟು ಮಾತ್ರವೇ ಅಲ್ಲ; ಇನ್ನೂ ಅನೇಕ ವಿಷಯಗಳನ್ನು ಈ ಸಭೆಯಲ್ಲಿ ಮಾನ್ಯ ಸದಸ್ಯರು ಚರ್ಚೆಮಾಡಿದ್ದಾರೆ. ಗ್ರಾಮಾಂತರಗಳ ನೀರು ಸರಬ

ರಾಯಿ ವಿಷಯದಲ್ಲಿ ಅನೇಕರು ಭಾಷಣಮಾಡಿದರು. ಇಲ್ಲಿಯವರೆಗೆ ಸರ್ಕಾರದವರು ಒದಗಿಸಿರುವ ಹಣ ನೋಡಿದರೆ 7 ಲಕ್ಷಕ್ಕಿಂತ ಹೆಚ್ಚಾಗಿ ಯಾವ ವರ್ಷವೂ ಈ ನೀರು ಸರಬರಾಯಿಗಾಗಿ, ಬಾವಿಗಳಿಗಾಗಿ ಒದಗಿಸಿರಲಿಲ್ಲ, ಈ ವರ್ಷ 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ ಎಂದು ಕಂಡು ಬರುತ್ತದೆ. ಇದರ ಜೊತೆಗೆ ಕಂದಾಯದಿಂದ ಬರುವ ದುಡ್ಡಿನಲ್ಲಿ ಶೇಕಡ 12½ಯಷ್ಟು ಗ್ರಾಮಾಂತರದ ಅಭಿವೃದ್ಧಿ ಕಾರ್ಯಗಳಿಗೆ ಕೊಡುವುದಾಗಿ ತೀರ್ಮಾನ ಮಾಡಿರುವುದರಿಂದ ಆ ಹಣದಲ್ಲಿ ಕೂಡ ಬಾವಿಗಳನ್ನು ತೆಗೆಸುವುದಕ್ಕೆ ಮತ್ತು ರಸ್ತೆ ವಗೈರೆ ಹಳ್ಳಿಗಳಲ್ಲಿ ಮಾಡುವುದಕ್ಕೆ ಸಹಾಯವಾಗುತ್ತದೆ. ಆದರೆ ಇಷ್ಟು ಮಾತ್ರದಿಂದಲೇ ಹಳ್ಳಿಗಾಡಿನ ಅಭಿವೃದ್ಧಿಕಾರ್ಯ ಪರಿಪೂರ್ಣವಾಯಿತೆಂದು ಹೇಳುವುದು ಕಷ್ಟ. ಆದರೆ ಇರುವ ಹಣಕಾಸಿನಲ್ಲಿ ಎಷ್ಟು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸಿದ್ದಾರೆಂದು ಹೇಳಬಹುದು. ಆದರೂ ಕೂಡ ನಮ್ಮ ನಿರೀಕ್ಷೆ ಬಹಳವಾಗಿದೆ. ಕುಡಿಯುವ ನೀರಿನ ಬಾವಿಗಳ ವಿಷಯದಲ್ಲಿ ಒಂದು ಸಲಹೆ. ಇಲ್ಲಿಯವರೆಗೆ ತೆಗೆಸಿರುವ ಬಾವಿಗಳಿಗೆ ಕೊಡಬೇಕಾದ ಬಾಕಿ ಹಣವನ್ನು ಕೂಡಲೆ ಕೊಟ್ಟು ಆ ಮೇಲೆ ಹೊಸದಾಗಿ ಬಾವಿಗಳನ್ನು ತೆಗೆಯುವುದಕ್ಕೆ ದುಡ್ಡು ಒದಗಿಸುವುದು ಬಹಳ ಅವಶ್ಯಕ. ಲಕ್ಷಾಂತರ ರೂಪಾಯಿಗಳು ಈಗ ಅರ್ಧಂಬರ್ಧ ತೆಗೆದಿರುವುದಕ್ಕೆ ಬಾಕಿ ಕೊಡಬೇಕಾಗಿದೆ. ಅದನ್ನು ಕೊಡುವುದಕ್ಕೆ ಮೊದಲು ಏರ್ಪಾಡು ಮಾಡಬೇಕು. ನನಗೆ ತಿಳಿದಮಟ್ಟಿಗೆ ಅನೇಕ ಗ್ರಾಮಗಳಿಂದ ಬಾವಿಗಳು ಬೇಕೆಂದು ಅರ್ಜಿ ಬಂದಮೇಲೆ ಡೆಪ್ಯುಟಿ ಕಮಿಷನರು ಸಾಮಾನ್ಯವಾಗಿ ಅಂದಾಜುಗಳನ್ನು ತಯಾರ್ಮಾಡಿಸಿ ಕೆಲಸ ಮಂಜೂರ್ಮಾಡುವ ಪದ್ಧತಿಯಿದೆ. ಈ ಎಲ್ಲ ಅಂದಾಜುಗಳಿಗೆ ತಕ್ಕಷ್ಟು ದುಡ್ಡನ್ನು ಸರ್ಕಾರದವರು ಒದಗಿಸಿರುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಕೊಟ್ಟಿರುವ ಹಣದ ಎರಡು ಮೂರರಷ್ಟು ಖರ್ಚುಮಾಡಿ ಬಾಕಿ ತೋರಿಸುವುದಕ್ಕೆ ಪ್ರತಿವರ್ಷವೂ ಅವಕಾಶವಾಗಿದೆ. ಇದು ಅಂಕಿ ಅಂಶಗಳಿಂದ ಗೊತ್ತಾಗಿದೆ. ಹಳ್ಳಿಗಾಡಿನ ಸಂಪರ್ಕವಿರುವ ಮಾನ್ಯ ಸದಸ್ಯರೆಲ್ಲರಿಗೂ ಇದು ತಿಳಿದ ವಿಷಯವೇ ಆಗಿದೆ.

ಇನ್ನು ಪಂಪುಗಳನ್ನು ಒದಗಿಸಿರುವುದನ್ನು ನೋಡಿದರೆ ಮಾನ್ಯ ಮಂತ್ರಿಗಳ ಭಾಷಣದ 24ನೆಯ ಪುಟದಲ್ಲಿ ವಿವರಗಳಿವೆ. ಅದರಲ್ಲಿ ಹಿಂದಿನ ಕಾಲದ ವಿಷಯವನ್ನು ಬಿಡೋಣ 1951-52ರಿಂದೀಚೆಗೆ 3,387 ಬಾವಿಗಳಿಗೆ ಪಂಪುಗಳನ್ನು ಕೊಟ್ಟಿದ್ದುದು ಈಗ 5,166ಕ್ಕೆ ಏರಿದೆ. ವ್ಯವಸಾಯದ ಅಭಿವೃದ್ಧಿಗಾಗಿ ಪಂಪುಗಳನ್ನೊದಗಿಸಲು ಅನೇಕ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಕೂಡ ಇದಕ್ಕೆ ಸಹಾಯ ನೀಡುತ್ತಿದೆ. ಈಗಿರುವ ಪರಿಸ್ಥಿತಿಯಲ್ಲಿ ನನಗೆ ತಿಳಿದ ಹಾಗೆ ಬೆಂಗಳೂರು ಪಟ್ಟಣದಲ್ಲಿ 1956ನೆಯ ಇಸವಿಯಿಂದ ಮುಂದೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆಂದು ಕೇಳಿದ್ದೇನೆ. ಇದನ್ನು ನೋಡಿದರೆ ಹೊಸದಾಗಿ ಷಿಂಷಾ ಅಥವಾ ಹೊನ್ನೆಮರಡು ಯೋಜನೆಗಳನ್ನು ಸರ್ಕಾರದವರು ತೆಗೆದುಕೊಂಡು ಆದಷ್ಟು ಬೇಗ ವಿದ್ಯುಚ್ಛಕ್ತಿ ನಮ್ಮ ದೇಶದ ಇತರ ಕಡೆಗಳಿಗೂ ಒದಗಿಸಿ ದೀಪದ ಅನುಕೂಲ ಕಲ್ಪಿಸಿಕೊಡಬೇಕೆಂದು ಸೂಚಿಸುತ್ತೇನೆ. ಸರ್ಕಾರ ಅದಕ್ಕೆ ಪ್ರಯತ್ನಮಾಡಬೇಕು. ಸರ್ಕಾರದವರು ನಮ್ಮ ಮುಂದಿಟ್ಟಿರುವ ಆಯವ್ಯಯ ಪಟ್ಟಿಯಲ್ಲಿ ಷಿಂಷಾ ಯೋಜನೆಗೆ ಕೇವಲ 5 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇನ್ನೂ ಹೆಚ್ಚಾಗಿ ಒದಗಿಸಿ ಈ ಯೋಜನೆಯನ್ನು ಇನ್ನೆರಡು ವರ್ಷಗಳೊಳಗಾಗಿ ಪೂರೈಸುವಂತೆಮಾಡಿ ಗ್ರಾಮಾಂತರ ಪ್ರದೇಶಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನೊದಗಿಸಲು ಪ್ರಯತ್ನಮಾಡಬೇಕು.

ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಈಗ ಹಳ್ಳಿಗಾಡಿಗೆ ಹೆಲ್ತ್ ಸೆಸ್ ಹಾಕಿದರು. ಅದನ್ನು ಹಾಕಿದಮೇಲೆ ದೇಶದ ಪ್ರತಿ ಗ್ರಾಮಕ್ಕೂ ಡಿ.ಡಿ.ಟಿ. ಹೊಡೆಯುವುದಕ್ಕೆ ಏರ್ಪಾಡು ಮಾಡಿದ್ದಾರೆ. ಬೈಲು ಸೀಮೆಯಲ್ಲೂ ಮಲೇರಿಯಾ ಇದ್ದ ಪ್ರದೇಶಗಳಿಗೆ ಡಿ.ಡಿ.ಟಿ. ಪ್ರಯೋಗ ನಡೆಸಿರುವುದರಿಂದ ಮಲೇರಿಯಾ ಹಾವಳಿ ಸ್ವಲ್ಪಮಟ್ಟಿಗೆ ತಪ್ಪಿದೆ. ಆದರೆ ಇನ್ನೂ ಅನೇಕ ಪ್ರದೇಶಕ್ಕೇನೂ ಮಾಡದೆ ಬಿಟ್ಟಿದೆಯೆಂದು ಪ್ರಶ್ನೋತ್ತರಗಳ ಕಾಲದಲ್ಲಿ ಪ್ರಸ್ತಾಪಮಾಡಲ್ಪಟ್ಟಿತು. ಆದ್ದರಿಂದ ದೇಶದಲ್ಲಿ ಮಲೇರಿಯಾ ಇರುವ ಎಲ್ಲಾ ಭಾಗಗಳಿಗೂ ಸಹ ಡಿ.ಡಿ.ಟಿ. ಹೊಡೆಯುವಂತೆ ಏರ್ಪಾಡು ಮಾಡಬೇಕು.

ಇನ್ನು ಮುಖ್ಯಮಂತ್ರಿಗಳ ಭಾಷಣದಲ್ಲಿ ಸರ್ಕಾರಿ ನೌಕರರ ದಕ್ಷತೆ ಪ್ರಾಮಾಣಿಕತೆ ಇವುಗಳ ವಿಷಯದಲ್ಲಿ ಒಂದು ಅಂಶ ಹೇಳಿದ್ದಾರೆ. ಇದು ನನ್ನಭಿಪ್ರಾಯದಲ್ಲಿ ಬಹಳವಾಗಿ ಸ್ವಾಗತಾರ್ಹವಾದುದು. ಪ್ರಾಮಾಣಿಕತೆ, ದಕ್ಷತೆಯೆನ್ನುವುದು ಬಿಸಿಲುಗುದುರೆಯಿದ್ದ ಹಾಗೆ. ದೇಶಪ್ರೇಮವಿಲ್ಲದೆ ದಕ್ಷತೆಯಿದ್ದರೂ, ಬಹಳ ಬುದ್ಧಿವಂತಿಕೆಯಿಂದ ಕೆಲಸಮಾಡಿದರೂ ಅನೇಕ ಸಂದರ್ಭಗಳಲ್ಲಿ ಕೆಡುಕಾಗುತ್ತದೆ. ಇದಕ್ಕೆ ಬೇಕಾದರೆ ಉದಾಹರಣೆ ಕೊಟ್ಟು ಸಭೆಯ ಮುಂದೆ ರುಜುವಾತು ಮಾಡಬಲ್ಲೆ. ದಕ್ಷತೆಯಿರಬೇಕಾದದ್ದು ಬಹಳ ಅಗತ್ಯ. ಈಗಿರುವುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಪ್ರಾಮಾಣಿಕತೆ ಮತ್ತು ದೇಶಪ್ರೇಮವಿರಬೇಕಾದುದು ಇನ್ನೂ ಹೆಚ್ಚಿನ ಅಗತ್ಯ. ಈ ನೀತಿಯನ್ನು ಆಧಾರವಾಗಿಟ್ಟುಕೊಂಡು ಅಧಿಕಾರಿಗಳನ್ನು ಹತೋಟಿಯಲ್ಲಿಟ್ಟರೆ ಅವರಿಂದ ಇನ್ನೂ ಹೆಚ್ಚಾಗಿ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೆಂಬುದು ನನ್ನ ಅಭಿಪ್ರಾಯ.

ಇನ್ನು ಪಶುಪಾಲನಾ ಇಲಾಖೆಯ ವಿಷಯ. ಮುಖ್ಯ ಮಂತ್ರಿಗಳ ಭಾಷಣದಲ್ಲಿ ಈ ಸಂದರ್ಭದಲ್ಲಿ ಹೆಚ್ಚು ವಿಷಯ ಗೊತ್ತಾಗುವಂತಿಲ್ಲ. ವೈದ್ಯಕೀಯ ನಿಲಕರಣೆ ವಿಷಯ ಮಾತ್ರ ಪ್ರಸ್ತಾಪಿಸಲ್ಪಟ್ಟಿದೆ. ಮುಖ್ಯವಾಗಿ ತಳಿಗಳ ಅಭಿವೃದ್ಧಿ ಕಲಸ ನಡೆಯಬೇಕಾದದ್ದು ಬಹಳ ಅಗತ್ಯ. ನಮ್ಮ ದೇಶದಲ್ಲಿ ಹಳ್ಳಿಕಾರ್, ಅಮೃತಮಹಲ್, ಸಿಂಧಿ ಮತ್ತು ಬೆರಕೆ ಜಾತಿಯ ರಾಸುಗಳು ಅನೇಕವಾಗಿವೆ. ಆದರೆ ಎಲ್ಲಾ ಜಾತಿಗಳ ತಳಿ ಅಭಿವೃದ್ಧಿಗಾಗಿ ಕೈಕೊಂಡಿರುವ ಕಾರ್ಯಕ್ರಮ ಬಹಳ ಕಡಮೆ. ಈಗಲೇ ಇದಕ್ಕೊಂದು ಸಮಗ್ರ ಯೋಜನೆ ಮಾಡಬೇಕಾದದ್ದು ಬಹಳ ಅಗತ್ಯ. ಈ ರೀತಿಯಲ್ಲಿ ಯೋಜನೆಮಾಡಿ ಸಂಸ್ಥಾನದಲ್ಲಿ ತಳಿ ಅಭಿವೃದ್ಧಿ ಮಾಡಿದರೆ ಇಡೀ ರೈತ ಜನಾಂಗದಲ್ಲಿ ಆಶಾದಾಯಕವಾದ ಸ್ಫೂರ್ತಿಯುಂಟಾಗುತ್ತದೆಂದು ಕಾಣುತ್ತದೆ. ಇದಕ್ಕೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ದಕ್ಷರಾದ ಮಂತ್ರಿಗಳು ನಮಗೆ ದೊರತಿರುವುದು ನಮ್ಮ ಸುಯೋಗ. ಅವರು ಕುರಿಕುಪ್ಪೆ ಮತ್ತು ಅಜ್ಜಂಪುರಗಳಲ್ಲಿ ಯಾವ ಯೋಜನೆಯಿದೆಯೋ ಅದನ್ನು ದೇಶದ ಎಲ್ಲಾ ಭಾಗಗಳಿಗೂ ಅನ್ವಯಿಸುವ ಹಾಗೆ ದೇಶದ ಮುಂದೆ ಒಂದು ಯೋಜನೆಯನ್ನಿಟ್ಟು ರೈತರಿಗೆ ಸಹಾಯಮಾಡಬೇಕು.

ಇನ್ನು ಮರಾಮತ್ ಇಲಾಖೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುವುದು ಅಗತ್ಯವಾಗಿದೆ.

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಸಂಗೇನಹಳ್ಳಿ ಮತ್ತು ತುಪ್ಪದಹಳ್ಳಿ ಈ ಕೆರೆಗಳ ವಿಚಾರದಲ್ಲಿ ಒಂದು ರಿಪೋರ್ಟನ್ನು ಸಮಿತಿಯವರು ಕೊಟ್ಟಿದ್ದಾರೆ. ಈ ರಿಪೋರ್ಟಿನಲ್ಲಿರತಕ್ಕ ಅಂಶಗಳು ಯಾವರೀತಿಯಲ್ಲೂ ಉತ್ಪ್ರೇಕ್ಷೆಗಳಲ್ಲವೆಂದು ನಾನು ಧಾರಾಳವಾಗಿ ಹೇಳಬಲ್ಲೆ. ಅವರು ಸೂಚಿಸಿರುವ ರೀತಿಯಲ್ಲಿ ಒಂದು ಖಂಡಿತವಾದ ಮತ್ತು ನಿಶ್ಚಿತವಾದ ನೀತಿಯನ್ನು ಸರ್ಕಾರದವರು ಅನುಸರಿಸುವುದಾದರೆ ಈ ಮರಾಮತ್ತು ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸ ಮಾಡುವ ದಕ್ಕೆ ಸಾಧ್ಯ, ಅಲ್ಲಿ ನಷ್ಟಗಳು ಹೀಗೆ ಪದೇ ಪದೇ ಆಗುವುದನ್ನು ತಪ್ಪಿಸುವುದಕ್ಕೆ ಸಾಧ್ಯ ಎಂದು ಸ್ಥೂಲವಾಗಿ ಹೇಳಬಹುದು. ಆ ರಿಪೋರ್ಟಿನ ಪ್ರಕಾರ ಯಾರುಯಾರು ತಪ್ಪಿತಸ್ತರೋ ಅವರನ್ನು ನಿರ್ದಿಷ್ಟಪಡಿಸಿ ಅವರಮೇಲೆ ದಯ ದಾಕ್ಷಿಣ್ಯಗಳಿಲ್ಲದೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನನಗೆ ಇನ್ನೂ ವಿವರವಾಗಿ ಈ ಮರಾಮತ್ತು ಇಲಾಖೆಯಲ್ಲಿ ನಡೆಯುತ್ತಿರುವ ಕೆಲಸಗಳನ್ನು ತಿಳಿಸಬೇಕೆಂದು ಆಸೆ. ಆದರೆ ಕಾಲದ ಮಿತಿಯಿಂದ ಅಷ್ಟಕ್ಕೆ ಹೋಗದೆ ಒಂದು ಉದಾಹರಣೆಯನ್ನು ಮಾತ್ರ ಇವೊತ್ತು ಪ್ರಸ್ತಾಪ ಮಾಡಿ ಮುಗಿಸುತ್ತೇನೆ.

ಈ ಇಲಾಖೆಯಲ್ಲಿ ಕಾಮಗಾರಿಗಳನ್ನು ಕಂಟ್ರಾಕ್ಟ್ ಕೊಡುವ ಸಂದರ್ಭದಲ್ಲಿ ಅದನ್ನು ಇಷ್ಟೇ ಕಾಲದಲ್ಲಿ ಪೂರೈಸಿಕೊಡಬೇಕೆಂದು ಟೆಂಡರಿನ ಷರತ್ತುಗಳಲ್ಲಿ ಹೇಳಿರುತ್ತದೆ. ಆದರೆ ಕಂಟ್ರಾಕ್ಟರುಗಳು ಉದ್ದೇಶಪಟ್ಟು ಮುಂದಿನವರ್ಷ ಷೆಡ್ಯೂಲ್ ದರಗಳು ಜಾಸ್ತಿಯಾಗುತ್ತವೆ ಯೆಂಬ ನಿರೀಕ್ಷಣೆಯನ್ನಿಟ್ಟುಕೊಂಡು ಕಾಲ ತಳ್ಳಿಕೊಂಡುಹೋಗುವ ಪದ್ಧತಿ ಇದೆ. ಇದರಿಂದಾಗಿ 5 ಲಕ್ಷ ರೂಪಾಯಿಗಳು, 10 ಲಕ್ಷ ರೂಪಾಯಿಗಳ ಕಂಟ್ರಾಕ್ಟು ಕೊನೆಗೆ 20 ಲಕ್ಷ, 50 ಲಕ್ಷ ರೂಪಾಯಿಗಳಿಗೂ ಏರಿರುವ ಉದಾಹರಣೆಗಳುಂಟು. ನಮ್ಮ ತಾಲ್ಲೂಕಿನಲ್ಲೇ ಕೇವಲ 75,000—ರೂಪಾಯಿಗಳಿಗೆ ಆಗುತ್ತದೆಂದು ಅಂದಾಜುಮಾಡಿ ತೆಗೆದುಕೊಂಡ ಒಂದು ಕಾಮಗಾರಿ ಒಂದು ಲಕ್ಷ 73 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಅಲ್ಲದೆ ಕಂಟ್ರಾಕ್ಟ್ ಕೊಡುವ ಸಂದರ್ಭದಲ್ಲಿ ಅಧಿಕಾರವರ್ಗದವರು ಎಷ್ಟರಮಟ್ಟಿಗೆ ತಮ್ಮ ಅಧಿಕಾರವನ್ನು ಮೀರಿ ಕೆಲಸ ಮಾಡುತ್ತಾರೆಂಬ ಬಗ್ಗೆಯೂ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಕಗ್ಗನಹಳ್ಳಿ ಅಣೆ ಎಂಬ ಕೆಲಸವನ್ನು ಮಂಜೂರು ಮಾಡಿದರು. ಮೊದಲು ಇದನ್ನು ಪೀಸ್ ವರ್ಕ್ ಮೇಲೆ ಕೊಡಬೇಕೆಂದು ಸರ್ಕಾರದವರು ಒಂದು ಹುಕುಂ ಪಾಸು ಮಾಡಿದರು. ಆಮೇಲೆ ಸನ್ನಿವೇಶ ನೋಡಿ ಟೆಂಡರ್ ಕರೆಯಬೇಕೆಂದು ಆರ್ಡರ್ ಮಾಡಿದರು. ಟೆಂಡರ್ ಕರೆದ ವೇಳೆಯಲ್ಲಿ ಎಸ್ಟಿಮೇಟು ಇನ್ನೂ ಮಂಜೂರಾಗಿರಲಿಲ್ಲ. ಕೆಲಸ ಮಂಜೂರಾದ ಮೇಲೆ ಪುನಃ ಟೆಂಡರ್ ಕರೆಯಬೇಕೆಂದು ಸರ್ಕಾರದವರು ಆರ್ಡರ್ ಮಾಡಿದ್ದರೂ 32,000 ರೂಪಾಯಿಗಳ ಅಂದಾಜನ್ನು ಎರಡುಭಾಗ ಮಾಡಿ ಅಣೆಯ ಭಾಗ, ಕಾಲುವೆಯ ಭಾಗ ಎಂದು ವಿಂಗಡಿಸಿ ಚೀಫ್ ಎಂಜಿನಿಯರವರು 24,500 ರೂಪಾಯಿಗಳಿಗೆ ತಮ್ಮ ಅಧಿಕಾರದೊಳಗೆ ಬರುವ ರೀತಿಯಲ್ಲಿ ಮಾಡಿಕೊಂಡು, ಹಿಂದೆಯೇ ಸರ್ಕಾರದ ಆರ್ಡರ್ ಆಗಿದ್ದರೂ ಲಕ್ಷ್ಯವಿಡದೆ, ತಮ್ಮ ಅಧಿಕಾರ ಚಲಾಯಿಸಿ ಕೆಲಸ ಮಾಡಿದ್ದಾರೆ. ಅಲ್ಲದೆ, ಇನ್ನೂ ಕೆಲಸ ಷುರುವಾಗಿ 15 ದಿವಸಗಳಾಗಿಲ್ಲ, ಆಗಲೆ ಸೂಪರಿಂಟೆಂಡಿಂಗ್ ಎಂಜಿನಿಯರು ಆ ಎಸ್ಟಿಮೇಟನ್ನು ತಿದ್ದುಪಾಟು ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆಂದು ಕಂಡುಬರುತ್ತದೆ. ಹೀಗಾಗಿ 24,500 ರೂಪಾಯಿಗಳ ಕೆಲಸ 50 ಸಾವಿರ ರೂಪಾಯಿಗಳಾಗುತ್ತದೆಯೆಂದು ಹೇಳಬಲ್ಲೆ. ಮೊದಲು 145 ಅಡಿ ಉದ್ದವಾದರೆ ಸಾಕೆಂದು ಅಂದಾಜು ಮಾಡಿದ್ದುದನ್ನು ಈಗ 225 ಅಡಿಗಳಾಗಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆಲ್ಲಾ ಮುಂಚೆಯೇ Trial pits ಹಾಕಿ ಸ್ಥೂಲವಾಗಿ ಅಂದಾಜು ಮಾಡಬೇಕಾಗಿತ್ತು: ಅಂಥಾದ್ದರಲ್ಲಿ 32 ಸಾವಿರ ರೂಪಾಯಿಗಳ ಅಂದಾಜನ್ನು ಎರಡುಭಾಗ ಮಾಡಿ ಕೊನೆಗೆ 50,000 ರೂಪಾಯಿಗಳವರೆಗೂ ಹೋಗುವಂತೆ ಮಾಡಿರುವುದು ಬಹಳ ಖಂಡನೀಯವಾಗಿದೆ. ನಮ್ಮ ತಾಲ್ಲೂಕಿನಲ್ಲೇ ಇಂತಹ ಅನೇಕ ಅಂಶಗಳನ್ನು ತೋರಿಸಬಲ್ಲೆ. ಆದ್ದರಿಂದ ಇಂಥ ಅಧಿಕಾರಿಗಳಮೇಲೆ ಸರಿಯಾದ ಹತೋಟಿ ಇಟ್ಟುಕೊಂಡು ಇದಕ್ಕೆ ಜವಾಬ್ದಾರರು ಯಾರು ಎಂಬುದನ್ನು ತನಿಖೆಮಾಡಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ತೆರಿಗೆಯ ವಿಚಾರದಲ್ಲಿ ಒಂದು ಮಾತು ಮಾತ್ರ ಹೇಳದೆ ವಿಧಿಯಿಲ್ಲ. ಶ್ರೀಮಾನ್ ಮರಿಯಪ್ಪನವರು ಮಾತನಾಡುತ್ತಾ ಆದಾಯದ ಬಾಬುಗಳಲ್ಲಿ ಎಷ್ಟರ ಮಟ್ಟಿಗೆ ಆದಾಯವನ್ನು ಹೆಚ್ಚಿಸಬಹುದಾಗಿದೆ, ಖರ್ಚಿನ ಬಾಬುಗಳಲ್ಲಿ ಎಷ್ಟರ ಮಟ್ಟಿಗೆ ಖರ್ಚನ್ನು ಕಡಮೆ ಮಾಡಬಹುದಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ನಮ್ಮ ಮುಂದಿಟ್ಟರು. ಸಾಧಾರಣವಾಗಿ ನಮ್ಮ ಸಂಸಾರದಲ್ಲಾದರೂ ಆದಾಯವನ್ನು ತೋರಿಸುವಾಗ ನಮ್ಮ ಮನಸ್ಸಿನಲ್ಲಿ ಎಷ್ಟೇ ಉತ್ಸಾಹವಿದ್ದರೂ, ಸಾಮಾನ್ಯವಾಗಿ ಎಷ್ಟು ಆದಾಯ ನಿರೀಕ್ಷಣೆ ಮಾಡುತ್ತೇವೆಯೋ ಅಷ್ಟನ್ನೂ ತೋರಿಸದೆ ಕಡಮೆ ತೋರಿಸುವುದೇ ಪದ್ಧತಿ. ಸ್ವಲ್ಪ ಹೆಚ್ಚಿಗೆ ಆದಾಯ ಬರುತ್ತದೆಯೆಂದು ನಿರೀಕ್ಷಣೆಯಿದ್ದರೂ ಅದಕ್ಕಿಂತ ಸ್ವಲ್ಪ ಕಡಮೆಯೇ ಅಂದಾಜಿಟ್ಟುಕೊಂಡು ಅದಕ್ಕೆ ತಕ್ಕಂತೆ ಖರ್ಚು ಮಾಡುವುದು ಸೂಕ್ತವಾದ ನೀತಿ.

ಶ್ರೀ ಟಿ. ಮರಿಯಪ್ಪ (ಪಕ್ಕನೂರು-ಉತ್ತರ).— 1952ನೆಯ ಇಸವಿಯ ಆಧಾರದಮೇಲೆ ಸರಿಯಾಗಿ ನಿರೀಕ್ಷಣೆ ಮಾಡಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—1952 ನೆಯ ಇಸವಿಯದೇ ಆದರೂ, ಅದರಿಂದ ಸ್ವಲ್ಪ ಕಡಮೆಯನ್ನೇ ನಾವು ಇಟ್ಟುಕೊಳ್ಳಬೇಕು. ಏಕೆಂದರೆ...

ಶ್ರೀ ಟಿ. ಮರಿಯಪ್ಪ.—1952ನೆಯ ಇಸವಿಯಲ್ಲಿಯೇ 180 ಲಕ್ಷ ಇದೆ. ಅಂಥಾದ್ದನ್ನು ಈಗ 160 ಲಕ್ಷ ಎಂದು ಹೇಳಿದರೆ !

ಶ್ರೀ ಎಚ್. ಹುಚ್ಚಮಾಸ್ತಿಗೌಡ.—1952ರಿಂದೀಚೆಗೆ ಸರ್ಕಾರದವರು ಹಾಕಿಕೊಂಡಿರತಕ್ಕ ಪಾನನಿರೋಧ ನೀತಿಯ ಪ್ರಕಾರ Dry area ಗಳಲ್ಲಿ tap ಮಾಡುವುದಿಲ್ಲವೆಂದು ಹೇಳಿದಮೇಲೆ ಇದರಿಂದ ಕಡಮೆ ಹಣ ಬರಬಹುದೆಂದು ಹೇಳುವುದು ನ್ಯಾಯವಾಗಿದೆ. ಈ ನೀತಿಯನ್ನು ಸರ್ಕಾರದವರು ತಮ್ಮ ಮುಂದಿಟ್ಟಿದ್ದಾರೆ. ಈ ಕಾರಣ ಆದಾಯ ಇನ್ನು ಕಡಮೆಯಾಗಬಹುದೆಂದು ಹೇಳಬಹುದು.

ಆಮೇಲೆ ಖರ್ಚಿನ ಬಾಬುಗಳಲ್ಲಿ ಕಡಮೆ ಮಾಡುವುದಕ್ಕೂ ಅವಕಾಶ ಅಷ್ಟಾಗಿ ಇಲ್ಲ. ಹಳ್ಳಿಗಳಲ್ಲಿ ಅನೇಕ ಕಡೆ ರಸ್ತೆಗಳನ್ನೂ ಕೆರೆಗಳನ್ನೂ ಮಾಡಬೇಕೆಂಬ ಆಶೆ ನಮಗಿದೆ. ನಮ್ಮ ದೇಶದಲ್ಲಿ ಇಂದು 26,000 ಕೆರೆಗಳಿದ್ದರೂ ಚೆನ್ನಾಗಿರುವ ಕೆರೆಗಳೆಂದರೆ 7-8 ಸಾವಿರ ಮಾತ್ರ. ಉಳಿದ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕಾದರೆ ಎಷ್ಟು ಖರ್ಚಾಗುತ್ತದೆಂಬುದನ್ನು ನೋಡಬಹುದು. ಅದರಲ್ಲೂ ರೈತರು ಈ ಕೆರೆಗಳನ್ನು ಸರ್ಕಾರದವರೇ ಜೀರ್ಣೋದ್ಧಾರ ಮಾಡಿಕೊಡಬೇಕು, ಸಾಲಾ

ಬಾದು ಕಾಮುಗಾರಿಗಳನ್ನು ತಾವುಗಳೇ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ನಮ್ಮ ಮೇಲೆ ಸುಂಕಹಾಕಿ ಕೆರೆಗಳನ್ನು P.W.D. ಇಲಾಖೆಯವರಿಂದ ಮಾಡಿಸಿಕೊಡಿ ಎಂದು ಹಳ್ಳಿಗಾಡಿನಲ್ಲಿ ಪ್ರತಿಯೊಬ್ಬರೂ ಕೇಳುತ್ತಿದ್ದಾರೆ. ಈ ರೀತಿಯಾಗಿರುವಾಗ ಎಲ್ಲಾ ಕೆರೆಗಳನ್ನೂ ಸರ್ಕಾರದವರೇ ವಹಿಸಿಕೊಂಡು ದುರಸ್ತು ಮಾಡಬೇಕಾದರೆ ಹೆಚ್ಚು ತೆರಿಗೆಯನ್ನು ಕೊಟ್ಟು ಹೆಚ್ಚು ಆದಾಯ ಸರ್ಕಾರಕ್ಕೆ ಬರುವಂತೆ ಮಾಡಬೇಕಾದದ್ದು ಬಹಳ ಅಗತ್ಯ. ಈ ದೃಷ್ಟಿಯಿಂದ ನೋಡಿದರೆ ತೆರಿಗೆ ಹಾಕುವುದು ಬಹಳ ಸೂಕ್ತವೆಂದು ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಯಾರಿಗೆ ತೆರಿಗೆ ಹಾಕುವುದು ? ಯಾರು ಕೆರೆ ಮಾಡಬೇಕೆಂದು ಹೇಳುತ್ತಾರೋ ಆ ಕೆರೆಗಳ ಹಿಂದಿರತಕ್ಕ ಜಮೀನುಗಳವರ ಮೇಲೆ ಬೇಕಾದರೆ ಹಾಕಿ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ರೀತಿ ಕೆರೆಗಳ ಹಿಂದೆ ಜಮೀನಿರುವವರ ಮೇಲೆ ಮಾತ್ರ ಹಾಕಬೇಕೆಂದರೆ ಬೇರೆಕಡೆ ಕೆರೆಯೇ ಇಲ್ಲದಿರುವವರಿಗೆ ಕೆರೆ ಕಟ್ಟಿಸಿ ಕೊಡುವುದು ಹೇಗೆ ? ಆದ್ದರಿಂದ ಹೀಗೆ ಕೆರೆಯಿದ್ದು ಜಮೀನುಗಳನ್ನಿಟ್ಟುಕೊಂಡಿರುವವರಿಂದ ಹೆಚ್ಚಿಗೆ ತೆರಿಗೆ ತೆಗೆದುಕೊಂಡು ಕೆರೆ ಇಲ್ಲದಿರುವವರಿಗೆ ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕಾದದ್ದು ಸೂಕ್ತ.

ಆಮೇಲೆ ಶ್ರೀಮಾನ್ ವೀರಣ್ಣಗೌಡರು ಕಲ್ಲಿನಲ್ಲಿ ಎಣ್ಣೆಯನ್ನು ಯಾರೂ ತೆಗೆಯುವುದಿಲ್ಲ ಎಂದು ಹೇಳಿದರು. ಆ ರೀತಿಯಾಗಿ ಈಗ ಯಾರೂ ದುಡ್ಡಿಲ್ಲದವನ ಹತ್ತಿರ ಕೇಳುತ್ತಿಲ್ಲ. ಉತ್ಪಾದನಾ ಶಕ್ತಿಯನ್ನು ಹೆಚ್ಚುಮಾಡಿ, ಕೆರೆಗಳನ್ನು ಕಟ್ಟಿಸಿಕೊಟ್ಟು ಅವರಿಂದ ಅಲ್ಪಸ್ವಲ್ಪ ಹಣ ತೆಗೆದುಕೊಂಡು ಕೆರೆಗಳಿಲ್ಲದಿರುವ ಜನರಿಗೆ ಕೆರೆ ಕಟ್ಟಿಸಿ ಕೊಡಲಿಕ್ಕೆ ಸರ್ಕಾರ ಪ್ರಯತ್ನಮಾಡುತ್ತಿದ್ದಾರೆ. ಹಾಗೆಯೇ, ಎಲ್ಲಿ ವಿದ್ಯುಚ್ಛಕ್ತಿಯಿದೆ, ಯಾರು ಉಪಯೋಗಿಸುತ್ತಿದ್ದಾರೆ, ಅವರಿಂದ ಸ್ವಲ್ಪ ಹೆಚ್ಚಿಗೆ ತೆಗೆದುಕೊಂಡು ವಿದ್ಯುಚ್ಛಕ್ತಿ ಒದಗಿನದಿರುವ ಜನರಿಗೆ ಒದಗಿಸಿ ಕೊಡಬೇಕಾದದ್ದು ಸೂಕ್ತ. ಇದಕ್ಕೆ ಹೆಚ್ಚಿಗೆ ತೆರಿಗೆ ಕೊಡಬೇಕಾದದ್ದು ಅಗತ್ಯ ಮತ್ತು ನ್ಯಾಯ. ಆದರೆ ಎಷ್ಟು ಪ್ರಮಾಣದಲ್ಲಿ ಕೊಡಬೇಕೆಂಬುದನ್ನು ಬೇಕಾದರೆ ಸರ್ಕಾರದವರು ಮುಂದೆ ಈ ಬಿಲ್ಲನ್ನು ಮಂಡಿಸುವಾಗ ನಿರ್ಧಾರಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಸದ್ಯಕ್ಕೆ ಸ್ಥೂಲವಾಗಿ ಹೇಳುವುದಾದರೆ ಈ ರೀತಿ ತೆರಿಗೆ ಹಾಕುವುದು ಬಹಳ ಅಗತ್ಯ. ಹಾಗಿಲ್ಲದಿದ್ದರೆ ಯಾವ ಅಭಿವೃದ್ಧಿ ಕಾರ್ಯಗಳನ್ನೇ ಆಗಲಿ, ನಮ್ಮ ಪಂಚವಾರ್ಷಿಕ ಯೋಜನೆಯನ್ನೇ ಆಗಲಿ, ಪರಿಪೂರ್ಣಗೊಳಿಸುವುದಕ್ಕೆ ಸಾಧ್ಯವೇ ಇಲ್ಲವೆಂದು ನನ್ನ ಖಚಿತ ಅಭಿಪ್ರಾಯ.

ಇಷ್ಟನ್ನು ಹೇಳಿ ಈ ಆಯವ್ಯಯ ಪಟ್ಟಿಯನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ.

(*Several Members rose*).

Mr. DEPUTY SPEAKER.—Some Hon'ble Members have sent private slips and some want me to let them know whether they will have their chances to speak. I don't say that such a practice is good. I cannot help it. Hon'ble Members can take their chances as and when they get them. They must catch the eye of the Chair. Sri Shivarudrappa may speak now.

ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ, ಕಳೆದ ಸಾಲಿನ ಬಡ್ಜೆಟ್ ಅಧಿವೇಶನದಲ್ಲಿ ನಾನು ಭಾಷಣ ಮಾಡುತ್ತಿದ್ದಾಗ ಕಾಂಗ್ರೆಸ್ ಸಂಸ್ಥೆಯಲ್ಲೇ ಒಡಕುಗಳೂ ಭಿನ್ನಾಭಿಪ್ರಾಯಗಳೂ ಇವೆ, ಇವು ಇರಬಾರದು ಎಂದು ಹೇಳಿದಾಗ ಶ್ರೀಮಾನ್ ವೆಂಕಟಪ್ಪನವರೂ ಹಾಗೂ ವೀರಣ್ಣಗೌಡರೂ 'ನಿಮಗೆ ಯಾರು ಹೇಳಿದರು' ಎಂದು ಪ್ರಶ್ನೆ ಮಾಡಿದ ಸನ್ನಿವೇಶ ನನಗೆ ಜ್ಞಾಪಕಕ್ಕೆ ಬರುತ್ತಿದೆ. ಆದರೆ ಇವೊತ್ತು ಇದಕ್ಕೆ ಶ್ರೀ ವೆಂಕಟಪ್ಪನವರೂ ಮತ್ತು ವೀರಣ್ಣಗೌಡರೂ ಏನು ಹೇಳುತ್ತಾರೆಂದು ನಿರೀಕ್ಷಿಸುತ್ತಿದ್ದೇನೆ. ನಾನು ಆ ದಿವಸ ಹೇಳುವಾಗ ತಮ್ಮನ್ನು ಪ್ರಾರ್ಥನೆ ಮಾಡಿಕೊಂಡೆ, ಇಂಥ ಸನ್ನಿವೇಶಕ್ಕೆ ಅವಕಾಶ ಕೊಡಬಾರದು ಎಂದು. ಆದರೆ ದುರದೃಷ್ಟವಶಾತ್ ಅದು ಇನ್ನೂ ಸರಿಹೋಗಿಲ್ಲ. ಅದಕ್ಕೆ ಬದಲು ಇನ್ನೂ ದುರವಸ್ಥೆಗೆ ಬರುತ್ತಿದೆಯಲ್ಲಾ ಎಂದು ನನಗೆ ವಿಷಾದವಾಗುತ್ತದೆ.

ಆ ಮೇಲೆ, ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಮಾನ್ಯ ಮಾಜಿ ಮಂತ್ರಿಗಳಾದ ಮರಿಯಪ್ಪನವರಿಗೂ ಹಾಗೂ ಸಿದ್ದಯ್ಯನವರಿಗೂ ಮತ್ತು ಈ ಹೊತ್ತು ಮಂತ್ರಿಮಂಡಳದಲ್ಲಿರುವವರಿಗೂ ಗೊತ್ತಿರುವಂತೆ ಹಂಗಳ ಎಂಬ ಗ್ರಾಮಕ್ಕೆ ನೀರಿನ ಸರಬರಾಯಿಯೇ ಇಲ್ಲದೆ ಬಹಳ ತೊಂದರೆಯಾಗುತ್ತಿದೆ. ಈ ಅಂಶವನ್ನು ಸಚಿವರಾದಿಯಾಗಿ ಎಲ್ಲರೂ ಮನಗಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಈ ಗ್ರಾಮಕ್ಕೆ ಬಂದಿದ್ದಾಗ ಈ ಸಾರಿ ಏನಾದರೂ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅಪ್ಪಣೆ ಕೊಡಿಸಿದರು. ಅಲ್ಲದೆ ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಮಾನ್ಯ ಮಂಜಪ್ಪನವರು ಈ ಸಾರಿಯ ಬಡ್ಜೆಟ್ಟಿನಲ್ಲಿ ಏನಾದರೂ ಮಾಡಿ ಏರ್ಪಾಡುಮಾಡುತ್ತೇವೆಂದು ವಾಗ್ದಾನ ಮಾಡಿದರು. ಆದರೆ ಈಚೆಗೆ ಎಲ್. ಎಸ್. ಜಿ. ಮಂತ್ರಿಗಳನ್ನು ಈ ವಿಷಯದಲ್ಲಿ ಈ ರೀತಿ ವಾಗ್ದಾನ ಮಾಡಿರಲಿಲ್ಲವೇ ಎಂದು ಕೇಳಿದರೆ 'ಅದು ಹೇಗಾಗುತ್ತದೆ ?' ಎಂದು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ರೀತಿಯಾದರೆ ಈ ಕೆಲಸ ಯಾವ ರೀತಿ ನಡೆಯುತ್ತದೆಯೋ ಗೊತ್ತಿಲ್ಲ. ಅಂತೂ ಹೇಗಾದರೂ ಮಾನ್ಯ ಮುಖ್ಯ ಮಂತ್ರಿಗಳೂ ರೆವೆನ್ಯೂ ಮಂತ್ರಿಗಳೂ ಈ ಕಾರ್ಯವನ್ನು ಮಾಡಿಸಿಕೊಡುವುದಕ್ಕೆ ಈ ಸಾರಿಯ ಬಡ್ಜೆಟ್ಟಿನಲ್ಲಿ ಒಂದಿಷ್ಟು ಹಣವನ್ನು earmark ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಎಲೆಕ್ಟ್ರಿಸಿಟಿಯನ್ನೂ ಕೊಟ್ಟರೆ ಅನುಕೂಲವಾಗುತ್ತದೆಂದು ತಿಳಿಸಲಿಚ್ಛಿಸುತ್ತೇನೆ. ಆದರೆ ಬರಿ ಈ ಎಲೆಕ್ಟ್ರಿಸಿಟಿಯೊಂದನ್ನೇ ಕೇಳಿದರೆ ಗ್ರಾಮಾಂತರ ಪ್ರದೇಶಗಳಿಗೆ ಸರಬರಾಯಿ ಮಾಡುವುದರಿಂದ ಲಾಭವಿಲ್ಲವೆಂದೂ ಅದಕ್ಕಾಗಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಕಷ್ಟವಿದೆ ಎಂದು ಸರ್ಕಾರದರು ಈಗ ಹೇಳುತ್ತಿದ್ದಾರೆ. ಈ ಒಂದು ತೊಂದರೆಯನ್ನೂ ಕೂಡ ನಿವಾರಣೆ ಮಾಡಿದಂತಾಗುತ್ತದೆ. ಸರ್ಕಾರದವರು ಈ ಎಲೆಕ್ಟ್ರಿಸಿಟಿ ಮತ್ತು ನೀರು ಸರಬರಾಯಿ ಈ ಎರಡು ಕೆಲಸಗಳನ್ನೂ ಏಕ ಕಾಲದಲ್ಲೇ ಕೈಗೊಂಡರೆ ಇದರಿಂದ ಸರ್ಕಾರಕ್ಕೆ ನಿರೀಕ್ಷಿಸುವಷ್ಟು ಲಾಭ ಬರುತ್ತದೆಯೆಂಬ ಅಂಶವನ್ನೂ ಸೂಚಿಸಿ ಸರ್ಕಾರದವರು ಈ ಎರಡು ಕೆಲಸಗಳನ್ನೂ ಕೈಗೊಳ್ಳಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

(ಶ್ರೀ ಎಚ್. ಕೆ. ಶಿವರುದ್ರಪ್ಪ.)

ಇನ್ನು ರಿಲೀಫ್ ಕಾಂಗಾರಿಗಳ ವಿಚಾರ: ಕೆಲವು ಕಡೆ ಕೆಲಕೆಲವು ಕೆಲಸಗಳೇನೋ ನಡೆದಿರುತ್ತವೆ. ಆದರೆ ನಮ್ಮ ತಾಲ್ಲೂಕಿನಲ್ಲಿ ನಾವು ಬಹಳ ದಿನಗಳಿಂದಲೂ ತೀರಾ ಅಗತ್ಯವಾಗಿರತಕ್ಕಂಥ ಬೊಂಬಲಾಪುರದ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತಲೇ ಬಂದಿದ್ದೇವೆ. ಆದರೆ ಆ ಕೆಲಸ ಇದುವರೆಗೂ ಆಗಿಲ್ಲ. ಆದರೆ ಈ ಕೆರೆ ರಿಪೇರಿಯ ವಿಚಾರವಾಗಿ ಇಂಜನಿಯರಿಂಗ್ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಲ್ಲೇ ಒಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯಗಳು ಬಂದು ಹಳೇ ಏರಿಯನ್ನು ಎತ್ತರಿಸಿ ಇದನ್ನು ರಿಪೇರಿ ಮಾಡಬೇಕೇ ಅಥವಾ ಹೊಸದಾಗಿ ಏರಿಯನ್ನು ಹಾಕಿ ಅದನ್ನು ರಿಪೇರಿ ಮಾಡಬೇಕೇ ಎಂಬ ವಿಚಾರದಲ್ಲಿ ಚೀಫ್ ಇಂಜನಿಯರಿಗೂ ಮತ್ತು ಸೂಪರಿಂಟೆಂಡಿಂಗ್ ಇಂಜನಿಯರಿಗೂ ಅಭಿಪ್ರಾಯಗಳಲ್ಲಿ ವ್ಯತ್ಯಾಸ ಬಂದು ಚೀಫ್ ಇಂಜಿನಿಯರು ಆ ಬಗ್ಗೆ ತೀರ್ಮಾನಕ್ಕಾಗಿ ಕಳುಹಿಸಿದ್ದಾರೆ. ಹಾಗೆ ಅವರು ಅದನ್ನು ಕಳುಹಿಸಿಕೊಟ್ಟು ಬಹಳ ದಿವಸಗಳಾಗಿದ್ದರೂ ಚೀಫ್ ಇಂಜಿನಿಯರು ಇನ್ನೂ ಸ್ಥಳ ಪರೀಕ್ಷೆ ಮಾಡಿಲ್ಲ. ಆದಕಾರಣ ಈಗಲಾದರೂ ಸಹ ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಚೀಫ್ ಇಂಜನಿಯರನ್ನು ಸ್ಥಳಕ್ಕೆ ಭೇಟಿ ಕೊಟ್ಟು ಯಾವ ರೀತಿ ಮಾಡುವುದು ಸೂಕ್ತವಾದದ್ದೆಂಬುದನ್ನು ನಿರ್ಧರಿಸಿ ಈ ಕೆಲಸವನ್ನು ಬೇಗ ಕೈಗೊಳ್ಳುವಂತೆ ತಿಳಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಮಿನ ಪ್ರಕಾರ ಕೆಲವು ಭಾಗಗಳಿಗೆ ಅದನ್ನು ಜಾರಿಗೆ ಕೊಟ್ಟಿದ್ದಾರೆ. ಆದರೆ ಅಲ್ಲಿ ಯಾರೂ ಉತ್ಸಾಹದಿಂದ ಕೆಲಸ ಮಾಡುತ್ತಿಲ್ಲ. ಅಲ್ಲಿರತಕ್ಕ ಅಧಿಕಾರಿಗಳಿಗೆ ಯಾವ ರೀತಿಯಾಗಿ ಆ ಕೆಲಸಗಳನ್ನು ಕೈಗೊಳ್ಳಬೇಕು ಎಂಬ ವಿಚಾರಗಳ ಬಗ್ಗೆ ಒಂದು ನಿರ್ದಿಷ್ಟವಾದ ಪ್ರೋಗ್ರಾಂ ಹಾಕಿಕೊಳ್ಳದೆ ಇರುವುದರಿಂದ ಅಲ್ಲಿ ಕೆಲಸ ಕಾರ್ಯಗಳು ಅಷ್ಟು ಉತ್ಸಾಹಪೂರಿತವಾಗಿ ನಡೆಯುತ್ತಿಲ್ಲ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಮತ್ತು ಇಲಾಖೆಯ ಅಧಿಕಾರಿಗಳಾದ ಶ್ರೀ ಎಂ. ಕೆ. ಅಪ್ಪಾಜಪ್ಪನವರೂ ಆ ಸ್ಥಳಕ್ಕೆ ಖುದ್ದಾಗಿ ದಯಮಾಡಿಸಿ, ಎಲ್ಲವನ್ನೂ ಪರಾಂಬರಿಸಿ, ಅಲ್ಲಿ ಏನೇನು ತೊಂದರೆಗಳಿವೆಯೋ ಅವುಗಳನ್ನು ಬಗೆಹರಿಸಲು ಸೂಕ್ತ ಸಲಹೆಗಳನ್ನಿತ್ತು ಬೇಗ ಕಾರ್ಯವನ್ನು ಕೈಗೊಳ್ಳುವಂತೆ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ: 1947ನೆಯ ಇಸವಿಯಲ್ಲೇ ನಮ್ಮ ತಾಲ್ಲೂಕಿನ ಹುಂಡೀಪುರ ಎಂಬ ಗ್ರಾಮದಲ್ಲಿ ಆಸ್ಪತ್ರೆಯನ್ನು ಕಟ್ಟಿಸಿಕೊಡಬೇಕೆಂದು ಹೇಳಿ ನಾನೇ ಅದಕ್ಕೆಲ್ಲಾ ಆಗತಕ್ಕ ಧನ ಸಹಾಯವನ್ನಿತ್ತ 20-30 ಸಹಸ್ರ ರೂಪಾಯಿಗಳು ಬೆಲೆಬಾಳುವಂಥ ಕಟ್ಟಡಗಳನ್ನು ಆ ಆಸ್ಪತ್ರೆಗೋಸ್ಕರವಾಗಿಯೂ ಮತ್ತು ಅಲ್ಲಿಗೆ ಬರತಕ್ಕಂಥ ಆಸ್ಪತ್ರೆಯ ಸಿಬ್ಬಂದಿಗೆಲ್ಲಾ ಬೇಕಾದಂಥ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಟ್ಟಿದ್ದಾಗ್ಯೂ, ಈ ತಹಲ್‌ವರೆಗೂ ಅಲ್ಲಿಗೆ ಇನ್ನೂ ಆಸ್ಪತ್ರೆಯನ್ನೇ ಕೊಟ್ಟಿರುವುದಿಲ್ಲ. ಈ ವಿಚಾರವಾಗಿ ನಾನೇ ಖುದ್ದಾಗಿ ಹೋಗಿ ಮೆಡಿಕಲ್ ಇಲಾಖೆಯ ಡೈರೆಕ್ಟರ್ ಶ್ರೀ ರಾಮಲಿಂಗರೆಡ್ಡಿಯವರನ್ನು ಕಂಡು ವಿಚಾರಮಾಡಿದ್ದರಲ್ಲಿ, ಅವರು ಈ ಬಗ್ಗೆ ಶಿಫಾರ್ಸು ಮಾಡಿ ರಿಕಾರ್ಡುಗಳನ್ನು ಸರ್ಕಾರದವರಿಗೆ ಕಳುಹಿಸಿಕೊಟ್ಟಿದ್ದೇವೆಂದು ಹೇಳಿದರು. ಇದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು. ಸರ್ಕಾರದವರು ಇದರ ಕಡೆಗೆ ಹೆಚ್ಚಿನ ಗಮನಕೊಟ್ಟು ಇದನ್ನು ಬೇಗ ಮಂಜೂರು ಮಾಡುತ್ತಾರೆಂದು ಭಾವಿಸುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಚಾರ: ಆದರೆ ಈ ಇಲಾಖೆಯ ಅಧಿಕಾರಿಗಳ ವಿಚಾರದಲ್ಲಿ ಕೆಲವು ಅಂಶಗಳನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ನಮ್ಮ ತಾಲ್ಲೂಕು ಬಾರ್ಡರ್ ತಾಲ್ಲೂಕು. ಅಲ್ಲಿ ಅಕ್ಕಿಯ ಸ್ಮಗ್‌ಲಿಂಗ್ ಬಹಳವಾಗಿ ಆಗುತ್ತಿದೆ, ಅಕ್ಕಿಯ ಮೂಟೆಸಾಗಾಣಿಕೆ ಬಹಳ ಹೇರಳವಾಗಿ ನಡೆಯುತ್ತಿದೆ. ನಾನು ಬಹಳ ವಿಷಾದದಿಂದ ಇದನ್ನು ಹೇಳುತ್ತಿದ್ದೇನೆ. ಲಾರಿಲಾರಿಗಳಲ್ಲೇ ಮಲಬಾರ್ ಕಡೆಗೆ ಅಕ್ಕಿಮೂಟೆಗಳು ಸಾಗಿಹೋಗುತ್ತಿವೆ. ನಾನು ಅಲ್ಲಿ ಡ್ಯೂಟಿ ಮೇಲಿರತಕ್ಕ ಪೋಲೀಸ್ ಇನ್ಸ್‌ಪೆಕ್ಟರನ್ನು ಕಂಡು ಕೇಳಿದ್ದಕ್ಕೆ, ಅವರು " ಇದನ್ನು ತಡೆಯುವಂಥ ಧೈರ್ಯ ನನ್ನೊಬ್ಬನಿಂದ ಸಾಧ್ಯವಾಗಲಾರದು " ಎಂದು ಹೇಳಿದ್ದನ್ನು ಕೇಳಿ ನನಗಂತೂ ತುಂಬ ಅಸಮಾಧಾನವಾಯಿತು. ಅಲ್ಲಿ ಅವರ ಕೈಕೆಳಗಿರತಕ್ಕ ಪೋಲೀಸ್ ಕಾನ್ಸ್‌ಟೇಬಲ್‌ಗಳೆಲ್ಲಾ ಅಲ್ಲಿನ ಲೋಕಲ್ ಜನಗಳೊಂದಿಗೆ ಸೇರಿಕೊಂಡು ಅವರೊಡನೆ ಷರೀಕಾಗಿ ಈ ಕೆಲಸಗಳನ್ನು ನಡೆಸುತ್ತಿದ್ದಾರೆ ಎಂದು ಅವರು ನನಗೆ ತಿಳಿಸಿದರು. ಆದರೆ ಇದು ಎಂಥ ನಾಚಿಕೆಗೇಡಾದ ವಿಚಾರ ! ಈ ಪೋಲೀಸಿನವರೇ ಆ ಇನ್ಸ್‌ಪೆಕ್ಟರ ಮೇಲೆ ವಾಚ್‌ಮಾಡುತ್ತಿದ್ದಾರೆಂದರೆ ಇದೇನು ವಿಚಾರ. ಇದು ನನಗೆ ಒಂದೂ ಗೊತ್ತಾಗುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಕೂಡಲೆ ಸೂಕ್ತಕಾರ್ಯಕ್ರಮಗಳನ್ನು ಕೈಗೊಂಡು ಇದನ್ನೆಲ್ಲಾ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಷಯವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅದು ಈ ಸರ್ಕಾರಿ ನೌಕರಿಯ ವರ್ಗದಲ್ಲಿರತಕ್ಕವರ ವಿಚಾರ. ಒಬ್ಬ ಸರ್ಕಾರಿ ಅಧಿಕಾರಿಗಳು ಕಾಂಗ್ರೆಸನ್ನು ಬೈಯುತ್ತಿದ್ದರು, ಪಾಂಚವಾರ್ಷಿಕ ಯೋಜನೆ ಇತ್ಯಾದಿಗಳನ್ನೆಲ್ಲಾ ಜರಿದು ಹೀಯಾಳಿಸಿ ಮಾತನಾಡುತ್ತಿದ್ದರು ಎಂದು ನಿನ್ನೆ ಇಲ್ಲಿ ಹೇಳಲಾಗಿ ತಾವು ಇಂಥವರ ಮೇಲೆಲ್ಲಾ ಸೂಕ್ತಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆಂದು ತಿಳಿಸಿದ್ದಿರಿ. ಇದು ಸಂತೋಷದ ವಿಷಯ. ಹೀಗೆ ಮೊನ್ನೆ ಮತ್ತೊಂದು ಪ್ರಸಂಗ ನಡೆಯಿತು.

ಮೈಸೂರು ಸರ್ಕಾರದಲ್ಲಿ ಒಂದು ಉನ್ನತಾಧಿಕಾರದಲ್ಲಿರತಕ್ಕಂಥವರೊಬ್ಬರು ಒಕ್ಕಲಿಗರ ಹಾಸ್ಟಲಿನಲ್ಲಿ ಭಾಷಣ ಮಾಡುತ್ತ ಜನರಲ್ಲಿ ಕಮ್ಯುನಲ್ ಫೀಲಿಂಗ್ಸನ್ನು ಹೆಚ್ಚುವಂಥ ಭಾಷಣ ಮಾಡಿದ್ದಾರೆ. ಈ ವಿಚಾರ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿದೆ. ಈ ವಿಚಾರದಲ್ಲಿ ಸರ್ಕಾರದವರೇನು ಮಾಡಿದ್ದಾರೆ? ಹಾಗೆ ಭಾಷಣ ಮಾಡಿದಂಥವರು P.S.C. ಛೇರ್ಮನ್ನರಾಗಿದ್ದಾರೆ. ಪಬ್ಲಿಕ್ ಸರ್ವೀಸ್ ಕಮಿಷನರಾಗಿದ್ದುಕೊಂಡು ಒಂದು ಪ್ಲಾಟ್‌ಫಾರಮ್ಮಿನ ಮೇಲೆ ನಿಂತು ಬಹಿರಂಗ ಭಾಷಣಮಾಡತಕ್ಕ ಕಾಲದಲ್ಲಿ ಕೋಮುವಾರು ಭಾವನೆ ಹೆಚ್ಚಿಸುವಂತೆ ಭಾಷಣ ಮಾಡಬಹುದೆ? ಇಂಥ ಕೋಮುವಾರು ಭಾವನೆಯಿರತಕ್ಕವರು, ಇಂಥ ಸ್ವಭಾವವುಳ್ಳವರು ಆ ಸ್ಥಾನದಲ್ಲಿರಲು ಅರ್ಹರೇ? ಇವರ ಮೇಲೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ? ಅವರು ಭಾಷಣಮಾಡುತ್ತ "ನಾನು ಈ ಸರ್ಕಾರಿ ಅಧಿಕಾರಸ್ಥಾನದಲ್ಲಿಲ್ಲದೆ ಇರುತ್ತಿದ್ದರೆ, ಚಳುವಳಿ ಮಾಡುವುದಕ್ಕೂ ಸತ್ಯಾಗ್ರಹ ಹೂಡುವುದಕ್ಕೂ ಕೂಡ ತಯಾರಾಗಿದ್ದೆ" ಎಂದು ಹೇಳಿದ್ದಾರೆ. ಇದು ಬಹಳ ಖಂಡನೀಯವಾದ ವಿಚಾರ. ಹೀಗೆ ಕೋಮುವಾರು ಭಾವನೆಯಿರತಕ್ಕವರು ಇಂಥ

ಸ್ಥಾನದಲ್ಲಿರಲು ಅರ್ಹರಾದವರಲ್ಲವೆಂದು ಹೇಳಿ ಕೇಂದ್ರಸರ್ಕಾರಕ್ಕೆ ಬರೆದು ಆ ಅಧಿಕಾರಿಯನ್ನು ಆ ಸ್ಥಾನದಿಂದ ತೆಗೆಯಬೇಕೆಂದು ಹೇಳುತ್ತೇನೆ. P.S.C. ಯಲ್ಲಿರುವಂಥ ಅಧಿಕಾರಿಗಳು ಇಂಪಾರ್ಷಿಯಲ್ ಆಗಿದ್ದು ಕಮ್ಯೂನಲ್ ಮೈಂಡೆಡ್ ಆಗದೆ ಇರುವುದು ಆವಶ್ಯಕ. ಇಂಥಾದ್ದೆಲ್ಲಾ ನಡೆಯದಂತೆ ನೋಡಿಕೊಳ್ಳಲು ತಾವು ಗಮನ ಕೊಡಬೇಕು.

ಇನ್ನು ಸತ್ಯಮಂಗಲ ರೈಲ್ವೆ ವಿಚಾರ: 1904 ರಲ್ಲೇ ಈ ಪ್ರಶ್ನೆ ಎದ್ದಿತ್ತು. ಅಲ್ಲಿಂದಲೂ ಈ ವಿಚಾರ ಸರ್ಕಾರದವರ ಗಮನದಲ್ಲಿರುತ್ತದೆ. ಸರ್ವೆ ಇತ್ಯಾದಿ ಕೆಲಸಗಳೆಲ್ಲಾ ಮುಗಿದು ಎಷ್ಟೋ ವರ್ಷಗಳಾದುವು. ಆದರೆ ಸರ್ಕಾರದವರು ಏನೂ ಈ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಂಡಿರುವುದಿಲ್ಲ. ಆದಕಾರಣ ನಮ್ಮ ಸರ್ಕಾರದವರು ಈಗಲಾದರೂ ಸಹ ಈ ವಿಚಾರವನ್ನು ಕೇಂದ್ರಸರ್ಕಾರದವರಿಗೆ ಜರೂರಾಗಿ ತಿಳಿಸಿ 1955–56 ರೊಳಗಾದರೂ ಇದನ್ನು ಕಾರ್ಯರೂಪಕ್ಕೆ ತಂದರೆ ಬಹಳ ಅನುಕೂಲವಾಗುತ್ತದೆ. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ತುಂಬ ನಿಗಾ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕಡೆಯದಾಗಿ ಇನ್ನೊಂದು ಮಾತು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಸರ್ಕಾರದವರು ಈ ಹಿಂದೆ ರಸ್ತೆಗಳನ್ನು ರೀಕ್ಲಾಸಿಫಿಕೇಷನ್ ಮಾಡಿದಂಥ ಕಾಲದಲ್ಲಿ ಕೆಲವು ರಸ್ತೆಗಳನ್ನು ಸಂಪೂರ್ಣವಾಗಿ ಕೈಬಿಟ್ಟುಬಿಟ್ಟಿದ್ದಾರೆ. ಆ ದಿವಸ ಮಾಡಿದಂಥ ಬದಲಾವಣೆಯ ಪ್ರಕಾರ ಕೆಲವು ರಸ್ತೆಗಳನ್ನು ಸರ್ಕಾರದವರು ನಿಗಾ ನೋಡಿಕೊಳ್ಳುವಂತೆಯೂ, ಮತ್ತೆ ಕೆಲವು ರಸ್ತೆಗಳ ರಿಪೇರಿ ವಗೈರೆಗಳನ್ನು ಜಿಲ್ಲಾಬೋರ್ಡುಗಳು ನೋಡಿಕೊಳ್ಳುವಂತೆಯೂ ಒಂದು ರೀತಿಯಾಗಿ ವಿಂಗಡಿಸಿದಂಥ ಕಾಲದಲ್ಲಿ ಕೆಲವು ರಸ್ತೆಗಳು ಈ ಉಭಯ ಪಕ್ಷಗಳೊಂದಕ್ಕೂ ಸೇರದ ಹಾಗೆ ಉಳಿದುಹೋಗಿವೆ. ಉದಾಹರಣೆಗೆ ಹೇಳುವುದಾದರೆ, ಈ ಹಿಂದೆ ಸರ್ಕಾರದವರೇ ಸುಮಾರು ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮಾಡಿಸಿರತಕ್ಕಂಥ ಗುಂಡ್ಲುಪೇಟೆ ತೆರಕಣಾಂಬಿಯ ರಸ್ತೆಯನ್ನು ಸಂಪೂರ್ಣವಾಗಿ ಕೈಬಿಟ್ಟೇಬಿಟ್ಟಿದ್ದಾರೆ. ಈ ದಿವಸ ಈ ರಸ್ತೆಯ ಕಾಂಗಾರಿಯನ್ನು ಜಿಲ್ಲಾಬೋರ್ಡಿನವರಿಗೆ ನೀವು ಮಾಡಿಸಿ ಎಂದು ಹೇಳಿದರೆ, ಅವರು ಆ ರಸ್ತೆ ನಮಗೆ ಸೇರಿರುವುದಿಲ್ಲ. ಆದುದರಿಂದ ಆ ರಿಪೇರಿ ವಗೈರೆಗಳನ್ನೆಲ್ಲಾ ಮಾಡಿಸಲು ಸರ್ಕಾರದವರನ್ನೇ ಕೇಳಬೇಕು ಎಂದು ಹೇಳುತ್ತಿದ್ದಾರೆ. ಸರ್ಕಾರದವರನ್ನು ಕೇಳಿದರೆ, ಅದು ಸರ್ಕಾರಿ ರಸ್ತೆಯಲ್ಲ, ರಿಕ್ಲಾಸಿಫಿಕೇಷನ್ ಪ್ರಕಾರ ಅದು ನಮಗೆ ಸೇರಿಲ್ಲ ಎಂದು ಪಿ.ಡಬ್ಲ್ಯು.ಡಿ.ಯವರು ಹೇಳುತ್ತಿದ್ದಾರೆ. ಹೀಗೆಲ್ಲಾ ಮಾಡಿದರೆ ಆ ರಸ್ತೆಯ ಗತಿ ಏನಾಗಬೇಕು ? ಈ ವಿಚಾರಗಳನ್ನೆಲ್ಲ ಕುರಿತು ನಾನೇ ಖುದ್ದಾಗಿ ಸಂಬಂಧಪಟ್ಟ ಮಂತ್ರಿಗಳಿಗೆ ಒಂದು ಕಾಗದ ಬರೆದಿದ್ದೆನು. ಅದಕ್ಕೆ ನನಗೆ ಈ ತಹಲ್‌ವರೆಗೂ ಇನ್ನೂ ಉತ್ತರ ಬಂದಿರುವುದಿಲ್ಲ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ತಕ್ಷಣ ನಿಗಾ ಕೊಟ್ಟು, ಈಗಲಾದರೂ ಕೂಡಲೇ ಈ ರಸ್ತೆಯ ರಿಪೇರಿ ವಗೈರೆ ಕೆಲಸಗಳು ಸುಲಲಿತವಾಗಿ ನಡೆದುಕೊಂಡು ಹೋಗುವಂತೆ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri P. M. SWAMI DURAI (Kolar Gold Fields—Scheduled Castes).— Sir, I thank you very much for the opportunity given to express my opinion on this Budget. There was a lot of discussion on Kolar Gold Field Mining Company. The main subject was the Repeal of Gold Duty and various other measures and to restore the gold duty or get back the money from the Kolar Gold Field Mines. I am also interested as a legislator to see that money comes back to the coffers of the Government to give the necessary facilities to the people of the State. Therefore it is quite true that the gold duty should be restored. But at the same time we must see to the effect of the gold duty on the people and the industry there. The Kolar Gold Mining industry is a wasting asset and the employees of about 20,000 in number there are depending upon that industry and a population of 1 3/4 lakhs is also depending upon that industry. We must see that the industry goes on though not for ever, at least for a considerable number of years. We know that the Gold Mining Company will be closed for ever one day or the other. Therefore, as a labour representative from the Kolar Gold Fields, I am interested to see that the Kolar Gold Mining Company goes on at least for a number of years so that the dependents on that industry may be benefited for those number of years. Already, Sir, these has been bitter experience in Kolar Gold Fields on account of the closure of the Mining Company. How did it happen ? There were so many reasons that contributed to it and they were submitted to the Enquiry Committee which went into the closure of the Oorgaum Mining Company. I think it was the Mysore Government that took prompt action to see that a Committee was constituted to go into the matter and give a final decision. We are no doubt very much particular about the revenue for the State and it is quite true that wherever there is a source of revenue, we will have to try to tap it. We see that a revenue of one and odd crore of rupees from Kolar Gold Fields has dropped down. It is but natural that we should try to get it back. But what would be the effect of this restoration on the employees of the industry and on the population there ? The majority of the employees and the majority of the population there are

(SRI P. M. SWAMI DURAI.)

Scheduled Castes and as a representative of the Scheduled Castes, I am bound to look into their interest. No doubt, I am bound to look into the revenue through so many sources so that the Government may be benefited ; but at the same time, I am bound to look into the interest of the Scheduled Castes who are in a majority there and as a representative of Kolar Gold Fields, I am still bound to look into the interest of those unfortunate employees of about 2,800 workers who have been thrown out of employment and rendered jobless recently due to the closure of the Oorgaum Gold Mining Company. That is the unfortunate position and the management in their memorandum submitted that the Gold Duty was one of the causes of the closure of the Oorgaum Mining Company.

10-30 A. M.

But the Committee accepted the Memorandum *in toto.* They never refuted the point expressed by the Management but have Okayed the company's stand taken for the closure. I am interested, Sir, that the Government must get their share of the revenue. When the Members of this House suggested scraping of Prohibition in the State, the Government would not do it because they are aware of the evil effect of drinking on the people. The Government is prepared to lose a portion of the excise revenue, irrespective of the success or failure of Prohibition introduced in the State. The intention of the Government is to save the citizens from the evils of drinking by foregoing a portion of the revenue. That is the stand taken by the Government. In the same manner, I want the Government to see the effect of the gold duty on the industry and the workers. Extra levy or extra taxes would directly or indirectly affect the employees and the industry. This must be borne in mind. I ask why Government is always after money. Why should they think of getting this extra money from the K.G.F. ? Why not allow or make a legislation for the employees to share the profit or the surplus or whatever it may be. Sir, this Gold Duty was introduced in the year 1940. The Chief Minister was pleased to say in his speech introducing the Budget that a Committee has been constituted to go into this matter. I thank him for it. I would at the same time request the Chief Minister to place a copy of the report of that Committee after completion on the Table of this House and give an opportunity for this House to discuss on the same. I note with satisfaction that the Home Minister has already told this House that the report of the Committee will be placed before this House and discussion will take place on that report. When such is the case, I want to put it to the House : why not they see that the workers are satisfied with the sharing of the surplus or the profit or whatever it may be ? Why not they do it and allow the workers to share it ? My idea is that the Government may go in for any kind of legislation to get more money from K.G.F. industry provided it does not *affect the industry and it does not kill the industry and provided also it does not affect the people working in that industry.* Gold Mining is one of the biggest industries and Kolar Gold Mining is a prominent industry in India and it is the bounden duty of the State to see that it is given every facility needed.

Mr. DEPUTY SPEAKER.--It is time.

Sri P. M. SWAMI DURAI.—When the question of the closure was taken up, they have submitted so many things, Sir. Sri T. Mariappa, an Hon'ble Member of this House, yesterday correctly put it when he had said that the repeal of the gold duty was justifiable and I really agree with him. The Management stated in the memorandum that the gold duty was imposed in the year 1940 and when it was protested in the beginning itself the Dewan said as follows :

"I do not think there is any reason to expect that it will cause a reduction in the dividends that the Companies have been able to pay in the past......Should this anticipation be incorrect, the Government will be a sufferer along

with the Companies, and we shall be ready to re-examine the question in the light of fresh consideration that may arise."

Then again in 1943 there was another representation because of the serious effects of the gold duty.

Mr. DEPUTY SPEAKER.—The Government are not taking note of your observations.

Sri P. M. SWAMI DURAI.—Then what is the use of my telling all these things in this House. I am of the opinion that the repeal of the gold duty is justifiable and the Government has taken a correct decision in that connection. On the occasion of repealing the gold duty, the Government have entered into a new agreement in which they have said that the surplus or the profits would be shared. That is just, proper and reasonable. I am trying to add that the employees also must be partners and share whatever surplus is available. We are always anxious that our Government should get its due share of the revenues. What about the taxation on the Gold Mining Industry by the Central Government, and the Government of U.K.? Taxes will have to be paid in addition to the taxes paid to the local Government In the year 1939 the royalty and additional royalty tax alone the management has paid to the tune of Rs. 58,45,000; electric power charges Rs. 27,85,518; timber Rs. 73,880; water supply Rs. 2,57,197. In the year 1943 the management have paid a sum of Rs. 2,60,56,000 as royalty and additional royalty taxes; electric power Rs. 30,19,540......

Sri A. BHEEMAPPA NAIK (Molakalmuru).—Is it without taking power that they have paid? At what rate are they getting power? Can you tell me the rate at which they are being supplied electric power at the cost of the tax-payer? I want no know the rate.

Mr. DEPUTY SPEAKER.—You can have your say later, Sri Bheemappa Naik.

Sri P. M. SWAMI DURAI.—In 1948 they paid Rs. 1,97,23,000 and the wages they have been paying in the year 1939 amounted to Rs. 78,89,000.

Mr. DEPUTY SPEAKER.—Why all these details, Sri Swami Durai?

Sri P. M. SWAMI DURAI.—So, I request that whatever steps the Government propose to take, I am not against them provided they do not adversely affect the workers of that particular industry. That is all my suggestion and aim; because already 3,000 workers have been rendered jobless. In spite of the above amount of taxes and revenues received by the Governments, no Government has come forward to do anything for those jobless employees.

Sri Kadidal MANJAPPA (Minster for Revenue and Public Works).—We have done our best.

Sri P. M. SWAMI DURAI.—Beyond constituting a Committee and acceptance of a memorandum, I do not think that anything has been done. In view of all this, I am sure that the Government would not take any hasty steps which may be harmful to the workers in the industry in the long run and if such a thing is done, I will not be a subscriber to that.

Mr. DEPUTY SPEAKER.—The House will now rise for lunch and meet at 11-10.

The House adjourned for lunch at Forty Minutes past Ten of the Clock and reassembled at Ten Minutes past Eleven of the Clock.

[MR. DEPUTY SPEAKER in the Chair.]

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, 1954-55ನೆಯ ಸಾಲಿನ ಈ ಬಡ್ಜೆಟ್ಟನ್ನು ಕುರಿತು ಅನೇಕರು ಈಗಾಗಲೇ ಮಾತನಾಡಿದ್ದಾರೆ. ಹಣಕಾಸಿನ ಪರಿಸ್ಥಿತಿ ನಮ್ಮ ದೇಶದಲ್ಲಿ ದಿನೇದಿನೇ ಒಂದು ವಿಧದಲ್ಲಿ ಸುಗಮವಾಗಿ ಕಾಣುವುದಿಲ್ಲವೆಂಬುದು ಅನೇಕರ ಭಾವನೆ. ಈಗ ಬಡ್ಜೆಟ್ಟಿನಲ್ಲಿ 309 ಲಕ್ಷ ರೂಪಾಯಿ ಖೋತಾ ಇರುವುದರಿಂದ ಇದು ಅತಿಯಾಗಿ ಕೆಲವರ ಮನಸ್ಸಿನ ಮೇಲೆ ಒಂದು ಒಳ್ಳೆಯ ಪರಿಣಾಮವನ್ನುಂಟುಮಾಡಿದ ಹಾಗೆ ತೋರುವುದಿಲ್ಲ ಇದು ಅವರು ಮಾತನಾಡಿದ್ದರಿಂದ ವೇದ್ಯವಾಗಿದೆ. ಆದರೆ ಆಯವ್ಯಯ ಪಟ್ಟಿಯ ಲೆಕ್ಕಗಳನ್ನು ಪರಿಶೀಲನೆ ಮಾಡುವಾಗ ಹಣ ಸಾಲದೇ ಬಂದಿದೆ ಎನ್ನುವುದರಿಂದಲೇ ದೇಶದ ಆಯವ್ಯಯ ಸುಭದ್ರವಾಗಿಲ್ಲ, ಸರಿಯಾಗಿಲ್ಲ ಎಂಬ ತೀರ್ಮಾನಕ್ಕೆ ಬರುವುದು ಅಸಮಂಜಸ. ಹೇಗೆಂದರೆ, ಒಂದು ತೆಂಗಿನ ಮರವನ್ನು ಹಾಕಿದರೆ ಅದನ್ನು ಒಂಭತ್ತು ವರ್ಷ ಪೋಷಣೆ ಮಾಡುವುದಕ್ಕೆ ನೂರು ರೂಪಾಯಿ ಖರ್ಚಾಗಿ ಆಮೇಲೆ ಅದರಿಂದ ವರ್ಷಕ್ಕೆ ನಾಲ್ಕು ರೂಪಾಯಿ

(ಶ್ರೀ ಕೆ. ಪ್ರಭಾಕರ್.)

ನಂತೆ ಬಂದರೆ ಪ್ರತಿಫಲ ಚೆನ್ನಾಗಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅದರಿಂದ ನೂರು ಇನ್ನೂರು ವರ್ಷಗಳವರೆಗೆ ಬರುವ ಹಣವನ್ನು ಗಣನೆಗೆ ತೆಗೆದುಕೊಂಡು ಅದಕ್ಕೆ ಖರ್ಚುಮಾಡಿರುವುದು ಸಮಾಧಾನಕರವಾಗಿದೆ ಎಂಬ ತೀರ್ಮಾನಕ್ಕೆ ಬರಬೇಕು. ಹಾಗೆಯೇ ಈ ಬಡ್ಜೆಟ್ಟನ್ನು ನೋಡಬೇಕು, ಕೈಗಾರಿಕೆಗಳ ಮೇಲೆ ಎಷ್ಟು ಖರ್ಚಾಗಿದೆ, ಸಾಲಗಳನ್ನು ಕೊಟ್ಟಿರುವುದಕ್ಕೆ ಬಡ್ಡಿಯ ರೂಪದಲ್ಲಿ ಹಣ ಬರುವಂತೆ ಎಷ್ಟು ಖರ್ಚು ಮಾಡಿದ್ದಾರೆ ಎಂದು ನೋಡಬೇಕು. ಇದೆಲ್ಲವೂ ಒಂದೇ ಸಾರಿ ಖರ್ಚುಮಾಡಿ ವಾಪಸು ಬರದೇಯಿರ ತಕ್ಕ ಹಣವಲ್ಲ. ಈ ಬಡ್ಜೆಟ್ಟಿನಲ್ಲಿರುವ ಯೋಜನೆಗಳು ಏನಾಗಿವೆ, ಅವುಗಳಿಂದ ಉಪಯೋಗವೇನು ಎಂಬುದನ್ನು ಶುದ್ಧವಾದ ಅರ್ಥಶಾಸ್ತ್ರದೃಷ್ಟಿಯಿಂದಲೇ ನೋಡಬೇಕು. ವರಮಾನ ಬರತಕ್ಕದ್ದಕ್ಕೆ ಎಷ್ಟು ಹಣ ಖರ್ಚುಮಾಡಿದ್ದಾರೆಂದು ನೋಡಬೇಕು. ಇದು ನಿಜವಾಗಿ ಲಾಭ ತರುವುದು. ಆದುದರಿಂದ ಇದನ್ನು ನಿರ್ದಿಷ್ಟವಾಗಿ ಖರ್ಚೆಂದು ಹೇಳುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ, ನಮ್ಮ ಸಂಸ್ಥಾನದ ಬಡ್ಜೆಟ್ಟು ಸರಿಯಾಗಿ ವ್ಯವಸ್ಥಿತ ರೀತಿಯಲ್ಲಿ ಮಾಡಲ್ಪಟ್ಟಿದೆ. ಯಾವ ಯಾವ ಇಲಾಖೆಗಳಿಗೆ ಈ ಹಣ ಹಂಚಿಕೆಯಾಗಿದೆ ಎಂಬುದನ್ನು ನಾವು ಖಚಿತವಾಗಿ ಪರಿಶೀಲನೆ ಮಾಡಬೇಕು.

ಇವುಗಳಲ್ಲಿ ಸರ್ಕಾರದವರು ಪ್ರಾಮುಖ್ಯತೆ ಹೆಚ್ಚಾಗಿ ಕೊಟ್ಟಿರುವುದು, ರೂರಲ್ ಡೆವಲಪ್‌ಮೆಂಟ್ ಇಲಾಖೆ. ಇದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆಂದು ಇದರಲ್ಲಿ ಹಾಕಿಕೊಂಡಿದ್ದಾರೆ. ಈ ರೂರಲ್ ಡೆವಲಪ್‌ಮೆಂಟ್ ಇಲಾಖೆ ಎನ್ನುವುದು ಹೊಸ ಸರ್ಕಾರ ಬಂದ ಮೇಲೆ ಆದುದು, ಗ್ರಾಮಾಂತರದ ಅಭಿವೃದ್ಧಿ ಚೆನ್ನಾಗಿ ಆಗಬೇಕು, ನಮ್ಮ ದೇಶ ಹೆಚ್ಚು ರೈತರ ದೇಶವೆಂಬುದನ್ನು ಗಮನಿಸಿ ರೂರಲ್ ಡೆವಲಪ್‌ಮೆಂಟ್ ಇಲಾಖೆಯೆಂಬ ಹೊಸ ಇಲಾಖೆಯನ್ನು ಸೃಷ್ಟಿಮಾಡಿ ಕೆಲವು ವರ್ಷ ಚೆನ್ನಾಗಿ ನಡೆಸಿಕೊಂಡು ಬಂದರು. ಆಮೇಲೆ ಕ್ಯಾಬಿನೆಟ್ ಬದಲಾವಣೆಯಾದ ಮೇಲೆ ಏನಾಯಿತೆಂಬುದು ಎಲ್ಲರಿಗೂ ಗೊತ್ತಿದೆ. ಮಲ್ಟಿ-ಪರ್‌ಪಸ್ ಕೋ-ಆಪರೇಟಿವ್ ಸೊಸೈಟಿ ಎಂಬುದು ರೂರಲ್ ಡೆವಲಪ್‌ಮೆಂಟ್ ಯೋಜನೆಯಲ್ಲಿ ಒಂದು ವಿಧವಾಗಿ ಕಾಮಧೇನು. ಹೀಗಿದ್ದರೂ ಇದನ್ನು ಮ್ಯಾನೇಜ್ ಮಾಡುವುದು ಕಷ್ಟವೆಂದು ರದ್ದುಮಾಡಿದರು. ಆದರೆ ಗ್ರಾಮಾಭಿವೃದ್ಧಿಗೆ ಇಂಥಾ ಬೇರೆ ವ್ಯವಸ್ಥೆ ಮಾಡತಕ್ಕ ಬೇರೊಂದು alternative ಯೋಜನೆಯನ್ನೇನೂ ಸರ್ಕಾರ ಯೋಚನೆಮಾಡಿಲ್ಲವೆಂದು ಕಾಣುತ್ತದೆ. ಈ ಸಂಸ್ಥೆ ಎಂಥಾದ್ದು ಜನರಿಗೆ ಎಷ್ಟು ಉಪಯುಕ್ತವಾದುದು ಎಂಬ ಮೂಲಭೂತ ವಿಚಾರವನ್ನು ಯೋಚನೆಮಾಡಬೇಕಾಗಿದೆ. ನಮ್ಮದು ವೆಲ್‌ಫೇರ್ ಸ್ಟೇಟ್ ನಿಜ. ಇಂಥಾ ವೆಲ್‌ಫೇರ್ ಸ್ಟೇಟಿನ ಡಿಮ್ಯಾಂಡ್ ಏನಿದೆಯೋ ಅದನ್ನು ಕಾರ್ಯಗತ ಮಾಡುವುದಕ್ಕೆ structure of administration and mechanism ಯಾವ ರೀತಿ ಇರಬೇಕೆಂಬುದನ್ನು ಯೋಚನೆಮಾಡಬೇಕು. ಅಂದ ಮೇಲೆ ಗ್ರಾಮಾಭಿವೃದ್ಧಿಯ ಕಡೆ ಗಮನ ಕೊಡುತ್ತಾ ಮಲ್ಟಿ-ಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಜನರ ಆವಶ್ಯಕತೆಗಳನ್ನು ಹಂಚಲೇ ಬೇಕು. ಕೋ-ಆಪರೇಷನ್ ಅಥವಾ ಸಹಕಾರ ಎನ್ನುವುದು ಪ್ರಪಂಚದಲ್ಲೆಲ್ಲಾ ಜಾರಿಯಲ್ಲಿದ್ದು ದಿನೇ ದಿನೇ ಜನರು ಸಾಮುದಾಯಿಕ ಕಾರ್ಯಗಳಲ್ಲಿ ಹೆಚ್ಚು ಗಮನ ಕೊಡುತ್ತಿರುವಾಗ ಕೋ-ಆಪರೇಟಿವ್ ಸಂಸ್ಥೆಗಳಿಗೆ ಗಮನ ಕೊಡುತ್ತಿರುವುದು ಸ್ವಾಭಾವಿಕ. ಆದುದರಿಂದ ಈ ಸಹಕಾರ ತತ್ವದ ಮೇಲೆ ಜನ ಜೀವನವನ್ನು ನಡೆಸುವ ವಿಷಯದಲ್ಲಿ ಜನರನ್ನು ತಯಾರು ಮಾಡಬೇಕಾದುದು ಸರ್ಕಾರದ ಜವಾಬ್ದಾರಿ, ಅಂದ ಮೇಲೆ ಈ ರೀತಿ ಮಾಡುವುದನ್ನು ರೂರಲ್ ಡೆವಲಪ್‌ಮೆಂಟಿಗೆ ಅನ್ವಯಿಸಿ ತನ್ಮೂಲಕ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿಯಾಗಬೇಕೆಂದು ಈ ಕಾರ್ಯವನ್ನು ನಡೆಸಿಕೊಂಡು ಬರಬೇಕು. ಹೀಗೆಂದ ಮೇಲೆ ಕೋ-ಆಪರೇಟಿವ್ ಇಲಾಖೆಗೆ ಒದಗಿಸಿರುವ ಹಣ ಸಾಲದೆಂದು ನನ್ನ ಭಾವನೆ. ಈಗ ಒದಗಿಸಿರುವ ಎರಡು ಲಕ್ಷದಷ್ಟು ಹಣವನ್ನು ಪರಿಶೀಲನೆ ಮಾಡಿದರೆ ಯಾವ ರೀತಿ ಹಳ್ಳಿಗಳ ಅಭಿವೃದ್ಧಿಯ ಕಡೆ ಯೋಜನೆ ಮಾಡಲಾಗಿದೆ ಎಂಬುದು ಅರ್ಥವಾಗುತ್ತದೆ.

ವಿದ್ಯಾಭ್ಯಾಸದ ಇಲಾಖೆಯನ್ನು ತೆಗೆದುಕೊಂಡರೆ ಹಿಂದೆ ಖರ್ಚಾಗುತ್ತಿದ್ದುದಕ್ಕಿಂತ ಮೂರು ನಾಲ್ಕರಷ್ಟು ಜಾಸ್ತಿ ಖರ್ಚಾಗುತ್ತಿದೆ. ಇದು ಪದೇ ಪದೇ ಚರ್ಚೆಯಾಗಿದೆ. Higher education—College education ಬಹಳ ದುಬಾರಿಯಲ್ಲದೆ ನಮ್ಮ ದೇಶದ ಈ ಹೊತ್ತಿನ ಜನಜೀವನಕ್ಕೆ ಅಷ್ಟಾಗಿ ಇದು ಹೊಂದಿಕೊಳ್ಳುವುದಿಲ್ಲ. ಆದುದರಿಂದ ಕೆಲವು ದಿವಸ ಕಾಲೇಜು ವಿದ್ಯಾಭ್ಯಾಸವನ್ನು ಮಿತಗೊಳಿಸಬೇಕು ; ಇಲ್ಲದಿದ್ದರೆ ಕೆಲವು ದಿವಸ ನಿಲ್ಲಿಸಿದರೂ ಸರಿಯೆಂದು ನನಗೆ ತೋರುತ್ತದೆ. ಪ್ರೈಮರಿ ವಿದ್ಯಾಭ್ಯಾಸವನ್ನು compulsory ಮಾಡಿರುವುದರಿಂದ ಅಡಲ್ಟ್ ಎಜ್ಯುಕೇಷನ್ ಗುರಿ ಸಾಧನೆಯಾಗಿ ಪ್ರಾಥಮಿಕ ವಿದ್ಯಾಭ್ಯಾಸ ಜಾಸ್ತಿಯಾಗಿ ಜನರಲ್ಲಿ ತಿಳುವಳಿಕೆ ಹೆಚ್ಚಿ literacy ಜಾಸ್ತಿಯಾಗಬೇಕೆಂಬ ಉದ್ದೇಶ ಸಾಧನೆಯಾಗುತ್ತದೆ. ಇದರಿಂದ ಹಳ್ಳಿಗಳಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸ ಜಾಸ್ತಿಯಾಗಬೇಕೆಂಬ ಉದ್ದೇಶದಿಂದ ಕಾಲೇಜು ವಿದ್ಯಾಭ್ಯಾಸ ಕಡಮೆಯಾಗಬೇಕೆಂದು ಹೇಳುತ್ತಿದ್ದೇನೆ.

ಇನ್ನು ಜಮೀನು ಹಂಚುವಾಗ ಕೇವಲ ಜಮೀನಿಲ್ಲದೇ ಇರುವವರಿಗೆ ಜಮೀನು ಕೊಡಬೇಕು, ನಿಮ್ನ ತರಗತಿಯವರಿಗೆ ಕೊಡಬೇಕೆಂಬ ನೀತಿಯನ್ನು ಸರ್ಕಾರದವರು ಹಾಕಿದ್ದಾರೆ. ಆದರೆ ಹಂಚುವುದಕ್ಕೆ ಜಮೀನೇ ಇಲ್ಲದಿರುವಾಗ ಹೀಗೆ ಮಾಡಿದ್ದಾರೆ. 'ಊರು ಸೂರೆ ಹೋದ ಮೇಲೆ ಊರ ಬಾಗಿಲು ಹಾಕಿದರು' ಎನ್ನುವ ಹಾಗೆ ಮಾಡಿದ್ದಾರೆ. ಎಲ್ಲೆಲ್ಲಿ ಜಮೀನಿದೆ, ಎಲ್ಲೆಲ್ಲಿ ಇಲ್ಲ ಎಂಬುದನ್ನು ಪರಿಶೀಲನೆ ಮಾಡುತ್ತಿಲ್ಲ. ಜಮೀನಿಲ್ಲದ ಜನರು irrespective of caste and creed ಎಷ್ಟಿದ್ದಾರೆ, ಜಮೀನೆಷ್ಟಿದೆ, ಎಲ್ಲಿದೆ ಎಂಬುದನ್ನೆಲ್ಲಾ ಸರ್ವೆಮಾಡಿಸಲು ಪ್ರಯತ್ನಮಾಡಬೇಕು.

ಸರ್ಕಾರಕ್ಕೆ ಎಷ್ಟು ಕಷ್ಟವಾದರೂ ಚಿಂತೆಯಿಲ್ಲ, ಪಾನನಿರೋಧವನ್ನು ಮುಂದುವರಿಸಿಕೊಂಡು ಹೋಗಬೇಕು. ಈ ಬಾಬಿನಿಂದ ಬರುವ ಹಣ ಹೋದದ್ದರಿಂದ ಹೊಸ ಸುಂಕ ಹಾಕಬೇಕಾಯಿತೆಂದು ಜನರು ಹೇಳಿದರೂ ಚಿಂತೆಯಿಲ್ಲ, ಎಲ್ಲಕಡೆಗೂ ಪಾನನಿರೋಧವನ್ನು ಅನ್ವಯಿಸಬೇಕು.

ಕೈಮಗ್ಗದ ಕೈಗಾರಿಕೆಗೆ ಸೌಕರ್ಯವನ್ನು ಜಾಸ್ತಿ ಮಾಡಬೇಕು. ಮದರಾಸಿನಲ್ಲಿ ಮಾಡಿರುವಂತೆ ಮಗ್ಗದವರಿಗೆ ಇಲ್ಲಿಯೂ ಸೌಲಭ್ಯ ಕಲ್ಪಿಸಿಕೊಟ್ಟರೆ, ಮಿಲ್‌ನವರು ಪಂಚೆಗಳನ್ನೂ ಸೀರೆಗಳನ್ನೂ ಮಾಡಬಾರದೆಂದು ಮಾಡಿದರೆ ಅನುಕೂಲವಾಗುತ್ತದೆ.

ಮನೆಗಳ ವಿಚಾರವನ್ನು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮಧ್ಯಮವರ್ಗದ ಜನರಿಗೆ ಮನೆಗಳನ್ನೊದಗಿಸಲು ಯೋಜನೆ ಮಾಡುವುದು ಆವಶ್ಯಕ. ಲೋಯರ್ ಕ್ಲಾಸ್ ಆಫ್ ಸೊಸೈಟಿಗೆ ಮತ್ತು ಅವರಿಗಿಂತ ಕೆಳಗಿರುವವರಿಗೆ ಮನೆ ಒದಗಿಸಬೇಕಾದ ಪ್ರಮೇಯ ಜಾಸ್ತಿಯಾಗಿದೆ. ಅದ್ದರಿಂದ extension

of philosophy ಎಂದು ಹೇಳುವಹಾಗೆ ಮಧ್ಯಮ ವರ್ಗದವರಿಗೂ ಕೆಳದರ್ಜೆಯವರಿಗೂ ಮನೆಗಳನ್ನೊದಗಿಸಲು ಸ್ವಲ್ಪ ಬಂಡವಾಳವನ್ನು ಮುಡುಪಾಗಿಡಬೇಕು.

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಲೈನ್‌ಮೆನ್ ಎಂದು ಕೆಲವರಿದ್ದಾರೆ. ಅವರು ಸತ್ತರೆ ಪರದೇಶಿಗಳು ಸತ್ತರೆ ಲಾರಿಗಳಲ್ಲಿ ತೆಗೆದುಕೊಂಡು ಹೋಗಿ ಒಂದು ಕಡೆ ಹಾಕುವಂತೆ ಹಾಕುತ್ತಿದ್ದಾರೆ. ಅವರ ಶವಸಂಸ್ಕಾರಕ್ಕೆ ಅವಕಾಶಮಾಡಿಲ್ಲದಿರುವುದು ಬಹಳ ಶೋಚನೀಯವಾದ ವಿಚಾರ. ಆದ್ದರಿಂದ ಈ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕು.

ಕಡೆಯದಾಗಿ ಹರಿಜನರ ವಿಚಾರ. ಉದ್ದೇಶಪೂರ್ವಕವಾಗಿ ಇದನ್ನು ಕಡೆಯದಾಗಿ ಹೇಳುವುದು ಏಕೆಂದರೆ, ಈ ವಿಚಾರ ಯಾವಾಗಲೂ ಹೇಳುತ್ತಾರೆಂಬ ಭಾವನೆ ಸರ್ಕಾರಕ್ಕೆ ಮತ್ತು ಇತರರಿಗಿರಬಹುದು. ನನ್ನ ಅಭಿಪ್ರಾಯದಲ್ಲಿ ಇದು ಕೇವಲ ಇಲ್ಲಿರುವ 25 ಜನರಿಗಾಗಲಿ ಅಥವಾ ಒಂದು ಗುಂಪಿನ ಜನರಿಗಾಗಲಿ ಅನ್ವಯಿಸುವ ಪ್ರಶ್ನೆಯಲ್ಲ. ಆದ್ದರಿಂದ ಇದನ್ನು ಮನಸ್ಸಿನಲ್ಲಿಟ್ಟು ಸರಿಯಾದ ಯೋಜನೆ ಮಾಡಬೇಕು. ಪದೇ ಪದೇ ನಾವು ಕೇಳಿದ್ದೇ ಕೇಳುವುದು, ಸರ್ಕಾರದವರು ಹೇಳಿದ್ದೇ ಹೇಳುವುದು ಇಷ್ಟು ಕೆಲಸ ನಡೆಯುತ್ತಿದೆಯೇ ಹೊರತು ನಿಜವಾಗಿಯೂ ಕಾರ್ಯರೂಪದಲ್ಲೇನೂ ಸಾಕಾದಷ್ಟು ಕಾಣುತ್ತಿಲ್ಲ. ಅದನ್ನು ತಿಳಿಯದೆ ಕೆಲವರು ಹೀಗೆ ಹೇಳುವುದನ್ನು ನೋಡಿ ಸಂಶಯಪಡಬಹುದು. ಉದಾಹರಣೆಗೆ ತೋಟಿ ತಳವಾರರಿಗೆ ದವಸಧಾನ್ಯಗಳನ್ನು ಕಾನೂನು ಪ್ರಕಾರ ಕೊಡುತ್ತಿಲ್ಲ, ಅದಕ್ಕೆ ಸರ್ಕ್ಯುಲರ್ ಹೊರಡಿಸಿ ಕ್ರಮಪಡಿಸಬೇಕು ಎಂದು ಹೇಳಿದರೂ ಸರ್ಕಾರ ಈ ವಿಚಾರದಲ್ಲಿ ನಿಗಾ ಕೊಟ್ಟಿಲ್ಲ. ಇಂತಹ ವಿಚಾರಗಳು ಎಷ್ಟೋ ಇವೆ.

ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಈಗ ನಾವು ಪರಿಶೀಲನೆ ಮಾಡಬೇಕಾದ ಆಯವ್ಯಯದ ತಃಖ್ತೆ ಮೈಸೂರು ದೇಶದ ಆರ್ಥಿಕ ಸ್ಥಿತಿಯ ಕೈಕನ್ನಡಿಯೆಂದು ನಾವು ತಿಳಿದುಕೊಳ್ಳಬೇಕು. ಒಂದು ದೇಶದ ಆಯವ್ಯಯದ ತಃಖ್ತೆಯನ್ನು ಪ್ರತಿಸಾರಿಯೂ ಸಭೆಯಮುಂದಿಡುವಾಗ ಎಷ್ಟುಮಟ್ಟಿಗೆ ಆರ್ಥಿಕೋನ್ನತಿಗೆ, ಸಾರ್ವಜನಿಕ ಅನುಕೂಲತೆಗೆ ಸರ್ಕಾರ ಹಣವನ್ನೊದಗಿಸಿದೆ ಎಂಬುದನ್ನು ಅದರಲ್ಲಿ ನೋಡಬೇಕಾದದ್ದು ಬಹಳ ಮುಖ್ಯವಾದುದು. ಹಾಗೆ ನೋಡುವಾಗ ಎದುರು ಪಕ್ಷದ ನಾಯಕರು ಇದನ್ನು ಕಣ್ಣು ಬಿಟ್ಟು ಕೂಡ ನೋಡಿಲ್ಲ, ನೋಡಿದ್ದರೂ ಕೂಡ ಅದಕ್ಕೆ ಕೊಡಬೇಕಾದ ಬೆಲೆ ಕೊಟ್ಟಿಲ್ಲ. ಇದು ಬಹಳ ವಿಷಾದಕರ. ಎದುರು ಪಕ್ಷದ ನಾಯಕರು ಸಾಂಕ್ರಾಮಿಕ ಜಾಡ್ಯದ ಸುರಿಮಳೆ ಸುರಿಸಿ ನದಿ ಹರಿಸುತ್ತಿದ್ದಾರೆಂದು ಹೇಳಿದರು. ಅವರ ಭಾಷಣ ನೋಡಿದರೆ ಅಂಟುರೋಗದ ಹರಿಗೋಲಲ್ಲಿ ನಾಯಕರಾಗಿ ಜನರೆಲ್ಲರನ್ನೂ ಬನ್ನಿ, ಬನ್ನಿ ಎಂದು ಕರೆಯುತ್ತಿರುವಂತೆ ಕಾಣಿಸಿತು. ಮಾತೆತ್ತಿದರೆ ತಾವೇನು ಅನುಕೂಲ ಒದಗಿಸಿದಿರಿ ಎಂಬುದನ್ನು ಪುನರಾವರ್ತನೆ ಮಾಡುತ್ತಾ ಬರುತ್ತಿದ್ದಾರೆ. ಅದರಲ್ಲಿ ಪರಿಣತರೆಂದು ಹೇಳಬಹುದು. ಯಾವಾಗಲೂ ಹೇಳಿದ್ದೇ ಹೇಳುತ್ತಿರುವುದರಿಂದ ಪುನರಾವರ್ತನಾ ಪರಿಣತರು ಎಂಬ ಬಿರುದನ್ನು ಈ ಸಭೆ ಅವರಿಗೆ ಕೊಡಬೇಕೆಂದು ನನಗನ್ನಿಸುತ್ತದೆ. ಏನಾದರೂ ಹೇಳುವಾಗ ಎದುರು ಪಕ್ಷದ ನಾಯಕರು ಅದನ್ನು ವಿಮರ್ಶೆ ಮಾಡಬೇಕಾದದ್ದು ಅವರ ಕರ್ತವ್ಯ. ಅವಕಾಶವಿದೆಯೆಂದು ಅವರ ಕರ್ತವ್ಯವನ್ನು ತಿಳಿಯದೆ ಸುಮ್ಮನೆ ಏನಾದರೂ ಹೇಳುವುದು ಸರಿಯಲ್ಲ. ಅದು ಬಿಟ್ಟು ಇಂಥ ಕೆಲಸ ಮಾಡಿದ್ದಾರೆ, ಇಂಥಾದ್ದು ಮಾಡಬೇಕು ಎಂದು ಹೇಳಿದ್ದರೆ ಒಪ್ಪಬಹುದಾಗಿತ್ತು. ಹರಿಗೋಲಿನಲ್ಲಿ ಕೂತು ಪಿ.ಎಸ್.ಪಿ. ಲೀಡರಾಗಿ ಈ ದಿವಸ ಅವರು ಹೇಳುವುದೇನೆಂದರೆ ಸತ್ಯಾಗ್ರಹ ಚಳವಳಿ ಮಾಡುವುದಕ್ಕೆ ತಯಾರಾಗಿದ್ದೇವೆ ಎಂದು. ಅಂಟು ರೋಗದ ಹರಿಗೋಲಿನಲ್ಲಿ ಕೂತು ನಿಮ್ಮನ್ನೂ ಸಹ ಕರೆದುಕೊಂಡು ಹೋಗುತ್ತೇವೆ, ಅವಸ್ಥೆಪಡಿ ಎಂದು ಕರೆಯುತ್ತಿದ್ದಾರೆ. ಆದ್ದರಿಂದ ಜನತೆಗೆ ಹೇಳುವುದು ಅವರ ಜೊತೆಯಲ್ಲಿ ಹೋಗಬೇಡಿ ಎಂದು. ನಿಮ್ಮಲ್ಲಿ ಸ್ವಲ್ಪ ಮಂದಿಯಿದ್ದರೂ ಬೇಕಾದಷ್ಟು ಭೇದವಿವೆ. ನೀವೆಷ್ಟು ಮಂದಿ ಇದ್ದೀರೋ ಅಷ್ಟು ಪಕ್ಷಗಳಿವೆ. ನೀವು ಹೇಳಿದ್ದನ್ನು ಅನುಮೋದಿಸುವವರು ಯಾರೂ ಇಲ್ಲ. ಹಾಗಿರುವಾಗ ಏನೇನನ್ನೋ ಏಕೆ ಹೇಳಬೇಕು ? ನಮ್ಮೆಲ್ಲಾದರೆ ಆಯವ್ಯಯಪಟ್ಟಿ ಸಭೆಯಮುಂದೆ ಬಂದಾಗ ಹೆದರದೆ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇವೆ ; ದೇಶದ ಹಿತಕ್ಕಾಗಿ ಏನು ಮಾಡಬೇಕು, ಈಗೇನಾಗಿದೆ ಎಂಬುದನ್ನು ಧೈರ್ಯವಾಗಿ ಹೇಳಿ ಮುಂದೆ ಯಾವ ಮಾರ್ಗವನ್ನನುಸರಿಸಬೇಕೆಂಬುದನ್ನು ತೋರಿಸುತ್ತೇವೆ. ನಾವೆಲ್ಲರೂ ಒಗ್ಗಟ್ಟಾಗಿ ಕೆಲಸಮಾಡುತ್ತೇವೆ. ನಿಜವಾಗಿಯೂ ಆಗಬೇಕಾದ ಕೆಲಸಗಳಿರಬಹುದು. ಅನೇಕ ಖರ್ಚುಗಳನ್ನು ಕಡಮೆ ಮಾಡಬಹುದು. ಆದರೆ ಕಡಮೆ ಮಾಡಬೇಕೆಂಬ ಒಂದೇ ಒಂದು ದೃಷ್ಟಿಯಿಂದ ಆಗಬೇಕಾದ ದೇಶೋದ್ಧಾರ ಕೆಲಸಗಳನ್ನು ಕಡೆಗಾಣಿಸುವುದಕ್ಕಾಗುವುದಿಲ್ಲವೆಂಬುದನ್ನು ಮರೆಯಬಾರದು. ಮಾತೆತ್ತಿದರೆ ಹಿಂದೆ ಅಸೆಟ್ಸ್ ಬಿಲ್ಡ್ ಮಾಡಿದ್ದೆವು, ಅದನ್ನು ಮನಸ್ಸಿಗೆ ಬಂದಂತೆ ಖರ್ಚು ಮಾಡಿದರು ಎಂದು ಹತ್ತು ವರ್ಷಗಳ ಲಾಗಾಯ್ತು ಹೇಳುತ್ತಿದ್ದಾರೆ; ಅದನ್ನು ಬಿಟ್ಟೇ ಇಲ್ಲ. ನಿಜವಾಗಿಯೂ 8 ಕೋಟಿ ರೂಪಾಯಿಗಳನ್ನು ಬರೀ ಆಹಾರಕ್ಕಾಗಿ ಕಳೆದು ಉಳಿದಿರುವುದನ್ನು ಜಿಪುಣ ಮನೆಯಲ್ಲಿಟ್ಟಿರುವ ಹಾಗೆ ಮೇಲೆ ಮಣ್ಣುಮುಚ್ಚಿ ಹಾಗೇ ಇಟ್ಟಿದ್ದರೆ ಕರೆನ್ಸಿ ನೋಟಾಗಿದ್ದರೆ ಗೆದ್ದಲು ಹಿಡಿಯುತ್ತಿತ್ತು. ಅದನ್ನು ತೆಗೆದು ಆದಾಯದಾಯಕವಾಗಿ ಮಾಡಲು ಪ್ರಯತ್ನಿಸಿ ಮಿಲ್ಲುಗಳಿಗೆ ಹಾಕಿ ದೇಶದ ಆರ್ಥಿಕೋನ್ನತಿ ಮಾಡಿದ್ದೇವೆ. ತಮ್ಮ ಕಾಲದಲ್ಲಿ 5 ಸಾವಿರ ಇರಿಗೇಷನ್ ಪಂಪು ಕೊಟ್ಟಿತ್ತು ಎಂದು ಹೇಳಿದರು. ಆದರೆ ಅದನ್ನು ಎಲ್ಲಿಗೆ ಕೊಟ್ಟಿದ್ದರೆಂಬುದನ್ನು ನೋಡಬೇಕು. ಕೋಲಾರದ ಚಿನ್ನದಗಣಿ ಪ್ರದೇಶಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸಿದಾಗ ಗಣಿಯವರು 6 ಕಾಸಿನಂತೆ ದರ ಹಾಕಿದರೂ 30 ಲಕ್ಷ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆಂದು ಈ ದಿವಸ ಅವರ ನೌಕರರು ಈ ಸಭೆಯಲ್ಲಿ ಹೇಳಿದರು. ಅವರೇನು ಬಿಟ್ಟಿಕೊಡುತ್ತಾರೆಯೆ ? ಅದಕ್ಕೆ ಬದಲಾಗಿ ಅದನ್ನೇ ಬೇರೆ ಕಡೆ 6 ಕಾಸಿನಂತೆ ಒದಗಿಸಿದ್ದರೆ ಬೇಕಾದಷ್ಟು ಉತ್ಪತ್ತಿಯಾಗಿ ದೇಶೋದ್ಧಾರವಾಗುತ್ತಿತ್ತು. ಒಂದು ಸಾವಿರ ಸಂಬಳ ಇರುವವರಿಗೆ 5 ಸಾವಿರ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಗಣಿಯವರು ಏನೂ ಕೊಡುವುದಿಲ್ಲ. ಅಲ್ಲದೆ ಮ್ಯಾಂಗನೀಸ್ ಗಣಿಗಳಲ್ಲಿ ಯಾರಾದರೂ ಕೊಡುವಾಗ ಬಂಗಾರದ ಗಣಿಯವರು ಕೊಡುವುದನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವಿದೆ. ಮೈಸೂರು ದೇಶದ ಮಗನಾಗಿ ಮೈಸೂರು ದೇಶದ ಉಪ್ಪುತಿಂದು ಮಂತ್ರಿಮಂಡಲದಲ್ಲಿದ್ದ ಶ್ರೀನಿವಾಸರ್ಯರವರು ನಮ್ಮ ಪ್ರತಿನಿಧಿಯಾಗಿ ಚಿನ್ನದಗಣಿ ಆಡಳಿತದಲ್ಲಿದ್ದಾರೆ, ನಮ್ಮ ಹಿತ ಕಾಪಾಡುತ್ತಾರೆ ಎಂದು ತಿಳಿದಿದ್ದೆವು. ಆದರೆ ದುರಾದೃಷ್ಟವಶಾತ್ ಅವರು ನಮ್ಮ ಹಿತರಕ್ಷಣೆ ಮಾಡುತ್ತಿಲ್ಲ ಎಂದು ಈಗ ತಿಳಿದುಬಂದಿದೆ. ನಮ್ಮ ಡೈರೆಕ್ಟರು ಹೋದಾಗ ಅವರು ಸರಿಯಾಗಿ ವರ್ತಿಸಲಿಲ್ಲ. ಮೈಸೂರು ದೇಶದ ಹಿತವನ್ನು ಅವರು ಕಾಪಾಡದೆ

(ಶ್ರೀ ಎ. ಭೀಮಪ್ಪನಾಯಕ್.)

ಸ್ವಹಿತವನ್ನು ಕಾಪಾಡುತ್ತಿರುವರೋ ಏನೋ ಎಂದು ಚಿಂತೆಯಾಗಿದೆ. ಈಗ ಜಗತ್ತಿನಲ್ಲಿ ಗೋಲ್ಡ್‌ಮೈನಿಂಗ್ ಕಂಪೆನಿ ನಡೆಸುವುದು ಇಂಗ್ಲೆಂಡ್ ಒಂದೇ ಅಲ್ಲ. ಲಾಭದಾಯಕವಾಗಿ ನಡೆಸುವ ಕಂಪೆನಿಗಳೂ ಇವೆ. ಆದ್ದರಿಂದ ಅವರನ್ನೇನೂ ಬೆಸಗೊಳ್ಳಬೇಕಾಗಿಲ್ಲ. ಅಂಥ ಅಗತ್ಯವೂ ಇಲ್ಲ. ಅವರನ್ನು ಅಲ್ಲಿಂದ ಹೊರಕ್ಕೆ ಕಳಿಸುವುದಕ್ಕೆ ಈ ಸಭೆಯು ಒಮ್ಮತವಾದ ಸ್ವಾಗತವಿದೆಯೆಂದು ನಾನು ತಿಳಿದಿದ್ದೇನೆ. (ಸಭೆಯಲ್ಲಿ ಚಪ್ಪಾಳೆ). ಮುಖ್ಯಮಂತ್ರಿಗಳು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಂಬುತ್ತೇನೆ. ಅಲ್ಲಿನ ಕಂಪೆನಿಯವರು ಈ ದಿವಸ ನಮ್ಮ ದೇಶದ ಬಂಗಾರವನ್ನು ಅವರ ದೇಶಕ್ಕೆ ನಾನಾ ರೀತಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಒಬ್ಬೊಬ್ಬ ಅಧಿಕಾರಿಗಳು ಇಂಗ್ಲೆಂಡಿಗೆ ಹೋದರೂ ಇಲ್ಲಿಂದ ಸಾಧಾರಣವಾಗಿ ಒಂದಕ್ಕೆ ಹತ್ತರಷ್ಟು ಫ್ರೀ ಟಿಕೆಟ್ಟು ಅವರಿಗೆ ಕೊಟ್ಟು ಸಾಗಿಸುತ್ತಾರೆ. ಅವರ ದೇಶದ ಸಾಮಾನು ಸುಲಭವಾಗಿರುವುದನ್ನು ಮರ್ಕ್ಯುರಿ ಮುಂತಾದ್ದನ್ನು ಟೆಂಡರು ಕರೆಯದೆ ಇಲ್ಲಿಗೆ ತರಿಸಿ, ಇಲ್ಲಿನ ಸುಲಭ ಪದಾರ್ಥಗಳನ್ನು ಅಲ್ಲಿಗೆ ಸಾಗಿಸಿ ಲಾಭಗಳಿಸುತ್ತಿದ್ದಾರೆ. ಹೀಗಿರುವಾಗ ಆ ಸಂಸ್ಥೆ ಯಾವ ರೀತಿಯಲ್ಲಿ ಕೆಲಸ ಕಾರ್ಯ ನಡೆಸುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಈ ದಿವಸ ಅವರು ವ್ಯಾಪಾರಸ್ಥರಾಗಿ ಬಂದಿದ್ದಾರೆ. ವ್ಯಾಪಾರಸ್ತರಾಗಿಯೇ ಅವರು ಹಿಂದೆ ಸ್ವಾತಂತ್ರ್ಯ ಬಂದಾಗ ಇಂಡಿಯಾದೇಶಕ್ಕೆ ವ್ಯಾಪಾರಸ್ತರಾಗಿ ಬಂದು ನೆಲಸಿದ್ದ ಪರಕೀಯರು ಬಿಟ್ಟು ಹೋದಹಾಗೆ, ಅವರ ಸಹೋದರರರಂತೆ ಗೌರವದಿಂದ ನಮ್ಮ ದೇಶ ಬಿಟ್ಟು ಹೋಗುವುದು ಅಗತ್ಯವಾಗಿದೆ. ಹಾಗಿಲ್ಲದಿದ್ದರೆ ನಾವೇ ಅವರನ್ನು ಕಳುಹಿಸಬೇಕು, ವೀಳ್ಯ ಕೊಟ್ಟು ಕಳುಹಿಸಬೇಕು ಎಂದು ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ. ಹಾಗೆಯೇ ದೇಶದ ಹಿತದೃಷ್ಟಿಯಿಂದ ಅನೇಕ ಕಾರ್ಯ ಆಗಬೇಕಾದ್ದನ್ನು ಈ ದಿವಸ ಬೇಡವೆನ್ನುವುದಿಲ್ಲ.

11-30 A.M.

ನಮ್ಮ ದೇಶ ಅಭಿವೃದ್ಧಿಯಾಗಬೇಕಾದರೆ ಸರ್ಕಾರದವರು ನಮ್ಮ ದೇಶದ ವ್ಯಾಪಾರ, ಉದ್ಯೋಗ ಮತ್ತು ಕೈಗಾರಿಕೆಗಳ ಕಡೆಗೆ ಖಂಡಿತವಾಗಿಯೂ ಹೆಚ್ಚಿನ ಗಮನ ಕೊಡಬೇಕು. ಇವು ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯ ಕೈಗನ್ನಡಿ. ಮೈಸೂರು ದೇಶದಲ್ಲಿರತಕ್ಕಂಥ ಕೆಲವು export commodities ಇಂಡಿಯಾ ದೇಶದಲ್ಲಿ ಯಾವ ಭಾಗದಲ್ಲೂ ಇಲ್ಲ. ಇವೊತ್ತು ಮ್ಯಾಂಗನೀಸ್, ಏಲಕ್ಕಿ, ಗಂಧದ ಮರ—ಯಾವುದನ್ನು ತೆಗೆದುಕೊಂಡರೂ ಇವು ನಮ್ಮ ದೇಶಕ್ಕೆ ಹೆಚ್ಚಿನ ಆದಾಯ ತರತಕ್ಕವುಗಳಾಗಿವೆ. ಇವುಗಳ ಬಗ್ಗೆ ಸರ್ಕಾರದವರು ಎಲ್ಲ ವಿಧವಾದ ಉತ್ತೇಜನ, ಎಲ್ಲ ವಿಧವಾದ ಅನುಕೂಲ ಕೊಡಬೇಕು. ಅಮೆರಿಕಾ ಇಂಗ್ಲೆಂಡ್ ದೇಶಗಳಲ್ಲಿ ನೋಡುವುದಾದರೆ, ಅಲ್ಲಿ ಈ ವಿಧವಾದ ಕೈಗಾರಿಕೆಗಳಿಂದ ಆದಾಯ ಹೆಚ್ಚಿಸುವುದಕ್ಕಾಗಿ, ಅವುಗಳನ್ನು ಪರದೇಶಗಳಿಗೆ ಕಳುಹಿಸುವುದೂ ತಮ್ಮದೇ ಒಂದು ಕರ್ತವ್ಯವೆಂದು ಭಾವಿಸಿ ತಮ್ಮ ಜನತೆಯ ಆರ್ಥಿಕೋನ್ನತಿಯನ್ನು ಸಾಧಿಸುತ್ತಾರೆ. ಅದೇರೀತಿ ನಾವೂ ಮಾಡಬೇಕು.

ಆಮೇಲೆ, ಖರ್ಚಿನಮೇಲೆ ಮಾತನಾಡುತ್ತಾ ಇಲ್ಲಿ ಅನೇಕ ಖೋತಾಗಳಿಗೆ ಅವಕಾಶವಿದೆ, ಅನಾವಶ್ಯಕವಾದ ಖರ್ಚುಗಳು ಇಲ್ಲಿ ಸೇರಿವೆಯೆಂದು ನಾನು ಹೇಳಬೇಕಾಗಿದೆ. ಮಂತ್ರಿಗಳ ಭವನಗಳಿಗಾಗಿ 2 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಇದು ಅನಗತ್ಯ. ಇದನ್ನು ತೆಗೆಯಿರಿ. ಯಾವುದರಿಂದ ಆದಾಯ ಬರುತ್ತದೆಂದು ತೋರುತ್ತದೋ ಅದನ್ನು ಹೆಚ್ಚು ಮಾಡೋಣ.

ಆಮೇಲೆ, ಟ್ಯಾಕ್ಸೇಷನ್ ಮಸೂದೆಗಳ ಬಗ್ಗೆ ಕೆಲವರು ಸ್ವಲ್ಪಮಟ್ಟಿಗೆ ತಪ್ಪು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ. ಏಕೆಂದರೆ ಅದರಲ್ಲಿ ಕೆಲವು ರಿಲೀಫ್ ಮೆಷರ್ಸ್ ಕೂಡ ಇವೆ, ಜನತೆಯ ತೊಂದರೆಯನ್ನು ನಿವಾರಣೆ ಮಾಡಲಿಕ್ಕೆ ಸಹಾಯಕವಾಗಿರುವಂಥವು. ಎಲ್ಲವನ್ನೂ ಬೇಡವೆನ್ನುವುದು ಅರ್ಥವಿಲ್ಲದ ಮಾತು. Betterment tax ಇದೆ; ಜನತೆಗೆ ಅನುಕೂಲವನ್ನು ಕಲ್ಪಿಸುವುದಕ್ಕಾಗಿ ತಂದಿರುವುದು ಇದು; ಅವರ ಆರ್ಥಿಕೋನ್ನತಿಯನ್ನು ಕುಗ್ಗಿಸುವುದಲ್ಲ. ಸೇಲ್ಸ್ ಟ್ಯಾಕ್ಸ್ ಮುಂತಾಗಿ ಒಂದೆರಡು ಐಟಂಗಳು ಜಾಸ್ತಿ ಹೊರೆಯಾಗಬಹುದು. ಅಂದಮಾತ್ರಕ್ಕೇ ಎಲ್ಲವನ್ನೂ ಒಂದೇ ದೃಷ್ಟಿಯಿಂದ ಹೇಳುವುದು ಸರಿಯಲ್ಲ. ಭೂಕಂದಾಯದ ವಿಷಯದಲ್ಲಿ ಜನತೆ ಈ ಹೊರೆ ಹೊರುವುದಕ್ಕೆ ಸಿದ್ಧವಾಗಿಲ್ಲವೆಂದು ನಾನೂ ಹೇಳುತ್ತೇನೆ. ಈ ಹೊತ್ತು ಆಂಧ್ರ ಸರ್ಕಾರದವರೂ ಕೂಡ ಮೂರು ಕೋಟಿ ರೂಪಾಯಿಗಳ ಡಿಫಿಸಿಟ್ಟನ್ನು ಸರಿಮಾಡಿಕೊಳ್ಳುವುದಕ್ಕಾಗಿ ಇದೇ ರೀತಿಯ ತೆರಿಗೆಗಳನ್ನು ತಂದು ಅವುಗಳನ್ನು ವಾಪಸು ತೆಗೆದುಕೊಳ್ಳುವವರಾಗಿದ್ದಾರೆಂದು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಅದೇ ರೀತಿ ನಾವೂ ಕೆಲವಕ್ಕೆ ಸ್ವಾಗತ ಕೊಡಬೇಕು. ಮಿಕ್ಕದ್ದನ್ನು ಬಿಡೋಣ. ಎಲ್ಲವನ್ನೂ ಒಂದೇ ಕೋನದಲ್ಲಿ ಅಳೆಯಕೂಡದು. ಕಾಫಿ ತೋಟದಮೇಲೆ ಹೆಚ್ಚಿಗೆ ತೆರಿಗೆ ಹಾಕಿದ್ದಾರೆ. ಕಾಫಿ ತೋಟವನ್ನು ಅಭಿವೃದ್ಧಿಪಡಿಸಿದರೆ, ಹಸುವನ್ನು ಚೆನ್ನಾಗಿ ಸಾಕಿದರೆ ಹಾಲು ಕೊಡುತ್ತದೆ. ಹಾಗಿಲ್ಲದೆ ಬಡ ಕುರಿಯಿಂದ ತುಪ್ಪಟ ಕತ್ತರಿಸಲು ಹೊರಟರೆ ಚರ್ಮವೇ ಕತ್ತರಿಸಿಹೋಗುತ್ತದೆ. ಹಾಗೆ ಮಾಡಬಾರದು. ಇನ್ನೂ ರೈತರು ಆ ಸ್ಥಿತಿಗೆ ಬಂದಿಲ್ಲ. ಅವರನ್ನು ಇನ್ನೂ ಬೆಳೆಯಗೊಡಬೇಕು; ಅವರ ಆರ್ಥಿಕೋನ್ನತಿಯನ್ನು ಸಾಧಿಸಬೇಕು. ಆದ್ದರಿಂದ ಅವರಿಂದ ತೆಗೆದುಕೊಳ್ಳುವುದು ಬೇಡ. ಎಲ್ಲಿ ಹೆಚ್ಚು ಮಾಡುವುದಕ್ಕೆ ಸಾಧ್ಯವೋ ಅಲ್ಲಿ ಮಾಡಿ. ಈ ಹೊತ್ತು ಭೂಮಿಯಮೇಲೆ ತೆರಿಗೆ ತಂದಿರುವುದು ಬಹಳ early ಎಂದು ಹೇಳಬೇಕು. ಇನ್ನೂ ಸ್ವಲ್ಪಕಾಲ ಕಾಯಿರಿ. ಪಂಪುಗಳನ್ನು ಹೆಚ್ಚು ಹೆಚ್ಚಿಗೆ ಒದಗಿಸಿಕೊಡಿ. 5,000 ಪಂಪುಗಳನ್ನು ಒದಗಿಸಿದರೆ 500 ದೊಡ್ಡ ಕೆರೆಗಳನ್ನು ಕಟ್ಟಿಸಿದಹಾಗಾಗುತ್ತದೆ. ಆ ರೀತಿ ಇನ್ನೂ ಹೆಚ್ಚು ಹೆಚ್ಚು ಪಂಪುಗಳನ್ನು ಒದಗಿಸಿ. ಈಗ ಪ್ರತಿಯೊಂದು ಜಿಲ್ಲೆಗೂ ಒಂದು ಕಾಲೇಜು ಕೊಟ್ಟಿದ್ದೇವೆ. ಶ್ರೀಮಾನ್ ಇಮಾಂರವರೂ ಸಿದ್ದಪ್ಪನವರೂ ತಮ್ಮ ಕಾಲದಲ್ಲಿ ಎರಡು ಕಾಲೇಜುಗಳನ್ನಿಟ್ಟುಕೊಂಡು ಎಷ್ಟೋ ಉದ್ಧಾರ ಮಾಡಿದ್ದೇವೆಂದು ಹೇಳುತ್ತಿದ್ದರು. ಈಗ ಒಂದೊಂದು ಜಿಲ್ಲೆಗೂ ಒಂದೊಂದು ಕಾಲೇಜಿರುವುದನ್ನು ನೋಡಬಲ್ಲೆವು. ಆದ್ದರಿಂದ ಒಟ್ಟಿನಲ್ಲಿ ತಾವು ಅಂಟು ರೋಗದ ಹರಕು ದೋಣಿಯ ನಾವಿಕರಾಗಕೂಡದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಈ ಮೂರು ದಿವಸಗಳಿಂದಲೂ ಮಾನ್ಯ ಸದಸ್ಯರು ಮಾಡಿದ ಭಾಷಣಗಳನ್ನು ನಾನು ಕಿವಿಗೊಟ್ಟು ಕೇಳಿದ್ದೇನೆ. ಎಲ್ಲರ ಮನಸ್ಸಿನಲ್ಲೂ—ಪಕ್ಷಾತೀತವಾಗಿ, ಉಂಟಾಗಿರತಕ್ಕ ಅಭಿಪ್ರಾಯದ ಸರಣಿಯಾದರೂ ಈ ತೆರಿಗೆಗಳ ವಿಚಾರ. ತೆರಿಗೆಗಳನ್ನು ಹೆಚ್ಚುಮಾಡತಕ್ಕದ್ದು ಸರಿಯಲ್ಲ ಎನ್ನುವ

ಅಭಿಪ್ರಾಯವನ್ನು ಉದ್ವೇಗಯುತವಾದ ಭಾಷಣಗಳಲ್ಲಿ ಅವರು ಹೇಳಿದ್ದಾರೆ. ಆ ಉದ್ವೇಗವನ್ನು ನೋಡಿ ನನಗೆ ಅಶ್ಚರ್ಯವೇನಿಲ್ಲ. ಈ ತೆರದ ತೆರಿಗೆಯ ವಿಚಾರದಲ್ಲಿ ಉದ್ವೇಗಯುತವಾದ ಭಾಷಣಗಳು ಆಗಬೇಕಾದದ್ದೂ ಸಹಜವೇ. ಈ ಸಭೆಯಲ್ಲೇ ಅಲ್ಲ, ಇಂಡಿಯ ದೇಶದ ಇತರ ಸಭೆಗಳಲ್ಲೂ ಕೂಡ ಇದೇರೀತಿಯಾಗಿ ಉದ್ವೇಗಯುತವಾದ ಭಾಷಣಗಳಾಗಿವೆ. ಮದ್ರಾಸಿನ ಶಾಸನ ಸಭೆಯಲ್ಲೂ ಇದೇ ರೀತಿಯಾಗಿದೆ; ಇಂಡಿಯಾದ ಪಾರ್ಲಿಮೆಂಟಿನಲ್ಲೂ ಕೂಡ ಇದೇ ರೀತಿಯಾಗಿದೆ. ಈ ದಿವಸ ಸದಸ್ಯರು ತಮ್ಮ ಸಹಜವಾದ ಒಂದು ಭಾವನೆಯಿಂದ ಈ ರೀತಿ ಮಾತನಾಡಿದ್ದರೆ ಅದನ್ನು ನಾನಾದರೂ ತಪ್ಪಾಗಿ ತಿಳಿದುಕೊಂಡಿಲ್ಲ. ಈ ಮನುಷ್ಯ ಸ್ವಭಾವವನ್ನು ಎತ್ತಿ ಹೇಳುತ್ತಾ, ಸರ್ವಜ್ಞನೇ ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದ್ದಾನೆ:

"ಸಾಲವನು ಕೊಂಬಾಗ ಪಾಲೋಗರುಂಡಂತೆ
ಸಾಲಿಗರು ಬಂದು ಎಳೆವಾಗ ಕಿಬ್ಬದಿಯ ಕೀಲು
ಮುರಿದಂತೆ"

ಎಂಬ ಸರ್ವಜ್ಞನ ವಚನ ಬಹಳ ಅರ್ಥಗರ್ಭಿತವಾಗಿದೆ. ಅದನ್ನೇ ಈ ಸಂದರ್ಭಕ್ಕೆ ಪರಿವರ್ತನೆ ಮಾಡುವುದಾದರೆ—

"ಸೌಕರ್ಯಗಳ ಪಡೆವಾಗ ಹಾಲೋಗರುಂಡಂತೆ॥
ತೆರಿಗೆಗಳ ಕೊಡುವಾಗ ಕಿಬ್ಬದಿಯ ಕೀಲು ಮುರಿದಂತೆ"

ಜನ ವರ್ತಿಸುತ್ತಾರೆ ಎಂದು ಹೇಳಬೇಕಾಗಿದೆ. ಅನೇಕ ಸದಸ್ಯರು ಈ ತೆರಿಗೆಗಳನ್ನು ಹಾಕಿದರೆ, ರೈತರನ್ನು ಮೂಲೋತ್ಪಾಟನೆ ಮಾಡಿದಂತಾಗುತ್ತಿದೆ, ಚಳವಳಿಯನ್ನು ಮಾಡುತ್ತೇವೆ, ಇದು ಮೊಂಡತನ ಎಂದು ಹೇಳಿ ಭಾಷಣಗಳ ಸುರಿಮಳೆಗಳನ್ನು ಸುರಿಸಿದರು. ಆದರೆ, ಮಾನ್ಯ ಸದಸ್ಯರಲ್ಲಿ ಒಬ್ಬರಾದರೂ ಕೂಡ 'ನಮ್ಮ ಊರಿಗೆ ಆಸ್ಪತ್ರೆ ಬೇಡಿ, ಅದರಿಂದ ಖರ್ಚು ಜಾಸ್ತಿಯಾಗುತ್ತದೆ; ಸ್ಕೂಲು ಕೊಡಬೇಡಿ, ಅದರಿಂದ ಖರ್ಚು ಜಾಸ್ತಿಯಾಗುತ್ತದೆ; ಪಂಪುಗಳನ್ನು ಕೊಡಬೇಡಿ, ಅದರಿಂದ ಖರ್ಚು ಕಡಿಮೆಯಾಗಲಿ' ಎಂದು ಹೇಳಲಿಲ್ಲ. ಪ್ರತಿಯೊಬ್ಬರೂ ಭಾಷಣ ಮಾಡುತ್ತಿರುವಾಗ ನಾನು ನೋಡುತ್ತಿದ್ದೇನೆ, ಪ್ರಾರಂಭ ಮಾಡತಕ್ಕದ್ದು 'ತೆರಿಗೆ ಬೇಡ, ತೆರಿಗೆ ಹೆಚ್ಚಾಗಿ ಹಾಕಬೇಡಿ' ಎಂದು ಬಡಜನರ ಮಾತುಗಳನ್ನು ಉಪಯೋಗಿಸಿ, ಭಾಷಣದ ಕೊನೆಗೆ ಬಂದಾಗ ತಮ್ಮ ಊರಿನಲ್ಲಿ ಯಾವುದೋ ಸೌಕರ್ಯವನ್ನು ಎಷ್ಟು ಸಾರಿ ಹೇಳಿದರೂ ಮಾಡಿಕೊಡಲಿಲ್ಲ ಎಂದು ಹೇಳಿ ಮುಗಿಸುವುದು ಸರ್ವಸಾಮಾನ್ಯವಾದ ಮಾತಾಗಿದೆ.

ಆದ್ದರಿಂದ ಈ ದಿವಸ ಉದ್ವೇಗವನ್ನು ಶಮನಮಾಡಿಕೊಂಡು, ಉದಾತ್ತ ಭಾವನೆಯನ್ನು ಬೆಳೆಸಿಕೊಂಡು ಈ ವಿಷಯವನ್ನು ಪರಿಶೀಲನೆ ಮಾಡಬೇಕು. ಶ್ರೀಮಾನ್ ಪಟ್ಟಾಭಿರಾಮನ್‌ರವರು ಹೇಳಿದರು, 'ಈ ಸರ್ಕಾರ ಅಂಗಡಿಯವನೋಪಾದಿಯಲ್ಲಿದೆ; ದುಡ್ಡು ಕೊಟ್ಟರೆ ಸರಕು ಕೊಡುವುದು ಅಂಗಡಿಯವನ ಕಸುಬು; ಹಾಗೆಯೇ ಸರ್ಕಾರದವರು ತೆರಿಗೆ ಕೊಟ್ಟರೆ ಸೌಕರ್ಯ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ' ಎಂದು. ಅಂಗಡಿಯವನಿಗೆ ಹಣ ಕೊಟ್ಟರೆ ಅವನು ಸರಕು ಕೊಡುತ್ತಾನೆ ಎಂಬುದು ಲೋಕ ರೂಢಿಯಾದ ನೀತಿ. ಅದು ಎಲ್ಲರೂ ಒಪ್ಪತಕ್ಕ ನೀತಿಯೇ. ಯಾವ ಮನುಷ್ಯನೂ ಕೂಡ—ಶ್ರೀಮಾನ್ ಪಟ್ಟಾಭಿರಾಮನ್‌ರವರೂ ಕೂಡ—ಅಂಗಡಿಗೆ ಹೋಗಿ ಏನೂ ದುಡ್ಡು ಕೊಡದೆ ಪುಗಸಟ್ಟೆ ಸಾಮಾನು ತರುವುದು ಸರಿಯಲ್ಲ. ಆದ್ದರಿಂದ ಆ ಲೋಕ ರೂಢಿಯಾದ ಯಾವ ನೀತಿಯಿದೆಯೋ ಅದನ್ನೇ ಸರ್ಕಾರದವರೂ ಅನುಸರಿಸುವುದು ನ್ಯಾಯವೇ. ಅದಿಲ್ಲದಿದ್ದರೆ, ಚರಿತ್ರೆಯಲ್ಲಿ ಹೇಳುವ ಕಟ್ಟು ಕತೆಯಂತೆ, ವಿದ್ಯಾರಣ್ಯರು ತಪಸ್ಸು ಮಾಡಿ ಸುವರ್ಣ ವೃಷ್ಟಿಯನ್ನು ಕರೆದರೆನ್ನುವ ಹಾಗೆ, ಇಲ್ಲಿಯೂ ಯಾರಾದರೂ ತಪಸ್ಸು ಮಾಡಿ ಸುವರ್ಣದ ಮಳೆಯನ್ನು ಕರೆದರೆ ಆಗ್ಗೆ ಯಾವ ತೆರಿಗೆಯನ್ನೂ ಹಾಕಬೇಕಾಗಿಲ್ಲ!

ಒಬ್ಬ ಸದಸ್ಯರು.—ಆ ವಿದ್ಯಾರಣ್ಯರಂತೆ ಇಂದು ತಾವೇ ಮಾಡಬಹುದು.

ಶ್ರೀ ಕೆ. ಹನುಮಂತಯ್ಯ.—ಆದ್ದರಿಂದ ಈ ಸಭೆ ಈ ಪ್ರಶ್ನೆಯನ್ನು ಒಂದು ಸಮತೂಕದ ದೃಷ್ಟಿಯಿಂದ ನೋಡಬೇಕೆಂಬುದು ನನ್ನ ವಿನಯಪೂರ್ವಕವಾದ ಬಿನ್ನಹ. ಈ ಎಂಟು ತೆರಿಗೆಗಳ ವಿಚಾರದಲ್ಲಿ ಬೇಕಾದರೆ ಸಮಾಲೋಚನೆ ಮಾಡೋಣ; ಉದ್ವೇಗ ಬೇಡ, ಕೋಪ ಬೇಡ. ಪ್ರತಿಪಕ್ಷದವರೇ ಆಗಲಿ, ಇನ್ನಾರಾದರೂ ಆಗಲಿ ಸರ್ಕಾರದವರು ಈಗ ತಂದಿರತಕ್ಕ ಒಂದು ತೆರಿಗೆಯ ಹೆಚ್ಚುವರಿಯನ್ನು ಉಪಯೋಗಿಸಿಕೊಂಡು ಮಂತ್ರಿ ಮಂಡಲಕ್ಕೆ ಅಪಕೀರ್ತಿ ತರತಕ್ಕಂಥ ಅಥವಾ ಅದನ್ನು ಹೆದರಿಸತಕ್ಕಂಥ ಕಾರ್ಯಕ್ಕೆ ಕೈಹಾಕುವುದು ಅಷ್ಟೇನೂ ಶ್ರೇಯಸ್ಕರವಲ್ಲ. ಈ ತರಹ ನಾವು ಮಾಡಿಕೊಂಡುಹೋದರೆ ಈ ಪ್ರಜಾಪ್ರಭುತ್ವ ಕುಸಿದು ಬೀಳುತ್ತದೆ. ಇದು ಹೇಗೆ ಎಂಬುದನ್ನು ನಾನು ಮತ್ತೊಂದು ಸಂದರ್ಭದಲ್ಲಿ ಪರಿಶೀಲಿಸುತ್ತೇನೆ. ಆದಾಯವೆಚ್ಚಗಳು ಯಾವ ರೀತಿ ಸಮತೂಕವಾಗಿರಬೇಕೆಂದು ಹೇಳಿ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರೂ ಮತ್ತು ಶ್ರೀ ಜೆ. ಮಹಮ್ಮದ್ ಇಮಾಂರವರು ತಿಳಿಸಿದ್ದಾರೋ ಅದೇ ರೀತಿಯಾಗಿ ಒಂದು ಸಮತೂಕವಾದ ದೃಷ್ಟಿಯಿಂದ ಈ ಆದಾಯ ವೆಚ್ಚಗಳನ್ನು ನೋಡಬೇಕೆಂಬುದೇ ನನ್ನ ಪ್ರಾರ್ಥನೆ. ಈಗ ಸರ್ಕಾರದವರು ವಿಧಿಸಬೇಕೆಂದಿರತಕ್ಕ ತೆರಿಗೆಗಳಲ್ಲಿ ಕೆಲವು ತೆರಿಗೆಗಳು ಹೆಚ್ಚಾಗಿವೆಯೆಂದು ತಾವುಗಳು ಭಾವಿಸುವುದಾದರೆ ಅವುಗಳನ್ನು ತಮ್ಮ ಎಲ್ಲರ ಅಭಿಪ್ರಾಯಗಳಿಗನುಗುಣವಾಗಿ ಕಡಮೆಮಾಡಲು ನಾನು ತಯಾರಾಗಿದ್ದೇನೆ. ಅನೇಕ ಬಾಬುಗಳಲ್ಲಿ ಹಣ ಹೆಚ್ಚಾಗಿ ಖರ್ಚಾಗುತ್ತಿದೆ, ಅದನ್ನೂ ಕಡಮೆಮಾಡಿ ಎಂದು ಹೇಳಿದರೆ ಹಾಗೆ ಅದನ್ನೂ ಕಡಮೆಮಾಡುವುದಕ್ಕೆ ನಾನು ತಯಾರಾಗಿದ್ದೇನೆ. ಇದು ಹೀಗೆ ಒಂದು ಸಮಾಲೋಚನೆಯ ಪ್ರಶ್ನೆಯಾಗಿದೆಯೇ ಹೊರತು ದ್ವೇಷಾಸೂಯೆಗಳನ್ನು ಅಳವಡಿಸಿಕೊಂಡು, ಉದ್ರೇಕಪೂರಿತವಾದಂಥ ಭಾಷಣಗಳನ್ನುಮಾಡಲು ಇದು ಸಮಯವಲ್ಲ. ಒಂದು ಕೋಟಿ ಪ್ರಜೆಗಳ ಆಗುಹೋಗುಗಳನ್ನು ದೇಶಭಕ್ತಿಯುತವಾಗಿ, ಗಾಂಭೀರ್ಯದಿಂದ ನಾವು ಮಾಡತಕ್ಕಂಥ ಕೆಲಸ ಇದು. ಮಸೂದೆಗಳು ಈ ಸಭೆಯ ಮುಂದೆ ಮಂಡಿಸಲು ಬಂದಾಗ ಆಯಾ ಮಸೂದೆಗಳನ್ನು ಆಯಾ ವೇಳೆಯಲ್ಲಿ ಪರಿಶೀಲಿಸಿ, ಎಷ್ಟು ಸೂಕ್ತವೋ ಅಷ್ಟನ್ನು ಇಟ್ಟುಕೊಳ್ಳೋಣ.

ಈ ದಿವಸ ತಾವುಗಳು ಮತ್ತೊಂದು ವಿಷಯವನ್ನು ಬಹಳ ಗಹನವಾಗಿ ವಿಚಾರಮಾಡಬೇಕಾಗಿದೆ. ಅನೇಕ ಮಾನ್ಯ ಸದಸ್ಯರುಗಳಿಗೆ ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಕೂಡ ಇಲ್ಲವೆಂದು ಹೇಳುತ್ತೇನೆ. ಈಗ ದೇಶದಲ್ಲಿ ನಿರುದ್ಯೋಗ ಹೆಚ್ಚುತ್ತಿದೆ. ದೇಶದಲ್ಲಿ ಇರತಕ್ಕಂಥ ಆ ನಿರುದ್ಯೋಗವನ್ನು ಪರಿಹಾರ ಮಾಡುವುದು ಹೇಗೆ? ಕೆಲಸಗಳನ್ನು ಕೊಟ್ಟ ಹೊರತು ಇನ್ನೇನೂ ಬೇರೆ ಮಾರ್ಗವೇ ಇಲ್ಲ. ನಿರುದ್ಯೋಗವು ಪರಿಹಾರವಾಗಬೇಕಾದರೆ ನಾವು ಅವರಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು. ಇದರ ವಿಚಾರವಾಗಿ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಉದ್ಯೋಗವನ್ನು

(ಶ್ರೀ ಕೆ. ಹನುಮಂತಯ್ಯ.)

ಕಲ್ಪಿಸಬೇಕಾಗಿದ್ದರೆ ನಾವು ಅದಕ್ಕಾಗಿ ಹೆಚ್ಚು ಖರ್ಚನ್ನು ಮಾಡಲೇಬೇಕು. ಆದುದರಿಂದಲೇ ಕೇಂದ್ರ ಸರ್ಕಾರದವರೂ, ಮೈಸೂರು ಸರ್ಕಾರದವರೂ ಮತ್ತು ಇತರ ಸರ್ಕಾರಗಳವರೂ ಸಹ ಡೆಫಿಸಿಟ್ ಬಡ್ಜೆಟ್ಟಾದರೂ ಪರವಾಇಲ್ಲ, ಹೆಚ್ಚು ಹಣ ಖರ್ಚು ಮಾಡಿ ಹೆಚ್ಚು ಹೆಚ್ಚಾಗಿ ಉದ್ಯೋಗಗಳನ್ನು ಜನರಿಗೆ ಒದಗಿಸಿಕೊಡೋಣವೆಂಬ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಒಂದು ಕಡೆ ಹೀಗೆ ಖರ್ಚನ್ನು ಕಡಮೆಮಾಡಿ ಎಂದು ವಾದಿಸುವುದು, ಮತ್ತೊಂದು ಕಡೆ ಜನರಿಗೆ ಹೆಚ್ಚು ಉದ್ಯೋಗಗಳನ್ನು ಕಲ್ಪಿಸಿ ಕೊಡಿ ಎಂದು ವಾದಿಸಿದರೆ, ಇವು ಒಂದಕ್ಕೊಂದಕ್ಕೆ ಹೇಗೆ ಸಮನ್ವಯವಾಗುತ್ತವೆ ಎಂಬುದನ್ನು ತಾವೇ ಸ್ವಲ್ಪ ಆಲೋಚಿಸಿ ನೋಡಬೇಕು. ಈ ದಿವಸ ಬಡ್ಜೆಟ್ಟಿನಲ್ಲಿ ಹೆಚ್ಚಿಗೆ ಖರ್ಚನ್ನು ಕಾಣಿಸಿದ್ದರೆ ಅದರಿಂದ ಈ ನಿರುದ್ಯೋಗ ಸಮಸ್ಯೆ ಆದಷ್ಟು ಬೇಗ ಪರಿಣಾಮಕಾರಿಯಾಗಿ ಪರಿಹಾರವಾದೀತೆಂಬ ಒಂದು ಸದುದ್ದೇಶದಿಂದಲೇ ಕಾಣಿಸಿದ್ದೇನೆಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ನಿರುದ್ಯೋಗ ಸಮಸ್ಯೆಯು, ಮಾನ್ಯ ಸದಸ್ಯರು ಹೇಳಿದಹಾಗೆ, ಪಟ್ಟಣಕ್ಕೆ ಮಾತ್ರವೇ ಅನ್ವಯಿಸತಕ್ಕಂಥ ಸಮಸ್ಯೆ ಅಲ್ಲ. ಅದು ಗ್ರಾಮಾಂತರಗಳಲ್ಲಿಯೂ ಇದೆ. ನಿರುದ್ಯೋಗಿಗಳು ಅಲ್ಲಿಯೂ ಇದ್ದಾರೆ ಎಂದು ನಾನು ಹೇಳುತ್ತೇನೆ.

ಹೀಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನಿರುದ್ಯೋಗಿಗಳಿಗೆ ಕೊಂಚ ಕೆಲಸ ಸಿಕ್ಕಬೇಕು, ಕೊಂಚ ಕೂಲಿ ಸಿಕ್ಕಬೇಕು, ಅವರಿಗೂ ಕೊಂಚ ಆದಾಯ ಸಿಕ್ಕಬೇಕು ಎಂಬ ಈ ಒಂದು ದೃಷ್ಟಿಯಿಂದ ಈ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ಮಾಡಿಸುತ್ತಿದ್ದೇವೆ. ಅವುಗಳನ್ನು ನಾವಿಂದು ನಗರಗಳಲ್ಲಿ ಮಾಡಿಸುತ್ತಿಲ್ಲವೆಂಬ ಅಂಶವನ್ನು ತಾವೀಗ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಬೆಂಗಳೂರು ಸಿಟಿ-ಮೈಸೂರು ಸಿಟಿಗಳಲ್ಲಿ ನಾವು ಈ ಸಿಮೆಂಟ್ ರಸ್ತೆಗಳನ್ನು ಮಾಡಿಸುತ್ತಿಲ್ಲ. ಹೋದ ವರ್ಷ ಮಾಡಿಸಿರತಕ್ಕಂಥ 47 ಚಿಲ್ಲರೆ ಮೈಲಿಗಳ ರಸ್ತೆ ಮತ್ತು ಈ ವರ್ಷ ತೆಗೆದುಕೊಂಡಿರುವಂಥ 50 ಮೈಲಿಗಳ ರಸ್ತೆ ಇವೆಲ್ಲಾ ನಗರಗಳಿಂದ ಹೊರಗಡೆ. ಈ ರಸ್ತೆಗಳಿಂದ ಹಳ್ಳಿಯವರಿಗೆ ಒಂದು ಸಹಾಯ ಮಾಡಿದಂತಾಗುತ್ತದೆ, ಹಳ್ಳಿಯವರೂ ಇಂಥ ರಸ್ತೆಗಳಲ್ಲಿ ಓಡಾಡಲು ಅವಕಾಶವಾಗುತ್ತದೆ. ಇಷ್ಟೇ ಅಲ್ಲದೆ ಸಾಮಾನ್ಯವಾಗಿ ನಾನು ನೋಡಿದಹಾಗೆ ಈ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ಮಾಡಿದಾಗ ಎಷ್ಟೋ ಮಂದಿ ಕೂಲಿ ಮಾಡಿ ತಮ್ಮ ಜೀವನೋಪಾಯವನ್ನು ಸಾಗಿಸಿಕೊಂಡು ಹೋಗುತ್ತಿದ್ದರು. ತಾವೆಲ್ಲರೂ ಪ್ರತ್ಯಕ್ಷವಾಗಿ ಇದನ್ನು ಕಂಡಿದ್ದೀರಿ. ಆದುದರಿಂದ ಈ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರುದ್ಯೋಗ ಸಮಸ್ಯೆಗೆ ಒಂದು ಪರಿಹಾರವೆಂದು ಹೇಳಿದರೆ ಅದು ತಪ್ಪಾಗಲಾರದು. ಇದರ ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಅನೇಕಾವರ್ತಿ ಒಂದು ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಈಗ ನಾನು ಟಾರ್ ರಸ್ತೆ ಮಾಡಿಸುವುದಕ್ಕೆ ಹೋದರೆ, ಆ ಟಾರಿಗೋಸ್ಕರ ನಾವು ದುಡ್ಡನ್ನು ಪರದೇಶಕ್ಕೆ ಕಳುಹಿಸಬೇಕಾಗುತ್ತದೆ. ಅಲ್ಲದೆ ಈ ಟಾರ್ ರಸ್ತೆಗಳಿಗೆ ಆಗಿಂದಾಗ್ಗೆ ರಿಪೇರಿ ವಗೈರೆಗಳನ್ನು ಮಾಡುತ್ತಲೇ ಇರಬೇಕಾಗುತ್ತದೆ. ಇಷ್ಟಾದರೂ ವಾಹನ ಸೌಕರ್ಯಗಳಿಗೆ ಆ ರಸ್ತೆಗಳು ಅಷ್ಟು ತೃಪ್ತಿಕರವಾಗಿರುವುದಿಲ್ಲ. ಆದರೆ ಇವುಗಳಿಗೆ ಬದಲಾಗಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ಮಾಡಿಸಿದರೆ ಇವುಗಳಿಗೆ ಬೇಕಾದ ಸಾಮಾನುಗಳೆಲ್ಲಾ ನಮ್ಮ ದೇಶದಲ್ಲೇ ದೊರೆಯುತ್ತವೆ. ಸಿಮೆಂಟ್ ಫ್ಯಾಕ್ಟರಿ ನಮ್ಮ ದೇಶದಲ್ಲೇ ಇದೆ. ಅದರ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಒಂದು ಅವಕಾಶವನ್ನು ಈ ಬಾಬಿನಿಂದ ಮಾಡಿಕೊಟ್ಟ ಹಾಗಾಗುತ್ತದೆ. ಇದರ ಜೊತೆಗೆ ಆ ಫ್ಯಾಕ್ಟರಿಯ ಉತ್ಪತ್ತಿ ಹೆಚ್ಚಿದರೆ ಅಲ್ಲಿನ ಜನರಿಗೆ ಹೆಚ್ಚಿನ ಕೂಲಿ ಕೆಲಸವನ್ನು ದೊರಕಿಸಿಕೊಟ್ಟಹಾಗಾಗತ್ತದೆ. ಇದರಿಂದ ಒಂದು ರೀತಿಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿದಂತಾಗುತ್ತದೆಂದು ನಾನಾಗಲೇ ಹೇಳಿದ್ದೇನೆ. ಇದರ ಜೊತೆಗೆ ಸಿಮೆಂಟ್ ರಸ್ತೆಯನ್ನು ಮಾಡಿಸಿದರೆ ಸುಮಾರು 50 ವರ್ಷಗಳವರೆಗೂ ಅದಕ್ಕೆ ಯಾವ ರಿಪೇರಿ ವಗೈರೆಗಳೂ ಬೇಕಾಗಿಲ್ಲ. ಮೈಸೂರು ರೋಡಿನಲ್ಲಿ 9ನೆಯ ಮೈಲಿಕಲ್ಲಿನ ಬಳಿ ಪರೀಕ್ಷಾರ್ಥವಾಗಿ ಒಂದು ಸ್ವಲ್ಪ ರಸ್ತೆಯನ್ನು ಕಾಂಕ್ರೀಟ್ ಮಾಡಿಸಲಾಗಿತ್ತು. ಅದನ್ನು ಮಾಡಿಸಿ ಇಲ್ಲಿಗೆ ಸುಮಾರು 30-35 ವರ್ಷಗಳಾದವು. ಅಷ್ಟಾಗಿದ್ದರೂ ಅದು ಇನ್ನೂ ಅಚ್ಚಳಿಯದಂತೆ ಹಾಗೆಯೇ ಇದೆ. ಆದುದರಿಂದ ಉತ್ತರೋತ್ತರದಲ್ಲಿ ಹೀಗೆ ಸಿಮೆಂಟ್‌ರಸ್ತೆಗಳನ್ನು ಮಾಡಿಸುವುದು ಒಂದು ಮಿತವ್ಯಯ ದೃಷ್ಟಿಯಿಂದ ಕೂಡ ಉಚಿತವಾದದ್ದು ಮತ್ತು ಸೂಕ್ತವಾದದ್ದು ಎಂದು ಹೇಳುತ್ತೇನೆ. ಈ ರೀತಿ ಯೋಚನೆ ಮಾಡದೆ ಹಳ್ಳಿಯ ಜನರಿಗೆ ಸರ್ಕಾರ ಏನೂ ಸಹಾಯಮಾಡಿಲ್ಲ ಎಂದು ಹೇಳತಕ್ಕವರೂ ಕೂಡ, ಈ ಸಿಮೆಂಟ್ ರಸ್ತೆಗಳನ್ನು ಮಾಡಿಸುವುದರಿಂದ ಹಳ್ಳಿಯ ಜನರಿಗೆ ಹೆಚ್ಚಾಗಿ ಕೂಲಿ ಸಿಕ್ಕುವುದೊಂದೇ ಅಲ್ಲದೆ, ಹಳ್ಳಿಗಳಿಂದಲೇ ಬಂದು, ಓದಿ ಬಿ.ಇ. ಪಾಸ್ ಮಾಡಿಕೊಂಡಿರತಕ್ಕಂಥವರಿಗೆ, ಸರ್ವೇಯರ್ ಮತ್ತು ಇಂಜನಿಯರ್ ಇತ್ಯಾದಿ ಕೆಲಸಗಳನ್ನು ಅವರಿಗೆ ಒದಗಿಸಿಕೊಡುವುದಕ್ಕೂ ಸಹ ಇದು ತುಂಬ ಸಹಾಯಕವಾಗುತ್ತದೆಯೆಂಬ ಅಂಶವನ್ನು ಅವರು ಮನಸ್ಸಿಗೆ ತಂದುಕೊಂಡರೆ ನಾನು ಅವರಿಗೆ ತುಂಬ ಕೃತಜ್ಞನಾಗಿರುತ್ತೇನೆ.

ಇನ್ನೊಂದು ವಿಷಯ ತಿಳಿಸಬೇಕಾಗಿದೆ. ಈ ಅರ್ಥಶಾಸ್ತ್ರದ ಒಂದು ಅನುಭವವನ್ನು ನಾನು ತಮ್ಮೆಲ್ಲರ ಅವಗಾಹನೆಗೆ ತರಬೇಕೆಂಬುದು ನನ್ನ ಇಷ್ಟ. ಒಂದು ದೇಶ ಮುಂದುವರಿಯಬೇಕಾದರೆ-ಇದು ಒಬ್ಬ ಮನುಷ್ಯನ ನಡೆದಹಾಗೆ ; ಒಂದು ಊರಿನಿಂದ ಇನ್ನೊಂದು ಊರಿಗೆ ನಿಧಾನವಾಗಿ ಹೋದರೂ ಹೋಗಬಹುದು, ಸ್ವಲ್ಪ ಬಿರುಸಾದ ನಡಗೆಯಿಂದ ಹೋದರೂ ಹೋಗಬಹುದು ; ಇಲ್ಲವೇ ಸ್ವಲ್ಪ ದೌಡುಮಾಡಿಕೊಂಡು ಹೋದರೂ ಹೋಗಬಹುದು.

ಶ್ರೀ ಎಸ್. ಗೋಪಾಲಗೌಡ.—ಒಂದು ವೇಳೆ ಅವನು ಅಲ್ಲೇ ಕುಳಿತುಕೊಂಡರೂ ಕುಳಿತುಕೊಳ್ಳಬಹುದು.

ಶ್ರೀ ಕೆ. ಹನುಮಂತಯ್ಯ.—ಹೌದು. ಹಾಗೆ ಕುಳಿತುಕೊಂಡರೂ ಕುಳಿತುಕೊಳ್ಳಬಹುದು. ಅವರು ಒಪ್ಪುವಂಥ ವಿಷಯವನ್ನೂ ಹೇಳುತ್ತೇನೆ. ಶ್ರೀಮಾನ್ ಗೋಪಾಲಗೌಡರಿಗೆ ಈ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟು ಅವರನ್ನು ಸಮಾಧಾನಮಾಡುವಂಥ ಶಕ್ತಿ ನನಗೂ ಉಂಟು. ಆದಷ್ಟು ಜಾಗ್ರತೆ ನಮ್ಮ ಆರ್ಥಿಕಾಭಿವೃದ್ಧಿಯ ಗುರಿಯನ್ನು ನಾವು ಮುಟ್ಟಬೇಕೆಂಬುದೇ ಎಲ್ಲರ ಅಭಿಪ್ರಾಯವೂ ಆಗಿದೆ. ಇದರ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಹಾಗೆ ಭಿನ್ನಾಭಿಪ್ರಾಯವಿಲ್ಲದಿರುವುದೂ ಇರಲಿ ; ಆದರೆ ಆದಷ್ಟು ಜಾಗ್ರತೆ ಈ ಗುರಿಯನ್ನು ಕಾಂಗ್ರೆಸ್ ತಾನು ಮುಟ್ಟಬೇಕೆಂದೂ, ಪಿ. ಎಸ್. ಪಿ. ಯವರು ಆ ಗುರಿ

ಯನ್ನು ನಮಗಿಂತಲೂ ಬೇಗ ಮುಟ್ಟಬೇಕೆಂದೂ, ಕಮ್ಯೂನಿಸ್ಟ್ ಪಾರ್ಟಿಯವರು ತಾವು ಎಲ್ಲರಿಗಿಂತಲೂ ಬೇಗ ಆ ಗುರಿಯನ್ನು ಮುಟ್ಟಬೇಕೆಂದೂ ಒಂದು ಇಂಥ ವೇಗದ ಸ್ಪರ್ಧೆಯನ್ನು ನಡೆಸುತ್ತಿದ್ದಾರೆ. ಈ ದೃಷ್ಟಿಯಿಂದ ಇದನ್ನು ನೋಡುವುದಾದರೆ ಇದೊಂದು ಶುಭ ಸೂಚನೆಯೇ ಹೊರತು ಇದರಲ್ಲಿ ಯಾವ ಅನಾಹುತವೂ ಇಲ್ಲ; ಆದರೆ ನಿಧಾನವಾಗಿ ಹೋಗತಕ್ಕವನಿಗೆ ಉಬ್ಬಸ ಬರುವುದಿಲ್ಲ. ಸ್ವಲ್ಪ ಜೋರಾಗಿ ನಡೆದರೆ ಉಬ್ಬಸ ಬರುತ್ತದೆ. ಇದರಿಂದ ಹೆಚ್ಚಿಗೆ ಬ್ಲಡ್ ಸರ್ಕ್ಯುಲೇಷನ್ ಆಗುವುದರಿಂದ, ಆಕ್ಸಿಜನ್ ಬೇಕಾಗುತ್ತದೆ. ಈ ಆಕ್ಸಿಜನ್ನನ್ನು ಸಂಪಾದಿಸಿಕೊಳ್ಳುವುದಕ್ಕೆ ಹೆಚ್ಚು ಹೆಚ್ಚು ವೇಗವಾಗಿ ಉಸಿರಾಡಬೇಕಾಗುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಓಡತಕ್ಕ ಮನುಷ್ಯನ ಆರೋಗ್ಯ ಸರಿಯಾಗಿಲ್ಲದಿದ್ದರೆ ಅಥವಾ ಕೈ ಕಾಲುಗಳಲ್ಲಿ ಶಕ್ತಿ ಇಲ್ಲದಿದ್ದರೆ ಅಂಥವನಿಗೆ ಹಾರ್ಟ್ ಫೈಲ್ಯೂರ್ ಆದರೂ ಆಗಬಹುದು.

ಶ್ರೀ ಕೆ. ಹನುಮಂತಯ್ಯ.—ಎಷ್ಟು ವೇಗದಲ್ಲಿ ಹೋಗಲು ನಮಗೆ ಶಕ್ತಿ ಇದೆಯೋ ಅಷ್ಟು ವೇಗದಲ್ಲಿ ನಾವು ಹೋಗುತ್ತಿದ್ದೇವೆ. ಓಡತಕ್ಕಂಥ ಮನುಷ್ಯನಿಗೆ ಹೇಗೆ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಆಕ್ಸಿಜನ್ ಬೇಕಾಗುತ್ತದೆಯೋ ಹಾಗೆಯೇ ದೇಶದ ಆರ್ಥಿಕಾಭಿವೃದ್ಧಿಯ ಮಾರ್ಗದಲ್ಲಿ ಎಷ್ಟೆಷ್ಟು ಜಾಗ್ರತೆ ಹೋಗಬೇಕೆಂದರೆ ಅಷ್ಟಷ್ಟು ಹೆಚ್ಚಿಗೆ ಹಣವೂ ಬೇಕಾಗುತ್ತದೆ. ಆದುದರಿಂದ ನಾವು ಎಷ್ಟು ಪ್ರಮಾಣದಲ್ಲಿ ಹೋಗಬೇಕು ಎಂಬ ವೇಗವನ್ನು ನಿಶ್ಚಯ ಮಾಡಿಕೊಂಡು ಮುಂದುವರಿಯುವುದು ಈ ಮಾನ್ಯ ಸಭೆಗೇ ಸೇರಿದ್ದಾಗಿದೆ. ತೆರಿಗೆಗಳು ಬೇಡ, ಇವುಗಳನ್ನು ಕಡಮೆ ಮಾಡೋಣ ಎಂಬ ತಕ್ಕಂಥಾದ್ದು ತಮ್ಮಗಳ ಅಭಿಪ್ರಾಯವಾಗಿದ್ದರೆ, ಹಾಗೆಯೇ ಆಗಲಿ, ಅದಕ್ಕೂ ನಾನು ಒಪ್ಪಿಕೊಳ್ಳಲು ಸಿದ್ಧನಾಗಿದ್ದೇನೆ. ಅದೇ ರೀತಿ ನಾನೂ ಕೂಡ ನಿಮ್ಮ ಜೊತೆಯಲ್ಲೇ ನಿಧಾನವಾಗಿ ಹೋಗಲು ಸಿದ್ಧನಾಗಿದ್ದೇನೆ. ಆದರೆ ನಾವು ಸ್ವಲ್ಪ ವೇಗವಾಗಿ ಹೋಗಬೇಕು ಎಂದು ಹೇಳುವುದಾದರೆ ತೆರಿಗೆಗಳನ್ನು ಸ್ವಲ್ಪ ಹೆಚ್ಚಿಸಲೇ ಬೇಕಾಗುತ್ತದೆ. ಆದುದರಿಂದ ಅಭಿವೃದ್ಧಿಯ ಮೇಲೆ ಆಸೆ ಎಷ್ಟರಮಟ್ಟಿಗೆ ಇರುತ್ತದೆಯೋ ಅಷ್ಟೇ ಮಟ್ಟಿನ ಆಸೆ ಈ ತೆರಿಗೆಗಗಳನ್ನು ಕೊಡುವುದರಲ್ಲಿಯೂ ಇದ್ದು ಇವು ಎರಡೂ ಸಮಜೋಡಿಯಾಗಿ ಹೋಗಬೇಕು. ಹಾಗೆ ಇವೆರಡೂ ಸಮಜೋಡಿಯಾಗಿ ಹೋಗದೆ ಇದ್ದರೆ ಒಂದು ಗಾಡಿಗೆ ಇರತಕ್ಕಂಥ ಎರಡು ಚಕ್ರಗಳಲ್ಲಿ ಒಂದು ಒಂದು ಫರ್ಲಾಂಗ್ ಮುಂದಿರಲಿ, ಇನ್ನೊಂದು ಒಂದು ಫರ್ಲಾಂಗ್ ಹಿಂದಿರಲಿ ಎಂದು ಹೇಳುವುದಾದರೆ ಆ ಗಾಡಿ ಮುರಿದು ಬಿದ್ದು ಅದರ ಗತಿ ಮುಂದೇನಾಗುತ್ತದೆ ಎಂಬುದನ್ನು ಊಹಿಸುವುದಕ್ಕೂ ಕೂಡ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸ್ಕೂಲುಕೊಡಲಿಲ್ಲ. ಆಸ್ಪತ್ರೆಕೊಡಲಿಲ್ಲ, ಈ ಸೌಕರ್ಯ ಮಾಡಲಿಲ್ಲ, ಆ ಸೌಕರ್ಯ ಮಾಡಲಿಲ್ಲ ಎಂದು ಹೇಳಿ ಏನೇನು ಅಭಿಪ್ರಾಯಗಳನ್ನು ತಾವು ವ್ಯಕ್ತಪಡಿಸುತ್ತೀರೋ ಆ ಅಭಿಪ್ರಾಯಕ್ಕನುಗುಣವಾದ ತೆರಿಗೆಯನ್ನು ಹಾಕಬೇಕಾಗಿರತಕ್ಕದ್ದು ಕೂಡ ನಮ್ಮ ಅನಿವಾರ್ಯ ಕರ್ತವ್ಯ. ಅದು ಶಾಸನದತ್ತವಾದ ಜವಾಬ್ದಾರಿ ಎಂಬುದನ್ನು ತಾವು ಅರಿತುಕೊಳ್ಳಬೇಕು.

ಎಕನಾಮಿಕ್ಸ್‌ನಲ್ಲಿ ವೆಲಾಸಿಟಿ ಆಫ್ ಸರ್ಕ್ಯುಲೇಷನ್ ಎಂದು ಹೇಳುತ್ತಾರೆ. ಯಾವ ಮನುಷ್ಯನ ಕಾಲುನಡಗೆಯ ವೇಗ ಜಾಸ್ತಿಯಾಗುತ್ತದೆಯೋ ಅದಕ್ಕೆ ತಕ್ಕಂತೆ ಅವನ ಬ್ಲಡ್ ಸರ್ಕ್ಯುಲೇಷನ್ ಕೂಡ ಜಾಸ್ತಿಯಾಗುತ್ತದೆ. ಅದೇ ರೀತಿ ಈ ಸಮಾಜ ವ್ಯವಸ್ಥೆಗೆ ಹಣ ಎಂಬುದು ಬ್ಲಡ್‌ಸಿಸ್ಟಂ, ಕರೆನ್ಸಿ. ಅದರ ಚಲಾವಣೆ ಎಷ್ಟು ಜಾಗ್ರತೆಯಾದರೆ ಅಷ್ಟಷ್ಟೂ ಕೆಲಸ ಕಾರ್ಯಗಳು ಜಾಗ್ರತೆಯಾಗುತ್ತವೆ. ಈ ಕೆಲಸ ಕಾರ್ಯಗಳು ಜಾಸ್ತಿಯಾದರೆ ಆರ್ಥಿಕಾಭಿವೃದ್ಧಿಯಾಗುತ್ತದೆ. ಈ ದೃಷ್ಟಿಯಿಂದ, ನಾವು ಮೈಸೂರು ಸಂಸ್ಥಾನವನ್ನು ಅರ್ಥಿಕಾಭಿವೃದ್ಧಿ ಮಾರ್ಗದಲ್ಲಿ ತ್ವರಿತ ವೇಗದಿಂದ ಕೊಂಡೊಯ್ಯಬೇಕು ಎಂಬ ಆಕಾಂಕ್ಷೆಯನ್ನು ಕಾರ್ಯರೂಪಕ್ಕೆ ತರಬೇಕಾದರೆ ಹಣವನ್ನು ಕೂಡ ಅದೇ ಪ್ರಮಾಣದಲ್ಲಿ ವೆಚ್ಚಮಾಡಬೇಕು. ಆ ರೀತಿ ಮಾಡಿದರೆ ಮಾತ್ರ ಈ ಹಣ ಖರ್ಚಾಗಿ ದೇಶಾಭಿವೃದ್ಧಿಯಾಗುತ್ತದೆ. ಮತ್ತೊಂದು ದೃಷ್ಟಿಯಿಂದ ನೋಡಬೇಕು; ಈ ಹಣ ಖರ್ಚು ಮಾಡಿದ್ದೆಲ್ಲಾ ಎಲ್ಲಿ ಹೋಗುತ್ತದೆ? ಸಿಮೆಂಟ್ ಕಾಂಕ್ರೀಟ್ ರಸ್ತೆ ಆಗಲಿ, ಮಂತ್ರಿಗಳ ಮನೆಗಳಿಗಾಗಲಿ, ಯಾವುದರ ಮೇಲೆ ಖರ್ಚುಮಾಡಿದರೂ ಕೂಡ ಆ ದುಡ್ಡು ದೇಶದಲ್ಲೇ ಉಳಿಯುತ್ತದೆ. 25 ಲಕ್ಷ ರೂಪಾಯಿಗಳಿಂದ 30 ಲಕ್ಷ ರೂಪಾಯಿಗಳವರೆಗೂ ತಗಲತಕ್ಕ ಸಿಮೆಂಟ್ ರಸ್ತೆಗಳನ್ನು ಮಾಡಿಸುತ್ತೇವೆ. ಅದಕ್ಕೆ ಖರ್ಚಾಗತಕ್ಕ ಹಣ ಎಲ್ಲಿ ಹೋಗುತ್ತದೆ? ಅಲ್ಲೇ ಕೂಲಿ ಕೆಲಸಮಾಡತಕ್ಕ ಆಳುಗಳಿಗೆ ಹೋಗುತ್ತದೆ. ಮನೆ ಕಟ್ಟಿಸುತ್ತೇವೆ. ಆಗ ಮನೆ ಕಟ್ಟತಕ್ಕ ಗಾರೆ ಕೆಲಸದವನು, ಮರಗೆಲಸದವನಿಗೆ ಹೋಗುತ್ತದೆ. ಆದ್ದರಿಂದ ಖರ್ಚುಮಾಡತಕ್ಕ ಹಣ ಯಾವನು ಕೆಲಸಗಾರನೋ ಅವನಿಗೆ ಹೋಗುತ್ತದೆ. ತಿರುಗಿ ಅವನು ಸಾಮಾನುಗಳನ್ನು ಕೊಂಡುಕೊಳ್ಳುತ್ತಾನೆ. ಬಟ್ಟೆ ಕೊಂಡುಕೊಳ್ಳುತ್ತಾನೆ. ಕಾರ್ಖಾನೆಗಳ ಉತ್ಪನ್ನ ಜಾಸ್ತಿ ಆಗುತ್ತದೆ. ಕಾರ್ಖಾನೆ ಉತ್ಪನ್ನ ಜಾಸ್ತಿಯಾದರೆ ಕೂಲಿಗಾರರಿಗೆ ಹೆಚ್ಚು ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ the velocity of circulation is a cure for many social evils. ಈ ರೀತಿ ಹಣ ಜಾಗ್ರತೆ ಜಾಗ್ರತೆ ಖರ್ಚಾಗುವುದರಿಂದ ಆರ್ಥಿಕಾಭಿವೃದ್ಧಿ ಜಾಗ್ರತೆ ಆಗುತ್ತದೆ ಎಂಬ ಮೂಲ ತತ್ವವನ್ನು ತಾವು ವಿಚಾರ ಮಾಡಬೇಕೆಂಬುದು ತಮ್ಮಲ್ಲಿ ನನ್ನ ಮತ್ತೊಂದು ಪ್ರಾರ್ಥನೆ.

ಶ್ರೀ ಎಸ್. ಗೋಪಾಲಗೌಡ.—ತಮ್ಮ ಬಾಡಿ ಪಾಲಿಟಿಕ್ಸ್‌ನಲ್ಲಿ ಅನೇಕ ಜೆರ್ಮ್ಸ್ ಒಳಗೆ ಸೇರಿಕೊಂಡು ಆ ಯಂತ್ರವನ್ನೇ ಏನಿಮಿಕ್ ಆಗಿ ಮಾಡಿವೆ.

Mr. DEPUTY SPEAKER.—Let there be no interruption.

ಶ್ರೀ ಕೆ. ಹನುಮಂತಯ್ಯ.—ಉದಾಹರಣೆಗಳನ್ನು ಯಾವ ಉದ್ದೇಶದಿಂದ ಹೇಳುತ್ತೇನೆಯೋ ಆ ಉದ್ದೇಶವನ್ನು ತೆಗೆದುಕೊಳ್ಳಬೇಕೆಂಬುದೇ ನನ್ನ ಪ್ರಾರ್ಥನೆ. ನಾಳೆ ದಿವಸ ಓಡಿ ಓಡಿ ಬುಸುಗುಟ್ಟಿಕೊಂಡು ಸತ್ತೇ ಹೋದರೆ, ಏನು ಸ್ವಾಮಿ ತಾವು ಆ ರೀತಿ ಹೇಳಿದಿರಲ್ಲಾ ಎಂದು ಪ್ರಶ್ನೆಮಾಡುವುದಲ್ಲ. ಸದುದ್ದೇಶದಿಂದ ಉದಾಹರಣೆ ಏನು ಕೊಡುತ್ತೇನೆಯೋ ಅದನ್ನೇ ತಿರುಗಿಸಿ ಅಪಹಾಸ್ಯಕ್ಕೆ ಈಡುಮಾಡಬಾರದು. ನಾನಾದರೂ ಅಪಹಾಸ್ಯಕ್ಕೆ ಮಾತನಾಡುತ್ತಾ ಇಲ್ಲ. ಗುರುತರವಾದ ಜವಾಬ್ದಾರಿ ವಹಿಸಿರತಕ್ಕ ಈ ಸಭೆಯಲ್ಲಿ ಅವಹೇಳನಕ್ಕೆ, ಅಪಹಾಸ್ಯಕ್ಕೆ ನಾನು ಮಾತನಾಡುತ್ತಾ ಇಲ್ಲ.

ಸ್ವಾಮಿ, ಈ ಪ್ರಜಾಪ್ರಭುತ್ವದಲ್ಲಿ ಅನೇಕ ಸಂಪ್ರದಾಯಗಳು ಇವೆ. ನಮ್ಮ ವಿರೋಧ ಪಕ್ಷದವರಾದ ಪಿ. ಎಸ್. ಪಿ. ಪಾರ್ಟಿಯವರು ನಮ್ಮ ಆ ಶಿಸ್ತನ್ನು ನೋಡಿ ನಗಬಹುದು; ನಾವು ಅವರ ಆ ಶಿಸ್ತನ್ನು ನೋಡಿ ನಗಬಹುದು. ನಕ್ಕರೆ ಅದರಿಂದಲೇ ಏನೊಂದು

(ಶ್ರೀ ಕೆ. ಹನುಮಂತಯ್ಯ.)

ದೊಡ್ಡ ಪ್ರಯೋಜನವೂ ಕೂಡ ಆಗುವುದಿಲ್ಲ. ಈಗ ನಾವು ಸ್ಥಾಪಿಸಿರತಕ್ಕ ಪ್ರಜಾಪ್ರಭುತ್ವ ಪಾರ್ಟಿ ಪದ್ಧತಿಯ ಮೇಲೆ ನಡೆಯಬೇಕು ಎಂಬುದೇ ಆಗಿದೆ. ಇದನ್ನು ಈಗಲೇ ಹೇಳುತ್ತೇನೆ. ನಾವು ನಮ್ಮ ಪಕ್ಷವನು ಸಮರ್ಥನೆಮಾಡಿಕೊಳ್ಳಬೇಕು ; ಪಿ. ಎಸ್. ಪಿ. ಪಾರ್ಟಿಯವರನ್ನು ಟೀಕೆಮಾಡಬೇಕೆಂದು ಹೇಳುತ್ತಾ ಇಲ್ಲ. ಈಗ ಸ್ಥಾಪನೆಯಾಗಿರತಕ್ಕ ಪ್ರಜಾಪ್ರಭುತ್ವ ಪಾರ್ಟಿ ಸಿಸ್ಟಂಮೇಲೆ ನಡೆಯಬೇಕು ಎಂಬ ತತ್ವವನ್ನು ಕೂಡ ಒಪ್ಪಿಕೊಳ್ಳಬೇಕು. ಪಾರ್ಟಿ ಸಿಸ್ಟಂ ಮೇಲೆ ನಡೆಯತಕ್ಕ ಪ್ರಜಾಪ್ರಭುತ್ವಕ್ಕೆ ಪಾರ್ಟಿಯಲ್ಲಿರತಕ್ಕ ಅಶಿಸ್ತಿನಿಂದ ಚೆನ್ನಾಗಿ ಕೆಲಸಮಾಡುವುದಕ್ಕೆ ಧಕ್ಕೆ ಬರುತ್ತದೆ. ಪಾರ್ಟಿ ಸಿಸ್ಟಂ ಸರಿಯಾಗಿ ಕೆಲಸ ಮಾಡದಿದ್ದರೆ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರುತ್ತದೆ. ಆದ್ದರಿಂದ ಕ್ಷಣಕಾಲ ನಮಗೆ ರುಚಿಯಾಗಿರತಕ್ಕ ಮಾತನ್ನು ಅಶಿಸ್ತಿನ ರೂಪದಲ್ಲಿ ಯಾರಾದರೂ ಹೇಳಿದರೆ ನಮಗೆ ಸಂತೋಷವಾದರೂ ಕೂಡ ಉತ್ತರೋತ್ತರದಲ್ಲಿ ಅದರಿಂದ ಪಾರ್ಟಿಸಿಸ್ಟಮ್ಮಿಗೆ ಧಕ್ಕೆ ಬರುತ್ತದೆ, ಪ್ರಜಾಪ್ರಭುತ್ವಕ್ಕೆ ಧಕ್ಕೆಬರುತ್ತದೆ, ತನ್ಮೂಲಕ ದೇಶಕ್ಕೆ ಧಕ್ಕೆ ಬರುತ್ತದೆ ಎಂದು ಈ ಸಭೆಯಲ್ಲಿ ಮನವಿ ಮಾಡಿಕೊಳ್ಳಬೇಕಾಗಿದೆ. ಚೆನ್ನಪಟ್ಟಣದಲ್ಲಿ ನಡೆದ ಪ್ರಜಾಸೋಷಿಯಲಿಸ್ಟ್ ಪಕ್ಷದ ಕಾನ್ಫರೆನ್ಸ್‌ನಲ್ಲಿ ಅದರ ಕಾರ್ಯದರ್ಶಿಯವರು ಅವರ ವರದಿಯಲ್ಲಿ ' ನಮ್ಮ ಪಕ್ಷದಲ್ಲಿ ಶಿಸ್ತುಮಾಯವಾಗುತ್ತಿರುವುದು ಹೆಚ್ಚು ಶೋಚನೀಯವಾದ ವಿಷಯ ಎಂಬುದನ್ನು ಸಭೆಗೆ ಹೇಳಬೇಕಾಗಿದೆ ' ಎಂದು ಹೇಳಿದ್ದಾರೆ. ಅದನ್ನು ಆಕ್ಷೇಪಣೆ ಮಾಡುವುದಕ್ಕೆ ನಾನು ಹೇಳುತ್ತಾ ಇಲ್ಲ. ಅವರು ಬಿಚ್ಚು ಮನಸ್ಸಿನಿಂದ ಹೇಳಿದ್ದಾರೆ. ಪಾರ್ಟಿಯಲ್ಲಿರತಕ್ಕ ಶಿಸ್ತನ್ನು ಕಾಪಾಡಬೇಕೆಂಬ ಸದುದ್ದೇಶದಿಂದ ಹೇಳಿದ್ದಾರೆ. ಆ ಸದುದ್ದೇಶದಿಂದಲೇ ನಮ್ಮನ್ನು ನೀವು ನೋಡಬೇಕು. ನಿಮ್ಮ ಪಾರ್ಟಿಯಲ್ಲಾಗಲಿ, ಅಶಿಸ್ತು ಬಂದರೆ, ಆ ಅಶಿಸ್ತಿನ ಸಹಾಯ ತೆಗೆದುಕೊಂಡರೆ ಉತ್ತರೋತ್ತರ ಆ ಸಹಾಯದಿಂದ ಯಾವ ಪ್ರಯೋಜನವೂ ಆಗುವುದಿಲ್ಲ, ಅನಾಹುತ ಮಾತ್ರ ಆಗುತ್ತದೆ ಎಂಬುದನ್ನು ನಾನೂ ಮತ್ತು ತಾವೂ ಸಹ ತಿಳಿದುಕೊಳ್ಳಬೇಕು. ನಾವು ಅಶಿಸ್ತಿನ ಮಾರ್ಗದಲ್ಲಿ ಹೋಗುವಾಗ ದೇಶದ ಹೆಸರನ್ನು ತೆಗೆದುಕೊಂಡು ಸಮರ್ಥನೆಮಾಡುವುದು ಅಷ್ಟೇನೂ ಸಮಂಜಸವಾಗಿ ಕಾಣುವುದಿಲ್ಲ. “ ಉಳಲಾರದ ಎತ್ತು ಮೆಳೆ ಮೇಲೆ ಬಿತ್ತು ” ಎಂಬ ಗಾದೆಯೊಂದಿದೆ. ಹಾಗೆ ಪಾರ್ಟಿಯಲ್ಲಿ ಶಿಸ್ತನ್ನು ಕಾಪಾಡಿ ಪ್ರಜಾಪ್ರಭುತ್ವವನ್ನು ಒಂದು ಭೂಷಣವಾಗಿ ಮಾಡುವುದಕ್ಕೆ ಬದಲಾಗಿ ಏನು ಮಾಡಿದರೂ ಕೂಡ ದೇಶದ ಕ್ಷೇಮಕ್ಕೇ ಮಾಡುತ್ತೇವೆ ಎಂದು ಹೇಳಿದರೆ ಉಳಲಾರದ ಎತ್ತು ಮೆಳೆ ಮೇಲೆ ಬಿತ್ತು ಎಂದಹಾಗಾಗುತ್ತದೆ. ನಾನಾದರೂ ಈ ದಿವಸ ಇಷ್ಟುಮಾತ್ರ ಹೇಳುತ್ತೇನೆ. ಒಬ್ಬರನ್ನು ಅವಹೇಳನ ಮಾಡಬೇಕೆಂಬ ಚಪಲ, ಟೀಕೆಮಾಡಬೇಕೆಂಬ ಚಪಲ, ಮನುಷ್ಯನಿಗೆ ಸಹಜವಾದದ್ದು. ನನಗೂ ಇದೆ. ನನಗೂ ಹರಿತವಾದ ನಾಲಿಗೆಯನ್ನು ದೇವರು ಕೊಟ್ಟಿದ್ದಾನೆ. ಆದರೆ ನನ್ನನ್ನು ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ಒಂದು ಅಧಿಕಾರ ಸ್ಥಾನದಲ್ಲಿ ಇಟ್ಟಿದ್ದಾನೆ. ಆ ಸ್ಥಾನಕ್ಕಾದರೂ ಗೌರವ ಬರಲಿ ಎಂದು ಸಂಯಮದಿಂದ ವರ್ತಿಸಬೇಕಾಗಿದೆ. ಆದ್ದರಿಂದ ದೇವರಲ್ಲಿ ನಾನು ಮೊರೆ ಇಡತಕ್ಕದ್ದೇನೆಂದರೆ: ನನ್ನ ಮನಸ್ಸಿನಲ್ಲಿ ಆ ತರಹದ ಚಪಲ ಇದ್ದರೆ ಅದನ್ನು ಅದುಮಿ, ಪರಿಹರಿಸುವ ಹಾಗೆ ನನ್ನ ಮನಸ್ಸು ಪರಿಪಾಕಮಾಡು, ನಾನು ಸದುದ್ದೇಶದಿಂದ ನಿಜವಾಗಿಯೂ ಹೋಗುತ್ತಾ ಇದ್ದರೆ ಮಿಕ್ಕವರ ಮನಸ್ಸನ್ನು ಪರಿವರ್ತಿಸಿ ನನ್ನ ಮೇಲೆ ಸ್ವಲ್ಪ ಪ್ರೀತಿ ವಿಶ್ವಾಸದಿಂದ ನೋಡುವ ಹಾಗೆ ಅನುಗೊಳಿಸು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

12 NOON.

ಒಬ್ಬ ಸದಸ್ಯರು.—ಇದೇನು ಸಂಸ್ಕೃತಿ ಪ್ರಚಾರವೆ, ಸ್ವಾಮಿ ?

ಶ್ರೀ ಕೆ. ಹನುಮಂತಯ್ಯ.—ಅದಕ್ಕೂ ಉತ್ತರ ಕೊಡ ಬಲ್ಲೆ, ಆದರೆ ಈಗ ಸರಿಯಾದ ಸಮಯವಲ್ಲ.

ಸ್ವಾಮಿ, ಮಾನ್ಯಸದಸ್ಯರೊಬ್ಬರು—ಈಗ ಅವರು ಸಭೆಯಲ್ಲಿಲ್ಲ—ಅವರು ಹೇಳಿದರು, ಕಾಂಗ್ರೆಸ್ಸು ಗಾಂಧಿ ಸತ್ತಾಗಲೇ ಸತ್ತುಹೋಯಿತೆಂದು ಹೇಳಿದರು. ಮತ್ತು ಶ್ರೀಮಾನ್ ಗೋಪಾಲ ಗೌಡರು ಒಂದು ಅಭಿಪ್ರಾಯ ಹೇಳಿದರು. ಅವರು ಒಳ್ಳೆಯ ಭಾಷೆಯಲ್ಲಿ ಹೇಳಿದ್ದಾರೆ, ಅದಕ್ಕಾಗಿ ಸಂತೋಷಪಡುತ್ತೇನೆ. ಮಹಾತ್ಮಾ ಗಾಂಧಿಜಿಯವರು ಕಾಂಗ್ರೆಸ್ಸನ್ನು dissolve ಮಾಡಬೇಕೆಂದು ಹೇಳಿದರೆಂದು ಅವರು ಹೇಳಿದರು. ಅದಕ್ಕೆ ಉತ್ತರ ನಾನು ಹೇಳಿದರೆ ಅವರು ಕೇಳುವುದಿಲ್ಲ, ಮಹಾತ್ಮಾಗಾಂಧಿಯವರೇ ಏನು ಹೇಳಿದ್ದಾರೆಂದು ತಮಗೆ ಹೇಳುತ್ತೇನೆ. ಹರಿಜನ ಪತ್ರಿಕೆಗಳನ್ನು ಬೈಂಡ್‌ಮಾಡಿಸಿ, ಇಪ್ಪತ್ತು ವರ್ಷಗಳ ಪತ್ರಿಕೆಗಳನ್ನಿಟ್ಟು ಕೊಂಡಿದ್ದೇನೆ, ಅದರಿಂದ ಓದುತ್ತೇನೆ. 1950 ನೆಯ ಫೆಬ್ರವರಿ ಮೊದಲನೆಯ ವಾರದ ಹರಿಜನ ಪತ್ರಿಕೆ. ಜನವರಿ ಮೂವತ್ತನೆಯ ತಾರೀಖು ಗಾಂಧಿಜಿಯವರು ಸತ್ತುಹೋದರು, ಅವರು ಸಾಯುವುದಕ್ಕಿಂತ ಸ್ವಲ್ಪ ಮುಂಚೆ ಅವರು ಬರೆದ ಲೇಖನವನ್ನು ಎರಡು ದಿವಸಗಳಾದ ಮೇಲೆ ಪ್ರಕಟಮಾಡಿದರು. ' Congress Position ' ಎಂದು heading ಕೊಟ್ಟು ಸಂಪಾದಕೀಯ ಬರೆದಿದ್ದಾರೆ. ಅದರಲ್ಲಿ :

> “ Indian National Congress which is the oldest national political organisation and which has after many battles fought her non-violent way to freedom cannot be allowed to die. It can only die with the nation. A living organism either grows or it dies. The Congress has won political freedom, but it has yet to win economic freedom, social and moral freedom. These freedoms are harder than the political, if only because they are constructive, less exciting and not spectacular. All embracing constructive work evokes the energy of all units of the millions.”

ಎಂದು ಹೇಳಿದ್ದಾರೆ. ಆದುದರಿಂದ ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ ರದ್ದಾಗಬೇಕೆಂದು ಹೇಳಿಲ್ಲ. ಇದು ಈ ಜನಾಂಗ ಅಥವಾ Nation ಎಂದಿನವರೆಗಿರುತ್ತದೆಯೋ ಅಂದಿನವರೆಗೂ ಇರಲಿ ಎಂಬ ಅಭಿಪ್ರಾಯವನ್ನ ವ್ಯಕ್ತಪಡಿಸಿದ್ದಾರೆ. ಆದರೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದ ಮಾತ್ರಕ್ಕೇ ಕಾಂಗ್ರೆಸ್ ಒಳ್ಳೆಯ ಕೆಲಸಮಾಡಲಿ, ಕೆಟ್ಟ ಕೆಲಸ ಮಾಡಲಿ ಇದನ್ನು ಮುಂದುವರಿಸಿಕೊಂಡು ಹೋಗಲೆಂದು ಹೇಳುವುದಕ್ಕಾಗುವುದಿಲ್ಲ. ನಾವು ಕಾಂಗ್ರೆಸ್

ಧ್ಯೇಯಗಳಿಗನುಸಾರವಾಗಿ ನಡೆಯಬೇಕೆಂಬ ಪ್ರಯತ್ನದಲ್ಲಿದ್ದೇವೆ. ಈ ಕೆಲಸದಲ್ಲಿ ನಾವೆಲ್ಲರೂ ಕೃತಾರ್ಥರಾಗಿದ್ದೇವೆಂದು ನಾನು ಹೇಳುತ್ತಿಲ್ಲ. ಧ್ಯೇಯ ಒಂದು, ಕಾರ್ಯಾಚರಣೆ ಒಂದು; ಎಂದು ನಾವು ಕೃತಾರ್ಥರಾಗಬೇಕೊ ಅಂದು ಆಗುತ್ತೇವೆ. ಆ ರೀತಿ ಪ್ರಯತ್ನ ಪಡುವುದು ನಮ್ಮ ಕೈಯಲ್ಲಿರುವುದು. ಕಾಂಗ್ರೆಸ್ ಸಂಸ್ಥೆಯಲ್ಲಿ ಅಶಿಸ್ತಿದೆ, ಅದನ್ನು ಯಾರೂ ಇಲ್ಲವೆಂದೂ ಹೇಳುತ್ತಿಲ್ಲ. ಆದರೆ ಈ ಅಶಿಸ್ತಿನ ಪ್ರಮಾಣ ಬಹಳ ಕಡಮೆಯಾಗಿರುವುದರಿಂದ ಇದು ಇನ್ನೂ ಚೈತನ್ಯವುಳ್ಳ ಸಂಸ್ಥೆಯಾಗಿದೆ. ಡಾಕ್ಟರುಗಳು ಒಂದು ಮಾತು ಹೇಳುತ್ತಾರೆ. Tuberculosis bacilli ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರುತ್ತವೆ, ಆರೋಗ್ಯವಾಗಿರುವ ಮನುಷ್ಯನಲ್ಲಿಯೂ ಇರುತ್ತವೆ, ಆದರೆ ಕಡಮೆ ಪ್ರಮಾಣದಲ್ಲಿರುತ್ತದೆ. ಆದರಿಂದ ತೊಂದರೆಯಿಲ್ಲ. ಇವು ಜಾಸ್ತಿಯಾದಾಗ ಕ್ಷಯರೋಗದಿಂದ ಸಾಯುತ್ತಾನೆ. ಹೀಗೆ ಪಕ್ಷದಲ್ಲಿ ಅಶಿಸ್ತಿನ ಕ್ಷಯರೋಗದ ಕ್ರಿಮಿ ಇದೆ, ಇದು ಹೆಚ್ಚಿದರೆ ಕಾಂಗ್ರೆಸ್ ಸಂಸ್ಥೆ ತಾನೇ ಕುಸಿದು ಬಿದ್ದು ಹೋಗುತ್ತದೆ. ಈ ಅಶಿಸ್ತಿನ ಪ್ರಮಾಣವನ್ನು ಯಾವ ಮಹನೀಯನು ಉಲ್ಬಣಾವಸ್ಥೆಗೆ ಹೋಗಲು ಬಿಡದೆ ರಕ್ಷಣೆಮಾಡುತ್ತಾನೋ ಆತನೇ ನಿಜವಾದ ಕಾಂಗ್ರೆಸ್ ಭಕ್ತ, ಮಹಾತ್ಮಾ ಗಾಂಧಿಯವರ ಭಕ್ತ ಎಂದು ನಿಜವಾಗಿ ಹೇಳಬಲ್ಲೆ.

ಸ್ವಾಮಿ, ಶ್ರೀಮಾನ್ ಇಮಾಂರವರು ಪದೇ ಪದೇ ಹೇಳತಕ್ಕ ಹಣಕಾಸಿನ ಪರಿಸ್ಥಿತಿಯ ವಿಚಾರದಲ್ಲಿ ಕೆಲವು ಅಂಶಗಳನ್ನು ಹೇಳುತ್ತೇನೆ.

The State had its own post-war development programme on which expenditure was being incurred from the accumulated resources with the State even before the first Five-Year Plan of Government of India was formulated and adopted by the State. The Hon'ble Members will see from the Budget Memorandum that sixty per cent of the total expenditure is on nation-building activities, and is nearly five times the expenditure incurred on these activities in 1946-47. Several members have wrongly referred to the reduction in cash and investments to liquidation of Reserves. While Reserves are created from Revenue surplus, the cash and investments result from the net transactions in Revenue Capital and other Accounts. I shall explain the position of cash and investments between the periods 1-7-1947 and 31-3-1953.

On 1-7-1947, we had cash and investments to the extent of Rs. 33 crores. From 1-7-1947 to end of 31-3-1953, our net income from loans, deposits, funds, etc., was of the order of Rs. 13 crores. Therefore, we have to account for Rs. 46 crores outside the Revenue Account. During this period, the increases in Capital Assets and Loans and Advances given by the Government are as follows:

		Rs. in crores.
Loans and Advance		3·33
Capital Investment :—		
Electricity	...	12·50
Irrigation & Industries ...	...	8·22
Road Transport	...	0·30
Advances to Food Deptt. ...	...	3·84
Railways ...	...	0·64
Total	...	28·83

On 31-3-1953, we had cash and investments to the extent of Rs. 18 crores. It must therefore be seen that the reduction of 28 crores of rupees is accounted for by Loans and Advances, Fixed Assets and Food Advances.

ಆದುದರಿಂದ ರಿಜರ್ವ್ ಹಣವೆಲ್ಲಾ ಪೋಲಾಯಿತು ಎಂದು ಪದೇ ಪದೇ ಇಮಾಂ ಸಾಹೇಬರು ಹೇಳಬೇಕಾಗಿಲ್ಲ. ಇನ್ನು ಮುಂದಾದರೂ ಈ ಹಾಡನ್ನು ನಿಲ್ಲಿಸುತ್ತಾರೆಂದು ನಂಬಿದ್ದೇನೆ.

Besides, during the above period, Government have also met about Rs .831 crores as subsidy and establishment charges. Another liability to be discharged was increase in pay scales which resulted in an enhanced expenditure of a heavy sum of about Rs. 7 to 8 crore during the period. ಸರ್ಕಾರಿ ಅಧಿಕಾರಿಗಳ ಸಂಬಳವನ್ನು ಹೆಚ್ಚುಮಾಡಲಿಲ್ಲವೆಂದು ತಾವು ಹೇಳುತ್ತೀರಿ; ಹಿಂದಿನ ಮಂತ್ರಿಮಂಡಲದವರು 8 ಕೋಟಿ ರೂಪಾಯಿಗಳ ಹೆಚ್ಚು ವೆಚ್ಚವನ್ನು ಇದಕ್ಕಾಗಿ ಒದಗಿಸಿದ್ದಾರೆ.

This means that Government did not only create Capital Assets but also have met the previous liabilities.

ಸ್ವಾಮಿ, ಹಲವು ಮಾನ್ಯ ಸದಸ್ಯರು ಮೈಸೂರು ದೇಶ ವಿಸ್ತಾರವಾಗತಕ್ಕಂಥ ಕಾಲದಲ್ಲಿ ಬಳ್ಳಾರಿಯನ್ನು ನಾವು ಸೇರಿಸಿಕೊಂಡಾಗ ಅಂಕಿಅಂಶಗಳನ್ನು ಸಂಗ್ರಹಿಸಿ ವಿಮರ್ಶಿಸದೆ ಸೇರಿಸಿಕೊಂಡೆವು, ಆದ್ದರಿಂದ ಆರ್ಥಿಕ ಪರಿಸ್ಥಿತಿಯಲ್ಲಿ ಖೋತಾ ಕಾಣುತ್ತಿದೆ, ಮುಂದೆ ಮೈಸೂರು ದೇಶಕ್ಕೆ ಯಾವ ಪ್ರದೇಶಗಳು ಸೇರಬೇಕೆಂದು ಹೇಳಿ ಅಪೇಕ್ಷೆಪಡುತ್ತವೆಯೋ ಅವುಗಳ ಆರ್ಥಿಕ ಸ್ಥಿತಿಯ ವಿಚಾರದಲ್ಲಿ ಅಂಕಿಅಂಶಗಳನ್ನು ಸಂಗ್ರಹಿಸಿ ನಾವು ಒಂದು ನಿರ್ಧಾರಕ್ಕೆ ಬರಬೇಕು, ಆ ರೀತಿಯಾಗಿ ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕೂ, ಒಂದು ಸೂಕ್ತವಾದಂಥ ನಿರ್ಧಾರಕ್ಕೆ ಬರುವುದಕ್ಕೂ, ಸಮಾಲೋಚನೆ ಮಾಡುವುದಕ್ಕೂ ಒಂದು ಸಮಿತಿಯನ್ನು ಸ್ಥಾಪನೆ ಮಾಡಬೇಕು ಎಂದು ಹೇಳಿದ್ದಾರೆ. ಸರ್ಕಾರದವರು ಈ ವಿಚಾರವನ್ನು ಪರಿಶೀಲಿಸುತ್ತಲೇ ಇದ್ದರು. ಹೈಪವರ್ ಕಮಿಷನ್ ಎಂದು ನೇಮಕವಾಯಿತೋ ಅಂದೇ ಸರ್ಕಾರದವರು ಈ ವಿಷಯದಲ್ಲಿ ಸೂಕ್ತವಾದ ಅಂಕಿ

(ಶ್ರೀ ಕೆ. ಹನುಮಂತಯ್ಯ.)

ಅಂಶಗಳನ್ನೆಲ್ಲಾ ಸಂಗ್ರಹಿಸಬೇಕಾದ ಅವಶ್ಯಕತೆ ಬಂದಿದೆಯೆಂಬುದನ್ನು ಮನವರಿಕೆ ಮಾಡಿಕೊಂಡಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರೇನು ಉದ್ದೇಶಪಟ್ಟಿದ್ದರೋ ಅದನ್ನೇ ಮಾನ್ಯಸದಸ್ಯರೂ ಕೂಡ ಹೇಳಿದ್ದಾರೆ. ಈ ಪ್ರಶ್ನೆ ಒಂದು ಪಕ್ಷದ ಪ್ರಶ್ನೆಯಲ್ಲ, ಪಕ್ಷಾತೀತವಾದ ಪ್ರಶ್ನೆ ಎಂಬುದನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ ; ಇದೇ ರೀತಿಯ ಮನೋವೃತ್ತಿಯನ್ನು ಕೂಡ ಬೆಳಸಿಕೊಂಡು ಬಂದಿದ್ದೇವೆ. ಈ ಸಲಹೆಯನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. ಆದಷ್ಟು ಜಾಗ್ರತೆ ಈ ವಿಚಾರಕ್ಕೆ ಒಂದು ಸಮಿತಿಯನ್ನು ಸರ್ಕಾರದವರು ನೇಮಿಸುತ್ತಾರೆ.

ಎಲ್ಲ ಮಾನ್ಯ ಸದಸ್ಯರೂ ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗದಿದ್ದರೆ ದಯವಿಟ್ಟು ಕ್ಷಮಿಸಬೇಕು ; ಕಾಲ ಹೆಚ್ಚಾಗಿಲ್ಲ. ಮಾನ್ಯ ಇಮಾಂ ಸಾಹೇಬರು ತಮ್ಮ ಭಾಷಣವನ್ನು ಮುಗಿಸುತ್ತಾ ತಮಗೆ ಸಹಜವಲ್ಲದ ದೊಡ್ಡ ಬೆದರಿಕೆಯ ಮಾತುಗಳನ್ನು ಹೇಳಿದರು. 'Five-Year Plan has brought economic, social and political ruin to the country' ಎಂದು ಹೇಳಿದರು. ನನಗೆ ಎಚ್ಚರಿಕೆ ಕೊಟ್ಟಿದ್ದಾರೆ. ರಿಸೈನ್ ಮಾಡಿ ಎಂದು ಹೇಳಿದರು. ಅವರು ಆ ರೀತಿ ಎಚ್ಚರಿಕೆ ಕೊಟ್ಟು ಕೊಟ್ಟು ಬೆಚ್ಚರಿಕೆ ತಪ್ಪಿಹೋಗಿದೆ. ಇದು ಅಭ್ಯಾಸವಾಗಿ ಹೋಗಿದೆ. ಎಚ್ಚರಿಕೆ ಬಾರದಿದ್ದರೆ ಏನೋ ತಪ್ಪಿರಬೇಕೆಂಬ ಭಾವನೆ ಬರುತ್ತದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಅದು ಮೊಂಡ ತನ ಎಂದು ಹೇಳಬೇಕು.

ಶ್ರೀ ಕೆ. ಹನುಮಂತಯ್ಯ.—ಹಾಗೆ ಹೇಳುವುದಕ್ಕಿಂತ ಬಂಡವಾಳತನವೆಂದು ಹೇಳಿದರೆ ಒಳ್ಳೆಯದು. ಆ ಬಂಡವಾಳವಿರುವುದರಿಂದ ನಾನು ಆ ರೀತಿ ನಡೆದುಕೊಳ್ಳಬಲ್ಲೆ. ಕಾಂಗ್ರೆಸ್ ಪಕ್ಷದ ಸದಸ್ಯರು ಕೂಡ ಅನೇಕರು 'ರೈತರ ಕೆಲಸ ಈಗೇನು ಮಾಡಿದ್ದಾರೆ' ಎಂದು ಕೇಳಿದ್ದಾರೆ. ಅವರು ಕೇಳುವ ವಿಷಯಗಳಿಗೆ ಸರ್ಕಾರದವರು ಉತ್ತರ ಕೊಡಬೇಕಾಗಿರುವುದು ನ್ಯಾಯವೇ. ಆದ್ದರಿಂದ ಅಂಕಿಅಂಶಗಳ ಮುಖಾಂತರ ಹೇಳುತ್ತೇನೆ. ಆರ್ಥಿಕಾಭಿವೃದ್ಧಿಯಾಗುತ್ತಿದೆಯೆಂಬುದನ್ನು ಸಮರ್ಥಿಸಿ ಅಂಕಿಅಂಶ ಕೊಡುತ್ತೇನೆ. ಇಂಡಿಯಾ ಸರ್ಕಾರದವರು ನ್ಯಾಷನಲ್ ಇನ್ಕಂ ಕಮಿಟಿಯೆಂದು ನೇಮಿಸಿದ್ದಾರೆ. ಅದು 1949ನೆಯ ಇಸವಿಯಲ್ಲಿ ನೇಮಕವಾಯಿತು. ಅದರಲ್ಲಿ ಕಾಂಗ್ರೆಸ್ ಸದಸ್ಯರು ಒಬ್ಬರೂ ಇಲ್ಲ. ಅದರ ಮೆಂಬರುಗಳು (1) ಪ್ರೊಫೆಸರ್ ಪಿ. ಸಿ. ಮಹಾಲನೋಬಿಸ್—ಅವರು ಛೇರ್ಮನ್ (2) ಪ್ರೊ॥ ಗ್ಯಾಡ್‌ಗಿಲ್—ಪೂನಾದವರಿವರು–ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯವರು, (3) ಡಾ॥ ವಿ. ಕೆ. ಆರ್. ವಿ. ರಾವ್—ಡೈರೆಕ್ಟರ್ ಆಫ್ ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್ ಇವರು ಸದಸ್ಯರು, (4) ಎಂ. ಮುಖರ್ಜಿ—ಸ್ಟ್ಯಾಟಿಸ್ಟೀಷಿಯನ್, ನ್ಯಾಷನಲ್ ಇನ್ಕಂ ಯೂನಿಟ್—ಮಿನಿಸ್ಟ್ರಿ ಆಫ್ ಫೈನಾನ್ಸ್—ಇವರು ಸೆಕ್ರೆಟರಿಯವರು ಇಷ್ಟೇ ಜನ ಆ ಕಮಿಟಿ ಸದಸ್ಯರು. ಆ ಕಮಿಟಿಯಲ್ಲಿ ಯಾವ ಪೊಲಿಟಿಕಲ್ ಪಕ್ಷದವರೂ ಇಲ್ಲ. ನಿಷ್ಪಕ್ಷಪಾತವಾಗಿ ಈ ವಿಷಯವನ್ನು ಪರಿಶೀಲಿಸತಕ್ಕಂಥ ಮನೋವೃತ್ತಿಯುಳ್ಳ ಪ್ರೊಫೆಸರು, ಎಕಾನಮಿಸ್ಟ್‌ಗಳು ಮತ್ತು ಅಡ್ಮಿನಿಸ್ಟ್ರೇಟರು ಮಾತ್ರ ಅದರಲ್ಲಿದ್ದಾರೆ. ಅವರು ಮೊನ್ನೆ ವರದಿ ಕೊಟ್ಟಿದ್ದಾರೆ, ನ್ಯಾಷನಲ್ ಇನ್ಕಂ ಅಂಕಿಅಂಶ ಕೊಟ್ಟಿದ್ದಾರೆ. ಈಗ ನ್ಯಾಷನಲ್ ಇನ್ಕಂ ಪರ್ ಕ್ಯಾಪಿಟ ಮಾತ್ರ ಕೊಡುತ್ತೇನೆ. ನ್ಯಾಷನಲ್ ಇನ್ಕಂ 1948-49ರಲ್ಲಿ 8,650 ಕೋಟಿ ರೂಪಾಯಿಗಳು. ಇದು ಮಾರನೆಯ ವರ್ಷ 1949-50ರಲ್ಲಿ 9,010 ಕೋಟಿ ರೂಪಾಯಿಗಳಿಗೆ ಏರಿತು, 1950-51ರಲ್ಲಿ 9,530 ಕೋಟಿ ರೂಪಾಯಿಗಳಿಗೆ ಏರಿದೆ. 1950-51 ರವರೆಗೆ ಮಾತ್ರ ಅಂಕಿ ಅಂಶ ಕೊಟ್ಟಿದ್ದಾರೆ. ಇದೇ ರೀತಿ 1951-52 ಮತ್ತು 1952-53ರಲ್ಲಿ ಇನ್ನೂ ಹೆಚ್ಚಾಗಿದೆಯೆಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. 1948-49ರಲ್ಲಿ ಪರ್ ಕ್ಯಾಪಿಟಾ–ತಲೆಯೊಂದಕ್ಕೆ-ಒಬ್ಬ ಮನುಷ್ಯನ ಆದಾಯ 246.9 ಅಥವಾ 247 ಎಂದು ಹೇಳಿದರೂ ಹೇಳಬಹುದು ; ಮಾರನೆಯ ವರ್ಷ 1949-50ರಲ್ಲಿ 253.9, ಇದನ್ನು 254 ಎಂದು ಇಟ್ಟುಕೊಳ್ಳಬಹುದು. ಅದರ ಮಾರನೆಯ ವರ್ಷ 1950-51ರಲ್ಲಿ 265.2, ಈ ರೀತಿಯಾಗಿದೆ. ಇದರಿಂದ 1948-49 ರಿಂದ 1950-51 ರವರೆಗೆ ಸರಾಸರಿ ಒಬ್ಬ ಮನುಷ್ಯನ ಆದಾಯ 18.3 ರಷ್ಟು ಹೆಚ್ಚಾಗಿದೆ ಎಂದು ಗೊತ್ತಾಗುತ್ತದೆ, ಇದನ್ನು 18¼ ರೂಪಾಯಿ ಸ್ವಲ್ಪ ಹೆಚ್ಚುಕಡಮೆ ಎಂದು ಇಟ್ಟುಕೊಳ್ಳಬಹುದು. ಮೂರು ವರ್ಷಗಳಲ್ಲಿ ಇಷ್ಟು ಹೆಚ್ಚಿದೆ. ಪಂಚವಾರ್ಷಿಕ ಯೋಜನೆ 2,400 ಚಿಲ್ಲರೆ ಕೋಟಿಗೆ ತಯಾರಾಗಿತ್ತು. ಈಚೆಗೆ ಎರಡು ವರ್ಷಗಳಿಂದ ಹೆಚ್ಚಾಗಿ ಖರ್ಚಾಗುತ್ತಿದೆ. ಈ ಹಣವೆಲ್ಲಾ ಅನೇಕ ರೀತಿಯಲ್ಲಿ ಕೂಲಿಗಾರರಿಗೆ, ಕೆಲಸಗಾರರಿಗೆ, ಉದ್ಯೋಗಸ್ಥರಿಗೆ ವಿನಿಯೋಗವಾಗಿ ನಮಗೇ ಸಿಕ್ಕುತ್ತದೆ.

Facility of circulation, as such, has increased on account of expenditure on Five-Year Plan to the tune of hundreds of crores of rupees. Therefore, the national income has also gone up. It is during these two previous years the tempo of the Five-Year Plan has considerably increased. Therefore, I can easily draw the inference that the per capita of the national income has increased considerably during the last two years.

ಆದ್ದರಿಂದ ದೇಶ ಹಿಂದೆ ಹೋಗುತ್ತಿದೆ, ಮುಂದುವರಿಯುತ್ತಿಲ್ಲ ಎಂದು ಟೀಕೆ ಮಾಡುವುದು ಸರಿಯಲ್ಲ. ಒಂದು ವೇಳೆ ಮನಸ್ಸಿನಲ್ಲಿರುವ ಉದ್ವೇಗವನ್ನು ತೋರಿಸಬೇಕೆಂದು ಇಷ್ಟಪಟ್ಟರೆ ಹಾಗೆ ಟೀಕೆ ಮಾಡಲು ಇದೊಂದು ಮಾರ್ಗಸಿಕ್ಕುತ್ತದೆಂದು ಹೇಳಬಹುದೇ ಹೊರತು ಮತ್ತೇನೂ ಇಲ್ಲ. ಅಂಕಿ ಅಂಶಗಳನ್ನು ತಿಳಿದುಕೊಂಡು ನೋಡಿದರೆ ದೇಶ ಮುಂದುವರಿಯುತ್ತಿದೆ. ಆದರೆ ಸಾಕಾದಷ್ಟು ಮುಂದುವರಿಯುತ್ತಿಲ್ಲವೆಂಬುದು ನನಗೂ ಕಾಣುತ್ತಿದೆ. ಇನ್ನೂ ಜಾಗ್ರತೆ ಮುಂದುವರಿಯಬೇಕು, ಇನ್ನೂ ವೇಗವಾಗಿ ಹೋಗಬೇಕು. ಇದರಲ್ಲಿ ಭಿನ್ನಾಭಿಪ್ರಾಯ ಬೇಕಾದರೆ ವ್ಯಕ್ತಪಡಿಸೋಣ, ಸಾಕಾದಷ್ಟು ವೇಗವಾಗಿ ಹೋಗುತ್ತಿಲ್ಲವೆಂದು ಹೇಳುವುದನ್ನು ಒಪ್ಪೋಣ.

ಶ್ರೀ ಎಸ್. ಗೋಪಾಲಗೌಡ.—ಶ್ರೀಮಂತರು ಶ್ರೀಮಂತರೇ ಆಗಿದ್ದಾರೆ, ಬಡವರು ಬಡವರೇ ಆಗಿದ್ದಾರೆ. ಆದ್ದರಿಂದ ಪರ್ ಕ್ಯಾಪಿಟಾ ಇನ್ಕಂ ವಿಷಯ ಗಮನಿಸಬೇಕು.

ಶ್ರೀ ಕೆ. ಹನುಮಂತಯ್ಯ.—ಅದಕ್ಕೂ ಆಮೇಲೆ ಉತ್ತರ ಹೇಳುತ್ತೇನೆ. ನ್ಯಾಷನಲ್ ಇನ್ಕಮ್ ಈ

ಐದು ವರ್ಷಗಳಿಂದಲೂ ವರ್ಷ ವರ್ಷಕ್ಕೂ ಮೇಲಕ್ಕೆ ಹೋಗುತ್ತಲೇ ಇದೆಯೆಂಬುದನ್ನು ತಾವು ಕಾಣಬಹುದು. Taxable capacity ಇದೆಯೋ ಎಂದು ತಾವು ಅನೇಕರು ಪ್ರಶ್ನೆ ಮಾಡಿದಿರಿ. ಅದಕ್ಕೂ ಉತ್ತರವಿದೆ. ತೆರಿಗೆಗಳನ್ನು ಕೊಡುವ ಸಾಮರ್ಥ್ಯವನ್ನು ಯಾವುದರ ಮೇಲೆ ಅಳೆದಿರಿ ಎಂಬ ಪ್ರಶ್ನೆಗೆ ಉತ್ತರವಾಗಿ ಅದಕ್ಕೂ ಒಂದು ಆಧಾರವಿದೆಯೆಂದು ನಾನು ಮನವಿಮಾಡಿಕೊಳ್ಳುತ್ತೇನೆ. ಈ ಅಂಕಿಅಂಶಗಳು ಇಂಡಿಯಾ ದೇಶಕ್ಕೆಲ್ಲಾ ಅನ್ವಯಿಸುವಂಥವು. ನೀವುಗಳೂ ಇಂಡಿಯಾದೇಶದ ಪ್ರಜೆಗಳು ಎಂಬುದನ್ನು ಒಪ್ಪಿಕೊಳ್ಳಬೇಕು. ಆಮೇಲೆ ಇನ್ನೂ ಒಂದು ಹೇಳುತ್ತೇನೆ. It is easy to prove that in Mysore the standard of life is higher and the national income will be much more than what is given here and if you don't admit it, you will be bringing discredit to your own Government which has ruled for six years.

ಅನಂತರ, food policy ಯಲ್ಲಿ ಈ ಎರಡು ವರ್ಷಗಳಲ್ಲಿ ಎಷ್ಟರಮಟ್ಟಿಗೆ ರೈತನಿಗೆ ಆದಾಯ ಬರತಕ್ಕಂತಹ ನೀತಿಯನ್ನು ಈ ಸರ್ಕಾರ ಅನುಸರಿಸಿದ್ದಾರೆಂಬುದನ್ನು ನಾನು ವಿವರವಾಗಿ ಈ ದಿವಸ ಹೇಳುವುದಿಲ್ಲ. ನಾನೂ ಕೂಡ ಪಟ್ಟಣಿಗರು ಹಳ್ಳಿಯವರು ಎಂಬ ವಾದವನ್ನು ಎಬ್ಬಿಸಿ ಆದರಮೇಲೆ ಒಂದು ಚರ್ಚೆಗೆ ಆಸ್ಪದ ಕೊಡುವುದು ಸೂಕ್ತವಲ್ಲ. ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕೂಡ ಆಹಾರದ ಬೆಲೆಯನ್ನು ನಿಗದಿಮಾಡತಕ್ಕಂಥ ರೀತಿಯಿಂದ ಬೆಳೆಯತಕ್ಕವನಿಗೆ, ರೈತನಿಗೆ ಎಷ್ಟು ಆದಾಯ ಬಂದಿದೆಯೆಂಬುದನ್ನು ಯೋಚನೆ ಮಾಡಿದರೆ ಅವರಿಗೇ ಹೊಳೆಯುತ್ತದೆ. ಆದರೆ, ಈ ದಿವಸ ಏನಾಗಿದೆಯೆಂದರೆ, ಬಡವರು, ರೈತರು ಎನ್ನುವ ಮಾತುಗಳನ್ನು ಯಾವುದಕ್ಕೆ ಬೇಕಾದರೂ ಉಪಯೋಗಿಸಬಹುದು. ಕಾಂಗ್ರೆಸ್ಸಿನವರೂ 'ಬಡವರು' 'ರೈತರು' ಎಂದು ಹಿಡಿದು ವಾದಿಸುತ್ತಾರೆ; ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರೂ 'ಬಡವರು' 'ರೈತರು' ಎಂಬ ಪದಗಳನ್ನೇ ಹಿಡಿದು ಮಾತನಾಡುತ್ತಾರೆ; ಕಮ್ಯೂನಿಸ್ಟ್ ಪಕ್ಷದವರು ಹೇಳುವುದಾದರೂ 'ಬಡವರು, ರೈತರು' ಎಂತಲೇ! ಹೀಗೆ ಆ ಮಾತನ್ನು ಎಲ್ಲರೂ ಉಪಯೋಗಿಸುತ್ತಿರುವುದರಿಂದ ಅದನ್ನೇ ಚರ್ಚೆಗೆ ತೆಗೆದುಕೊಂಡರೆ ಏನೂ ಪ್ರಯೋಜನವಿಲ್ಲ. ಏಕೆಂದರೆ ಎಷ್ಟೋ ವೇಳೆ ನಾನೂ ಮರಿಯಪ್ಪನವರೂ ಚರ್ಚೆಗೆ ಕುಳಿತುಕೊಂಡಾಗ 'ನಾನಿಷ್ಟು ತ್ಯಾಗಮಾಡಿದ್ದೇನೆ, ಇಷ್ಟುಸಲ ನಾನು ಜೈಲಿಗೆ ಹೋಗಿದ್ದೇನೆ' ಎಂದರೆ, ನಾನು 'ನಾನೂ ಕೂಡ ಅದೇ ಸೇವೆ ಮಾಡಿದ್ದೇನೆ, ಬೇರೆಯೇನಾದರೂ ಸೂಕ್ತವಾದುದಿದ್ದರೆ ಹೇಳಿ, ನಮ್ಮ ನಮ್ಮಲ್ಲಿ ಎಲ್ಲರೂ ಒಂದೇ, ಒಂದೇ ತಳಹದಿಯ ಮೇಲೆ ನಿಂತಿರುವಾಗ ಮತ್ತೆ ಜೈಲಿಗೆ ಹೋಗಿದ್ದೇನೆ, ತ್ಯಾಗಮಾಡಿದ್ದೇನೆ ಎಂದು ಹೇಳಿದರೆ ಅವರಿಗೆ commonsense ಸ್ವಲ್ಪ ಕಡಿಮೆಯಾಗಿದೆ' ಎಂದು ಹೇಳುತ್ತೇನೆ. ಅದೇ ರೀತಿ ಇಲ್ಲಿ ನೀವುಗಳು ಎಲ್ಲರೂ 'ಬಡವರು' 'ರೈತರು' ಎಂಬ ಪದಗಳನ್ನು ಉಪಯೋಗಿಸಿದರೆ ಅವರಿಗೂ ಸ್ವಲ್ಪಮಟ್ಟಿಗೆ Commonsense ಕಡಮೆಯಾಗಿದೆಯೆಂದು ಹೇಳಬೇಕು. ಏಕೆಂದರೆ ಬಡವರನ್ನು, ರೈತರನ್ನು ಉದ್ಧಾರಮಾಡಬೇಕೆಂಬುದು ಎಲ್ಲರ ಉದ್ದೇಶವೂ ಆಗಿದೆ. ಅದರಲ್ಲಿ ಎಲ್ಲರೂ ನಿಸ್ಪೃಹರೇ. ಹೀಗಿದ್ದರೂ ಅದನ್ನೇ ಪದೇಪದೇ ಹೇಳುತ್ತಿದ್ದರೆ, ಅವರಿಗೆ ಯೋಚನೆಮಾಡುವುದಕ್ಕೆ ಏನೂ ಹೊಳೆಯದೆ ಇದ್ದಾಗ, ಮನಸ್ಸು ಮರುಭೂಮಿಯಾದಾಗ ಉಪಯೋಗಿಸುವ ಮಾತು ಅದು ಎಂದು ಹೇಳಬೇಕಾಗುತ್ತದೆ. ರೈತರೆಂದ ಮಾತ್ರಕ್ಕೆ ಸುಮ್ಮನೆ ಹಣ ಕೊಡುವುದಕ್ಕಾಗುತ್ತದೆಯೇ? ರೈತನು ಕೆಲಸ ಮಾಡುವ ಹಾಗೆ ಮಾಡಬೇಕು. ಯಾರೂ ದಾನ ಕೊಟ್ಟು ದೇಶವನ್ನು ಉದ್ಧಾರಮಾಡುವುದಕ್ಕಾಗುವುದಿಲ್ಲ. ಒಂದು ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡಿತೆಂದರೆ ಅದರಲ್ಲಿ ಬಡವರು ಕೆಲಸಮಾಡಿದರೆ ಆದಾಯ ಬರುತ್ತದೆ. ಒಂದು ಕಟ್ಟಡ ಕಟ್ಟಿಸಿದರೆ ಅದರಲ್ಲಿ ಕೆಲಸ ಮಾಡುವವರಿಗೆಲ್ಲರಿಗೂ ಅದರಿಂದ ಹಣ ಸಿಗುತ್ತದೆ.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—ಆದರೂ priorities ಯಾವುದಕ್ಕೆ ಇರಬೇಕು ಎಂಬುದನ್ನು ನೋಡಬೇಕು. ಸಿಮೆಂಟ್ ಕಾಂಕ್ರೀಟ್ ಮಾಡಿಸುವುದಕ್ಕೂ ಗ್ರೋ ಮೋರ್ ಫುಡ್ಡಿಗೂ ವ್ಯತ್ಯಾಸವಿದೆ.

ಶ್ರೀ ಕೆ. ಹನುಮಂತಯ್ಯ.—ಆಗಲಿ, priorities ಪ್ರಶ್ನೆಯನ್ನೂ ವಿಚಾರಮಾಡೋಣ. ಆ ವಿಚಾರದಲ್ಲೂ ಭಿನ್ನಾಭಿಪ್ರಾಯವಿಲ್ಲ. ಆದರೆ, ನಮಗೆ ಒಂದು priority ಕೊಡತಕ್ಕದ್ದೆಂದು ಕಾಣಬಹುದು, ನಿಮಗೆ ಮತ್ತೊಂದು priority ಕೊಡತಕ್ಕದ್ದೆಂದು ಕಾಣಬಹುದು. ಇದರಲ್ಲಿ ಇರುವ ಭಿನ್ನಾಭಿಪ್ರಾಯದಿಂದಲೇ ದೇಶ ಹಾಳುಮಾಡುತ್ತೇವೆಂದು ತಾವು ಭಾವಿಸಕೂಡದು. ತಾವು ಏನೇನು ಕೆಲಸಗಳನ್ನು priority ಎಂದು ಹೇಳಿ ಮಾಡುತ್ತೀರೋ ಅದನ್ನು ನಾನು ಸ್ವೇಚ್ಛೆಯಾಗಿ ಮಾಡುತ್ತೀರಿ ಎಂದು ಹೇಳಿದರೆ, ಅದು ಅವರ ಮನಸ್ಸಿನ ರೂಪವನ್ನು, ಅವರ ಹೃದಯ ಪರಿಶುದ್ಧತೆಯನ್ನು ವ್ಯಕ್ತಪಡಿಸುತ್ತದೆ ಅಷ್ಟೆ. ಅಲ್ಲದೆ, ಈ ಪ್ರಶ್ನೆ ಹಿಂದೆ ಇದೇ ಶಾಸನಸಭೆಯಲ್ಲಿ ಬಂದು ತಾವುಗಳು ಒಪ್ಪಿದ್ದನ್ನು ನಾವು ಮಾಡುತ್ತಿದ್ದೇವೆ. ಈ ಸಭೆಯಲ್ಲಿ ಆದ ಮೊದಲನೆಯ ಬಜೆಟ್ ಭಾಷಣದಲ್ಲಿ ಇಂಥ ಒಂದು ದೊಡ್ಡ ಕಟ್ಟಡವನ್ನು ಕಟ್ಟಿಸಬೇಕೆಂದು ಹೇಳಿದ್ದೀರಿ. ಅದನ್ನು ಆಗ್ಗೆ ಎಲ್ಲರೂ ಒಪ್ಪಿಕೊಂಡು, ಇವೊತ್ತು ನಮ್ಮ ಮೇಲೆ ಈ ಒಂದು ಆಪಾದನೆ ಮಾಡಿದರೆ ಅದರಲ್ಲಿ ಎಷ್ಟು ನ್ಯಾಯವಿದೆಯೆಂಬುದು ಜನತೆಗೆ ಗೊತ್ತು; ಜನಾರ್ದನನಿಗೆ ಗೊತ್ತು! ಹಾಗೆಯೇ Medical Aid ವಿಷಯ ಇಮಾಂರವರು ಹೇಳಿದರು. ಇದನ್ನು ಹಿಂದೆಲ್ಲಾ ಚರ್ಚೆಮಾಡಿ unanimous ಆಗಿ ತಾವುಗಳೇ pass ಮಾಡಿದ್ದೀರಿ. ಅದನ್ನೀಗ ಪ್ರಸ್ತಾಪಮಾಡಿ wild and ludicrous ಎಂದು ಹೇಳಿದರು. Ministers' Salaries Act ನಲ್ಲಿ ಮಂತ್ರಿಗಳಿಗೆ ಮತ್ತು ಮಂತ್ರಿಗಳ ಮನೆಯವರಿಗೆ free medical services ಗೆಂದು ತಾವೇ ಹಣವನ್ನು ಒದಗಿಸಿದಿರಿ. ಅದಕ್ಕೆ ಒದಗಿಸಿರುವುದು ಕೇವಲ 10,000 ರೂಪಾಯಿಗಳು. ಇಲ್ಲಿರುವುದು 6 ಜನ ಮಂತ್ರಿಗಳು; ಒಬ್ಬೊಬ್ಬರ ಮನೆಯಲ್ಲೂ 8-10 ಜನರಿದ್ದಾರೆಂದಿಟ್ಟುಕೊಳ್ಳಬಹುದು. ಚನ್ನಯ್ಯನವರ ಮನೆಯಲ್ಲಿ ಮಾತ್ರ ಸ್ವಲ್ಪ ಜನ ಜಾಸ್ತಿ ಇದ್ದಾರೆ. ಆದ್ದರಿಂದ ಇವರೆಲ್ಲರಿಗೂ ಹಂಚಿಬಿಟ್ಟರೆ ತಲೆಗೆ ತಿಂಗಳೊಂದಕ್ಕೆ 20-25 ರೂಪಾಯಿಗಳು ಮಾತ್ರ ಆಗುತ್ತದೆ, ಅಷ್ಟೆ. ಇದೇ ಶಾಸನಸಭೆಯಲ್ಲಿ ಈ Ministers' Salaries Act ಬಂದಾಗ ನಾನೇ ಇದು ಬೇಡವೆಂದು ಹೇಳಿದೆ. ನಾವೇನೂ ಬೇಕೇಬೇಕು ಎಂದು ಸಮರ್ಥನೆ ಮಾಡಿದ್ದರೆ ಆಗ ನಮ್ಮದು ತಪ್ಪು ಎಂದು ಹೇಳಬೇಕು.

ಹಾಗೆಯೇ Sumptuary Allowance. ಶ್ರೀಮಾನ್ ಭೀಮಪ್ಪನಾಯಕರೇ ಇದರ ವಿಷಯ ಹೇಳಲಿ. ಅವರೇ ಸಾಕ್ಷಿ. ಇಷ್ಟು ಕೊಡಿ ಎಂದು ನಾನು ಪ್ರಸ್ತಾಪ ಕೂಡ ಮಾಡಲಿಲ್ಲ. ಪಾರ್ಟಿಯಲ್ಲೂ ಕೂಡ

(ಶ್ರೀ ಕೆ. ಹನುಮಂತಯ್ಯ.)

ಕೇಳಲಿಲ್ಲ. ಅವರಾಗಿ ಅವರೇ ಮಾಡಿದ್ದು. ಒಂದು ದಿವಸವೂ ಕೂಡ ನನಗೆ Sumptuary Allowance ನ್ನು ಇಷ್ಟುಕೊಡಿ, ಅಷ್ಟುಕೊಡಿ ಎಂದು ಕೇಳಲಿಲ್ಲ. ಮೊದಲು 2,500 ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿತ್ತು. ಇದನ್ನು 5,000 ಮಾಡಿ, 6,000 ಮಾಡಿ ಎಂದು ಇವರೇ ಹೇಳಿ ಮಾಡಿದರು. ಯಾವ ಶಾಸನಸಭೆಯಲ್ಲಿ ಸರ್ವ ಸಮ್ಮತವಾಗಿ ಒಪ್ಪಿರುವ ವಿಚಾರದಲ್ಲಿ wild and ludicrous ಎಂದು ಪ್ರಸ್ತಾಪಮಾಡುತ್ತಾರೆ ? ಅದರ ಸೂಕ್ತಾಸೂಕ್ತತೆಯನ್ನು ಅವರೇ ಯೋಚನೆ ಮಾಡಿಕೊಳ್ಳಲಿ.

ಶ್ರೀ ಟಿ. ಮರಿಯಪ್ಪ.—ಬಡ್ಜೆಟ್ ಪ್ರಪೋಸಲ್‌ಗಳನ್ನು ಸಭೆಯ ಮುಂದಿಟ್ಟಾಗ ಅವುಗಳನ್ನು ಟೀಕೆ ಮಾಡುವುದು, ಸಲಹೆಗಳನ್ನು ಕೊಡುವುದು ಸೂಕ್ತ.

ಶ್ರೀ ಕೆ. ಹನುಮಂತಯ್ಯ.—ಈ ಎರಡು ಪ್ರಶ್ನೆಗಳಿಗೂ ಕೂಡ ನಾನು ಉತ್ತರ ಕೊಡುತ್ತಿರಲಿಲ್ಲ. ಆದರೆ ಸಾರ್ವಜನಿಕವಾಗಿ ಮಂತ್ರಿಮಂಡಳದ ಮೇಲೆ ಹಣಕಾಸಿನ ವಿಷಯದಲ್ಲಿ ಒಂದು ಆರೋಪಣೆ ಬಂದಾಗ ಅದಕ್ಕೆ ಉತ್ತರ ಕೊಡುವುದು ನನ್ನ ಧರ್ಮ. ಏಕೆಂದರೆ ಅದಕ್ಕೆ ಉತ್ತರಕೊಡದೆ ಇದ್ದರೆ ಏನೋ ಅನ್ಯಾಯ ಆಗಿದೆಯೆಂದು ನಮ್ಮ ಮೇಲೆ ಆರೋಪಣೆ ಬರುತ್ತದೆ. ಆದ್ದರಿಂದ ಆ ರೀತಿಯ ಆರೋಪಣೆಗೆ ಅವಕಾಶವಿಲ್ಲವೆಂದು ಹೇಳಿದರೆ ತಾವು ಇದನ್ನು ಮನ್ನಿಸುತ್ತೀರೆಂದು ತಿಳಿದುಕೊಂಡಿದ್ದೇನೆ.

ಶ್ರೀಮಾನ್ ರಾಮರಾಯರು ಮತ್ತು ಇತರರು ಜ್ಯುಡಿಷಿಯರಿಗೂ ಎಗ್ಸಿಕ್ಯೂಟಿವ್‌ಗೂ ಭಿನ್ನಾಭಿಪ್ರಾಯ ಬಂದಿದೆ, ಅದರಿಂದ ದೇಶಕ್ಕೆ ಅನಾಹುತವಾಗುತ್ತಿದೆ ಎಂದು ಪ್ರಸ್ತಾಪ ಮಾಡಿದರು. I expect Sri Rama Rao who is a very sincere friend of mine to be charitable to me.

ಶ್ರೀ ಎಂ. ವಿ. ರಾಮರಾವ್ (ತುಮಕೂರು).—ನಾನು ಅನಾಹುತವಾಗುತ್ತಿದೆಯೆಂದು ಹೇಳಲಿಲ್ಲ. ನಾನು ಏನು ಹೇಳಿದ್ದೇನೆ ಎಂಬುದನ್ನು ಓದಿನೋಡಿ ಜವಾಬುಕೊಟ್ಟರೆ ಒಳ್ಳೆಯದು. ನಾನು ಹೇಳಿದ್ದು ಚೀಫ್ ಜಸ್ಟಿಸ್ ಏನು ಹೇಳಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿತ್ತೋ ಅದು. ಅದನ್ನು ನೋಡದೆ ನಾನು 'ಅನಾಹುತವಾಗುತ್ತದೆಂದು' ಹೇಳಿದ್ದೇನೆಂದು ಹೇಳುತ್ತಿದ್ದೀರಿ... ..

ಶ್ರೀ ಕೆ. ಹನುಮಂತಯ್ಯ.—ನೀವು ಅದನ್ನು ಹೇಳಿದಿರಿ ಎಂದು ನಾನು ಹೇಳಲಿಲ್ಲ. ಇಮಾಂರವರು ಈ ವಿಷಯದಲ್ಲಿ ಭಾಷಣ ಮಾಡಿದರು. ನಾನು ಒಟ್ಟಿನಲ್ಲಿ ಉತ್ತರ ಹೇಳುತ್ತಿದ್ದೇನೆ. ಈ ವಿಷಯದಲ್ಲಿ ಮುಖ್ಯವಾಗಿ ತಾವುಗಳು ಯಾರದು ಹೆಚ್ಚಾಗಿ ತಪ್ಪಾಗಿದೆಯೆಂಬುದನ್ನು ಪರಿಶೀಲನೆಮಾಡಿ ತೀರ್ಮಾನಕ್ಕೆ ಬರತಕ್ಕಂಥಾದ್ದು ಅವಶ್ಯಕ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಇದೆಲ್ಲಾ ಇಲ್ಲಿ ಅಸೆಂಬ್ಲಿಯಲ್ಲಿ ತೀರ್ಮಾನ ಮಾಡುವುದು ಬೇಡ. ಇದೆಲ್ಲಾ ಸರಿಹೋಗಬೇಕೆಂದು ಅವರು ಹೇಳಿದರೇ ಹೊರತು, ಇದನ್ನು ಬೆಳೆಸಿಕೊಂಡು ಹೋಗಬಾರದೆಂದು ಹೇಳಿದರೇ ಹೊರತು, ಇನ್ನೇನೂ ಅಲ್ಲ. ಇಲ್ಲಿ ಉತ್ತರ ಕೊಡುವುದು ಬೇಡ ಎಂದು ಹೇಳುತ್ತೇನೆ.

12-30 P.M.

ಶ್ರೀ ಕೆ. ಹನುಮಂತಯ್ಯ.—ಯಾವ fight ಆಗಲಿ there must be fairness. ಈ ದಿವಸ ತಾವು ನನನ್ನು ನೂರಾರು ಪ್ರಶ್ನೆಗಳನ್ನು ಕೇಳುತ್ತಿದ್ದೀರಿ. ಜುಡಿಷಿಯರಿನಲ್ಲಿ ಇಂಟರ್‌ಫಿಯರ್ ಮಾಡಿದ್ದೀರಾ ಎಂದು ಕೇಳುತ್ತಿದ್ದೀರಿ. ಅದೇ ತರಹ ಚೀಫ್ ಜಸ್ಟೀಸ್‌ರವರನ್ನು ಕೇಳುವುದಕ್ಕೆ ನಮಗಾರಿಗೂ ಅಧಿಕಾರವಿಲ್ಲ. ಅವರು ಸರಿಯಾಗಿ ನಡೆದರೂ ಅಥವಾ ತಪ್ಪಾಗಿ ನಡೆದರೂ, ಅದನ್ನು ವಿಮರ್ಶೆಮಾಡುವುದಕ್ಕೆ, ಶ್ರೀ ಭೀಮಪ್ಪನಾಯಕರು ಹೇಳಿದಹಾಗೆ, ನಮಗೆ ಅವಕಾಶವೂ ಇಲ್ಲ ಮತ್ತು ಅಧಿಕಾರವೂ ಇಲ್ಲ. ಒಂದು ವೇಳೆ ಅಧಿಕಾರ ಚಲಾಯಿಸಬೇಕಾದರೂ ಕೊನೆಯ ಮಾರ್ಗ ಪಾರ್ಲಿಮೆಂಟಿನ ಕೈಲಿದೆ. ತಾವು ಪ್ರಶ್ನೆಗಳನ್ನು ಹಾಕಿ ಜವಾಬನ್ನು ಪಡೆಯುವಾಗ ಒಂದು ಮೋಟಿವ್ ಇಂಪ್ಯೂಟ್ ಮಾಡತಕ್ಕಂಥ ಕಾರ್ಯಕ್ಕೆ ಕೈಹಾಕುವ ಮೊದಲು ಬಹಳ ಜನರನ್ನು ವಿಚಾರಿಸಿ, ಸಂಬಂಧಪಟ್ಟವರನ್ನೂ ವಿಚಾರಿಸಿ, ಯಾವುದು ಸರಿ ಏನು ನಡೆದಿದೆ ಎಂಬುದನ್ನು ತಿಳಿದುಕೊಂಡು ಇಲ್ಲಿ ಪ್ರಶ್ನೆ ಕೇಳುವುದು ಉತ್ತಮವೆಂದು ನನ್ನ ಪ್ರಾರ್ಥನೆ. ಅಷ್ಟೇ ಅಲ್ಲದೆ ಯಾರೋ ಒಬ್ಬರು ಬಂದು ಹೇಳಿದ್ದನ್ನೇ ಅದೇ ನಿಜವೆಂದು ತೀರ್ಮಾನಕ್ಕೆ ಬರುವುದು ಸರಿಯಲ್ಲ. ಈ ದಿವಸ ನನಗೆ ಗೊತ್ತಿರುವ ಹಾಗೆ ಅನೇಕ ವಿಷಯಗಳಿವೆ. ಇಂಡಿಯಾದ ಚೀಫ್ ಜಸ್ಟೀಸ್‌ರವರಾದ ಮಹಾಜನ್‌ರವರು ಹೇಳಿರತಕ್ಕ ವಿಷಯಗಳ ಬಗ್ಗೆ ನಾನೂ ಸಹಾ ಹೇಳಬಲ್ಲೆ. ಆದರೆ ಶ್ರೀ ಭೀಮಪ್ಪ ನಾಯಕರು ಹೇಳಿದಂತೆ, ಈ ಸಭೆಯಲ್ಲಿ ಆ ಬಗ್ಗೆ ಏನೊಂದು ತೀರ್ಮಾನವನ್ನೂ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದಿರುವುದರಿಂದ ಅದನ್ನು ನಾನೀಗ ಹೇಳಿ ಏನು ಪ್ರಯೋಜನ ? ಇಷ್ಟುಮಾತ್ರ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅದನ್ನು ನೀವು ನನ್ನ ನಡವಳಿಕೆಯ ವಿಚಾರದಲ್ಲಿ ನಾನು ನಿಮ್ಮಲ್ಲಿ ಎಷ್ಟರಮಟ್ಟಿಗೆ ನಂಬಿಕೆಯನ್ನು ಉಂಟುಮಾಡಿದ್ದೇನೆಯೋ ಅಷ್ಟರಮಟ್ಟಿಗೆ ನಂಬುತ್ತೀರಿ ; ಅದಕ್ಕಿಂತ ಹೆಚ್ಚಿಗೆ ನಂಬುವುದಕ್ಕಾಗುವುದಿಲ್ಲ. ಜುಡಿಷಿಯಲ್ ವಿಚಾರದಲ್ಲಿ ನಾನು ಯಾವಾಗಲೂ ಪ್ರವೇಶಮಾಡಿದವನೇ ಅಲ್ಲ. ಮಾಡಬೇಕೆಂಬ ಉದ್ದೇಶ ಕೂಡ ನನಗಿಲ್ಲ. ನಾನೂ ಕೂಡ ಲಾಯರ್ ಆಗಿ ಕೆಲಸ ಮಾಡಿದ್ದೇನೆ. ಕೆಲವು ಸಂದರ್ಭಗಳಲ್ಲಿ ಬಂದಂಥ ಕೆಲವು ಸುಳ್ಳು ಕೇಸುಗಳನ್ನೂ ಸಹ ಕೈಬಿಟ್ಟಿದ್ದೇನೆ. ಆಗಲೂ ಸಹ ನಾನು ಕೆಲವು ತತ್ವಗಳನ್ನು ಪ್ರತಿಪಾದಿಸಿಕೊಂಡು ಬಂದಿರತಕ್ಕಂಥವನು. ಈ ದಿವಸ ನನ್ನ ಮೇಲೆ ಮತ್ತು ನನ್ನ ಮಂತ್ರಿಮಂಡಲದಮೇಲೆ, ಜುಡಿಷಿಯರಿಯಲ್ಲಿ ಪ್ರವೇಶಮಾಡಿದ್ದೇವೆಂದು ಆರೋಪಣೆಗಳು ಬಂದಿವೆ. ಅದಕ್ಕೆ ನಾನು ಉತ್ತರ ಹೇಳಿದರೂ ಇಲ್ಲಿ ಚೀಫ್ ಜಸ್ಟೀಸ್‌ರವರು ಉತ್ತರ ಕೊಡಲು ಅವಕಾಶ ಇಲ್ಲದಿರುವುದರಿಂದ ನಾನು ಹಾಗೆ ಹೇಳಬಾರದು. There must be fairness. ಈಗ ಭಿನ್ನಾಭಿಪ್ರಾಯ ಬಂದರತಕ್ಕಂಥಾದ್ದು ಕಾನ್‌ಸ್ಟಿಟ್ಯೂಷನ್ನನ್ನು ಇಂಟರ್‌ಪ್ರಿಟ್ ಮಾಡುವ ವಿಚಾರದಲ್ಲಿ. ಜುಡಿಷಿಯರಿಗೆ ರೆಕ್ರೂಟ್‌ಮೆಂಟ್ ಮಾಡಲು ಕಾನ್‌ಸ್ಟಿಟ್ಯೂಷನ್ ಏನನ್ನು ಹೇಳುತ್ತದೆಯೋ ಅದರ ಪ್ರಕಾರ ರೂಲ್ಸು ಮಾಡಿ ಎಂದು ಹೇಳುತ್ತಿದ್ದೇವೆ ; ಆದರೆ ಅವರೊಂದು ಲಿಸ್ಟು ತಯಾರುಮಾಡಿ, ಹಿಂದಿನ ಸಂಪ್ರದಾಯಕ್ಕನುಸಾರವಾಗಿ ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಇದು constitutional interpretation, ನಮಗೆ ಇದರ ಬಗ್ಗೆ ಯಾವ ದುರುದ್ದೇಶವೂ ಇಲ್ಲ. ನಮಗೆ ಯಾವ ಒಂದು ಕೋರ್ಟಿನ ಪ್ರತಿಷ್ಠೆಯನ್ನಾಗಲಿ, ಅಥವಾ ಅದರ ಪ್ರಖ್ಯಾತಿಯನ್ನಾಗಲಿ ತೇಜೋಭಂಗ ಮಾಡಬೇಕೆಂಬ ಉದ್ದೇಶವೂ ಇಲ್ಲ. ಸೆಷನ್ಸ್ ಕೋರ್ಟು ಕೊಟ್ಟ ತೀರ್ಮಾನವನ್ನು ಹೈಕೋರ್ಟಿನವರು ಬದಲಾಯಿಸಬಹುದು. ಒಬ್ಬ ಮುನ್‌ಸೀಫರು ಕೊಟ್ಟ ತೀರ್ಮಾನವನ್ನು ಸೆಷನ್ಸ್ ಜಡ್ಜರು ಬದಲಾಯಿಸ

ಬಹುದು. ಇದೆಲ್ಲಾ ಲಾ ಮತ್ತು ಎವಿಡೆನ್ಸಿನ ಮೇಲೆ ಹೋಗುವುದರಿಂದ ಅವರಾರಿಗೂ ಇದರ ಬಗ್ಗೆ ಒಂದು ಮಾರಾಮಾರಿ ಅಥವಾ ವೈಮನಸ್ಯವುಂಟಾಗುವುದಿಲ್ಲ. ಆದುದರಿಂದ ಕೆಲವು constitutional aspects ಮೇಲೆ ಭಿನ್ನಾಭಿಪ್ರಾಯ ಸರ್ಕಾರಕ್ಕೂ ಚೀಫ್ ಜಸ್ಟೀಸ್ ರವರಿಗೂ ಬಂದರೆ ಅದನ್ನೇ ಪೆಡಂಭೂತಮಾಡಿ ಮಂತ್ರಿ ಮಂಡಲದವರು ಏನೋ ಅನ್ಯಾಯ ಮಾಡುತ್ತಿದ್ದಾರೆಂದು ಹೇಳಿ ಪ್ರಚಾರವನ್ನು ಒಳಗಾಗಲಿ ಹೊರಗಾಗಲಿ ಮಾಡಿದರೆ ಅದು ಅನ್ಯಾಯಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ. ಇದರ ಜೊತೆಗೆ ಈ ಮಾನ್ಯ ಸಭೆಯಲ್ಲಿರತಕ್ಕಂಥ ಮಾನ್ಯ ಸದಸ್ಯರು ಒಂದು ಸೌಮನಸ್ಯದ ವಾತಾವರಣ ಏರುವಂತೆ ಮಾಡಲು ನಮಗೆ ಸಹಾಯ ಮಾಡಲಿ ಎಂದು ಅವರನ್ನು ಪ್ರಾರ್ಥಿಸುತ್ತೇನೆ. ಇದಕ್ಕಿಂತಲೂ ಹೆಚ್ಚಿಗೆ ನಾನು ಏನನ್ನೂ ಹೇಳಲಾರೆ.

ಅನಂತರ ಕೊನೆಯದಾಗಿ ಬಹಳ delicate ಆದಂಥ ಒಂದು ಪ್ರಶ್ನೆ ಎಂದರೆ ಹರಿಜನೋದ್ಧಾರದ ಪ್ರಶ್ನೆಯನ್ನು ಪ್ರಸ್ತಾಪಿಸುತ್ತೇನೆ. ಶ್ರೀ ಪ್ರಭಾಕರ್ ಅವರು ಅದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಹರಿಜನೋದ್ಧಾರದ ವಿಚಾರದಲ್ಲಿ ಕೆಲಸ ಮಾಡುವಂತಹವರು ನಾವೇ ಅಲ್ಲ, ಅಥವಾ ಈಗಿನ ಕಾಲದವರೇ ಅಲ್ಲ; ಈಗ್ಗೆ ಸುಮಾರು 20—25 ವರ್ಷಗಳಿಂದಲೂ ಕೂಡ ಅನೇಕ ಮಹನೀಯರು ಈ ವಿಚಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗಿರುವ ದಕ್ಕಿಂತಲೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಅವಕಾಶವಾಗಿಲ್ಲವೆಂದರೆ ಅದು ಹಿಂದೂ ಸಮಾಜದ ಒಂದು ದೌರ್ಭಾಗ್ಯ. ಅದರಲ್ಲಿ ಈಗಿನ ಕಾಲಕ್ಕೆ ಅನ್ವಯಿಸದೆ ಇರತಕ್ಕಂಥ ಕಟ್ಟುಪಾಡುಗಳೇ ಇದಕ್ಕೆ ಕಾರಣ. ಹಾಗಿದ್ದರೂ ಕೂಡ ಬಹುಮಟ್ಟಿಗೆ ಈ ಹರಿಜನೋದ್ಧಾರ ಕಾರ್ಯದಲ್ಲಿ ಮತ್ತು ಈ ಅಸ್ಪೃಶ್ಯತಾ ನಿವಾರಣಾ ಕಾರ್ಯದಲ್ಲಿ ನಾವು ಮುಂದೆ ಸಾಗಿದ್ದೇವೆ. ಇನ್ನೂ ಬಹಳ ಮುಂದೆ ಸಾಗಬೇಕು. ನಾನು ಮೊನ್ನೆ ಉಡುಪಿಗೆ ಹೋಗಿದ್ದೆ. ಅಲ್ಲಿ ಹರಿಜನರಲ್ಲಿ ಸೇರಿದ್ದಂಥಾ ಕನಕದಾಸರನ್ನು ದೇವಸ್ಥಾನದೊಳಕ್ಕೆ ಬಿಡುತ್ತಿರಲ್ಲಿಲ್ಲವಂತೆ ...

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಹೊಸಕೋಟೆ—ಆನೇಕಲ್).—ಕನಕದಾಸರು ಹರಿಜನರಲ್ಲ. ಅವರು ಕುರುಬರ ಮತಕ್ಕೆ ಸೇರಿದವರು.

ಶ್ರೀ ಕೆ. ಹನುಮಂತಯ್ಯ.—ತಾವು ಅವರನ್ನು ಕುರುಬರು ಎಂದು ಹೇಳಿದರೆ ಅದನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಕುರುಬರನ್ನು ಮೊದಲಿಂದಲೂ ದೇವಸ್ಥಾನಗಳಿಗೆ ಬಿಡುತ್ತಲೇ ಬಂದಿದ್ದಾರೆ. ಆದರೆ ಹಾಗೆ ಕನಕದಾಸರನ್ನು ದೇವಸ್ಥಾನಕ್ಕೆ ಬಿಡದೆ ಇದ್ದುದರಿಂದ ಅವರು ಅಸ್ಪೃಶ್ಯರಲ್ಲೊಬ್ಬರಾಗಿರಲೇಬೇಕು. ಹಾಗೆ ಅವರನ್ನು ದೇವಸ್ಥಾನದೊಳಕ್ಕೆ ಬಿಡದೆ ಇದ್ದುದರಿಂದ ಅವರು ತಮ್ಮ ಭಕ್ತಿಯಿಂದ ದೇವರನ್ನೇ ತಮ್ಮ ಕಡೆಗೆ ತಿರುಗಿಸಿಕೊಂಡರು. ಅಷ್ಟು ಭಕ್ತಿ ಅವರಲ್ಲಿದ್ದರೂ ಕೂಡ ಹಿಂದೂ ಸಮಾಜದವರು ಒಂದು ಕಿಂಡಿಮಾಡಿ ಅವರನ್ನು ಅಲ್ಲಿಗೇ ನಿಲ್ಲಿಸಿಬಿಟ್ಟರು. ಹೀಗೆಯೇ ನಂದನಾರ್ ಕಥೆಯೂ ಇರುತ್ತದೆ. ಈ ರೀತಿಯಾಗಿ ಹಿಂದೂ ಸಮಾಜದ ಬುದ್ಧಿವಂತಿಕೆಯನ್ನು ತೋರಿಸುತ್ತಿದೆ. ಹಿಂದೂ ಸಮಾಜದ ಕಟ್ಟುಪಾಡುಗಳನ್ನು ಅನೂಚಾನವಾಗಿ ಕಾಪಾಡಿಕೊಂಡು ಬರತಕ್ಕಂಥ ಒಂದು ಮೊಂಡುತನವನ್ನೂ ಸಹ ತೋರಿಸುತ್ತದೆ. ಒಂದು ರೂಪಾಯಿ ನಷ್ಟವಾಗುವಂಥ ಸಂದರ್ಭವಿದ್ದರೆ ಅದರಲ್ಲಿ 2 ಆಣೆ ಕೊಟ್ಟು ಇನ್ನು 14 ಆಣೆಗಳನ್ನು ಜೇಬಿನಲ್ಲಿಟ್ಟುಕೊಳ್ಳುವಂಥ ತತ್ವ ಇದರಲ್ಲಿ ಎದ್ದು ಕಾಣುತ್ತದೆ. ಮೇಲುಕೋಟೆಯಲ್ಲೂ ಸಹ ಇದೇ ರೀತಿ ರಾಮಾನುಜಾಚಾರ್ಯರು ಎಲ್ಲ ಮತದವರೂ ಒಂದೇ ಎಂದು ಹೇಳಿದ್ದಾಗ್ಯೂ ಅಲ್ಲಿ ಒಂದು ದಿವಸ ಮಾತ್ರ ಎಲ್ಲರನ್ನೂ ಆ ದೇವಸ್ಥಾನದೊಳಗೆ ಬಿಟ್ಟು ಉಳಿದ ದಿವಸಗಳಲ್ಲಿ ಬಾಗಿಲಿಗೆ ಬೀಗ ಹಾಕುತ್ತಾರೆ. ಹೀಗೆ ಶಂಕರಾಚಾರ್ಯರೂ ಸಹ ಹೇಳಿದ್ದಾರೆ. ಕಾಶಿಯಲ್ಲಿ ಪಾರ್ವತಿ ಪರಮೇಶ್ವರರ ಪ್ರತಿಮೆಗಳನ್ನು ಹರಿಜನರ ರೂಪದಲ್ಲಿ ಮಾಡಿಟ್ಟಿದ್ದಾರೆ. ಆದರೆ ಶಂಕರಾಚಾರ್ಯರ ಈ ತತ್ವಗಳನ್ನು ಆಚರಿಸುತ್ತಿರುವ ಜನರು ಹರಿಜನರನ್ನು ದೇವಾಲಯಗಳಿಗೆ ಬಿಡುತ್ತಿಲ್ಲ. ಶೃಂಗೇರಿಯ ಜಹಗೀರನ್ನು ವಜಾಮಾಡಲು ಇದೇ ಕಾರಣ. ಶಂಕರಾಚಾರ್ಯರ ತತ್ವಗಳನ್ನು ಪಾಲಿಸುವುದಕ್ಕೆ ಸಾಧ್ಯವಿಲ್ಲದವರು ಆ ಶಂಕರಾಚಾರ್ಯರ ಭಕ್ತರೆಂದು ಹೇಳಿಕೊಳ್ಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ?

ಈ ರೀತಿ ಹಿಂದೂ ಸಮಾಜದಲ್ಲಿರತಕ್ಕ ಕಟ್ಟುಪಾಡುಗಳು, ಹಳೇ ಮನೋವೃತ್ತಿ ಬಹಳವಾಗಿ ಬೇರು ಬಿಟ್ಟುಕೊಂಡಿದೆ. ಕನಕದಾಸರು, ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಹಾತ್ಮಗಾಂಧಿ, ಇವರುಗಳೇ ನಿರ್ಮೂಲವಾಗಿ ಕಿತ್ತುಹಾಕುವುದಕ್ಕೆ ಸಾಧ್ಯವಾಗದೇ ಇದ್ದ ಆ ಬೇರನ್ನು ನಾವು ಕ್ಷಣಮಾತ್ರದಲ್ಲಿ ನಿರ್ಮೂಲ ಮಾಡುವುದಕ್ಕೆ ಪ್ರಯತ್ನ ಮಾಡುವುದು ಸಾಧ್ಯವೇ ಇಲ್ಲ. ಆ ರೀತಿ ಪ್ರಯತ್ನಪಡುವುದನ್ನು ನಿರೀಕ್ಷಿಸಿ ನಿರಾಶೆಯಿಂದ ನಮ್ಮ ಮೇಲೆ ಕೋಪ ಮಾಡಿಕೊಂಡು ಮಾತನಾಡಬೇಕಾದ ಪ್ರಮೇಯ ಇಲ್ಲ. ಏನು ಕೆಲಸ ಕಾರ್ಯಗಳನ್ನು ಮಾಡಬೇಕೋ ಅವನ್ನು ಮಾಡೋಣ. ಒಳ್ಳೆಯ ಕೆಲಸ ಮಾಡಿದ್ದರೆ ಮಾಡಿದೆ ಎಂದು ಹೇಳಿ; ಏನೇನು ಕೆಲಸ ಮಾಡಿಲ್ಲವೋ ಅದನ್ನು ಮಾಡಲಿಲ್ಲ ಎಂದು ಹೇಳಿ, ಇನ್ನೂ ಇಂಥಿಂಥ ಕೆಲಸಗಳನ್ನು ಮಾಡಬೇಕು ಎಂದು ಹೇಳಿ. ಆ ರೀತಿ ಮಾಡುವುದಕ್ಕೆ ಬದಲಾಗಿ ಪ್ರತಿಯೊಂದು ವಿಷಯದಲ್ಲೂ ಕೂಡ 'ಹರಿಜನರಿಗೆ ಏನೂ ಮಾಡಿಲ್ಲ, ಎಲ್ಲಾ ಅನ್ಯಾಯವಾಗಿದೆ, ಯಾವ ಕೆಲಸವೂ ಮಾಡಿಲ್ಲ' ಎಂಬ ಧೋರಣೆಯಿಂದ ಮಾತನಾಡಿದರೆ ನಮ್ಮ ಮನಸ್ಸು ಬಹಳ ನೋಯುತ್ತದೆ ಎಂಬುದನ್ನು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದನ್ನು ಹೇಳಬೇಕಾದ್ದಿಲ್ಲ. ಆದರೂ ಕೂಡ ಹೇಳುತ್ತೇನೆ. ಹರಿಜನರ ಪ್ರತಿನಿಧಿಗಳು ಬರೀ ಹರಿಜನರ ಪ್ರತಿನಿಧಿಗಳಲ್ಲ; ಇಡೀ ದೇಶದ ಪ್ರತಿನಿಧಿಗಳು. ಅದೇ ರೀತಿ ಸವರ್ಣರೂ ಕೂಡ ಸವರ್ಣರಿಗೆ ಮಾತ್ರ ನಾಯಕರಲ್ಲ; ಹರಿಜನರಿಗೂ ಕೂಡನಾಯಕರು. ಈ ರೀತಿ ಏಕದೇಹನ್ಯಾಯದಂತೆ; ಎಡಗೈ, ಬಲಗೈ, ಎಡಗಾಲು, ಬಲಗಾಲು ಎಂಬ ಪ್ರಶ್ನೆಯಿಲ್ಲ. ಸವರ್ಣನಾಗಿರಲಿ, ಹರಿಜನರಾಗಿರಲಿ ಎಲ್ಲರೂ ಒಂದೇ ಆಗಿರುವಾಗ ಮಾತಿನಲ್ಲಿ ಮನ ನೋಯಿಸತಕ್ಕ ಕೆಲಸದಿಂದ ಏನೂ ಸಾಧ್ಯವಾಗುವುದಿಲ್ಲ. ಇದರಲ್ಲಿ ಯಾರದು ತಪ್ಪು ಎಂಬ ವಿಮರ್ಶೆ ಕೂಡ ನಾವು ಮಾಡಬೇಕಾಗಿಲ್ಲ. ಈ ಹರಿಜನರ ಪ್ರಶ್ನೆಯನ್ನು ನಾವು ಪ್ರಸ್ತಾಪ ಮಾಡುವಾಗ ಸುಮಧುರವಾದ ವಾತಾವರಣದ ಕಲ್ಪನೆಯನ್ನು ಸಾಧ್ಯವಾದಷ್ಟೂ ಮಾಡಿಕೊಳ್ಳೋಣ ಎಂಬುದು ನನ್ನ ಪ್ರಾರ್ಥನೆ.

ಈಗಾಗಲೇ 15 ನಿಮಿಷ ಹೆಚ್ಚು ಆಗಿದೆ. ನಾನು ಮೊದಲು ಹೇಳಿದ ಹಾಗೆ ಇನ್ಷ್ಯೂರೆನ್ಸ್ ಡಿಪಾರ್ಟ್‌ಮೆಂಟಿನ ವಿಚಾರ ಮತ್ತು ಇನ್ನೂ ಅನೇಕ ವಿಷಯಗಳ ಪ್ರಸ್ತಾಪ ಮಾಡಬೇಕಾಗಿತ್ತು. ಪ್ರಸ್ತಾಪ ಮಾಡುವುದಕ್ಕೆ ಇನ್ನು ಕಾಲಾವಕಾಶವಿದೆ. ಕಟ್ ಮೋಷನ್ಸ್ ಮತ್ತು ಟ್ಯಾಕ್ಸೇಷನ್ ಬಿಲ್ಸ್ ಬರುತ್ತವೆ; ಆಗ್ಗೆ ಪ್ರಸ್ತಾಪ ಮಾಡೋಣ. ಆ ದಿವಸ ಟ್ಯಾಕ್ಸೇಷನ್

(ಶ್ರೀ ಕೆ. ಹನುಮಂತಯ್ಯ.)

ಮೆಷರ್ಸ್ ಬಂದಾಗ ತಾವುಗಳು (ವಿರೋಧಪಕ್ಷವನ್ನು ಉದ್ದೇಶಿಸಿ) ವಾಕ್ ಔಟ್ ಮಾಡಬೇಡಿ. ಪ್ರತಿಭಟಿಸಬೇಡಿ, ಅದನ್ನು ತಮಗೆ ಹೇಳುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಏನುಮಾಡಬೇಕು ಹೇಳಿ !

(ಸಭೆಯಲ್ಲಿ ನಗು !)

ಶ್ರೀ ಕೆ. ಹನುಮಂತಯ್ಯ.—ಹೇಳುತ್ತೇನೆ. ಸತ್ಯಾಗ್ರಹ ಮಾಡುತ್ತೇವೆ ಎಂಬ ಮಾತನ್ನು ತಾವು ಮನಸ್ಸಿಗೆ ತೆಗೆದುಕೊಳ್ಳಬೇಡಿ. ಆ ವಿಚಾರದಲ್ಲಿ Opposition Leader ಆದ ತಾವು ಬಹಳ ಚೆನ್ನಾಗಿ ಹೇಳಿದ್ದೀರಿ. ಬಳ್ಳಾರಿಯವರು ಆಂಧ್ರದೊಡನೆ ಸೇರಲು ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳುತ್ತಾರೆ, ಆ ರೀತಿ ಮಾಡತಕ್ಕದ್ದು ಸೂಕ್ತವಲ್ಲ ಎಂಬ ಅಭಿಪ್ರಾಯವನ್ನು ತಾವು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದೀರಿ. ಯಾವ ಅಭಿಪ್ರಾಯವನ್ನು ತಾವು ಬಳ್ಳಾರಿಯ ವಿಷಯದಲ್ಲಿ ಹೇಳಿದ್ದೀರೋ ಅದೇ ಅಭಿಪ್ರಾಯ ಮೈಸೂರಿನೊಳಗೆ ನಡೆಯತಕ್ಕ ವಿಷಯಗಳಿಗೂ ಅನ್ವಯವಾಗುತ್ತದೆ. ಈಗ ಪ್ರಜಾಪ್ರಭುತ್ವಕಾಲದ ಮನಸ್ಸನ್ನು ಒಲಿಸಿಕೊಂಡು, ಓಟು ಪಡೆದು ಸರ್ಕಾರಸ್ಥಾಪನೆ ಮಾಡತಕ್ಕ ಕಾಲ. ಅದಕೆ ಸಂಪೂರ್ಣವಾದ ಅವಕಾಶ ಕಲ್ಪಿಸಿಕೊಟ್ಟಿದೆ. ಹಿಂದೆ ರಾಜ್ಯ ಸಂಪಾದಿಸಬೇಕಾಗಿದ್ದರೆ ರಕ್ತ ಸುರಿಸಬೇಕಾಗಿತ್ತು. ಅನಂತರ ಬ್ರಿಟಿಷ್‌ನವರು ಬಂದ ಮೇಲೆ, ಪೌರ ಹಕ್ಕು ಬಾಧ್ಯತೆಗಳನ್ನು ಸ್ವಲ್ಪ ಕೊಟ್ಟಮೇಲೆ, ಪ್ರಚಾರಮಾಡಿ, ಸತ್ಯಾಗ್ರಹಗಳನ್ನು ಮಾಡಿ ಸರ್ಕಾರವನ್ನು ಬದಲಾವಣೆ ಮಾಡತಕ್ಕ ಒಂದು ಪೀರಿಯಡ್ ಬಂತು. ಆಗ ಗೌರ್ನರ್‌ಜನರಲ್ಲನ್ನಾಗಲಿ, ಎಕ್ಸಿಕ್ಯೂಟಿವ್ ಕೌನ್ಸಿಲನ್ನಾಗಲಿ ಓಟಿನಿಂದ ತೆಗೆಯುವುದಕ್ಕೆ ಅವಕಾಶವಿರಲಿಲ್ಲ. ಬರೀ ಭಾಷಣ ಮಾಡಬಹುದಾಗಿತ್ತು. ಅದಕೋಸ್ಕರ ಸತ್ಯಾಗ್ರಹ ಮಾಡಬೇಕೆಂದು ಮಹಾತ್ಮಾಗಾಂಧಿಯವರು ಸತ್ಯಾಗ್ರಹ ಅಸ್ತ್ರವನ್ನು ಹೂಡಿದರು. ಆ ಅಸ್ತ್ರವನ್ನು ಮಹಾತ್ಮಾಗಾಂಧಿಯವರು ಯಾವ ಉದ್ದೇಶದಿಂದ ಹೂಡಿದರೋ ಆ ಉದ್ದೇಶ ಫಲಿಸಿತು. ಆ ವಾತಾವರಣ ಕಲ್ಪನೆ ಆಗಿದೆ. ತಾವು ಪ್ರಯತ್ನಮಾಡಿ, ಸೇವೆ ಸಲ್ಲಿಸಿ, ಜನರನ್ನು ಒಪ್ಪಿಸಿ, ಓಟು ಪಡೆದು, ಸರ್ಕಾರ ಸ್ಥಾಪಿಸಿದರೆ ಅದನ್ನು ಎಲ್ಲರೂ ಸ್ವಾಗತಿಸುತ್ತಾರೆ. ಅದನ್ನು ಬಿಟ್ಟು ಸತ್ಯಾಗ್ರಹ ಹೂಡುತ್ತೇವೆ ಎಂಬ ಧೋರಣೆಯನ್ನು ಅನುಸರಿಸಿದರೆ ಈ ಪಾರ್ಟಿ ಸಿಸ್ಟಂ ಆಫ್ ಗವರ್ನ್‌ಮೆಂಟ್ ಎಂದು ಮೊದಲೇ ನಾನು ಏನು ಹೇಳಿದೆನೋ, ಆ ತಳಹದಿ ಮೇಲೆ ಯಾವ ಪ್ರಜಾಪ್ರಭುತ್ವ ಸ್ಥಾಪನೆ ಆಗಿದೆಯೋ ಅದಕ್ಕೆ ಧಕ್ಕೆ ಬರುತ್ತದೆ. ನಾಳೆಯ ದಿವಸ ನೀವೇ ಮಂತ್ರಿ ಮಂಡಲ ಸ್ಥಾಪನೆ ಮಾಡಿದಿರಿ ಎಂದಿಟ್ಟುಕೊಳ್ಳೋಣ; ಆಗ ಕಾಂಗ್ರೆಸ್ಸಿನವರು ಎಲ್ಲರೂ ಜೈಲಿಗೆ ಹೋಗಿ ಬಹಳ ದಿವಸ ಆಗಿದೆ, ಒಂದು ಅವಕಾಶ ಮಾಡಿಕೊಂಡು ಪುನಃ ಹೋಗೋಣ, ಎಂದು ಸತ್ಯಾಗ್ರಹ ಮಾಡಿದರೆ ನಿಮ್ಮ ಗತಿ ಏನು? ಪ್ರಜಾಪ್ರಭುತ್ವದಲ್ಲಿ ಇಂಗ್ಲೆಂಡಿನಲ್ಲಾಗಲಿ ಅಮೇರಿಕಾದಲ್ಲಿ ಆಗಲಿ, ಏನೇ ರಾಜಕೀಯ ವಿವಾದ ನಡೆಯಬೇಕಾದರೂ ಮಾತಿನ ಮುಖಾಂತರ ಓಟಿನ ಮುಖಾಂತರ. ಆ ರೀತಿ ನಡೆಯಬೇಕೇ ಹೊರತು ಉಗ್ರ ಕಾರ್ಯಕ್ರಮಗಳನ್ನು ನಡೆಸತಕ್ಕದ್ದು ಪ್ರಜಾಪ್ರಭುತ್ವ ತತ್ವಕ್ಕೂ ಸಂಪ್ರದಾಯಕ್ಕೂ ಅನುಗುಣವಾದದ್ದಲ್ಲ ಎಂಬ ಪ್ರಾರ್ಥನೆಯನ್ನು ತಮ್ಮಲ್ಲಿ ಮಾಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಇಂಗ್ಲೆಂಡು ಮತ್ತು ಅಮೇರಿಕಾ ದೇಶಗಳಲ್ಲಿ ಹಣವನ್ನು ನಿಮ್ಮ ಹಾಗೆಯೇ ಖರ್ಚು ಮಾಡುತ್ತಾರೆಯೇ, ಹೇಗೆ ಎಂಬುದನ್ನು ಹೇಳಿ.

ಶ್ರೀ ಕೆ. ಹನುಮಂತಯ್ಯ.—ನಮ್ಮ ಅನುಭವದಲ್ಲಿ ಇರುವುದನ್ನು ಹೇಳುತ್ತೇನೆ. ಅವರಷ್ಟು ದುಡ್ಡು ಕಾಸು ನಮ್ಮ ಜೇಬಿಗೆ ಬರದೇ ಇದ್ದರೂ ಕೂಡ, ಸಂಪ್ರದಾಯವನ್ನು ಪಾಲಿಸುವುದರಲ್ಲಿ, administrative level ನಲ್ಲಿ ಅವರಷ್ಟೇ ಇದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಬೇಕಾದರೆ ನೀವು ಹೋಗಿ ತಿಳಿದುಕೊಂಡು ಬನ್ನಿ.

ಕೊನೆಯದಾಗಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರಲ್ಲಿ ನನ್ನ ಪ್ರಾರ್ಥನೆ. ತೆರಿಗೆ ವಿಚಾರದಲ್ಲಿ ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳಿ ದೇಶದಲ್ಲಿ ಒಂದು ಆಂದೋಳನ ಮಾಡತಕ್ಕದ್ದು ಪ್ರಜಾಪ್ರಭುತ್ವ ಸಂಪ್ರದಾಯಕ್ಕೆ ಅನುಗುಣವಾದದ್ದಲ್ಲ, ಉತ್ತರೋತ್ತರ ಅದರಿಂದ ದೇಶದಲ್ಲಿ ಅಲ್ಲೋಲಕಲ್ಲೋಲ ಪರಿಸ್ಥಿತಿ ಬರುತ್ತದೆ. ಯಾವ ವಾದವನ್ನು ಮಾಡಬೇಕಾದರೂ ಶಾಸನ ಸಭೆ ಇದೆ. ಬಹಿರಂಗ ಸಭೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಸಾರ್ವತ್ರಿಕ ಚುನಾವಣೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಯಾವ ಕಾನೂನು ಬೇಕಾದರೂ ಮಾರ್ಪಾಡು ಮಾಡಿಕೊಳ್ಳಬಹುದು. ಆ ರಾಜಮಾರ್ಗವನ್ನು ತಾವು ಅನುಸರಿಸಬೇಕು ಎಂಬುದೇ ನನ್ನ ಪ್ರಾರ್ಥನೆ.

MR. DEPUTY SPEAKER.—The House will now rise and meet again at 4 P. M.

The House adjourned at Fifty Minutes past Twelve of the Clock and reassembled at Four of the Clock.

[MR. DEPUTY SPEAKER in the Chair.]

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಸ್ವಾಮಿ, ಸರ್ಕಾರದವರು ಮೂರು ಕೋಟಿ ಒಂಭತ್ತು ಲಕ್ಷ ರೂಪಾಯಿ ಇಳಿತಾಯವಿರುವ ಆಯವ್ಯಯದ ಪಟ್ಟಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಆಯವ್ಯಯದ ಪಟ್ಟಿಯಮೇಲೆ ಮಾತನಾಡುತ್ತಾ ಪ್ರತಿಪಕ್ಷದ ನಾಯಕರು, ಸರ್ಕಾರದವರು ಏನೂ ಕೆಲಸಮಾಡಿಲ್ಲವೆಂದು ಟೀಕಿಸಿದಾರೆ. ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಸರ್ಕಾರದವರು ಬಹುಮಟ್ಟಿಗೆ ಅನೇಕ ಒಳ್ಳೆಯ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಮೊದಲು ಬಡ್ಜೆಟ್ ಭಾಷಣಮಾಡುತ್ತಾ ಮುಖ್ಯ ಮಂತ್ರಿಗಳು ಬಳ್ಳಾರಿ ಮೈಸೂರಿಗೆ ಸೇರಿದುದರಿಂದ ಸುಮಾರು 41 ಲಕ್ಷ ರೂಪಾಯಿ ನಮ್ಮ ಆಯವ್ಯಯ ಪಟ್ಟಿಯಲ್ಲಿ ಇಳಿತಾಯ ಬಂದಿದೆ ಎಂದು ಹೇಳಿದರು. ಇದನ್ನು ಸರಿದೂಗಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಹಣಸಹಾಯ ಕೋರಬೇಕೆಂದು ಅನೇಕ ಸದಸ್ಯರು ಹೇಳಿದ್ದಾರೆ, ನನ್ನ ಅಭಿಪ್ರಾಯವೂ ಹಾಗೆಯೇ ಇದೆ. ಮೈಸೂರಿಗೆ ಸೇರಬೇಕೆಂದಿರುವ ಇನ್ನೂ ಕೆಲವು ಪ್ರದೇಶಗಳನ್ನೂ, ಪ್ರಾಂತಗಳನ್ನೂ, ಅವರಾಗಿ ಬರುತ್ತೇವೆಂದು ಹೇಳಿದರೆ ಅವರನ್ನು ಸ್ವಾಗತಿಸುವುದು ಧರ್ಮ, ದೇಶವಾತ್ಸಲ್ಯ ಮತ್ತು ಪ್ರೇಮವನ್ನು ತೋರಿಸಬೇಕೆಂದು ಹೇಳಿದ್ದಾರೆ. ನಾವೂ ಕೂಡ ಹಾಗೆಯೇ

ಹೇಳುತ್ತೇವೆ. ಆದರೆ ಅವರನ್ನು ಸೇರಿಸಿಕೊಳ್ಳಬೇಕಾದರೆ, ಅವರ ಕುಂದು ಕೊರತೆಗಳೇನು ಎಂಬುದನ್ನು ತಿಳಿದುಕೊಳ್ಳಬೇಕು. ಬಳ್ಳಾರಿ ಇಲ್ಲಿಗೆ ಸೇರುವಾಗ ಅಲ್ಲಿರುವ ಅನೇಕ ಯಂತ್ರೋಪಕರಣಗಳನ್ನೂ ಇತರ ಸಂಪತ್ತನ್ನೂ ಮದರಾಸು ಸರ್ಕಾರದವರು ಬೇರೆ ಕಡೆಗೆ ತೆಗೆದುಕೊಂಡು ಹೋದರು. ಈ ರೀತಿ ಆಗಬಾರದು. ಬೇರೆ ಪ್ರಾಂತಗಳನ್ನು ಸೇರಿಸಿಕೊಳ್ಳುವುದಕ್ಕೆ ಮುಂಚೆ ಅದರ ಅನುಕೂಲ ಅನಾನುಕೂಲಗಳನ್ನು ಯೋಚಿಸುವುದು ಉತ್ತಮ. ಹಾಗೆ ಮಾಡದೆ ಸುಮ್ಮನೆ ಸೇರಿಸಿಕೊಳ್ಳುತ್ತೇವೆಂದು ಹೇಳಿ ಸೇರಿಸಿಕೊಂಡು ಮುಂದೆ ಕೊರತೆಗೆ ಅವಕಾಶ ಕೊಡುವುದು ಸರಿಯಲ್ಲ. ಮೊದಲೇ ಯೋಚನೆ ಮಾಡುವುದು ಒಳ್ಳೆಯದು.

ವಿದ್ಯುಚ್ಛಕ್ತಿಯ ದರ ಮದರಾಸಿನಲ್ಲಿ ಯೂನಿಟ್ಟಿಗೆ $1\frac{1}{2}$ ಆಣೆಯಿದೆ, ಆದರೆ ಇಲ್ಲಿ ಒಂಭತ್ತು ಕಾಸಿದೆ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಬಳ್ಳಾರಿ ಈ ಸ್ಥಿತಿಗೆ ಬಂದಿರುವುದು ಮದರಾಸಿನಲ್ಲಿದ್ದುದರಿಂದ. ನಾವು ಮದರಾಸಿನ ಮಟ್ಟಕ್ಕಿಳಿಯಬಾರದು ಮೈಸೂರಿನ ಮಟ್ಟಕ್ಕೆ ಬಳ್ಳಾರಿ ಆಗಬೇಕೇ ಹೊರತು, ಬಳ್ಳಾರಿಯ ಹಾಗೆ ಮೈಸೂರು ಆಗಬಾರದು. ಅಲ್ಲಿನಂತೆ ಇಲ್ಲಿಯೂ ಆದರೆ ಮೈಸೂರಿನವರಿಗೆ ಕಷ್ಟವಾಗುತ್ತದೆ. ಮದರಾಸಿನವರೇನೂ ಸುಖವಾಗಿಲ್ಲ. ಅದು ಬಳ್ಳಾರಿಯ ಸ್ಥಿತಿಯನ್ನು ನೋಡಿದರೆ ಗೊತ್ತಾಗುತ್ತದೆ. ಬಳ್ಳಾರಿಯನ್ನು ನಿಕೃಷ್ಟವಾಗಿ ಅವರು ಕಂಡದ್ದರಿಂದಲೇ ಈ ಕಷ್ಟ ಬಂದಿದೆ.

ಇನ್ನು ಪ್ರಾಂತಗಳ ರಚನೆಯ ವಿಚಾರವಾಗಿ ಶ್ರೀಮಾನ್ ಶಿವರುದ್ರಪ್ಪನವರು ಮಾತನಾಡಿದರು. ಪ್ರಾಂತಗಳ ರಚನೆಯ ಪ್ರಯತ್ನ ಕೋಮುವಾರು ಭಾವನೆಯಮೇಲೆ ನಡೆಯುತ್ತಿದೆ ಎಂದು ಹೇಳಿದರು. ಕೆಲವು ಕಡೆ ಭಾಷಾವಾರು ಪ್ರಾಂತರಚನೆಯಾಗಬೇಕು, ಕರ್ನಾಟಕ ಪ್ರಾಂತರಚನೆಯಾಗಬೇಕು ಎಂದು ಹೇಳುತ್ತಾರೆ; ಕೆಲವರು ಬೇಡವೆಂದು ಹೇಳುತ್ತಾರೆ; ಇದನ್ನು ನೋಡಿದರೆ ಕೋಮುವಾರು ಭಾವನೆಯಿಂದಲೇ ಹೇಳುತ್ತಾರೆಂದು ಕಾಣುತ್ತದೆ, ಹೀಗಾದರೆ ಮೆಜಾರಿಟಿ ಕೋಮು ರಾಜ್ಯವನ್ನಾಳುತ್ತದೆ ಎಂದು ಮುಂತಾಗಿ ಕೆಲವರು ಹೇಳುತ್ತಾರೆ. ಈ ಹೊತ್ತಿನ ಪರಿಸ್ಥಿತಿಯಲ್ಲಿ ಇದು ಸಾಧ್ಯವಿಲ್ಲ. ಅಂಥ ಅನ್ಯಾಯವಾಗುವುದಾದರೆ ಅದನ್ನು ಸರಿಪಡಿಸುವ ಶಕ್ತಿ ನಮಗಿದೆ. ಅಂತೂ ಭಾಷಾವಾರು ನೀತಿ ಯಾವಾಗಲೂ ನನ್ನ ಅಭಿಪ್ರಾಯದಲ್ಲಿ ಒಳ್ಳೆಯದಲ್ಲ. ಅದನ್ನು ನಾನೂ ಯಾವಾಗಲೂ ವಿರೋಧಿಸುತ್ತೇನೆ. ಈಗ ಭಾರತದಲ್ಲಿ ಹಲವಾರು ಮುಖ್ಯ ಸಮಸ್ಯೆಗಳಿರುವಾಗ ಈ ಭಾಷಾವಾರು ಸಮಸ್ಯೆಯನ್ನಿಟ್ಟು ಕೊಂಡರೆ ದೇಶಕ್ಕೆ ಕಷ್ಟವಾಗುತ್ತದೆ. ಕೆಲವು ಸದಸ್ಯರು ಹೇಳಿದ ಹಾಗೆ, ಪಾಕಿಸ್ತಾನ-ಅಮೆರಿಕಾದ ಮಿಲಿಟೆರಿ ಒಪ್ಪಂದ; ಒಂದುಕಡೆ ಬಂಡವಾಳಶಾಹಿತ್ವ, ಇನ್ನೊಂದುಕಡೆ ಜಾತಿವಾದ. ಈ ಮಧ್ಯೆ ಭಾರತ ಗಾಂಧೀವಾದವನ್ನು ಬಿಟ್ಟರೆ ಜನರಿಗೆ ನಮ್ಮ ದೇಶದ ಮುಂದಿರುವ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸುವುದಕ್ಕೆ ಕಷ್ಟವಾಗುತ್ತದೆ. ಭಾರತದ ಹಿತವನ್ನೇ ಅತಿ ಮುಖ್ಯವಾಗಿಟ್ಟುಕೊಂಡು ಯಾವ ಸಮಸ್ಯೆಯನ್ನಾಗಲಿ ಎದುರಿಸಬೇಕು.

ಆಸ್ಪತ್ರೆಗಳು, ವಿದ್ಯಾಭ್ಯಾಸ ಮತ್ತು ಪೋಲೀಸು ಇಲಾಖೆಗಳ ವಿಷಯದಲ್ಲಿ ಅನೇಕರು ಮಾತನಾಡಿದ್ದಾರೆ. ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಮುಂದುವರಿಯಬೇಕು ಎಂದು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳು ಓದುವ ಪುಸ್ತಕಗಳು ಸರಿಯಾಗಿಲ್ಲ. ಹಿಂದೆ ಒಳ್ಳೆಯ ಪುಸ್ತಕಗಳನ್ನಿಡುತ್ತಿದ್ದರು. ನೀತಿಚಿಂತಾಮಣಿ ಮುಂತಾದ ನೀತಿಬೋಧಕವಾದ ಪುಸ್ತಕಗಳನ್ನಿಡುತ್ತಿದ್ದರು. ಈಗ ಅಂಥವುಗಳನ್ನಿಡುತ್ತಿಲ್ಲ. ಇದರಿಂದ ದೇಶದಲ್ಲಿ ಟೆಕ್ಸ್ಟುಬುಕ್ ಸಮಿತಿಯವರು ಲಂಚ ತೆಗೆದುಕೊಂಡು ತಮಗೆ ಬೇಕಾದವರ ಪುಸ್ತಕಗಳನ್ನಿಡುತ್ತಾರೆಂಬ ಕೂಗು ಎದ್ದಿದೆ. ಇದು ನಿಜವೋ ಅಲ್ಲವೋ ನನಗೆ ಗೊತ್ತಿಲ್ಲ. ಏನಾದರೂ ದೋಷವಿದ್ದರೆ ಅದನ್ನು ಸರಿಪಡಿಸಬೇಕು. ಅಧಿಕಾರಿಗಳು ಒಳ್ಳೆಯವರಾಗಿರಬೇಕು. ಒಂದು ಸಾರಿ ಒಂದು ಕಡೆಯಿಂದ ಟೆಂಪೊರರಿ ಗುಮಾಸ್ತನನ್ನು ಅನಾವಶ್ಯಕವಾಗಿ ಬೇರೆಕಡೆ ವರ್ಗಮಾಡಿದರು. ನಾನು ಹೋಗಿ ಅವರನ್ನು ಕೇಳಿದಾಗ ಆ ವೇಕೆನ್ಸಿ ಮುಸ್ಲಿಂ ವೇಕೆನ್ಸಿ, ನಾವೇನೂ ಮಾಡುವಹಾಗಿಲ್ಲ ಎಂದು ಆ ಮನುಷ್ಯ ಹೇಳಿದ. ಇಂಥಾದ್ದು ನಡೆಯಬಾರದು. ಅಧಿಕಾರಿಗಳ ಮೇಲೆ ದೂರುಗಳಿವೆ. ಅನೇಕ ಕಡೆ ಉಪಾಧ್ಯಾಯರುಗಳೂ ಸರಿಯಾಗಿಲ್ಲ. ಉರ್ದು ಸ್ಕೂಲುಗಳನ್ನು ಕೊಟ್ಟಿದ್ದಾರೆ. ಕೋಮುವಾರು ಸ್ಕೂಲುಗಳನ್ನು ಕೊಡುವುದು ದೇಶದ ಒಗ್ಗಟ್ಟಿಗೆ ಧಕ್ಕೆ ತರುತ್ತದೆ ದು ಹೇಳುತ್ತೇನೆ. ಕೋಮುವಾರು ಹಾಸ್ಟೆಲುಗಳನ್ನು ಮಾಡಬಾರದು; ಎಲ್ಲರಿಗೂ ಅವಕಾಶವಿರುವ ಒಂದೇ ರೀತಿಯ ಹಾಸ್ಟಲುಗಳನ್ನು ಮಾಡಿದರೆ ಒಳ್ಳೆಯದೆಂದು ಈ ಸಭೆಯಲ್ಲಿ ಹೇಳುತ್ತೇನೆ.

ಆಸ್ಪತ್ರೆಗಳ ವಿಷಯದಲ್ಲಿ ಒಂದು ಮಾತು. ನರ್ಸುಗಳು ಮತ್ತು ಮಿಡ್‌ವೈಫ್‌ಗಳ ಟ್ರೈನಿಂಗಿಗೆ ಒದಗಿಸಿರುವ ಹಣ ಸಾಲದು. ದೇಶದಲ್ಲಿ ಅವರ ಅವಶ್ಯಕತೆ ಬಹಳವಾಗಿದೆ. ಪಾಂಚವಾರ್ಷಿಕ ಯೋಜನೆಯಲ್ಲಿ 2,300 ಮಿಡ್‌ವೈಫ್‌ಗಳನ್ನೂ 1,200 ನರ್ಸುಗಳನ್ನೂ ಒದಗಿಸಬೇಕೆಂದು ಮಾಡಿದ್ದಾರೆ. ಹಾಗೆಯೇ ಇವರ ಆವಶ್ಯಕತೆ ಜಾಸ್ತಿಯಾಗಿರುವುದರಿಂದ ಇವರ ಶಿಕ್ಷಣಕ್ಕೆ ಹೆಚ್ಚಿನ ಅನುಕೂಲಗಳನ್ನೊದಗಿಸಬೇಕು.

ಮಹಿಳೆಯರಿಗೆ ವಿದ್ಯಾರ್ಥಿವೇತನಗಳಿಗೆ ಒದಗಿಸಿರುವ ಮೊಬಲಗನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಪ್ರತಿ ಜಿಲ್ಲೆಗೆ ಕೇವಲ ನಾಲ್ಕು ವೇತನಗಳನ್ನು ಇಟ್ಟಿದ್ದಾರೆ. ಹೆಂಗಸರಿಗೆ ವೇತನಗಳನ್ನು ಹೆಚ್ಚುಮಾಡಿ ಹೆಚ್ಚಿನ ಪ್ರೋತ್ಸಾಹ ಕೊಡುವುದು ಧರ್ಮ. ಹೆಂಗಸರಲ್ಲಿ ಸ್ವಭಾವಸಿದ್ಧವಾಗಿ ಶಾಂತಿ ಮತ್ತು ಪ್ರೇಮವಿರುವುದರಿಂದ ಅವರಿಗೆ ವಿದ್ಯೆಯಲ್ಲಿ ಹೆಚ್ಚಿನ ಪ್ರೋತ್ಸಾಹ ಕೊಟ್ಟರೆ ದೇಶಕ್ಕೆ ಹೆಚ್ಚು ಸೇವೆಯನ್ನು ಅವರು ಸಲ್ಲಿಸುವುದಕ್ಕೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ನಮ್ಮ ದೇಶದಲ್ಲಿ ಹೆಂಗಸರು ಗಂಡಸರಷ್ಟು ಬುದ್ಧಿವಂತರೆ ಎಂಬುದು ವಿವಾದಾಸ್ಪದವಾಗಿದೆ. ಅವರು ಎಷ್ಟೋ ಬುದ್ಧಿವಂತರಾಗಿದರೂ ಸಹ ಅವರಿಗೆ ತಕ್ಕ ಪ್ರೋತ್ಸಾಹವಿಲ್ಲ. ಇದು ನಮ್ಮ ಮಾನ್ಯ ಮಂತ್ರಿಗಳಾದ ಡಾ॥ ನಾಗನಗೌಡರಿಗೆ ಗೊತ್ತಿರಬಹುದು. ಅವರಿಗೆ ಗೊತ್ತಿರಬಹುದಾದ ಸಮಾಚಾರವೊಂದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೊಸೂರಿನಲ್ಲಿ ಐ.ಏ.ಎಸ್. ಪಾಸುಮಾಡಿರುವ ಒಬ್ಬ ಸ್ತ್ರೀಯು ಸಬ್‌ಕಲೆಕ್ಟರ್ ಅಧಿಕಾರದಲ್ಲಿದ್ದಾರೆ. ಅವರಿಗೆ ಮಕ್ಕಳಾದರೆ ಅವರಂತೆಯೇ ಎಷ್ಟೋ ಬುದ್ಧಿವಂತರಾದ ಮಕ್ಕಳು ಹುಟ್ಟಬಹುದು. ಆದರೆ ಅವರು ಮದುವೆ ಮಾಡಿಕೊಳ್ಳಕೂಡದೆಂದುಹೇಳಿ ನಿರ್ಬಂಧಮಾಡಿರುತ್ತಾರೆಂದು ತಿಳಿದುಬಂದಿದೆ. ಇದು ಸರಿಯೇ? ಹೀಗಾದರೆ ಹೆಣ್ಣುಮಕ್ಕಳು ಮುಂದುವರಿಯಲು ಎಷ್ಟು ಕಷ್ಟವೆಂಬುದನ್ನು ಊಹಿಸಬಹುದು. ಹೀಗೆ ನಿರ್ಬಂಧಿಸುವುದು ಸರಿಯಲ್ಲ; ಅದು ನಿಜವಾಗಿಯೂ ಸರಿಯಾದ ನೀತಿಯಲ್ಲ ಎಂದು ಸೂಚಿಸುತ್ತೇನೆ.

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ಇನ್ನು ಪೋಲೀಸು ಇಲಾಖೆ ನೋಡಿದರೆ, ಪಾನ ನಿರೋಧ ಜಾರಿಗೆ ಬಂದನಂತರ ಈ ಇಲಾಖೆಯವರಿಗೆ ಅದರ ಕೆಲಸವನ್ನು ವಹಿಸಲಾಗಿದೆ. ಆದರೆ ಪರಿಣಾಮವೇನಾಗಿದೆ? ಈ ಸಂಬಂಧವಾದ ಕೇಸುಗಳು ಜಾಸ್ತಿಯಾಗಿ ನಮ್ಮ ಜಿಲ್ಲೆಯಲ್ಲಿ ಜನರಿಗೆ ತೊಂದರೆಯಾಗಿದೆಯೇ ವಿನಾ ಮತ್ತೇನೂ ಕಾಣಲಿಲ್ಲ. ಈ ಸಂಬಂಧವಾದ ಎಷ್ಟೋ ಖೂನಿ ಕೇಸುಗಳು ಕೈಬಿಟ್ಟು ಹೋಗುತ್ತಿವೆ. ಸಾಕಷ್ಟು ಪ್ರಯೋಜನ ದೊರೆತಿಲ್ಲ. ಏಕೆ ಹೀಗಾಗುತ್ತದೆಂಬುದು ನಮಗೆ ಅರ್ಥವಾಗುತ್ತಿಲ್ಲ. ಇದನ್ನು ಯೋಚನೆಮಾಡಿ ಸರಿಪಡಿಸಬೇಕು.

ಪಬ್ಲಿಕ್‌ವರ್ಕ್ಸ್ ಇಲಾಖೆಯು ಬಹಳ ಪ್ರಾಮುಖ್ಯವಾದುದೆಂದು ಹೇಳದೆ ನಿರ್ವಾಹವಿಲ್ಲ. ಶ್ರೀಮತಿ ಸಿದ್ದಮ್ಮನವರು ಹೇಳಿದಹಾಗೆ ಸಂಗೇನಹಳ್ಳಿಕೆರೆ, ತುಪ್ಪದಹಳ್ಳಿಕೆರೆ ಒಡೆದಿರುವುದಕ್ಕೆ ಕಾರಣವನ್ನು ಪರಿಶೀಲಿಸಿ ಮುಂದೆ ಇಂಥ ಅನಾಹುತಗಳಾಗದಂತೆ ಬಂದೋಬಸ್ತು ಮಾಡದಿದ್ದರೆ ಪ್ರಯೋಜನವಿಲ್ಲ. ಈ ಸಂದರ್ಭದಲ್ಲಿ ನಷ್ಟವೆಷ್ಟಾಗಿದೆಯೆಂಬುದನ್ನು ಎಸ್ಟಿಮೇಟ್ ಮಾಡಿ ಸರಿಪಡಿಸಬೇಕಾಗಿದೆ.

ನಮ್ಮ ಡಿಸ್ಟ್ರಿಕ್ಟಿನಲ್ಲಿ ಕಿತ್ತೆಗಟ್ಟದ ಬಳಿ ಒಂದು ಸೇತುವೆಯಾಗಬೇಕೆಂದು ಎಷ್ಟೋ ದಿವಸಗಳಿಂದ ಕೇಳಿದ್ದಕ್ಕೆ 70 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟಾಗಿತ್ತು; ಅದು ಈ ವರ್ಷ ಎರಡು ಲಕ್ಷಕ್ಕೇರಿದೆ. ಆ ಕೆಲಸ ಒಪ್ಪಿಕೊಂಡಿದ್ದ ಕಂಟ್ರಾಕ್ಟರು ಮೂರು ಸಾವಿರ ರೂಪಾಯಿಗಳ ಡಿಪಾಜಿಟ್ಟನ್ನು ಮಾಡಿ ಕೆಲಸಬಿಟ್ಟು ಹೋದರೆಂದು ತಿಳಿದುಬಂದಿದೆ. ಅದಕ್ಕೆ ಕಾರಣವೇನೆಂಬುದನ್ನು ಪರಿಶೀಲಿಸಿ ಆ ಕೆಲಸವನ್ನು ಜಾಗ್ರತೆ ಪೂರೈಸಬೇಕು. ಅಮೇಲೆ ಮಳೆಗಾಲದಲ್ಲಿ ಒಡೆದು ಹೋದ ಬೆಳವಾಡಿಕೆರೆ ಮತ್ತು ಹುಲಿಕುಂಟೆಕೆರೆಗಳ ರಿಪೇರಿ ಕೆಲಸ ಪೀಸ್‌ವರ್ಕ್ಸ್ ಸಿಸ್ಟಂ ಪ್ರಕಾರ ನಡೆಯುತ್ತಿತ್ತು. ಈಗ ಅದನ್ನು ನಿಲ್ಲಿಸಿ ಟೆಂಡರ್ ಕರೆಯಬೇಕೆಂದಿದ್ದಾರೆ. ಮಳೆಗಾಲ ಹತ್ತಿರ ಬಂದರೆ ಕೆಲಸ ಸರಿಯಾಗಿ ಮಾಡುವುದಕ್ಕಾಗುವುದಿಲ್ಲ. ಇಂಜನಿಯರನ್ನು ಕೇಳಿದರೆ ಸಲಕರಣೆ ಬೇಕು ಎಂದು ಹೇಳುತ್ತಾರೆ. ಹೀಗಾಗಿ ಸದರಿ ಕೆಲಸ ನಿಧಾನವಾಗಿದೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಹೆಚ್ಚು ನಿಗಾ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಖೋತಾ ಬಿದ್ದಿರುವ ಬಜೆಟ್ಟನ್ನು ಸರಿದೂಗಿಸುವ ವಿಚಾರ. ಇದನ್ನು ತೆರಿಗೆಗಳನ್ನು ವಿಧಿಸುವುದರ ಮುಖಾಂತರ ಸರಿಪಡಿಸಬೇಕೆಂಬುದು ಸರ್ಕಾರದ ಅಭಿಪ್ರಾಯವಾಗಿದೆ. ಈ ಸಲಹೆಯನ್ನು ಸರ್ಕಾರದವರು ಸಭೆಯ ಮುಂದಿಟ್ಟಿದ್ದಾರೆ. ತೆರಿಗೆ ಹಾಕಬೇಕೆಂದು ಹೇಳುವುದನ್ನು ಒಪ್ಪಬಹುದು. ಆದರೆ ಅದನ್ನು ಯಾವ ರೀತಿಯಲ್ಲಿ ಹೇಗೆ ಹಾಕಬೇಕೆಂಬುದನ್ನು ಸರಿಯಾಗಿ ವಿಮರ್ಶೆ ಮಾಡಿ ಸೂಕ್ತ ರೀತಿನೀತಿಯನ್ನನುಸರಿಸಬೇಕು. ರೈತರಿಗೆ, ಸಾಮಾನ್ಯ ಜನರಿಗೆ, ಈ ರೀತಿ ಹಾಕುವ ತೆರಿಗೆಗಳನ್ನು ಹೊತ್ತುಕೊಳ್ಳಲು ಶಕ್ತಿ ಇದೆಯೆ ಎಂಬುದನ್ನು ನೋಡಿ ಹಾಕಬೇಕು. ರೈತನ ಕಷ್ಟಸುಖ ತಿಳಿದವರು ಇಲ್ಲಿ ಬಹುಮಂದಿ ಇದ್ದಾರೆ.

ಕಾಫಿ ಪ್ಲಾಂಟರುಗಳ ವಿಚಾರ ಹೇಳಿದರೆ, ಅವರಿಗೇನು ಪ್ಲಾಂಟರು, ಇಂದ್ರಭೋಗಗಳನ್ನು ಅನುಭವಿಸುತ್ತಾರೆ ಎಂದು ಹೇಳಿ ಸರಿಯಾಗಿ ಗಮನಿಸುವುದಿಲ್ಲ. ಅವರ ಕುಂದುಕೊರತೆಗಳೇನೆಂಬುದು ತಿಳಿಯದೆ ಏನನ್ನೂ ಹೇಳಬಾರದು. ಪ್ಲಾಂಟರುಗಳು ಇಂಗ್ಲೆಂಡಿನಿಂದ ಬಂದಿರಲಿ, ಅಮೇರಿಕಾದಿಂದ ಬಂದಿರಲಿ ಅಥವಾ ಇಲ್ಲಿಯವರೇ ಆಗಲಿ ಅವರಿಗಿರುವ ಅಡ್ಡಿ ಆತಂಕಗಳನ್ನು ಗಮನದಲ್ಲಿಡಬೇಕು. ಅವರ ಮೇಲೆ ಹಾಕಿರುವ ತೆರಿಗೆ ಹೊರೆಯೆಷ್ಟು ಎಂಬುದನ್ನು ನೋಡಬೇಕಾದದ್ದು ಅಗತ್ಯ. ಇಂಡಿಯಾ ಸರ್ಕಾರಕ್ಕೆ ಒಂದು ಹಂಡ್ರೆಡ್ ವೇಟ್‌ಗೆ 21 ರೂಪಾಯಿಗಳ ಎಕ್ಸೈಜ್ ಡ್ಯೂಟಿ, 15-8 ರೂಪಾಯಿಗಳ ಎಕ್ಸ್‌ಪೋರ್ಟ್ ಡ್ಯೂಟಿ ಕೊಡಬೇಕು. ಇದಕ್ಕಿಂತ ಆದಾಯಬರುವ ಬೆಳೆ ಯಾವುದೂ ಇಲ್ಲ. ಇಷ್ಟೊಂದು ತೆರಿಗೆ ಹಾಕಿದರೆ ಬೆಳೆಯುವವನ ಗತಿಯೇನು? ಇದು ಬಹಳ ಅನ್ಯಾಯ. ರೂಪಾಯಿಗೆ 16 ಸೇರು ರಾಗಿಯಿದ್ದುದು ಈಗ ಎರಡು ಸೇರಾಗಿದೆ. ಖರ್ಚನ್ನು ಗಮನಿಸಬೇಕು ಎಂದು ಮುಖ್ಯ ಮಂತ್ರಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಉತ್ಪನ್ನದ ಕೆಲಸಗಾರರಿಗೆ ಬೇಕಾದ ಅನುಕೂಲ ಒದಗಿಸಬೇಕು. ಅಮೋನಿಯಂ ಸಲ್ಫೇಟ್ ಗೊಬ್ಬರದ ಬೆಲೆ ಟನ್ನಿಗೆ 40 ರೂಪಾಯಿಗಳಿದ್ದುದು ಈಗ ಟನ್ ಒಂದಕ್ಕೆ 280 ರೂಪಾಯಿಗಳಿಗೆ ಏರಿದೆ. ಇದನ್ನೆಲ್ಲಾ ನೋಡಿ ಯಾರಿಗೆ ತೆರಿಗೆ ಹಾಕುವುದು ನ್ಯಾಯವೋ, ಯಾರಿಗೆ ಹೊರಲು ಶಕ್ತಿಯಿದೆಯೋ ಅವರಿಗೆ ಮಾತ್ರ ಹಾಕಬೇಕೆಂದು ಅರಿಕೆಮಾಡುತ್ತೇನೆ. ಇನ್ನೊಂದು ವಿಚಾರ ಕೇಳಬಹುದು. ತೆರಿಗೆ ಬೇಡವೆಂದು ಹೇಳಿದರೆ ನಮಗೆ ಬೇಕಾದ ಕೆಲಸ, ನಾವು ಮಾಡಬೇಕೆಂದು ಹೇಳುವ ಕೆಲಸವನ್ನು ಮಾಡಲು ಹೇಗೆ ಸಾಧ್ಯವಾಗುತ್ತದೆಂದು ಕೇಳಬಹುದು. ಅದಕ್ಕೆ ಸಲಹೆಯೇನೆಂದರೆ, ಈ ವರ್ಷ 20 ಲಕ್ಷ ರೂಪಾಯಿಗಳ ಕೆಲಸ ಮಾಡಬೇಕೆಂದಿದ್ದರೆ ಅದನ್ನು 5 ಲಕ್ಷಕ್ಕಿಳಿಸಿ. ಸರ್ಕಾರದ ಕಷ್ಟ ನಮಗೆ ಗೊತ್ತು. ಜನರ ಸಹಕಾರ ಸರ್ಕಾರಕ್ಕೆ ಬೇಕು. ಅದಕ್ಕೆ ತಕ್ಕಹಾಗೆ ಸರ್ಕಾರವೂ ವರ್ತಿಸಬೇಕು. ರೈತರ ಕಷ್ಟಸುಖದ ವಿಚಾರದಲ್ಲಿ ಹೇಳಬೇಕಾದ ಅಂಶಗಳೆಷ್ಟೋ ಇವೆ. ರೈತರ ಆಸ್ತಿಗಳು ಬ್ಯಾಂಕಿಗೆ ಆಧಾರವಾಗಲ್ಪಟ್ಟಿವೆ, ಅವರು ಸಾಲಗಾರರಾಗಿದ್ದಾರೆ ಎಂಬುದನ್ನು ಮನಸ್ಸಿನಲ್ಲಿಡಬೇಕು. ರೈತರು ಸ್ವರ್ಗಸುಖ ಅನುಭವಿಸುತ್ತಿದ್ದಾರೆಂದು ಯಾರೋ ನಾಲ್ಕು ಮಂದಿಯನ್ನು ನೋಡಿ ಹೇಳುವುದು ಅನ್ಯಾಯ. ಅವರಿಗೆ ಬಹಳ ಕಷ್ಟವಿದೆ. ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ 8-10 ಸೇತುವೆಗಳ ಕೆಲಸ ನಡೆಯಬೇಕಾಗಿದೆಯೆಂದು ಹೇಳಿದ್ದಾರೆ. ಅದನ್ನು ಹಣದ ಅಭಾವವಿರುವಾಗ ಸ್ವಲ್ಪಮಟ್ಟಿಗೆ ಕಡಮೆ ಮಾಡಬಹುದು. ರಸ್ತೆ ಕಾಂಕ್ರೀಟ್ ಮಾಡಿದರೆ ಜನರಿಗೆ ಕೂಲಿ ಸಿಕ್ಕುತ್ತದೆಯೆಂದು ಹೇಳಿದರು. ನಿರುದ್ಯೋಗ ಹೆಚ್ಚುತ್ತಿರುವುದು ಖಚಿತವಾದ ವಿಚಾರ. ವಿದ್ಯಾವಂತರು ನೌಕರಿ ಕೊಡಿ ಎಂದು ಕೇಳುತ್ತಾರೆ. ಆದರೆ ಎಲ್ಲರಿಗೂ ನೌಕರಿ ಕೊಡುವುದು ಬಹಳ ಕಷ್ಟ. ವರ್ಷಕ್ಕೆ 20 ಸಾವಿರ ಪದವೀಧರರು ಕಾಲೇಜುಗಳಿಂದ ಹೊರಗೆ ಬರುತ್ತಿದ್ದಾರೆ. ಇವರೆಲ್ಲರಿಗೂ ಒದಗಿಸುವುದಕ್ಕೆ ಸಾಧ್ಯವೇ? ಇದಕ್ಕಾಗಿ ತೆರಿಗೆ ಹಾಕುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆಮಾಡಬೇಕು. ಹಾಗೆ ಮಾಡುವುದಕ್ಕೆ ಬದಲಾಗಿ ನಿರುದ್ಯೋಗಸ್ಥರನ್ನು ಹಳ್ಳಿಗಳಿಗೆ ಕಳುಹಿಸಿ ವ್ಯವಸಾಯ ಮಾಡುವಂತೆ ವ್ಯವಸ್ಥೆ ಮಾಡಬೇಕು. ಓದಿದವರಿಗೆಲ್ಲಾ ಉದ್ಯೋಗವನ್ನೊದಗಿಸುವುದು ಬಹಳ ಕಷ್ಟ. ಶ್ರೀಮಾನ್ ಗೋಪಾಲಗೌಡರು ನಿರುದ್ಯೋಗಸ್ಥರ ಸಂಖ್ಯೆಯನ್ನು ಕಂಡುಹಿಡಿಯಲು ಸರ್ವೆ ಮಾಡಿದ್ದೀರಾ ಎಂದು ಪ್ರಶ್ನೆಗಳನ್ನು ಹಾಕಿದ್ದಾರೆ. ಆದರೆ ಉದ್ಯೋಗ ಎಲ್ಲರಿಗೂ ಒದಗಿಸುವುದು ಕಷ್ಟವಾದ ಪ್ರಶ್ನೆ. ಯಾರು ಅಧಿಕಾರಕ್ಕೆ ಬಂದರೂ ಕಷ್ಟ. ಸರ್ಕಾರದವರು ಕೂಡ ಬೇಕಾದ ಕೆಲಸಗಳನ್ನು ಕಡಮೆಮಾಡಿ ಬಜೆಟ್ ಸರಿತೂಗಿಸಬೇಕೇ ಹೊರತು ಹೆಚ್ಚು ಕಂದಾಯ ಹಾಕಿ, ತೆರಿಗೆ ಹಾಕಿ ಸರಿತೂಗಿಸುತ್ತೇವೆಂದು ಹೇಳಬಾರದು. ತೆರಿಗೆ ಹೇರಿದರೆ ರೈತರಿಗೆ ಬಹಳ ಕಷ್ಟವಾಗುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri R. ANANTARAMAN (Chamarajapet.)—Mr. Deputy Speaker, Sir, I am really grateful to you for having given me this opportunity of saying a few words about the Budget. Sir, during the last session the Chief Minister said that the Budget would be a surplus Budget. We were all aware that the removal of ration, the retrenchment in the Food Department, enhancing the foodstuffs were effected and we believed and we all hoped that the Budget would be a surplus one. But, few weeks back some of my friends told me that the Budget would be a deficit one this year. No doubt we felt sorry, but we still hoped that the Budget would be a surplus one. When the Chief Minister presented the Budget the other day it was really a surprise for many of us because according to his previous statement it was a surplus one. He says it is a deficit of 309·33 lakhs. He says that of this deficit, 41 lakhs is accounted to Bellary. The Leader of the Opposition and also some of the members have said at the time of integration of Bellary into Mysore State, that the Treasuries were empty and that not even one pie was found in the Treasury. The Leader of the Opposition has also said that the Government were not vigilant. Sir, I am sure the deficit on account of Bellary will not be 41 lakhs because, as we are all aware, in Bellary you have got good natural resources. The Chief Minister said in the Food Department a deficit 24·5 lakhs has been accounted for. I am sure this deficit also will be made good during the end of this year. Again, he said a sum of Rs. 40 lakhs is accounted for Grow More Food Scheme, Community Scheme, National Extension Scheme. It would be about 309 lakhs to be filled up either by taxation or to be left as it is. In the Budget speech, the Chief Minister was kind enough to say that a good amount of money has been provided for nation building activities. An analysis of the Budget for the last few years shows that for Education in the year 1946-47 we spent about 131 lakhs whereas in the year 1954-55 it has gone up to 417 lakhs. I am giving this figure just to show to the members of the Opposition the amount that is being spent for nation building activities; this is nearly four times the amount that was spent in 1946-47. For Medical Department it was 33 lakhs in 1946-47, now it is 110 lakhs—nearly three times. For Agriculture it was 10 lakhs in 1946-47, now it is 58 lakhs. For Public Works including building grants in 1946-47 it was 102 lakhs, in 1954-55 it is 371 lakhs. We have to bear in mind that though good amount of money is spent on these nation building activities, as some of the Members did say, our Ministers will have to consolidate all these activities and organise them well. For example the Medical Department. You are aware the other day when a question was put to the Minister, he said that there are 40 hospitals with no doctors. Also in the other activities, a good amount of supervision is not provided for. It is better we try to organise them well and then think of extending them to other districts. It is no good having thousands of schools wherein there are no teachers at all. In fact, I am told in malnad parts there are some schools where there are no teachers at all. Either the Monitor or some other person will be the head of the institution there, I am told. If that is the state of affairs, it is better not to think of extending the nation building activities. Let us try to consolidate them and afterwards try to spend money over the nation building activities.

As regards the grant from the Centre, the Chief Minister said and also it is given in his speech that due to the integration of federal departments, for 1954-55 Rs. 309 lakhs were granted and for 1953-54 it was Rs. 386 lakhs, 1952-53 Rs. 385·25 lakhs and there are also other grants; for example, for relieving unemployment. This year some grant is given by the Centre to appoint 550 S.S.L.C. qualified teachers and the Government are going to spend about Rs. 2·09 lakhs. Rs. 1·77 lakhs will be granted by the Centre. Here one thing we have to observe. The Central Government gives grant for some time and afterwards will be hesitating to give grant in future. Then the State will be left to its own fate in respect of all these things. So it is

(Sri R. ANANTARAMAN.)

better our Ministers will have a talk with the Centre so that the grant may be continued for at least 20 to 30 years, because our financial position is not sound. No doubt they may encourage us to start schemes, but afterwards they may leave us to our fate. It is better they also continue to pay the grant in future also.

Some Hon'ble Members have talked about water supply in Bangalore and a few members also said that the Government are spending money for even tarred roads and cement roads in Bangalore City. As a representative elected from this City, I must try to explain to them that the Government are not at all granting even one pie towards repair of tar roads or cement roads. In fact, the grant given by them towards the vehicle tax does not exceed even Rs. one lakh. I have brought to the notice of the House that the agreement entered into in the year 1935 still stands and the grant has not been enhanced. The Water Supply Department, is a department run by the Government. If you happen to live in Civil Station, you will find that it would be really a hell. Only in the evenings you get a small quantity of water; by about 10 O'Clock in the night water supply will be stopped. There has been a cry from the citizens of Civil Station that the Government are not at all taking care of them. In the villages it is easy to get water. They may dig a well and get water; but in Bangalore City house-owners are not allowed even that. How can the poor people live in this City? The Corporation is not running the water supply department; it is only the Government that is running it and the Government sells water to the Corporation and also they collect the price of the water sold to the people; in fact, it has been almost a profitable concern. Just like some other business, the Government carry on this business in the City and also in Mysore City and other cities. It is good of them to have done that; but let us not go with the impression that all the money is spent in Bangalore City by way of giving grants for water supply to make good roads, etc. It is not correct and I wish the Hon'ble Minister also will try to remove the misapprehension.

Much is made of the Vidhana Soudha Road. It is not correct to say that the Government are spending over that. It is a self-sufficient scheme undertaken by the Trust Board. The Chief Minister, the other day, said that it is a self-sufficient scheme. In fact, it will be profitable to the Government. They may even get a profit of one or two lakhs rupees. Just to improve the City they have acquired certain land and formed certain road and by the side of the road formed a few big sites. The Chief Minister said that all these sites have been sold to the Government of India so as to allow them to construct buildings for the Income-tax and other departments. So let us have the impression in our mind that the Government are not at all spending even a pie for this purpose. You may be surprised to note that the Government are not paying even tax on the Government buildings. In fact the Corporation have been urging from the beginning and the Government said that it is not possible for them. Supposing all these buildings are taxed. It may go up to even Rs. 5 to 10 lakhs. The Corporation agitated and kept quiet. In those days, it might be true that some money was spent, but you may understand that I am not one of those persons who say that nothing should be done for the villagers. I come from a village. It is quite necessary that the villagers must be provided with drinking water. Let him not forget the people who live in the City. Actually one-tenth of the whole population is living in Bangalore City and Civil Station.

Some of my friends are saying that the Ministers are about to drop the Religious and Charitable Inams Abolition Bill. There is a rumour even outside the House that they are going to drop this Bill. The Bill has been given to us, printed and published; but I do not know why they are hesitating to introduce this Bill in this House.

Sri P. R. RAMAIYA (Basavangudi).—On a point of information. Will the Minister concerned say something about

the rumour ? I will be glad to know if he is going to drop this Sringeri—Religious and Charitable Inams Abolition Bill.

Mr. DEPUTY SPEAKER.—That he can say in the course of his reply.

Sri P. R. RAMAIYA.—I am drawing his attention.

Mr. DEPUTY SPEAKER.—Was he nattentive ?

Sri R. ANANTARAMAN.—I hope the Government will not drop that Bill and that they will introduce it in this House.

Sri P. R. RAMAIYA.—Because it is my duty here to draw the attention of the House to a very important point raised by the member. He is saying that a rumour is afloat abroad that the Religious and Charitable Inams Abolition Bill is going to be dropped. I would like to know from the Minister concerned if there is any basis for that rumour, if it is a fact.

Mr. DEPUTY SPEAKER.—He has noted down that point.

Sri R. ANANTARAMAN.—I am sure the Hon'ble Minister will introduce this Bill this time; after a good deal of discussion it will be referred to a Select Committee and in the next session it will be passed.

Our Chief Minister has said on page 4 of his speech :

> "Mysore State is a composite State. This composite character is our happy heritage. It is our duty to preserve it. Historical processes are expanding Mysore State. The people of the adjoining areas of their own free will are anxious to join Mysore State. We extend to them all, irrespective of the language they speak, a hearty welcome. ......"

I also agree with the Chief Minister.

4-30 P.M.

At the same time the Leader of the Opposition and also some other members in the Opposition made a statement that it is better for the Government to appoint a Committee of this Legislature and ask them to go round and find out and get certain statistics from other parts of Karnataka. It is better that such Committees are appointed: I further suggest that it is better that an Officer is appointed. You all might have seen from the papers about a question being asked in Andhra Assembly by Sri Krishna Murthy Rao, a member of Andhra State Legislature, and the Chief Minister, Sri T. Prakasam, is reported to have said that he has appointed an Officer to go to Bellary and other places where there are Telugu-speaking people for the purpose of collecting statistics. When the Andhra Government take so much interest in obtaining statistics I do not know why our Government should not take interest and appoint an Officer for this purpose. I therefore suggest to our Chief Minister, who is not here now, that it is better even now to appoint an Officer to collect statistics.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ ಈ ಖೋತಾ ಬಡ್ಜೆಟ್ಟು ಜನಗಳಿಗೆಲ್ಲಾ ಬಹಳ ವಿಸ್ಮಯವನ್ನುಂಟುಮಾಡಿದೆ. ಜನರಿಗೆ ಈ ದಿವಸ ಈ ಸರ್ಕಾರದವರು ಒಂದು ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಾರೆ, ಬಡಬಗ್ಗರಿಗೆಲ್ಲಾ ಸಹಾಯಮಾಡುತ್ತಾರೆ, ಇವರಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನ ಲಭಿಸುತ್ತದೆ ಎಂಬುದಾಗಿ ನಾನಾ ರೀತಿಯ ಆಶಾಭಾವನೆಗಳನ್ನು ಇಟ್ಟುಕೊಂಡಿದ್ದರು. ಇಂಥ ಆಸೆಗಳನ್ನಿಟ್ಟುಕೊಂಡಿದ್ದಂಥ ಕಾಲದಲ್ಲಿ ಈ ಬಡ್ಜೆಟ್ಟನ್ನು ನೋಡಿದರೆ ಏನು ಎದ್ದು ಕಾಣುತ್ತಿದೆಯೆಂದರೆ, ನಮ್ಮ ಮೈಸೂರು ಸೀಮೆಯ ಆದಾಯ ಒಂದಾನೊಂದು ಕಾಲದಲ್ಲಿ ಎಷ್ಟು ಇತ್ತೋ ಅಷ್ಟು ಆದಾಯ ಈ ದಿವಸ ನಮ್ಮ ವರಮಾನದಲ್ಲಿ ಖೋತಾ ಬಿದ್ದಿರುವುದರಿಂದ, ನಮ್ಮ ದೇಶಾಭಿವೃದ್ಧಿಯ ಕೆಲಸಕಾರ್ಯಗಳು ಎಷ್ಟರಮಟ್ಟಿಗೆ ನಡೆಯಬಹುದು ಎನ್ನುವುದು ಇಂದು ಒಂದು ಸಂಶಯಕ್ಕೆ ಕಾರಣವಾಗಿದೆ. ಸರ್ಕಾರ ತಾನು ಕೈಗೊಳ್ಳತಕ್ಕ ಕೆಲಸಕಾರ್ಯಗಳನ್ನು ಚೆನ್ನಾಗಿ ನಡೆಸಬೇಕಾಗಿದ್ದರೆ ಅವರಿಗೆ ಸಾಕಾದಷ್ಟು ಹಣವನ್ನು ಒದಗಿಸಬೇಕು ಎಂದು ಕೆಲವು ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಈಗ ಈ ಹೊಸ ಹೊಸ ಕಂದಾಯಗಳನ್ನು ಹಾಕುವುದಕ್ಕೆ ಉದ್ದೇಶಪಟ್ಟಿರುವುದರಿಂದ ಹೀಗೊಂದು ಖೋತಾ ಅಂದಾಜಿನ ಆಯವ್ಯಯ ಪಟ್ಟಿಯನ್ನು ತಯಾರಿಸಿಟ್ಟಿದ್ದರೂ ಇರಬಹುದು. ಈ ವಿಚಾರ ಅದೇನೇ ಇರಲಿ—ಒಟ್ಟಿನಲ್ಲಿ ಈಗ ಎರಡು ವರ್ಷಗಳಿಂದಲೂ ದೇಶಾಭಿವೃದ್ಧಿಯ ಕೆಲಸ ಕಾರ್ಯಗಳು ಹೇಗೆ ನಡೆಯುತ್ತಿವೆಂಬುದನ್ನು ನಾವು ಯೋಚಿಸಿದರೆ, ಬ್ರಿಟಿಷರ ರಾಜ್ಯಾಡಳಿತದಲ್ಲಿ ಬಹಳ ಪ್ರಸಿದ್ಧನಾದ ವಾಲ್‌ಪೋಲನ ರಾಜ್ಯಭಾರ ಕ್ರಮವು ಜ್ಞಾಪಕಕ್ಕೆ ಬರುತ್ತದೆಯೆಂದರೆ ಅದೊಂದು ಅತಿಶಯೋಕ್ತಿಯಾಗಲಾರದು. "Let the sleeping dog lie" ಎನ್ನುವಹಾಗೆ ಯಾವ ಇಲಾಖೆಯಲ್ಲಾದರೂ ಕೆಲಸ ಕಾರ್ಯಗಳು ಅಷ್ಟು ಹುಮ್ಮಸ್ಸಿನಿಂದ ನಡೆಯುತ್ತಿವೆಯೋ ಎನ್ನುವು

(ಶ್ರೀ ಬಿ. ಟಿ. ಕೆಂಪರಾಜ್.)

ದನ್ನು ನೋಡಿದರೆ ಹಾಗೆ ಕೆಲಸಗಳು ಹುಮ್ಮನಸ್ಸಿನಿಂದ ನಡೆಯುವುದಕ್ಕೆ ಬದಲಾಗಿ ಅಲ್ಲೆಲ್ಲಾ ಅಷ್ಟು ಲೋಪ ದೋಷಗಳಿರುತ್ತವೆ. ಇದಕ್ಕೆ ಕಾರಣ ಸಂಬಂಧಪಟ್ಟ ಇಲಾಖೆಗಳ ಮುಖ್ಯಾಧಿಕಾರಿಗಳು, ಆಯಾ ಇಲಾಖೆಗೆ ಅತ್ಯಗತ್ಯವಾಗಿ ಎಷ್ಟೆಷ್ಟು ಹಣವನ್ನು ಒದಗಿಸಬೇಕೋ ಅಷ್ಟನ್ನು ಒದಗಿಸಿದ್ದಾಗ್ಯೂ, ಸರಿಯಾಗಿ ನಿಗಾಕೊಟ್ಟು ಕೆಲಸಗಳನ್ನು ಬೇಗ ಬೇಗ ಮುಗಿಸುತ್ತಿಲ್ಲ ಎಂಬುದಾಗಿ ನನಗೆ ಮನವರಿಕೆಯಾಗಿದೆ. ಉದಾಹರಣೆಗಾಗಿ ಒಂದು ವಿಚಾರ ಹೇಳುವುದಾದರೆ, ನನ್ನ ಸ್ವಂತ ಕಾನ್ಸ್ಟಿಟ್ಯುಯೆನ್ಸಿಯಲ್ಲೇ ಬೆಂಗಳೂರಿನಿಂದ ಕೆಂಗೇರಿಗೆ ಹೋಗತಕ್ಕ ರಸ್ತೆಯಲ್ಲಿ, ರಸ್ತೆಯಮೇಲೆ ಹೋಗತಕ್ಕ ಕೋಡಿಯ ನೀರನ್ನು ತಪ್ಪಿಸಬೇಕೆಂದು ಸರ್ಕಾರದವರನ್ನು 1947ರಿಂದಲೂ ಕೇಳುತ್ತಿರುವುದಾಗಿದೆ. ಆದರೆ ಅದು ಇಂದಿಗೂ ಆಗಿರುವುದಿಲ್ಲ. ಆದರೆ ಆ ಇಲಾಖೆಯ ಮುಖ್ಯಾಧಿಕಾರಿಗಳು ಇದಕ್ಕೆ ಗಮನಕೊಡದೆ ಹೋದುದರಿಂದ ಆ ಬಗ್ಗೆ ಮಾನ್ಯ ಪಿ. ಡಬ್ಲ್ಯೂ. ಡಿ. ಮಂತ್ರಿಗಳವರೆಗೂ ಬಂದು ಹೋಗಬೇಕಾಯಿತು. ಅಂದಮೇಲೆ ಇನ್ನು ಎಷ್ಟರಮಟ್ಟಿಗೆ ಈ ಇಲಾಖೆಯಲ್ಲಿ ಕೆಲಸ ಕಾರ್ಯಗಳಾಗುತ್ತಿವೆ ಯೆಂಬುದು ಗೊತ್ತಾಗುತ್ತದೆ. ಅನೇಕ ಜನರು ಹೀಗೆ ತಮ್ಮ ಕೆಲಸಗಳು ನಿರೀಕ್ಷಿಸಿದ್ದ ಕಾಲದಲ್ಲಿ ಆಗದೆ ಇರುವುದರಿಂದ ತಮ್ಮ ಎದುರಿಗೆ ಬಂದು ಆ ಬಗ್ಗೆ ನಿಲ್ಲಲು ಕಾಲವನ್ನು ನಿರೀಕ್ಷಿಸುತ್ತಾ ನಿಂತಿದ್ದಾರೆ. ಇದೇ ರೀತಿಯಾಗಿ ಸೋಮನಹಳ್ಳಿ ಸರ್ಕಲ್‌ನಲ್ಲಿ ಸಹ ಒಂದು ಪಾಠಶಾಲೆಯನ್ನು ಕಟ್ಟಿಸಿಕೊಡಬೇಕೆಂದು ಜನಗಳು 1936ನೆಯ ಇಸವಿಯಿಂದಲೂ ಕೇಳಿಕೊಳ್ಳುತ್ತಿದ್ದಾರೆ. ನಾವು ಈ ಸಭೆಗೆ ಸದಸ್ಯರುಗಳಾಗಿ ಬಂದಮೇಲೂ ಕೂಡ ಕಳೆದ ಎರಡು ವರ್ಷಗಳಿಂದಲೂ ನಾನು ಮತ್ತು ಶ್ರೀ ಎ. ವಿ. ನರಸಿಂಹರೆಡ್ಡಿಯವರಿಬ್ಬರೂ ಕೂಡ ಆ ಕೆಲಸ ಮಾಡಿಸಿಕೊಡಬೇಕೆಂದು ಸರ್ಕಾರದವರಲ್ಲಿ ಒತ್ತಾಯಪಡಿಸುತ್ತಿದ್ದೇವೆ. ಆದರೆ ಸರ್ಕಾರದಿಂದ ಯಾವ ಒಂದು ನೇರವಾದ ಉತ್ತರವೂ ಇನ್ನೂ ಬಂದಿಲ್ಲ. ಇಂಥ ಸಂದರ್ಭಗಳಲ್ಲಿ ಸರ್ಕಾರದವರು ಜನರಿಂದ ಏನೊಂದು ಧನ ಸಹಾಯವನ್ನು ಅಪೇಕ್ಷೆ ಮಾಡುತ್ತಾರೋ ಅಂಥ ಹಣವನ್ನು ಸಹ ಅವರು ಪಾವತಿಮಾಡಲು ಸಿದ್ಧವಾಗಿದ್ದಾರೆ. ಅದಕ್ಕೆ ಬೇಕಾದ ಕಟ್ಟಡವನ್ನೂ ಅಥವಾ ಅದಕ್ಕಾಗುವ ಬೆಲೆಯನ್ನಾದರೂ ಜನಗಳು ಕೊಡಲು ಸಿದ್ಧರಾಗಿದ್ದಾರೆ. ಆದರೆ ಸರ್ಕಾರದವರು ಅದಕ್ಕೆ ಇಲ್ಲಿಯವರೆಗೂ ಏನೂ ನಿಗಾ ಕೊಟ್ಟಿಲ್ಲ. ಹೀಗೆಯೇ ಇನ್ನೂ ಎಷ್ಟೋ ಇಲಾಖೆಗಳಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಕೂಡಲೇ ತ್ವರಿತವಾದ ಕಾರ್ಯಕ್ರಮವನ್ನು ಕೈಗೊಂಡು ಅವರು ಸರಿಯಾಗಿ ಕೆಲಸ ನಡೆಸುವಂತೆ ಮಾಡಬೇಕೆಂದು ಸೂಚಿಸ ಬಯಸುತ್ತೇನೆ.

ಇನ್ನೊಂದು ವಿಚಾರ. ಅದು ನಿಮ್ನ ತರಗತಿಯವರ ವಿಚಾರ. ಈ ಬಗ್ಗೆ ನಾನು ಒಂದೆರಡು ವಿಚಾರಗಳನ್ನು ಮಾತ್ರ ಈ ಮಾನ್ಯ ಸಭೆಯ ಮುಂದೆ ಇಡಬೇಕೆಂದು ಇಷ್ಟಪಟ್ಟಿದ್ದೇನೆ. ರಾಜ್ಯಾಂಗದಲ್ಲಿ ದತ್ತವಾಗಿರುವಂತೆ ಹತ್ತು ವರ್ಷಗಳ ತನಕ ನಮಗೆ ಈ ಸಭೆಯಲ್ಲಿ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಅದರಲ್ಲಿ ಹೇಳಿರುವುದರಿಂದ ನಾವು ಈ ದಿವಸ ಇಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಅವಕಾಶವಾಗಿದೆ. ಆದರೆ ಈ ಹತ್ತು ವರ್ಷಗಳ ಅವಧಿ ಪೂರೈಸುವುದರೊಳಗೆ ಈ ನಿಮ್ನ ವರ್ಗದವರು, ಇತರ ಜನಾಂಗಗಳ ಮಟ್ಟಕ್ಕೆ ಬರಬೇಕಾಗಿದೆ. ಆದರೆ ಅವರು ಹೀಗೆ ನಿರೀಕ್ಷೆ ಮಾಡಿರುವ ಅವಧಿಯೊಳಗೆ ಎಲ್ಲರ ಮಟ್ಟಕ್ಕೂ ಸರಿಹೋಗುವಂತೆ ಮುಂದೆ ಬರಲು ಈ ನಿಮ್ನ ವರ್ಗಕ್ಕೆ ಸಾಧ್ಯವಿದೆಯೋ ಎಂಬುದನ್ನು ಯೋಚಿಸಬೇಕಾಗಿದೆ. ಆದರೆ ಈಗಲೂ ಸಹ ಅನೇಕ ಕಡೆ ಚುನಾವಣೆಗಳು ನಡೆಯುವಾಗ ನಾವೂ ಸಹ ಚುನಾವಣೆಗೆ ನಿಂತು ಸವರ್ಣ ಹಿಂದುಗಳ ಪ್ರೋತ್ಸಾಹ ಮತ್ತು ಬೆಂಬಲ ಪಡೆದುಕೊಂಡು ಚುನಾವಣೆಗಳಲ್ಲಿ ಗೆದ್ದು ಬಂದಿದ್ದೇವೆ. ಆದರೆ ರಾಜ್ಯಾಂಗದಲ್ಲಿ ಹೀಗೆ ಒಂದು ಜನಾಂಗದ ಅಭಿವೃದ್ಧಿಗೆ ಕಾಲಪರಿಮಿತಿಯನ್ನು ನಿರೂಪಿಸುವುದರಲ್ಲಿ ಆ ಯೋಜನೆ ನಾವು ನಿರೀಕ್ಷಿಸುವ ಮಟ್ಟದಲ್ಲಿ ಸಫಲವಾಗುತ್ತದೆಯೋ ಎಂಬುದನ್ನು ಸರ್ಕಾರದವರು ಕೂಲಂಕಷವಾಗಿ ಆಲೋಚನೆ ಮಾಡಬೇಕು. ಈ ವಿಷಯ ಬಹಳ ಗಮನಾರ್ಹವಾದುದು. ಈ ದಿವಸ ನಿಮ್ನ ವರ್ಗದವರು ಸರ್ಕಾರದ ಬೊಕ್ಕಸದಲ್ಲಿರುವ ಹಣವನ್ನೆಲ್ಲಾ ನಮಗೆ ಹಂಚಿಕೆಮಾಡಿ ಕೊಡಿ ಎಂಬುದಾಗಿ ವಾದ ಹೂಡಿಲ್ಲ; ಎಲ್ಲರಿಗಿಂತಲೂ ನಮಗೇ ಹೆಚ್ಚಿನ ಸಹಾಯ ನೀಡಿ ಎಂದು ನಾವು ಕೇಳುತ್ತಿಲ್ಲ; ಈ ದಿವಸ ನಾವು ಕೇಳುತ್ತಿರುವುದು ರಾಜ್ಯಾಂಗದಲ್ಲಿ ಗೊತ್ತುಮಾಡಿರುವ ಪ್ರಕಾರ ಈ ನಿಮ್ನ ವರ್ಗದವರು ಆ ಒಂದು ಗೊತ್ತಾದ ಕಾಲಾವಧಿಯಲ್ಲಿ ಇತರರ ಮಟ್ಟಕ್ಕೆ ಏರುವಂತೆ ಮಾಡಲು ಏನೇನು ಸಾಧ್ಯವಿದೆಯೋ, ಅದಕ್ಕಾಗಿ ಏನೇನು ಮಾಡಬೇಕೋ, ಅಷ್ಟನ್ನು ಮಾತ್ರ ಮಾಡಿಕೊಡಿ ಎಂಬ ಒಂದು ಬೇಡಿಕೆಯನ್ನು ಸರ್ಕಾರದವರ ಮುಂದೆ ಇಡುತ್ತಿದ್ದೇವೆ. ಉದಾಹರಣೆಗೆ ಈ ಜಮೀನು ಹಂಚಿಕೆ ವಿಚಾರದಲ್ಲಿ ಹಂಚಿಕೆ ಆಗತಕ್ಕ ಜಮೀನಿನಲ್ಲಿ ಶೇಕಡ 20 ರಷ್ಟನ್ನು ಈ ನಿಮ್ನ ವರ್ಗದವರಿಗೆ ಮೀಸಲಾಗಿಡಬೇಕೆಂಬುದಾಗಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ; ಇದು ಬಹಳ ಸಂತೋಷದ ವಿಷಯ. ಆದರೆ ಹಂಚಬೇಕಾಗಿದ್ದ ಜಮೀನೆಲ್ಲಾ ವಿಲೇವಾರಿಯಾಗಿ ಹೋದನಂತರ ಇಂಥ ಆರ್ಡರನ್ನು ಮಾಡಿದ್ದರಿಂದ ಏನು ಸುಖವಿದೆ? ಹಾಗೆ ಕೊಡಲು ಜಮೀನುಗಳೆಲ್ಲಿ ಉಳಿದಿವೆ? ಈಗ ಉಳಿದಿರತಕ್ಕ ಜಮೀನುಗಳು ಯಾವುವೆಂದರೆ-ಗೋಮಾಳ ಮತ್ತು ಫಾರೆಸ್ಟ್ ಜಮೀನುಗಳು ಮಾತ್ರ. ಫಾರೆಸ್ಟು ಪ್ರದೇಶವನ್ನು ವ್ಯವಸಾಯಕ್ಕೆ ಕೇಳಿದರೆ ಸಂಸ್ಥಾನದ ವಿಸ್ತೀರ್ಣದಲ್ಲಿ ಶೇಕಡ 30 ರಷ್ಟು ಕಾಡು ಇದ್ದೇ ತೀರಬೇಕೆಂದು ಹೇಳುತ್ತಿದ್ದಾರೆ. ಆದರೆ ಈಗ ಕಾಡು ಇರುವುದೇ ಶೇಕಡ 14 ಅಥವಾ 15 ರಷ್ಟು ಇದೆ. ಆದುದರಿಂದ ಕಾಡುಗಳನ್ನು ವ್ಯವಸಾಯಕ್ಕೆ ಕೊಡಲು ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿಯುಂಟಾಗಿದೆ.

ಆದ್ದರಿಂದ ಈ ಪ್ರಜಾ ಸರ್ಕಾರ ಆಡಳಿತವನ್ನು ವಹಿಸಿಕೊಂಡಮೇಲೆ ಕಷ್ಟದಲ್ಲಿ ಸಿಲುಕಿ ನರಳುತ್ತಿದ್ದಂಥ ನಿಮ್ನ ವರ್ಗದವರಿಗೆ ನಾವೂ ಮನುಷ್ಯರಾಗಿ ಬಾಳಬೇಕು ಎಂಬ ಮನಸ್ಸು ಅವರಲ್ಲಿ ಹುಟ್ಟಿರುವ ಕಾಲದಲ್ಲಿ, ಅವರೂ ಸಹ ಇತರರರಂತೆಯೇ ಒಂದು ಸಮಾಜದಲ್ಲಿ ವ್ಯಕ್ತಿಗಳು ಎಂದು ಕರೆಸಿಕೊಳ್ಳೋಣ ಎಂಬ ಒಂದು ಮನಸ್ಸು ಬದಲಾವಣೆ ಅವರಲ್ಲಿ ಆಗಿರುವ ಕಾಲದಲ್ಲಿ, ಅವರಿಗೆ ಸರಿಯಾದಂಥ ಒಂದು ಅವಕಾಶವನ್ನು ಎಲ್ಲಾ ಕಡೆಗಳಲ್ಲೂ ಕಲ್ಪಿಸಬೇಕಾದದ್ದು ಅತ್ಯಾವಶ್ಯಕ. ಅದಕ್ಕೆ ಸರಿಯಾದ ಒಂದು ಯೋಜನೆಯನ್ನು ತಯಾರಿಸುವುದಕ್ಕೆ ಸರ್ಕಾರದವರು ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

*Sri M. PALANIYAPPAN (Ulsoor).—Mr. Deputy Speaker, Sir, though last year I could welcome the Budget with pleasure, this time I have to do it with a little pain. The integration of Bellary into Mysore has brought in its train many problems. The first and foremost is that some of the taxes in the Mysore State had to be brought to the level of Bellary. At the time of integration we naturally thought that the same taxes as existed in Mysore State would be levied in Bellary. But instead, we find that the rates of taxes in Mysore State have been brought to the rates obtaining in Bellary. We have to face a deficit of 41 lakhs so far as Bellary Diistrict is concerned. The Government of Mysore should have taken proper steps andshouuld have exercised proper vigilance and care when the merger took place. We are sorry to note that the Government have not made any strong representation with regard to the deficit arising from the merger of Bellary. Since the time at my disposal is very short, I will just rush through many points which I have just noted down, Sir.

Regarding the Five-Year Plan, though it is very good, the duration is very short because we have to do so many things in so short a period. Most of these river valley projects mentioned in the Five-Year Plan, through very good, should not have been rushed through in so short a period, because in order to meet the expenses that are contemplated under the Five-Year Plan, we have to resort to fresh and increasing taxation. As remarked the other day by Sri H. K. Veeranna Gowdh, the people of the States have been taxed from three corners, from the State as well as the local bodies. Specially for a common man in a city like Bangalore, the burden is too much. He has to pay so many taxes and still the Government seems to think that the people of the cities can bear some more burden. I feel that there is much agitation about the taxes in respect of the agriculturists. I have to state that it is 30 years since the agriculturists are having the privilege to pay these low taxes. The present enhancement is not too much for them. I feel that the Government is very sympathetic about the agriculturists in proposing this small enhancement in the land revenue. My opinion is that the land revenue should have been increased more than what is now proposed. Instead of 12½ per cent on dry lands, they should have increased to at least 50 per cent, because the statistics I have collected reveal that any raiyat can now easily pay double the land revenue that he is paying to-day.

HON'BLE MEMBERS.—What are the statistics ? We want to know.

Mr. DEPUTY SPEAKER.—Let there be no interruption. He has got his own statistics.

Sri K. PRABHAKAR (Nelamangala-Scheduled Castes).—At least some salient figures we want, Sir, because it appears that the statistics seems to be contrary to facts.

Mr. DEPUTY SPEAKER.—Let him go on.

Sri M. PALANIYAPPAN.—Sir, the coffee-estate owners and cardamom-estate owners are just minting money. People of the cities know very well how much they pay for a pound of coffee powder as compared to previous rates. Naturally this Rs. 10 per acre that the Government are now contemplating to levy is very very low and that is the reason why I have moved an amendment that it has to be increased to Rs. 20.

Regarding tax on Hotels, Sir, I should bring to the notice of this Hon'ble House that 10 per cent yield, nobody gets today. Either the hotel-keepers have to increase the rates that are prevailing now or they should close down the hotels and go away. No business concern is capable of yielding 10 per cent. It may hardly yield about 2 or 3 per cent. If hotel-keepers are asked to pay 10 per cent on the turnover, after giving that 10 per cent to the Government, they will be left with nothing, as hotel expenses and water supply charges have got to be paid. In addition, the Government has been kind enough to give the liberty to owners of the buildings to increase the rents of buildings in which hotels

* Asterisk indicates that the speech has not been revised by the Member concerned.

(Sri M. PALANIYAPPAN.)

are located by 200 to 300 per cent. Naturally the hotel-keepers are taxed from all corners and they are driven to an awkward corner. We know that if outsiders visit the State, they generally come and stay in hotels and they generally judge standards in the State by the amenities they get in that hotel. That will give them a first impression. If we want that the outsiders should carry with them a good impression of our State, naturally it depends upon the facilities and amenities that are available to them at hotels. For these reasons I have to state that the tax on hotels will work as a great hardship and it will be something like killing the goose that lays the golden egg. Even as it is, the hotel-keepers will have to pay water-tax, electricity surcharge, professional tax, income-tax, super-tax, etc., and if in addition to all this, the Government want them to pay a further 10 per cent over their turn-over, naturally they feel the burden more acutely.

Mr. DEPUTY SPEAKER.—Your time is up.

Sri M. PALANIYAPPAN.—I would only like to suggest one more point, Sir, and that is nationalisation of the Bangalore Transport Co., because that would benefit the State in two ways. One is, the profits that the Company is getting will be added to the revenues of the Government and another, the State can provide better amenities to the people. Now the people in the City are very much handicapped by this road-transport; even once in half-an-hour, we do not get a bus.

I am told that in the Agricultural Department recently huge amount of stocks are missing, and there is also an impression that much wastage is happening in that Department. I can just quote for reference one point. It appears that there was a cotton pressing machine at Maddur. Now it has been shifted to Arsikere and that machine has been kept idle for more than ten years and now the Departmental people are trying to make out that it is useless. The Department has neglected that machine for more than 10 years. Now the working capacity of that machine is reduced from 120 lb. to 80 lb. and it will be useless and the Government will have to give another Rs. 75,000 or 1,00,000 to replace it.

I would like to refer to Medical Department.

Mr. DEPUTY SPEAKER.—Your time is over. You should have referred to it earlier. You cannot speak further.

ಶ್ರೀ ಎಂ. ಮಾದಯ್ಯ (ನಂಜನಗೂಡು-ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಈ ದಿವಸ ಬೆಳಿಗ್ಗೆ ಮುಂದಿನ ಸಾಲಿನ ಆಯವ್ಯಯದ ಮೇಲೆ ಆದ ಭಾಷಣಗಳಲ್ಲಿ ಬಂದ ಟೀಕೆಗಳಿಗೆ ನಮ್ಮ ಹಣಕಾಸಿನ ಸಚಿವರು (ಮುಖ್ಯ ಮಂತ್ರಿಗಳು) ಜವಾಬು ಕೊಡುವಾಗ ಈ ಸಭೆಯ ಹರಿಜನ ಸದಸ್ಯರ ವಿಚಾರದಲ್ಲಿಯೂ, ಹರಿಜನರ ಸಮಸ್ಯೆಗಳು ಮತ್ತು ಅವರ ಅಭಿವೃದ್ಧಿಯ ವಿಚಾರದಲ್ಲಿಯೂ ಕೆಲವು ಮಾತುಗಳನ್ನಾಡಿದ್ದಾರೆ. ನಾನು ತಿಳಿದುಕೊಂಡಿರುವ ಮಟ್ಟಿಗೆ ಅವರು ಹೇಳುವಾಗ, ಹರಿಜನರು ನ್ಯಾಯವಾಗಿ ಕೇಳುವುದನ್ನು ಯಾವ ರೀತಿ ಕೇಳಬೇಕೋ ಆ ರೀತಿ ಕೇಳಬೇಕು, ಅದನ್ನು ವ್ಯಾಖ್ಯಾನ ರೀತಿಯಲ್ಲಿ ಕೇಳಿದರೆ ಅದು ಆಗದ ಮಾತೆಂದು ಹೇಳಿ, ಶಂಕರಾಚಾರ್ಯರು ವಗೈರೆ ಮತಾಚಾರ್ಯರ ವಿಷಯದಲ್ಲಿ ಕೆಲವು ಮಾತುಗಳನ್ನಾಡಿದರು. ಈಗ ಅವರು ಸಭೆಯಲ್ಲಿಲ್ಲದಿರುವುದರಿಂದ ನನಗೆ ಮಾತನಾಡುವುದಕ್ಕೆ ಮನಸ್ಸೇ ಬರುವುದಿಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಆದರೂ ಒಂದೆರಡು ಮಾತು ಹೇಳುತ್ತೇನೆ. ಹಿಂದೂ ಮತದ ಸಂಘಟನೆಯಲ್ಲಿ ತಪ್ಪಿದೆ, ಸಮಾಜದ ಕಟ್ಟುಪಾಡುಗಳನ್ನು ಬಿಡಿಸುವುದು ಸುಲಭ ಸಾಧ್ಯವಲ್ಲ ಎಂದರು. ಇದನ್ನು ಮಾರ್ಪಡಿಸಲು ಬಹಳ ಕಷ್ಟ ಸಾಧ್ಯವೆಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಈ ಹೊತ್ತು ಇಲ್ಲಿ ನಾವು ಕೇಳುವಾಗ ಸರ್ಕಾರ ತನ್ನ ಪಾಲಿಗೆ ಬಂದಿರತಕ್ಕ ಕೆಲಸಗಳನ್ನು ಎಷ್ಟು ಮಟ್ಟಿಗೆ ಮಾಡಿದೆ, ಹರಿಜನರಿಗೆ ಜೀವನ ಕಷ್ಟಕರವಾಗಿದೆ, ಇವರಿಗಿರುವ ಕಠಿಣವಾದ ಸಮಸ್ಯೆಗಳನ್ನು ಹೇಗೆ ಪರಿಹರಿಸುವುದು ಎಂದು ಮುಂತಾಗಿ ಕೇಳುವಾಗ, ಹರಿಜನರು ತಾವು ಇಡೀ ದೇಶದ ಪ್ರತಿನಿಧಿಗಳು, ಹರಿಜನ ಕೋಮಿಗಾಗಿ ಮಾತ್ರ ಬಂದಿಲ್ಲ ಎಂಬ ಭಾವನೆಯಿಂದ ಕೇಳಬೇಕೆಂದು ಸೂಚಿಸಿದರು. ಇದನ್ನು ನಾವೇ ಒಪ್ಪಿಕೊಂಡಿದ್ದೇವೆ. ಹರಿಜನರು ಹರಿಜನರಿಗಾಗಿಯೇ ಮಾತನಾಡುವುದಿಲ್ಲವೆಂದು ತಿಳಿದುಕೊಂಡಿದ್ದೇವೆ. ಆದರೆ ಹರಿಜನರ ಸಮಸ್ಯೆ ಒಂದು National Problem ಎಂಬುದನ್ನು ಯಾರೂ ಮರೆಯಬಾರದು. ಕಾರಣವಿಷ್ಟೆ. ಅದರಲ್ಲಿಯೂ ಮುಖ್ಯ ಮಂತ್ರಿಗಳಿಗೇ ಹರಿಜನಾಭಿವೃದ್ಧಿಯ ಪೋರ್ಟ್‌ಫೋಲಿಯೋ ಇದೆ. ಇಡೀ ದೇಶದಲ್ಲಿ ಇತರ ಪ್ರಾಂತಗಳಲ್ಲಿ, ಕೇಂದ್ರ ಸರ್ಕಾರದಲ್ಲಿ ಏನಾಗುತ್ತಿದೆ, ಪಂಡಿತ ನೆಹರೂರವರು ಏನು ಹೇಳುತ್ತಿದ್ದಾರೆ, ಕೇಂದ್ರ ಸರ್ಕಾರದ ಅಭಿಪ್ರಾಯವೇನು, ಪತ್ರಿಕೆಗಳಲ್ಲಿ ಏನು ಬರುತ್ತಿದೆ ಎಂಬುದನ್ನೆಲ್ಲಾ ಸಂಬಂಧಪಟ್ಟ ಮಂತ್ರಿಗಳೂ ಅಧಿಕಾರ ವರ್ಗದವರೂ ಗಮನಕ್ಕೆ ತೆಗೆದುಕೊಳ್ಳಬೇಕು. ಮೊನ್ನೆ ಕಲ್ಕತ್ತಾದಲ್ಲಿ ಡಾಕ್ಟರ್ ಖಟ್ಜುರವರು ಕಾನ್ವೊಕೇಷನ್ ಭಾಷಣ ಮಾಡುತ್ತಾ ನಿಮ್ನ ವರ್ಗದ ಜನರ ಅಭಿವೃದ್ಧಿಯ ಕೆಲಸವು ಬಹು ಮುಖ್ಯವಾದುದು, ಇದೊಂದು ಅತಿ ತ್ವರಿತವಾದ national problem ಎಂದು ಹೇಳಿದ್ದಾರೆ. ಇದು ಇಷ್ಟೊಂದು ಪ್ರಧಾನವಾದ ಸಮಸ್ಯೆ ಎಂದು

ಹೇಳುವಾಗ, ಈ ಕೆಲಸವನ್ನು ದೇಶವನ್ನು ಕಟ್ಟುವ ಕೆಲಸ ವೆಂದು ತಿಳಿದುಕೊಳ್ಳಬೇಕು. ಹರಿಜನರು ಹೆಚ್ಚಾಗಿ ಕೇಳಬಾರದೆಂದು ಹೇಳಿದರು. ಎಂದಿಗೂ ಹಾಗಿಲ್ಲ; ನಾವು ಕೇಳತಕ್ಕದ್ದು ಬಹಳ ಸಾಧುವಾದುದು ಮತ್ತು ನ್ಯಾಯವಾದುದು. ಇಡೀ ದೇಶದಲ್ಲಿ ಹರಿಜನರು—ಅವರು ಹಳ್ಳಿಗಳಲ್ಲಿರಲಿ, ಪಟ್ಟಣಗಳಲ್ಲಿರಲಿ, ಸರ್ಕಾರದಲ್ಲಿರಲಿ—ಒಂದು ಸದ್ಭಾವನೆಯನ್ನಿಟ್ಟು ಕೊಂಡು ತಮ್ಮ ಅಭಿವೃದ್ಧಿಗೆ ಸಹಾಯ ಮಾಡುವವರಿಗೆಲ್ಲರಿಗೂ ಬಹಳ faithful ಆಗಿರುತ್ತಾರೆ. ಯಾರಾದರೂ ತಮಗೆ ನೂರು ರೂಪಾಯಿ ಸಾಲ ಕೊಟ್ಟರೆ ಹಾಗೆ ಕೊಟ್ಟವರಿಗೆ ಎಂದಿಗೂ ದ್ರೋಹ ಮಾಡಬಾರದೆಂದು ವಾಪಸು ಕೊಡುತ್ತಾರೆ, ನಂಬಿದವರನ್ನು ಕೈಬಿಡುವುದಿಲ್ಲ. ಈ ಸಭೆಯಲ್ಲಿ 19 ಜನರಿದ್ದಾರೆ, ರೂಲಿಂಗ್ ಪಾರ್ಟಿಯಲ್ಲಿರುವವರೂ ಕೂಡ ಸರ್ವರಿಗೂ ಬೆಂಬಲ ಕೊಟ್ಟುಕೊಂಡು ದೇಶದ ಹಿತವನ್ನು ಮನಸ್ಸಿನಲ್ಲಿಟ್ಟು ಕೊಂಡು ಹೋಗುತ್ತಿರುವುದು ಜನತೆಗೂ ಪತ್ರಿಕೆಗಳಿಗೂ ಸರ್ಕಾರಕ್ಕೂ ಗೊತ್ತಿದೆ. ಇದನ್ನು ಹೇಳಲು ಹೆಮ್ಮೆಪಡುತ್ತೇನೆ. ನಾನು ಹೀಗೆ ಹೇಳಿದರೆ ಬೇರೆ ರೀತಿ ಭಾವಿಸಬಾರದು. ನಾನಾಗಲೇ ಹೇಳಿದ ಹಾಗೆ, ವ್ಯಾಖ್ಯಾನ ವಗೈರೆ ಮಾಡದೆ ಏನು ಬೇಕೆಂದು ಕೇಳಿದರೆ ಅದನ್ನು ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಎರಡು ಮೂರು ವಿಷಯಗಳನ್ನು ಹೇಳುತ್ತೇನೆ. ನ್ಯಾಯವಾಗಿದ್ದರೆ ಏನಾದರೂ ಮಾಡುತ್ತೇವೆಂದೂ ಹೇಳಿದರು. ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಷನ್ನಿನ ಪ್ರಾರಂಭೋತ್ಸವ ನೆರವೇರಿಸುವಾಗ ಭಾರತದ ಪ್ರಧಾನ ಮಂತ್ರಿ ಜವಹರ್‌ಲಾಲ್ ನೆಹರೂರವರು, "ಯಾವುದೋ ಒಂದು ಜನಾಂಗ ಕೆಳಗಿದೆ, ಅದನ್ನು ನಾವು ಉದ್ಧಾರ ಮಾಡುತ್ತೇವೆಂಬ ಮನೋಭಾವದಿಂದ ಹೋಗಬಾರದು, ಆ ರೀತಿ ಹೇಳಬಾರದು. This must be borne in mind by every member of the Commission" ಎಂದು ಹೇಳಿದರು. Fundamental Rights ಗಳನ್ನು ಸರ್ವರೂ ಸಮನಾಗಿ ಅನುಭವಿಸಲೆಂದು ಆಸೆಪಡುವ ಪ್ರತಿಯೊಬ್ಬ ವ್ಯಕ್ತಿಯೂ ಇದನ್ನು ಮನಸ್ಸಿನಲ್ಲಿಡಬೇಕು; ನಾವು ಬೇರೆ ನೀವು ಬೇರೆಯಲ್ಲ. In some capacity we are working in different offices. ಈ ದೃಷ್ಟಿಯಿಂದ approach ಮಾಡಬೇಕೇ ಹೊರತು ನಾವು ಕೇಳುವುದಕ್ಕೂ ನೀವು ಕೊಡುವುದಕ್ಕೂ ಇದ್ದೇವೆಂದು ತಿಳಿದುಕೊಳ್ಳಬಾರದು. I may be serving here for some more years and may not be after some years, but as long as we serve here, we must work together as equal citizens, being the sons of the same country. ಈ ಮನೋಭಾವದಿಂದ ವರ್ತಿಸಬೇಕು. ಈ ದೃಷ್ಟಿಯಿಂದ ಹರಿಜನರ ವಿಷಯದಲ್ಲಿ ಭಾರತ ರಾಜ್ಯಾಂಗದಲ್ಲಿ ಏಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆಂಬುದನ್ನು ನೋಡಬೇಕು. ಈಗ ತಾನೆ ನನಗೊಂದು ಇಲ್ಲಸ್ಟ್ರೇಷನ್ ಬಂತು. ಅದನ್ನು ನೋಡಿದರೆ ಅದರಲ್ಲಿ ಮೊದಲೇ ಹೀಗೆ ಹೇಳಿದೆ: "ಸರ್ವೇಜನಾಸ್ಸುಖಿನೋಭವಂತು" ಎಂದಿದೆ. ಇದು ಭಾರತದ ರಾಜ್ಯಾಂಗದಲ್ಲಿರುವ ವೈಶಿಷ್ಟ್ಯ. ಅದರಲ್ಲಿಯೂ ಗಾಂಧೀಯವರ ತತ್ವವನ್ನು ನೋಡಿದರೆ, ಅವರು ಹೇಳುತ್ತಿದುದೇನೆಂದರೆ, ಏಣಿಯ ಕೆಳಗಿನ ಮೆಟ್ಟಲುಗಳಲ್ಲಿರುವವರನ್ನು ಮೇಲಿರುವವರು ತಮ್ಮ ಮಟ್ಟಕ್ಕೆ ತರಬೇಕೇ ಹೊರತು, ಹಿಡಿದು ಕೆಳಕ್ಕೆ ತಳ್ಳಬಾರದು ಎಂದು ಹೇಳುತ್ತಿದ್ದರು. ಇದೇ ರಾಜ್ಯಾಂಗದಲ್ಲಿರುವುದೂ. ಈ ದೃಷ್ಟಿಯಿಂದ ನಾವು ರಚನಾತ್ಮಕ ಸಲಹೆ ಕೊಟ್ಟರೆ ತಪ್ಪು ತಿಳಿದುಕೊಳ್ಳಬಾರದು. ನಾವು ಏನಾದರೂ ಕೇಳಿದರೆ ತಪ್ಪು ತಿಳಿದುಕೊಳ್ಳಬಾರದೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದು fail ಆದಾಗಲೇ ನಾವು ಕೇಳುವುದು. ಇದು ಕೋಮುವಾರು ಭಾವನೆಯೆಂದು ಭಾವಿಸುವುದು ಸರ್ವಥಾ ಸರಿಯಲ್ಲ.

Coming to the Budget, Sir, ಈಗ ಆಯವ್ಯಯದ ಪಟ್ಟಿ ನಮ್ಮ ಮುಂದಿದೆ. ಕಳೆದ ಸಾರಿ ಡಿಪ್ರೆಸ್ಡ್ ಕ್ಲಾಸ್ ಹೌಸಿಂಗ್‌ಗೆ 19 ಲಕ್ಷ ಕೊಟ್ಟಿದ್ದರು. ಬಳ್ಳಾರಿ ನಮಗೆ ಸೇರಿದ ಮೇಲೆ ಅದಕ್ಕೆ ತಕ್ಕ ಹಾಗೆ ಎರಡು ಲಕ್ಷ ರೂಪಾಯಿ ಹೆಚ್ಚಿಸಿದರೆ 21 ಲಕ್ಷವಾಗುತ್ತಿತ್ತು. ಆ ಬಾಬಿನಲ್ಲಿ 21 ಲಕ್ಷ 1954-55ನೇ ಸಾಲಿಗೆ ಕೊಟ್ಟಿದ್ದಾರೆ. ಆ ಚಾಲ್ತಿ ಸಾಲಿನಲ್ಲಿರುವಷ್ಟೇ ಮುಂದಿನ ಸಾಲಿನಲ್ಲಿ ಕೊಟ್ಟಂತಾಗುತ್ತಿತ್ತು. ಈ ಆಯವ್ಯಯದ ಪಟ್ಟಿಯಲ್ಲಿ ಈ ಬಾಬಿನಲ್ಲಿ 21 ಲಕ್ಷ ಇರುವುದರ ಕಡೆ 17 ಲಕ್ಷ ಮೊತ್ತ ಇಟ್ಟು 4 ಲಕ್ಷವನ್ನು ಬೇರೆ ಕಡೆ ಕೊಟ್ಟಂತೆ ತೋರಿಸಿ, 1954-55ನೆಯ ಸಾಲಿಗೆ ನಿಮ್ನ ತರಗತಿಯವರ ಅಭಿವೃದ್ಧಿ ಬಾಬಿನಲ್ಲಿ ಮೈಸೂರು ಸರ್ಕಾರ ಏನೂ ಹೆಚ್ಚಿಗೆ ಕೊಟ್ಟಿಲ್ಲ. ನಿಜಾಂಶ ಹೀಗಿರುವಾಗ ಈ ಬಾಬಿಗೆ 25 ಲಕ್ಷ ವಿನಿಯೋಗಿಸಲಾಗಿಟ್ಟಿದ್ದೇವೆ ಎಂದು ಹೇಳುವುದು ಸರಿಯಲ್ಲ.

5 P.M.

ಮನೆಗಳನ್ನು ಕಟ್ಟುವ ಯೋಜನೆಯನ್ನು ಮಾರ್ಪಾಟು ಮಾಡಿ ಅಕ್ಟೋಬರ್ 30ನೆಯ ತಾರೀಖಿನಲ್ಲಿ ಗವರ್ನಮೆಂಟ್ ಆರ್ಡರಾಯಿತು. ಹಿಂದಿದ್ದ ಯೋಜನೆಯ ಪ್ರಕಾರ ಎಲ್ಲಾ ಸ್ಕೀಮುಗಳಿಗೂ ಸ್ಕೋಪನ್ನು ವಿಸ್ತಾರವಾಡಿದರು. ಆಗ ಎಲ್ಲಾ ಕವರ್‌ಮಾಡಿದ್ದರಿಂದ ನಾರ್ಮಲ್ಲಾಗಿ ಕೊಡುವ 21 ಲಕ್ಷದ ಜೊತೆಗೆ 4 ಲಕ್ಷ ಜಾಸ್ತಿ ಮಾಡಿ 25 ಲಕ್ಷ ಕೊಟ್ಟರೆ ನ್ಯಾಯವಾಗಿರುತ್ತದೆಂದು ಯೋಚನೆ ಮಾಡಿ ಮೂರು ತಿಂಗಳಿಗೆ ಮುಂಚೆಯೇ, ಬಡ್ಜೆಟ್ ತಯಾರಾಗುವುದಕ್ಕೆ ಮುಂಚೆಯೇ ನಿರ್ಣಯಮಾಡಿ ಕಳುಹಿಸಿರುವುದು ಈ ರೀತಿಯಿದೆ:—

> "This Assembly is of the opinion that a sum of not less than twenty-five lakhs of rupees be provided in the Budget for the year 1954-55 under "Depressed Class Housing" and for such other purposes specified in the Government Order dated 30th October 1953, towards the amelioration of the Depressed Classes in the State."

The Finance Minister announced in his speech delivered on the day on which he presented the Budget that a sum of Rs. 25 lakhs has been provided for the amelioration of the Depressed Classes. I heartily congratulated him for this. He had said, "Government are very anxious to improve the conditions of Scheduled Castes". Sir, Government have not provided Rs. 25 lakhs in the Budget for 1954-55 for

(ಶ್ರೀ ಎಂ. ಮಾದಯ್ಯ.)

their (Depressed Class) amelioration. But this is an incorrect statement: let me use the word 'incorrect'. It is incorrect for these reasons. If you look into the Memorandum on the receipt side, page 4, you will find "Grant-in-aid from Central Government" is plus 3.00 lakhs, "due to anticipated grant towards Scheduled Castes and Tribes". So, if this is included, that means 3 lakhs will have to be removed out of Rs. 25 lakhs. Another thing is, under Article 275, Government of India have earmarked certain sums out of the Consolidated Fund of India to the States concerned towards the amelioration of the Criminal Tribes (Scheduled tribes). After integration forty lakhs of rupees is to be given to the States form "Aid from the Centre". In addition to that, three lakhs are increased. On page 62 of the Budget Memorandum under "Grant-in-aid from Government of India for the current year" 40 lakhs are shown. Last year it was 386 lakhs and this year it is 389 lakhs, *i.e.*, 3 lakhs more. "The Budget also includes grants for upliftment of scheduled castes and tribes". Therefore Sir, it is very clear. You have anticipated about 4 to 5 lakhs from the Centre and those four lakhs have been brought on page 28 of Vol. II Budget. For the upliftment of the Scheduled Castes and Tribes 8 lakhs have been shown. So, if you remove those 4 lakhs the remaining 4 lakhs are taken from the current year's allotment is 19 lakhs which ought to have been for the next year, that is, for 1954-55 Budget proposal. The amount provided for the next year is 17 lakhs and the provision made is less than normal because, including Bellary, it ought to have been 21 lakhs. Now, if you had provided the same amount as provided for the current year, you should have provided 19+2 lakhs. Out of that amount you have taken away 4 lakhs and included under this amount of 8 lakhs. The total of 17 plus 8 comes to 25 lakhs and you say that Mysore Government have increased. Therefore I said it is an incorrect statement and steps should be taken to correct it and to allot the amount for the current year. That is one thing so far as the budget is concerned.

ನಿಮ್ನವರ್ಗದವರಿಗೆ ಸ್ಕಾಲರ್‌ಷಿಪ್ ಕೊಡಬೇಕೆಂದು ನಿರ್ಣಯ ಕಳುಹಿಸಿರುವುದು ಈ ರೀತಿಯಾಗಿದೆ :—

> "This Assembly is of the opinion that the Budget allotment for the year 1954-55 under D.C. and B.C. scholarships for awarding scholarships to the depressed class pupils and backward class pupils studying in several High Schools in the State, be increased by 100 per cent of the allotment made for the current year so that all the deserving poor applicants be awarded scholarships."

ನಾವು ಕಳುಹಿಸಿರುವ ಈ ನಿರ್ಣಯವು ಜನವರಿಯಲ್ಲಿ ಪ್ರಿಂಟಾಗಿದೆ. ಬಡ್ಜೆಟ್ ತಯಾರಾಗುವಾಗ ಮಂತ್ರಿಮಂಡಲ ಯಾವ ರೀತಿ ತಿಳಿಸಿದರೇ ಗಮನಿಸಿದಾಗಿ ಈ ಬಾಬಿಗೆ ಹಣ ಒದಗಿಸಬೇಕಾಗಿತ್ತು. ಸರ್ಕಾರದವರು ಸಂಬಂಧಪಟ್ಟ ಇಲಾಖೆಗೆ ತಕ್ಕ ವ್ಯವಸ್ಥೆಗಳು ಮಾಡಬೇಕಾಗಿತ್ತು. ಆ ರೀತಿ ಮಾಡಿಲ್ಲ. ಅದೂ ಅಲ್ಲದೆ ಡಿಪ್ರೆಸ್ಡ್ ಕ್ಲಾಸ್ ವಿಚಾರದಲ್ಲಿ ಸೆಂಟ್ರಲ್ ಪಾಲಿಸಿ ಸಮಿತಿಯು ಡಿಸೆಂಬರ್ 1952ರಲ್ಲಿ ಕಳೆದು ವರ್ಷ ಬಡ್ಜೆಟ್ ತಯಾರಾಗುವುದಕ್ಕೆ ಮುಂಚೆ ಏನು ನಿರ್ಣಯಮಾಡಿದ್ದರು ಎಂಬುದನ್ನು ನೋಡಬೇಕು.

There are two resolutions:

> "Allotment of a sum of Rs. 5 lakhs in the Budget for the year 1953-54, that is current year, which was already adopted in respect of building grants of the Scheduled Castes hostels in the State."

ಇದೊಂದು.

Another resolution is:

> "Allotment of a sum of at least one lakh in the budget for the year 1953-54 to award scholarships to the deserving Scheduled Castes students studying in several high schools in the State and increase the rate of scholarships in this grade from Rs. 7-8-0 per annum to Rs. 10 per annum to each pupil."

ಈ ರೀತಿಯಾಗಿ 1952ನೆಯ ಇಸವಿಯಲ್ಲಿ ನಿರ್ಣಯ ಮಾಡಿರುವುದನ್ನು ಹಣಕಾಸಿನ ಸಚಿವರು ಗಮನಿಸಿ 1953-54ನೆಯ ಸಾಲಿನ ಬಡ್ಜೆಟ್ ಮಾಡುವಾಗಲೇ ಕನ್ಸಿಡರ್ ಮಾಡಬೇಕಾಗಿತ್ತು. ಇದನ್ನು ಗಮನಿಸದೆ ಈಗಲೂ ಕೈಬಿಟ್ಟಿರುವುದನ್ನು ನೋಡಿದರೆ

Government is not responsive ಎಂದು ಒತ್ತಾಯಮಾಡಿ ಹೇಳಬೇಕಾಗುತ್ತದೆ. ಹೀಗೆ ಕೇಳಲು ಲೆಜಿಟಿಮೇಟ್ ರೈಟ್ ಇದೆ. ಆದರೆ ಹೀಗೆ ಹೇಳುತ್ತಾರೆಂದು ಇದನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ದೇಶದ ಹಿತದೃಷ್ಟಿಯಿಂದ ಹೀಗೆ ಮಾಡಬೇಕಾದದ್ದು ಅಗತ್ಯ. ಆದ್ದರಿಂದ ನಾನು ಕೊಟ್ಟಿರುವ ಸೂಚನೆಗಳನ್ನು ಮತ್ತು ಸಮಿತಿಯವರು ಮಾಡಿರುವ ಸಲಹೆಗಳನ್ನು ಸರ್ಕಾರದವರು ಗಮನಿಸಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಪರಮೇಶ್ವರಪ್ಪ (ಸಿರುಗುಪ್ಪ).—ಬಳ್ಳಾರಿ ಜಿಲ್ಲೆಯವರಿಗೆ ಹೋದ ಬಡ್ಜೆಟ್ಟಿಗಿಂತ ಈ ಬಡ್ಜೆಟ್ಟಿನಲ್ಲಿ ಅನುಕೂಲತೆ ಹೆಚ್ಚಿಸಿ ಕೊಡುವುದಕ್ಕೆ ಅವಕಾಶ ಮಾಡಿರುವುದಕ್ಕೂ ಅಲ್ಲಿನ ಹುಟ್ಟುವಳಿಯನ್ನು ಹೆಚ್ಚಿಸಲು ಕಾರ್ಯಕ್ರಮ ಕೈಕೊಂಡಿರುವುದಕ್ಕೂ ವಂದನೆಗಳನ್ನರ್ಪಿಸುತ್ತೇನೆ. ಬಳ್ಳಾರಿ ಮೈಸೂರು ದೇಶಕ್ಕೆ ಸೇರಿದ್ದರಿಂದ ತಲೆನೋವು ಬಂದಿದೆ, ಅದರಿಂದ ವೆಚ್ಚ ಹೆಚ್ಚಾಗಿದೆ, ಬಡ್ಜೆಟ್ ಖೋತಾ ಹೆಚ್ಚಲು ಅವಕಾಶವಾಗಿದೆ ಎಂದು ಎದುರು ಪಕ್ಷದ ಸದಸ್ಯರು ಮತ್ತು ನಮ್ಮ ಪಕ್ಷದ ಸದಸ್ಯರು ಕೆಲವು ಮಂದಿ ಆಕ್ಷೇಪಿಸಿದ್ದಾರೆ, ಆದರೆ ಒಟ್ಟು ಖೋತಾ ಮೂರುಕೋಟಿಗಿಂತ ಹೆಚ್ಚಾಗಿರುವುದರಿಂದ ಬಳ್ಳಾರಿಯದೇನೂ ಹೆಚ್ಚಿಲ್ಲ. ಬಳ್ಳಾರಿಯ ಬಾಂಧವ್ಯ ಮೈಸೂರು ಸಂಸ್ಥಾನಕ್ಕೆ ಕಲೆತು ಬಂದಿದೆ. ಈ ಸಂಸ್ಥಾನಕ್ಕೆ ಲಗತ್ತಾಗಿದ್ದುದರಿಂದ ಕಾರಣಾಂತರಗಳಿಂದ ಇಲ್ಲಿಗೆ ಅದನ್ನು ಸೇರಿಸಿದ್ದಾರೆ. ಈಗ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ರೈತರಿಗೆ ಕರೆಂಟನ್ನು ಒದಗಿಸಿ ತೆರಿಗೆಯನ್ನು ಹಾಕಿದರೆ ಕೊಡಲು ಅವರು ಒಪ್ಪುತ್ತಾರೆ. ಬಳ್ಳಾರಿ ತಾಲ್ಲೂಕು ಬಿಟ್ಟು ಉಳಿದ ತಾಲ್ಲೂಕುಗಳಿಗೆ ಕರೆಂಟು ಒದಗಿಸುವುದಕ್ಕೆ ಛಾರ್ಜು ಜಾಸ್ತಿ ಮಾಡಿದರೂ ತಪ್ಪಿಲ್ಲ. ಅದರ ಆವಶ್ಯಕತೆ ಅಲ್ಲಿ ಬಹಳವಾಗಿರುವುದರಿಂದ ಒದಗಿಸಿದ್ದೇ ಆದರೆ ಎರಡು ವರ್ಷಗಳ ಕಾಲದಲ್ಲಿ 50-60 ಲಕ್ಷ ರೂಪಾಯಿಗಳ ಆದಾಯ ಬರುತ್ತದೆ. ಹೀಗೆ ಬಳ್ಳಾರಿ ಜಿಲ್ಲೆಯಲ್ಲಿ ವರಮಾನ ಬರುವಂತೆ ಮಾಡಿಕೊಳ್ಳಲು ಅವಕಾಶವಿದೆ.

ಮೈನಿಂಗ್ ತೆಗೆದುಕೊಂಡರೆ, ಸೊಂಡೂರು ತಾಲ್ಲೂಕಿನಲ್ಲಿ ಯಶವಂತಪುರದ ಬಳಿ ಮ್ಯಾಂಗನೀಸ್ ಮತ್ತು ಬಂಗಾರ ಸಿಕ್ಕುತ್ತದೆ. ಆ ಏರಿಯಾವನ್ನು ರೀಸರ್ವೆ ಮಾಡಿಸಿ ಯಾವ ಯಾವ ಲೋಹಗಳು ಸಿಕ್ಕುತ್ತವೆಂಬುದನ್ನು ಕಂಡುಹಿಡಿದು improve ಮಾಡುವುದಕ್ಕೆ ಪ್ರಯತ್ನಮಾಡಿದರೆ ತಮಗೆ ಖಂಡಿತವಾಗಿ ನಷ್ಟವಾಗುವುದಿಲ್ಲ. ಮ್ಯಾಂಗನೀಸಿನಿಂದಲೇ 50 ಲಕ್ಷ ರೂಪಾಯಿಗಳು ಆದಾಯ ಬರುತ್ತದೆ. ನಾನು ನಿಂತಿರುವ ಫಿರ್ಕಾ ಆದ ಆದವಾನಿಯಲ್ಲಿ ಮತ್ತು ಕೌಶಗಿ ಫಿರ್ಕಾದಲ್ಲಿ 1,500 ಬಾವಿಗಳಿವೆ. ಒಟ್ಟು ಫಿರ್ಕಾದಲ್ಲಿ ಬೇರೆ 1,500 ಬಾವಿಗಳಿವೆ. ಹೀಗೆ ಒಟ್ಟು 3,000 ಬಾವಿಗಳಿದ್ದಾಗ್ಯೂ 3 ಬಾವಿಗಳು ಇದ್ದ ಒಂದು ಗ್ರಾಮಕ್ಕೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. 3,000 ಬಾವಿಗಳಿರುವ ಕಡೆ ಇದುವರೆಗೂ ಏನೂ ಮಾಡಿಲ್ಲ. ಒಟ್ಟು ನಮ್ಮ ಫಿರ್ಕಾದಿಂದ 1,50,000 ಟನ್ ಉರುಳು ಗಡ್ಡೆ (ಈರುಳ್ಳಿ) ಬೆಳೆಯುತ್ತಿದೆ. 25,000 ಚೀಲಗಳು ಎಳ್ಳು ಬೆಳೆಯುತ್ತಿದೆ. ಈ ಮಾಲು ಮದ್ರಾಸು, ಸಿಂಗಪೂರ್, ರಂಗೂನ್ ಮತ್ತು ಸಿಲೋನ್‌ವರೆಗೂ ಹೋಗುತ್ತದೆ. ತಾವೇನೋ ಗ್ರೋ-ಮೋರ್-ಫುಡ್ ಎಂದು ಹೇಳುತ್ತೀರಿ. ನಮ್ಮ ತಾಲ್ಲೂಕನ್ನು ನೋಡಿದರೆ ಅದೆಲ್ಲಾ ಹೆಸರಿಗೆ ಮಾತ್ರ. ಇದುವರೆಗೆ ನಮ್ಮ ಜಿಲ್ಲಾದಿಂದ ಹೋದವರಾಗಿ 1945ನೆಯ ಇಸವಿಯಿಂದ 1951ನೆಯ ಇಸವಿಯವರೆಗೂ ಒಬ್ಬರು ಮಂತ್ರಿಗಳೂ ಮತ್ತು 10-4-1952ರಿಂದ 30-9-53ರ ವರೆಗೂ ಇನ್ನೊಬ್ಬ ಮಂತ್ರಿಗಳೂ ಮಂತ್ರಿಮಂಡಲದಲ್ಲಿದ್ದರು. ಆದರೂ ಯಾರೂ ಏನೂ ನಮ್ಮ ಜಿಲ್ಲೆಯ ಬಗ್ಗೆ ಕೆಲಸಮಾಡಿಲ್ಲ. ಇನ್ನಾದರೂ ಜರೂರಾಗಿ ಈ ನಮ್ಮ 7 ತಾಲ್ಲೂಕುಗಳಿಗೆ ಕರೆಂಟನ್ನು ಒದಗಿಸಲು ಸರ್ವೇ ಮಾಡಿಸಿ ವಿದ್ಯುಚ್ಛಕ್ತಿ ಒದಗಿಸಿಕೊಟ್ಟರೆ ಇನ್ನು ಒಂದೆರಡು ವರುಷಗಳಲ್ಲೇ ಅಲ್ಲಿಂದ ಬೇಕಾದಷ್ಟು ಆದಾಯವನ್ನು ಪಡೆಯಬಹುದಾಗಿದೆಯೆಂದು ನಾನು ಹೇಳಬಲ್ಲೆ. ಅಲ್ಲದೆ ಹತ್ತಿರದಲ್ಲಿಯೇ ರಾಯದುರ್ಗಕ್ಕೆ ಹೋಗುವ ಮಾರ್ಗದಲ್ಲಿ ಸಿಕ್ಕುವ ಗುಡ್ಡದಲ್ಲಿ ಕಾವಿಕಲ್ಲು ಸಿಕ್ಕುತ್ತದೆ. ಇದನ್ನೂ ಪರಿಶೀಲನೆ ಮಾಡಬೇಕಾಗಿದೆ. ನಮ್ಮ ಕಡೆಯಲ್ಲಿನ ಭೂಮಿ ಬಹಳ ಫಲವತ್ತಾದ ಭೂಮಿ. ಸರಿಯಾದ ಮಳೆ ಒಮ್ಮೆ ಬಂದರೆ ಮೂರು ವರ್ಷದ ಬೆಳೆ ಆಗುತ್ತದೆ. ಅಂಥಾದ್ದರಲ್ಲಿ ಸ್ವಾತಂತ್ರ್ಯ ಬಂದು ಆರು ವರ್ಷಗಳಾದರೂ ರೈತರಿಗೆ ಸಹಾಯ ಮಾಡಲು ಯಾರೂ ಮುಂದೆ ಬಂದಿಲ್ಲ. ಇನ್ನಾದರೂ ಈ ಬಗ್ಗೆ ಗಮನಕೊಟ್ಟು ಬಡಬಗ್ಗರಿಗೆ ಸಹಾಯ ಮಾಡುವುದನ್ನು ನೋಡಬೇಕು. ಪ್ರತಿಯೊಬ್ಬರೂ ಪಟ್ಟಣವಾಸಿಗರ ಕಡೆ ನೋಡುತ್ತಾ ಅವರಿಗೆ ಸೇತುವೆಗಳನ್ನೂ, ಸಿಮೆಂಟ್ ರಸ್ತೆಗಳನ್ನೂ ಮಾಡುವುದಕ್ಕೆ ಖರ್ಚು ಮಾಡುತ್ತಿದ್ದೀರಿ. ಅದೇನೂ ತಪ್ಪೆಂದು ನಾನು ಹೇಳುವುದಿಲ್ಲ. ಆದರೆ ಹಳ್ಳಿಯಿಂದ ಡಿಲ್ಲಿ ಎಂದು ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದ ಮಾತನ್ನು ನಾವು ನೆನಪಿಗೆ ತಂದುಕೊಳ್ಳಬೇಕು. ಆದ್ದರಿಂದ ಹಳ್ಳಿಯವರು ಯಾರು ಎಂಬುದನ್ನು ಸ್ವಲ್ಪ ಕಣ್ಣೆತ್ತಿ ನೋಡಿ ಇನ್ನು ಮೇಲಾದರೂ ಹಳ್ಳಿಗಳವರ ಕಡೆ ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಅವರಿಗೆ ಸರಿಯಾದ ಮನೆಗಳಿಲ್ಲ, ಮಠಗಳಿಲ್ಲ!

ಇನ್ನೊಂದು ವಿಷಯ. ನಮ್ಮ ಊರಿನಲ್ಲಿ ಒಟ್ಟು 18,000 ಜನಸಂಖ್ಯೆಯಿದೆ. ಆದರೆ ಅಲ್ಲಿ ಕಾಲು ಭಾಗ ಜನರೆಲ್ಲಾ ಮಗ್ಗನೇಯುವವರು. ನಮ್ಮ ಊರಿನಲ್ಲಿಯೇ 2,500 ಮಗ್ಗಗಳಿವೆ. ನಮ್ಮ ಫಿರ್ಕಾದಲ್ಲಿ ಬೇರೆ 500 ಮಗ್ಗಗಳಿವೆ. ಬೊಂಬಾಯಿ ಮದರಾಸಿಗೆ ಹೋಗುವ ಬ್ರಾಡ್‌ಗೇಜ್ ಲೈನಿನ ಮಧ್ಯದಲ್ಲೇ ಈ ನಮ್ಮ ಊರಿದ್ದರೂ ಇದುವರೆಗೂ ಅಲ್ಲಿಗೆ ಕರೆಂಟನ್ನು ಒದಗಿಸಿಲ್ಲ. ಇದನ್ನು ಒದಗಿಸಿದಲ್ಲಿ ನಮ್ಮ ಒಂದು ಫಿರ್ಕಾದಿಂದಲೇ ಒಂದು ಲಕ್ಷ ರೂಪಾಯಿಗಳ ಟ್ಯಾಕ್ಸಿನ ಮೂಲಕ ಬರುತ್ತದೆಯೆಂಬುದರಲ್ಲಿ ಸಂದೇಹವಿಲ್ಲ. ಇಷ್ಟರಲ್ಲೇ ಆಂಧ್ರದ ಡೆಪ್ಯುಟಿ ಮುಖ್ಯ ಮಂತ್ರಿಗಳಾದ ಸಂಜೀವರೆಡ್ಡಿಯವರು ಮೈಸೂರಿಗೆ ಇದೇ ಕರೆಂಟಿನ ವಿಷಯದಲ್ಲಿ ಮಾತನಾಡುವುದಕ್ಕೆ ಬರುವವರಾಗಿದ್ದಾರೆಂದು ಪತ್ರಿಕೆಗಳಲ್ಲಿ ನಾನು ಓದಿದ್ದೇನೆ. ಅದು ನಿಜವಾಗಿದ್ದಲ್ಲಿ ಅವರು ಬಂದ ಕಾಲದಲ್ಲಿ ನಮ್ಮನ್ನೂ ಕರೆಸಿಕೊಂಡರೆ ನಾವೂ ನಮ್ಮ ಸಲಹೆಗಳನ್ನೂ ಕೊಡುವುದಕ್ಕೆ ಅನುಕೂಲವಾಗುತ್ತದೆಂದು ವಿನಂತಿಮಾಡಿಕೊಳ್ಳುತ್ತೇನೆ. ಈ ಒಂದು ಅನುಕೂಲವನ್ನು ಒದಗಿಸಿಕೊಟ್ಟಲ್ಲಿ ಈ ಕಡೆ ಒಂದು ತಾಲ್ಲೂಕಿನಲ್ಲಿ ಬರುವಷ್ಟು ವರಮಾನ ನಮ್ಮ ಕಡೆಯ ಒಂದು ಫಿರ್ಕಾ ಕೊಡಬಲ್ಲದು. ಆ ತಾಲ್ಲೂಕುಗಳು ಬಡತಾಲ್ಲೂಕುಗಳು, ಅದರಿಂದಲೇ ಡಿಫಿಸಿಟ್ ಬಂದಿತೆಂದು ತಾವು ಹೇಳಿದರೂ ಅಲ್ಲಿ ಒಂದೊಂದು ತಾಲ್ಲೂಕನ್ನು ಕೊಂಡುಕೊಳ್ಳತಕ್ಕ ಶಕ್ತಿಯುಳ್ಳ ಶ್ರೀಮಂತರಿದ್ದಾರೆ. ಆಡೋನಿ ಮಾರ್ಕೆಟ್ಟು ಬೊಂಬಾಯಿ ಮಾರ್ಕೆಟ್ಟಿಗೆ ಮೂರನೆಯದು. ಒಂದು ಲಕ್ಷ ಎಪ್ಪತ್ತೈದು ಸಾವಿರ ಬೇಲುಗಳಷ್ಟು ಹತ್ತಿ ಅಲ್ಲಿ ತಯಾರಾಗುತ್ತದೆ. ಶೇಕಡ 75ರಷ್ಟು ಅಲ್ಲಿನ ಜನರು ಇನ್‌ಕಂಟಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಕೊಡುವವರಾಗಿ

(ಶ್ರೀ ಎಸ್. ಪರಮೇಶ್ವರಪ್ಪ.)

ದ್ದಾರೆ. ಆದ್ದರಿಂದ ಅಲ್ಲಿ ತಾವು ಪ್ರಯತ್ನ ನಡೆಸಿದರೆ ಏನು ಬೇಕಾದರೂ ಸಾಧಿಸಬಹುದು. ಪ್ರತಿಯೊಬ್ಬ ಮಂತ್ರಿಗಳೂ ಕೇವಲ ಜಿಲ್ಲಾ ತಾಲ್ಲೂಕುಗಳಿಗೆ, ಫಿರ್ಕಾ ಹೆಡ್‌ಕ್ವಾರ್ಟರುಗಳಿಗೆ ಬಂದು ಹೋದರೆ ಆಗಲಲ್ಲ; ಪ್ರತಿಯೊಂದು ಹಳ್ಳಿಗೂ ಒಂದು ನೋಡಿರಿ. 1947ರಲ್ಲಿ ಮಾನ್ಯ ವಲ್ಲಭಾಯಿ ಪಟೇಲರವರು ಕೇಂದ್ರ ಶಾಸನ ಸಭೆಯಲ್ಲಿ ಮಾತನಾಡುತ್ತಾ ಒಂದು ಗಮನಾರ್ಹವಾದ ಮಾತನ್ನು ಹೇಳಿದರು; ಅದು ವಾಸ್ತವವಾದದ್ದು. ಏನೆಂದರೆ, "ಇನ್ನು ಕೆಲವುಕಾಲ ನಮ್ಮ ದೇಶದಲ್ಲಿ ಯಾವ ಪಾರ್ಟಿಗಳೂ ಬೇಡ. ನಮ್ಮ ದೇಶವನ್ನು ಇಂಗ್ಲೀಷಿನವರು 150 ವರುಷಗಳು ಆಳಿದರು. ಅವರೇನಿದ್ದರೂ ಭೂಮಿಯ ಮೇಗಣ ವಸ್ತುಗಳನ್ನು ಕೆಲವನ್ನು ಮಾತ್ರ ತೆಗೆದುಕೊಂಡು ಹೋಗಿದ್ದಾರೆ ಅಷ್ಟೆ. ಭೂಮಿಯೊಳಗಿನದನ್ನು ಒಯ್ದಿಲ್ಲ. ಇನ್ನು ನಾವು ಭೂಮಿಯನ್ನು ಪರಿಶೋಧನೆ ಮಾಡಬೇಕು. ಇಂಡಿಯಾ ದೇಶವನ್ನು ಇಂದು ನಾವು ಬಂಗಾರದಿಂದ ಕಟ್ಟುತ್ತೇವೆ" ಎಂದರು. ನಮ್ಮ ದೇಶವನ್ನು ಕಾಮಧೇನು ಎಂದರು. ಈ ಅಂಶವನ್ನು ಎಲ್ಲರೂ ಮನಗಂಡು ಪ್ರತಿಯೊಂದು ವಿಷಯದಲ್ಲಿಯೂ ಭಿನ್ನತೆಯಿಲ್ಲದಂತೆ ಎಲ್ಲಾ ಅಧಿಕಾರಿಗಳೂ ದೇಶಕ್ಕಾಗಿ ಶ್ರಮಿಸಲಿ. ನಮ್ಮದೇಶ ರೈತರ ದೇಶ. ರೈತರಿಗೆ ಎಲ್ಲ ಅನುಕೂಲಗಳನ್ನೂ ಮಾಡಿಕೊಡಬೇಕು ಪಟ್ಟಣಿಗರು ಹಳ್ಳಿಯವರು ಎಂದು ಭೇದ ತೋರಿಸದೆ ಹಳ್ಳಿಯವರನ್ನು ಕಣ್ಣಿಟ್ಟು ನೋಡಿ, ಇನ್ನು ಮೇಲಾದರೂ ಹಳ್ಳಿಯವರನ್ನು ಮುಂದಕ್ಕೆ ತರಬೇಕೆಂದು ಕೋರುತ್ತೇನೆ. ಇಲ್ಲಿಯವರೆಗೂ ನಮ್ಮ ಕಡೆಯವರಾಗಿ ಅಗ್ರಿಕಲ್ಚರಲ್ ಮಿನಿಸ್ಟರಾಗಿ, ಡಿಸ್ಟ್ರಿಕ್ಟ್ ಮೆಂಬರಾಗಿ ಒಬ್ಬರಿದ್ದರು. ಆದರೂ ಅವರಿಂದ ಏನೂ ಕೆಲಸವಾಗಿಲ್ಲ. ದಾನಗಳಲ್ಲಿ ಮೂರು ವಿಧವೆಂದು ಹೇಳುವಂತೆ, ಅನ್ನದಾನ, ನಿಧಾನ ದಾನ, ಸಾಧನ ದಾನ ಎನ್ನುವುದರಲ್ಲಿ ಅವರಲ್ಲಿ 'ನಿಧಾನ' ವೆಂಬ ಗುಣ ಮಾತ್ರ ಇತ್ತು. ಹೀಗಾಗಿ ಯಾವ ಕೆಲಸವೂ ಆಗಲಲ್ಲ. ಇನ್ನು ಮೇಲಾದರೂ ಸಹಾಯ ಮಾಡುತ್ತಾರೆಂದು ನಂಬಿದ್ದೇನೆ.

ಇಲ್ಲಿ ಬಿಲ್ಡಿಂಗ್ ಗ್ರಾಂಟ್ಸ್ ಎಂದು ಹೇಳಿ 20-30 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇಷ್ಟು ಕೊಡುವುದಕ್ಕೆ ಇಲ್ಲಿ ಏನಿದೆಯೋ ಗೊತ್ತಿಲ್ಲ. ಅದು ಹೇಗಾದರೂ ಆಗಲಿ, ನಮ್ಮ ಕಡೆಯಲ್ಲೂ ಗ್ರಾಂಟ್ಸ್ ಕೊಡಬೇಕೆಂದು ಹೇಳುತ್ತೇನೆ.

ಈಗ ತಾವು ಅನೇಕ ಪ್ರಾಜೆಕ್ಟುಗಳನ್ನು ಕೈಕೊಂಡಿದ್ದೀರಿ. ತುಂಗಭದ್ರಾ ಪ್ರಾಜೆಕ್ಟ್ ಎಂದು ಮೊದಲು 7 ಕೋಟಿಯಿದ್ದುದನ್ನು 9 ಕೋಟಿ ರೂಪಾಯಿಗಳಿಗೆ ಏರಿಸಿ ಈಗ 13 ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಗೊತ್ತುಮಾಡಿದ್ದೀರಿ. ಮಾಡಿದ್ದರಿಂದೇನಾಯಿತು ? ಈಗಲೂ ಅಲ್ಲಿ ನಡೆಯುವುದು ಏನೆಂಬುದನ್ನು ನೋಡಿದ್ದೀರಾ ? ಒಂದು ಪೆಟ್ರೋಲ್ ಲಾರಿ ಬಂದರೂ ಒಂದು ನಿಮಿಷದಲ್ಲಿ ಅಲ್ಲಿ close ಆಗುತ್ತದೆ. ಗ್ಯಾಲನ್ನಿಗೆ 3 ರೂಪಾಯಿನಂತೆ ಇಲ್ಲಿ ಧಾರಣೆಯಿದ್ದರೆ, ಅಲ್ಲಿ 12 ಆಣೆ—14 ಆಣೆಯಲ್ಲಿ ಮಾರಾಟವಾಗುತ್ತಿದೆ. ಈ ಹೊತ್ತಿಗೂ ಇದು ನಡೆಯುತ್ತಿದೆ. ನನ್ನೊಡನೆ ಯಾರಾದರೂ ಬನ್ನಿ; ನಾನು ರುಜುವಾತುಮಾಡಿ ತೋರಿಸಿಕೊಡುತ್ತೇನೆ. ನಿಮಗೆ ಬೇಕಾದರೆ ಇಲ್ಲಿಗೇ ನೂರಾರು ಗ್ಯಾಲನ್‌ಗಳನ್ನು ತರಿಸಿಕೊಡುತ್ತೇನೆ. ಸಿಮೆಂಟಿನ ವಿಷಯದಲ್ಲೂ ಕೂಡ ಹೀಗೆಯೇ ನಡೆಯುತ್ತಿದೆ. ಇಂಥದನ್ನೆಲ್ಲಾ ನೋಡಿಯೇ ಮದ್ರಾಸಿನ ಮುಖ್ಯ ಮಂತ್ರಿಗಳಾದ ರಾಜಗೋಪಾಲಾಚಾರಿಯವರು "ನನ್ನ ಮೊದಲನೆಯ ಶತ್ರು ಕಮ್ಯೂನಿಸ್ಟರು, ನನ್ನ ಎರಡನೆಯ ಶತ್ರುವೆಂದರೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್" ಎಂದಿದ್ದು. ಆದ್ದರಿಂದ ಸರ್ಕಾರದ ಮಂತ್ರಿಗಳು ಪ್ರತಿಯೊಬ್ಬರೂ ಈ ಕಡೆಗೆ ಗಮನಕೊಡಬೇಕೆಂದು ನಾನು ಕೋರುತ್ತೇನೆ.

ನಾನು ಎಷ್ಟೋ ಬಾರಿ ನೋಡಿದ್ದೇನೆ. ಒಬ್ಬ ಆಫೀಸರು ಅಧಿಕಾರಮಾಡುವ ಸ್ಥಾನಕ್ಕೆ ಬಂದ ಕೂಡಲೆ ಅವರು ಏಕೋ ಬದಲಾಯಿಸಿ ಹೋಗುತ್ತಾರೆ. ಏಕೆ ಹಾಗಾಗುತ್ತಾರೋ ಗೊತ್ತಿಲ್ಲ. ನಮ್ಮ ದೇಶವನ್ನು ಉಳಿಸಬೇಕು, ನಮ್ಮ ದೇಶವನ್ನು ಮುಂದಕ್ಕೆ ತರಬೇಕು, ನಮ್ಮ ದೇಶ ಅಭಿವೃದ್ಧಿಗೆ ಬರಬೇಕು, ನಾವೆಲ್ಲರೂ ಅಣ್ಣ ತಮ್ಮಂದಿರು, ಲಂಚ ತಿನ್ನಬಾರದು ಎಂಬ ಮನೋಭಾವನೆ ಅವರಲ್ಲಿ ಬೆಳೆಯುವಂತಾಗಬೇಕು. ಹಾಗಾದರೇನೇ ನಮ್ಮ ದೇಶ ಉಳಿದೀತು.

ನಮ್ಮದೇಶ ಹಳ್ಳಿಗಳ ದೇಶ. ಒಟ್ಟು ಇಂಡಿಯಾದಲ್ಲಿ 7,75,000 ಹಳ್ಳಿಗಳಿವೆ. ವ್ಯವಸಾಯದ ಕಸಬನ್ನು ಮಾಡುವವರೇ ನೂರಕ್ಕೆ 80—90 ಜನರು. ಉದ್ಯೋಗದ ನೌಕರಿಯಿಂದ ಬದುಕುವವರು 10 ಜನರು. 5 ಜನರು ವ್ಯಾಪಾರದಿಂದ ಜೀವಿಸುತ್ತಾರೆ. ಇನ್ನುಳಿದ 5 ಜನರು ಶ್ರೀಮಂತರು. ಆದಕಾರಣ—ಮಹಾತ್ಮಾ ಗಾಂಧಿಯವರು ಹೇಳಿದಂತೆ ಹಳ್ಳಿಯಿಂದ ಡಿಲ್ಲಿ—ತಾವು ಇನ್ನು ಮೇಲಾದರೂ ಹಳ್ಳಿಗಳಕಡೆ ಹೆಚ್ಚು ನಿಗಾ ಇಡಬೇಕು. ಸ್ವಾತಂತ್ರ್ಯ ಬಂದು ಈಗಾಗಲೇ ಏಳು ವರುಷಗಳಾದರೂ, ಇದುವರೆಗೂ ಒಬ್ಬರಾದರೂ ಹಳ್ಳಿಗಳ ಕಡೆ ನಿಗಾ ತೆಗೆದುಕೊಂಡಿಲ್ಲ. ಎಲ್ಲಿ ನೋಡಿದರೂ ಪಟ್ಟಣಗಳಲ್ಲಿ ಸಿಮೆಂಟು ರೋಡು, ಸೇತುವೆಗಳು ಟಾರು ರಸ್ತೆಗಳು ಮುಂತಾದುವುಗಳನ್ನು ಮಾಡುವುದರಲ್ಲಿದ್ದಾರೆಯೇ ಹೊರತು ಹಳ್ಳಿಗಳ ಕಡೆ ಏನೂ ಮಾಡಿಲ್ಲ. ಇನ್ನಾದರೂ ಈ ಬಗ್ಗೆ ತಾವು ನಿಗಾ ವಹಿಸಬೇಕು. ಇಲ್ಲದಿದ್ದರೆ ಪಟ್ಟಣಗಳು ಉಳಿಯುವುದಿಲ್ಲವೆಂದು ಹೇಳಬಯಸುತ್ತೇನೆ.

ಈಗ ಟ್ಯಾಕ್ಸೇಷನ್ ಹಾಕಬೇಕೆಂದು ಮಾಡಿದ್ದಾರೆ. ಹಾಕಲಿ. ಆದರೆ ಹಾಗೆ ಟ್ಯಾಕ್ಸ್ ಮಾಡುವಾಗ 100 ರೂಪಾಯಿಗಳಿಗೆ ಒಂದು ಪಾವಲಿಯಂತೆ ಟ್ಯಾಕ್ಸ್ ಹಾಕಲಿ ಪರವಾ ಇಲ್ಲ. ಹೀಗೆ ಮಾಡಿದರೆ—100 ರೂಪಾಯಿಗಳಿಗೆ ಒಂದು ಪಾವಲಿ, 250 ರೂಪಾಯಿಗಳಿಗೆ ಆರು ಆಣೆ, 250 ರೂಪಾಯಿಗಳಿಂದ 750 ರವರೆಗೂ ಹನ್ನೆರಡಾಣೆ, ಅನಂತರ ಅದಕ್ಕೆ ಮೇಲ್ಪಟ್ಟಿದ್ದಕ್ಕೆಲ್ಲಾ ಒಂದು ರೂಪಾಯಿ—ಹೀಗೆ ಹಾಕಿದರೆ ಇದರಿಂದ ತಮಗೆ ಸಾಕಷ್ಟು ಉತ್ಪತ್ತಿ ಬಂದೇ ಬರುತ್ತದೆ. ಇದರಿಂದ ಯಾರಿಗೂ ತೊಂದರೆ ಯಾಗುವುದಿಲ್ಲ. ಟ್ಯಾಕ್ಸೇಷನ್ ಹಾಕಬೇಕೆಂದು ಹೇಳುವುದನ್ನು ನಾವೂ ಒಪ್ಪುತ್ತೇವೆ. ಆದರೆ ತಾವು ಜನರು ಟ್ಯಾಕ್ಸ್ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆಂದು ಈಗ ಕೈಗೊಂಡಿರತಕ್ಕ ಕೆಲಸಗಳನ್ನು ಮಾತ್ರ ನಿಲ್ಲಿಸಬೇಡಿ. 1942ರಲ್ಲಿ ಸೀಮೆಯ ಮೇಲೆಲ್ಲಾ ಸ್ವಾತಂತ್ರ್ಯ ಚಳವಳಿ ಎದ್ದಾಗ ನಾವು ಕನ್ನಡ ನಾಡಿನಲ್ಲಿ ರಾಮರಾಜ್ಯ ಸ್ಥಾಪಿಸುತ್ತೇವೆಂದು ಹೇಳುತ್ತಿದ್ದರು. ಆದರೆ ಈಗ ಅಲ್ಲಿರುವುದು ರಾವಣ ರಾಜ್ಯವೇನೋ ಅನ್ನುವಂತೆ ಕಾಣುತ್ತಿದೆ.

ತಾವು ಬಳ್ಳಾರಿ ವಿಷಯದಲ್ಲಿ ಚೆನ್ನಾಗಿ ಎಲ್ಲವನ್ನೂ ಪರಿಶೋಧನೆ ಮಾಡಿದರೆ ಒಂದೊಂದು ಫಿರ್ಕಾದಲ್ಲೂ ಒಂದು ಲಕ್ಷಕ್ಕೆ ಮೇಲ್ಪಟ್ಟ ವರಮಾನ ಬರುತ್ತದೆ. ಅಲ್ಲಿ ಆ ರೀತಿ ವರಮಾನ ಬರುವಂತೆ ಮಾಡುವುದಕ್ಕೆ ಅವಕಾಶವಿದೆಯೆಂದು ಇಷ್ಟು ವಿಷಯ ತಿಳಿಸಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಹರಿಜನರ ವಿಷಯದಲ್ಲಿ ಇಲ್ಲಿಯವರೆಗೆ ಮಾತನಾಡಿರತಕ್ಕಂಥ ಅನೇಕ

ಮಾನ್ಯ ಸದಸ್ಯರುಗಳು ಏನೇನು ವಿಷಯಗಳನ್ನು ಪ್ರಸ್ತಾಪಿಸಿದ್ದಾರೋ ಅವುಗಳನ್ನು ಬಿಟ್ಟು, ಇನ್ನು ಅವರು ಹೇಳದೆ ಕೈಬಿಟ್ಟಿರುವಂಥ ಕೆಲವು ವಿಚಾರಗಳನ್ನು ಈ ಬಡ್ಜೆಟ್ಟಿಗೆ ಅನ್ವಯಿಸಿದಂತೆ ಈ ಮಾನ್ಯ ಸಭೆಯ ಮುಂದಿಡಬೇಕೆಂದು ಇಚ್ಛಿಸುತ್ತೇನೆ.

ಈ ಹರಿಜನರು ಜಮೀನಿಗಾಗಿ ಅರ್ಜಿಗಳನ್ನು ಹಾಕಿಕೊಂಡು ಎಷ್ಟೋ ವರ್ಷಗಳಾದರೂ ಅವರಿಗೆಲ್ಲಾ ಇನ್ನೂ ಜಮೀನು ಸಿಕ್ಕಿಲ್ಲ. ಈಗಾಗಲೇ ಅಲ್ಲಲ್ಲೇ ಇದ್ದ ಅಷ್ಟಿಷ್ಟು ಜಮೀನುಗಳೆಲ್ಲಾ ವಿಲೇವಾರಿಯಾಗಿ ಹೋಗಿದೆ. ಅವರಿಗೆ ಹೀಗೆಯೇ ಇನ್ನೂ ಸ್ವಲ್ಪ ಕಾಲ ನಿಧಾನ ಮಾಡಿದ್ದೇ ಆದರೆ ಮುಂದೇನೂ ಅವರಾರಿಗೂ ಜಮೀನುಗಳೇ ಸಿಕ್ಕುವುದಿಲ್ಲವೆಂದು ಕಾಣುತ್ತದೆ. ತಾಲ್ಲೂಕು ಕಚೇರಿಗಳಿಗೆ ಹೋಗಿ ಅವರು ಅರ್ಜಿಗಳನ್ನು ಅಮಲ್ದಾರರಿಗೆ ಕೊಟ್ಟರೆ, ಅದು ಶಿರಸ್ತೆದಾರರಿಗೆ ಹೋಗಿ, ಅವರಿಂದ ಆರ್. ಐ. ಗೆ ಹೋಗಿ ಅನಂತರ ಕಡೆಗೆ ಅದು ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ ಕಡೆಗೆ ಬರುತ್ತದೆ. ಅವರು ಸ್ಥಳಕ್ಕೆ ಹೋಗಿ, ಜಮೀನನ್ನು ಅಜಮಾಯಿಷಿ ಮಾಡಿ ಒಂದು ರಿಪೋರ್ಟನ್ನು ಮಾಡುವುದಕ್ಕೆ 3-4 ತಿಂಗಳಾದರೂ ಬೇಕು. ಹೀಗೆ ಮಾಡಬೇಕಾಗಿದ್ದಂಥ ವಿಚಾರಗಳನ್ನು ಅವರು ಮನಸ್ಸು ಕೊಟ್ಟು ಮಾಡದಿರುವುದರಿಂದ, ಜಮೀನಿಗಾಗಿ ಅರ್ಜಿಗಳನ್ನು ಕೊಟ್ಟು 16 ತಿಂಗಳ ಮೇಲಾದರೂ ಅವುಗಳ ಕಡೆಗೆ ಇನ್ನೂ ಯಾರೂ ಗಮನವನ್ನೇ ಕೊಟ್ಟ ಹಾಗೆ ಕಾಣುವುದಿಲ್ಲ. ಆದಕಾರಣ ನಾನು ಈ ಸಂದರ್ಭದಲ್ಲಿ ತಮಗೆ ಸಲಹೆ ಮಾಡುವುದೇನೆಂದರೆ, ಯಾರಾದರೂ ಒಬ್ಬರು ಒಂದು ಜಮೀನಿಗೆ ದರಖಾಸ್ತನ್ನು ಹಾಕಿಕೊಂಡರೆ ಆತನಿಗೆ 3 ತಿಂಗಳೊಳಗಾಗಿ ಆ ಜಮೀನು ಆತನಿಗೆ ಸಿಕ್ಕುತ್ತದೆ ಅಥವಾ ಸಿಕ್ಕುವುದಿಲ್ಲ ಎಂಬುದಾಗಿ ಈ ಎರಡರಲ್ಲೊಂದನ್ನು ತಿಳಿಸುವಂತೆ ತಾವು ಮಾಡಬೇಕು. ಆದರೆ ಸುಮ್ಮನೆ ಅರ್ಜಿಗಳನ್ನು ಕೊಳೆ ಹಾಕಿ ಹೀಗೆಲ್ಲಾ ನಿಧಾನ ಮಾಡುವುದು ಸರಿಯಲ್ಲ. ಈ ರೀತಿಯಾಗಿ ಒಂದು ಕ್ರಮದಲ್ಲಿ ಈ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ತಾವು ಸರಿಯಾದ ಎಚ್ಚರಿಕೆಯನ್ನು ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಎರಡನೆಯದಾಗಿ, ನಮ್ಮ ಹರಿಜನರಿಗೆ ಏನೇನು ತೊಂದರೆಗಳಿರುತ್ತವೆ, ಅವರಿಗೆ ಸರ್ಕಾರದವರು ಏನೇನು ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು ಎಂಬುದನ್ನೆಲ್ಲಾ ಆಮೂಲಾಗ್ರವಾಗಿ ಪರಿಷ್ಕಾರ ಮಾಡಿ ಸರ್ಕಾರಕ್ಕೆ ಮನವಿಗಳನ್ನು ಕಳುಹಿಸುವ ಉದ್ದೇಶದಿಂದ ನಾನು ನಮ್ಮ ತಾಲ್ಲೂಕಿನಲ್ಲಿ ಒಂದು ಹರಿಜನ ಸಮ್ಮೇಳನವನ್ನು ನಡೆಸಿ, ಅದಕ್ಕೆ ಅನೇಕ ಜನಗಳನ್ನು ಸೇರಿಸಿ, ಈ ಹರಿಜನರಿಗೆ ನ್ಯಾಯವಾಗಿ ಏನೇನು ಸೌಲಭ್ಯಗಳು ಬೇಕಾಗಿರುತ್ತವೆಯೆಂಬುದರ ಬಗ್ಗೆ ಅಲ್ಲಿ ನೆರದಿದ್ದ ಜನರಲ್ಲಿ ಬಹುಮತದ ಬೆಂಬಲ ಪಡೆದು ಸುಮಾರು 19 ನಿರ್ಣಯಗಳನ್ನು ಆ ಸಮ್ಮೇಳನದಲ್ಲಿ ಪಾಸ್ ಮಾಡಿ, ಅವುಗಳನ್ನು ಸರ್ಕಾರದವರಿಗೆ ಕಳುಹಿಸಿಕೊಡಲಾಯಿತು. ಹೀಗೆ ಮಾಡಿದ್ದು ನಮ್ಮ ಶಿರಾ ತಾಲ್ಲೂಕು ಹೆಮ್ಮ ದೊರೆ ಗ್ರಾಮದಲ್ಲಿ. ಆ ಸಮ್ಮೇಳನಕ್ಕೆ ನೂರಾರು ರೂಪಾಯಿಗಳನ್ನು ಖರ್ಚು ಮಾಡಲಾಯಿತು. ನೂರಾರು ಜನರನ್ನು ಸೇರಿಸಿ ಎಲ್ಲರೂ ಕಷ್ಟಪಟ್ಟು ಕೆಲಸಮಾಡಿ 19 Resolutions ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರ ಪೈಕಿ ಒಂದಕ್ಕೂ ತಾವು ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಹಾಗೆ ಅವುಗಳಲ್ಲಿ ಒಂದೂ ಕಾರ್ಯಗತವಾಗದಿರುವುದಕ್ಕೆ ಕಾರಣವೇನೆಂದರೆ—ಯಾರೂ ಅವುಗಳ ಬಗ್ಗೆ ಸರಿಯಾದ ನಿಗಾವಹಿಸದಿರುವುದೇ ಆಗಿದೆ. ಆ ನಿರ್ಣಯಗಳನ್ನು ತಾವು ಬೇಗ ಕಾರ್ಯಗತವಾಗುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹರಿಜನರ ಏಳಿಗೆಯ ವಿಚಾರದಲ್ಲಿಯೂ ಮತ್ತು ಈ ಅಸ್ಪೃಶ್ಯತೆಯ ನಿವಾರಣೆಗಾಗಿಯೂ ಸರ್ಕಾರದವರು ಮಾಡಿರುವ "ರಿಮೂವಲ್ ಆಫ್ ಸೋಷಿಯಲ್ ಸಿವಿಲ್ ಡಿಸೆಬಿಲಿಟೀಸ್ ಆಕ್ಟ್" ಎಂಬುದನ್ನೂ ಮತ್ತು "ಹರಿಜನ್ ಟೆಂಪಲ್ ಎಂಟ್ರಿ ಆಕ್ಟ್" ಎಂಬುದನ್ನೂ ಜಾರಿಗೆ ತಂದರು. ಆದರೆ ಇದರ ತಿಳಿವಳಿಕೆ ಎಲ್ಲಿಯವರೆಗೆ ಹೋಗಿ ದೇಶದಲ್ಲಿ ಮುಟ್ಟಬೇಕಾಗಿತ್ತೋ ಅಲ್ಲಿಯವರೆಗೂ ಹೋಗದೆ ಹೊರಟ ಸ್ಥಳದಲ್ಲಿಯೇ ಕುಳಿತುಬಿಟ್ಟಂತೆ ಕಾಣುತ್ತದೆ. ಆದುದರಿಂದ ಈ ಹರಿಜನರನ್ನು ಇನ್ನೂ ಅನೇಕ ಕಡೆ ದೇವಸ್ಥಾನಗಳಿಗೆ ಬಿಡುತ್ತಿಲ್ಲ. ಆದರೆ ತಾವು ಈ ಕಾನೂನುಗಳನ್ನು ಜಾರಿಗೆ ತರುವುದಾಗಿದ್ದರೆ ನಮ್ಮ ಸಂಸ್ಥಾನದಲ್ಲಿರತಕ್ಕ 17-18 ಸಾವಿರ ಹಳ್ಳಿಗಳಲ್ಲಿರತಕ್ಕ ಪಟೇಲ್ ಶ್ಯಾನುಭೋಗರುಗಳವರೆಗೂ ಇವುಗಳನ್ನು ತಾವು ಹೋಗುವಂತೆ ಮಾಡಬೇಕು. ಹಾಗೆಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಇದನ್ನು ತಾವು ಸರಿಯಾಗಿ ಪ್ರಚಾರವಾಗುವಂತೆ ಮಾಡಿದರೇನೇ ಈ ಅಸ್ಪೃಶ್ಯತೆ ನಿವಾರಣೆಯಾಗವುದು. ಆಗ ಜನರು ಒಬ್ಬರಲ್ಲೊಬ್ಬರು ಮಿಳನವಾಗುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ವಾಸಿಗಳಿಗೆ ಕೈಗಾರಿಕೆಗಳನ್ನು ನಡೆಸತಕ್ಕ ಬಗ್ಗೆ ದುಡ್ಡನ್ನು ಕೊಡಲಾಗುತ್ತದೆಂದು ಹೇಳಿದ್ದಾರೆ. ಆದರೆ ಹಾಗೆ ಕೊಡತಕ್ಕ ಹಣವನ್ನು ಯಾವಯಾವ ಕಸಬುಗಳಿಗೆ ಕೊಡಬೇಕೆಂದರೆ, ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಚಾಪೆ ಹೆಣೆಯುವುದು, ಮರಗೆಲಸ, ನೂಲುವುದು, ಚರ್ಮ ಹದ ಮಾಡುವುದು ಇತ್ಯಾದಿ ಎಲ್ಲ ಕಸಬುಗಳವರಿಗೂ ಸಾಲ ನೀಡತಕ್ಕದ್ದು ಅವಶ್ಯಕವಾಗಿದೆ. ಆದರೆ ಹಾಗೆ ಸಾಲಕ್ಕಾಗಿ ಯಾರಾದರೂ ಅರ್ಜಿಗಳನ್ನು ಹಾಕಿಕೊಂಡರೆ ಅವರಿಗೆ ಸಕಾಲದಲ್ಲಿ ಆ ಹಣವು ದೊರೆಯುವುದೇ ಇಲ್ಲ. ಆದುದರಿಂದ ಅರ್ಜಿ ಹಾಕತಕ್ಕವರಿಗೆ ಬೇಗ ಹಣವನ್ನೊದಗಿಸುವಂತೆ ಸೂಕ್ತ ಸಲಹೆಗಳನ್ನು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಬೇಕೆಂದೂ, ಆ ಮೂಲಕ ಗ್ರಾಮಾಂತರ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತಂದು, ದೇಶೋದ್ಧಾರ ಮಾಡಬೇಕೆಂಬುದಾಗಿ ಈ ಒಂದು ಸಲಹೆಯನ್ನು ಮಾಡುತ್ತೇನೆ.

ಇನ್ನೊಂದು ವಿಚಾರ. ನನ್ನ ಕಾನ್‌ಸ್ಟಿಟ್ಯುಯನ್ಸಿ ಪಾವಗಡ ತಾಲ್ಲೂಕಿನಲ್ಲಿ ಉತ್ತರ ಪಿನಾಕಿನಿ ಎಂಬ ಒಂದು ನದಿ ಹರಿಯುತ್ತಿದೆ. ಆ ನದಿಗೆ ತಿಮ್ಮಮ್ಮನಹಳ್ಳಿ ಎಂಬ ಗ್ರಾಮದ ಬಳಿ ಒಂದು ಕೆರೆಯನ್ನು ಕಟ್ಟಿಸಿಕೊಡಬೇಕೆಂದು ಜನರು ಕೇಳಿಕೊಳ್ಳುತ್ತಿದ್ದಾರೆ. ಆದರೆ ಅವರ ಮನವಿಗಳಿಗೆ ಸರ್ಕಾರದವರು ನಿಗಾ ಕೊಟ್ಟಿಲ್ಲ. ಈ ಕೆರೆಯಿಂದ ಸುಮಾರು 1,800 ಎಕರೆ ಜಮೀನು ನೀರುಸಾಗಿಗೆ ಬರುತ್ತದೆ. ಶ್ರೀ ಪಂಡಿತ್ ಜವಹರಲಾಲ್ ನೆಹ್ರೂರವರು ಆ ಪ್ರಾಂತ್ಯಕ್ಕೆ ಬಂದಿದ್ದಾಗ ಅಲ್ಲಿನ ಜನಗಳೆಲ್ಲರೂ ಸೇರಿ, ಆ ಕೆರೆಯನ್ನು ಕಟ್ಟಿಸಿಕೊಡಬೇಕೆಂಬುದಾಗಿ ಅವರಿಗೆ ಮನವಿಗಳನ್ನು ಮಾಡಿಕೊಂಡಾಗ, ಅವರೂ ಸಹ ಈ ಬಗ್ಗೆ ನಮ್ಮ ಸರ್ಕಾರದವರಿಂದ ಈ ವಿಷಯವನ್ನು ಪರಿಶೀಲನೆ ಮಾಡಿಸಿ ಜನರಿಗೊಂದು ನ್ಯಾಯ ದೊರಕಿಸಿಕೊಡುವುದಾಗಿ ತಿಳಿಸಿದ್ದರು. ಆದರೆ ಈ ನದಿಯಿಂದ ಮದ್ರಾಸ್ ಪ್ರಾಂತ್ಯದವರಿಗೇ ಎಷ್ಟೋ ಸಹಾಯ ವಾಗುತ್ತಿರುವಾಗ ನಮ್ಮ ಮೈಸೂರಿನವರಿಗೆ ಸಹಾಯ ದೊರೆತಿಲ್ಲ. ತಾವು ದೊರೆಯುವಂತೆ ಮಾಡಿಸಬೇಕು. ಆದುದರಿಂದ

(ಶ್ರೀ ಸಿ. ಟಿ. ಹನುಮಂತಯ್ಯ.)

ಈ ಕೆಲಸವನ್ನೂ ಸಹ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಅನುಕೂಲ ಪಡಿಸಿಕೊಡಬೇಕೆಂದು ಒಂದು ಸಲಹೆ ನೀಡುತ್ತೇನೆ.

ಇನ್ನು ಸರ್ಕಾರದವರು ಕೊಡುತ್ತಿರುವ ಈ ಸಬ್‌ಸಿಡಿ ಮೊಬಲಗನ್ನು ಜೋಡಿ ಗ್ರಾಮಗಳಲ್ಲಿರತಕ್ಕ ರೈತರಿಗೂ ಸಹ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಈಗ ತಾವು ಅವರಿಗೆ ಇಲ್ಲಿಯವರೆಗೂ ಕೊಡುತ್ತಾ ಇಲ್ಲ. ಈಗ ಅವರೂ ಸಹ ಕೇಳುತ್ತಿದ್ದಾರೆ. ಇಲ್ಲಿಯವರೆಗೂ ತಾವು ಯಾವ ರೀತಿ ಈ ಸಬ್‌ಸಿಡಿ ಮೊಬಲಗನ್ನು ಕೊಡುತ್ತಿದ್ದೀರೋ ಹಾಗೆ ಇನ್ನು ಮುಂದಕ್ಕೂ ಆ ಜೋಡಿ ಗ್ರಾಮಗಳಲ್ಲಿರತಕ್ಕ ರೈತರಿಗೂ ಕೊಟ್ಟು ಸಹಾಯ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಹರಿಜನರಿಗೆ ಕುಡಿಯುವ ನೀರಿನ ಬಾವಿಗಳಿಲ್ಲದೆ ಅನೇಕ ಹಳ್ಳಿಗಳಲ್ಲಿ ಜನರು ಬಹಳವಾಗಿ ಕಷ್ಟಪಡುತ್ತಿದ್ದಾರೆ. ಈ ಬಗ್ಗೆ ನಾವು ಪದೇಪದೇ ಸರ್ಕಾರದವರಲ್ಲಿ ಮನವಿಗಳನ್ನು ಮಾಡಿಕೊಳ್ಳುತ್ತಲೇ ಇದ್ದೇವೆ. ಉದಾಹರಣೆಗಾಗಿ ಗುಂಡಪ್ಪ ಚಿಕ್ಕನಹಳ್ಳಿ ಎಂಬ ಗ್ರಾಮದಲ್ಲಿ ಒಂದು ಬಾವಿ ಬೇಕೆಂದು ಅಲ್ಲಿಯ ಜನರು ಕೇಳುತ್ತಿದ್ದಾರೆ. ಆ ಬಗ್ಗೆ ಅಂದಾಜು ಕೂಡ ತಯಾರಿಸಿ ಆಗಿದೆ. ಆದಾಗ್ಯೂ ಕೆಲಸವನ್ನಿನ್ನೂ ಕೈಗೊಂಡಿರುವುದಿಲ್ಲ. ತಾವು ಇಂಥ ಕಾರ್ಯಗಳನ್ನು ಬೇಗ ಮುಗಿಸುವಂತೆ ಇಲಾಖಾಧಿಕಾರಿಗಳಿಗೆ ಸೂಕ್ತ ತಿಳುವಳಿಕೆಗಳನ್ನು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಹರಿಜನರ ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ, ತಾವು ಬಲಾತ್ಕಾರ ವಿದ್ಯಾಭ್ಯಾಸದ ಪದ್ಧತಿಯನ್ನು ಜಾರಿಗೆ ತಾರದ ಹೊರತು ಇದು ಸಾಧ್ಯವೇ ಇಲ್ಲ. ತಾವು ನಮಗೆ ಇನ್ನೇನೂ ಕೊಡದಿದ್ದರೂ ಚಿಂತೆಯಿಲ್ಲ, ನಮ್ಮ ಜನರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಿ ಬಿಟ್ಟರೆ ನಮಗೆ ಅಷ್ಟೇ ಅನುಕೂಲ ಸಾಕು. ಹೀಗೆ ವಿದ್ಯಾವಂತರನ್ನಾಗಿ ಮಾಡಲು ತಾವು ಆ ಒತ್ತಾಯ ಶಿಕ್ಷಣದ ಕಾನೂನನ್ನು ಜಾರಿಗೆ ಬೇಗ ತರಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಹರಿಜನ ವಿದ್ಯಾರ್ಥಿಗಳಿಗೆ ಸಾಕಷ್ಟು ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಿಲ್ಲ. ಇದನ್ನೂ ತಾವು ಹೆಚ್ಚು ಮಾಡಬೇಕು. ಆದರೆ ಶ್ರೀಮಾನ್ ಸಿ. ಆರ್. ರೆಡ್ಡಿಯವರ ಕಾಲದಲ್ಲಿ ನಮಗೇನೊಂದು ಅನುಕೂಲವಾಗಿತ್ತೋ ಈಗಲೂ ಅಷ್ಟೇ ಅನುಕೂಲವಿದೆ. ಈಗ ಅನೇಕ ಹಳ್ಳಿಗಳಲ್ಲಿ ದೇವಸ್ಥಾನಗಳಲ್ಲಿ ಪಾಠಶಾಲೆಗಳನ್ನು ನಡೆಸುತ್ತಿದ್ದಾರೆ. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಹರಿಜನ ವಿದ್ಯಾರ್ಥಿಗಳನ್ನು ಆ ದೇವಸ್ಥಾನಗಳಲ್ಲಿ ಪಾಠ ಕಲಿಯುವುದಕ್ಕೆ ಬಿಡುತ್ತಿಲ್ಲವೆಂದು ಕೇಳುತ್ತೇನೆ. ತಾವು ಆ ಪಾಠಶಾಲೆಗಳನ್ನು ದೇವಸ್ಥಾನದಲ್ಲಿ ನಡೆಸದೆ ಬೇರೆ ಕಡೆಗಳಲ್ಲಿ ನಡೆಸುವಂತೆ ಏರ್ಪಾಡು ಮಾಡಿಕೊಡಿ, ಇಲ್ಲವೇ ಹರಿಜನ ವಿದ್ಯಾರ್ಥಿಗಳನ್ನು ಆ ದೇವಸ್ಥಾನಗಳಿಗೆ ಬಿಟ್ಟುಕೊಳ್ಳುವಂತಾದರೂ ಮಾಡಿ. ಹೀಗೆ ತಾವು ಏನಾದರೂ ಒಂದು ಮಾರ್ಗ ಹುಡುಕಿ ಅವರಿಗೆ ವಿದ್ಯಾ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಸರ್ಕಾರದವರು ನಮ್ಮ ಮುಂದೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ಸ್ವಾಗತಿಸುತ್ತ ಇದರಲ್ಲಿ ಅಲ್ಲಲ್ಲೇ ಕಂಡು ಬರತಕ್ಕ ಕೆಲವು ನ್ಯೂನತೆಗಳನ್ನು ತಮ್ಮ ಮುಂದೆ ತಿಳಿಸಬೇಕೆಂದು ಇಚ್ಛಿಸುತ್ತೇನೆ.

ಸಂಸ್ಥಾನದಲ್ಲಿರತಕ್ಕ ರೈತರಿಗೆ ಅಗತ್ಯವಾಗಿ ಒದಗಿಸಬೇಕಾಗಿರುವಂಥ ಕೆರೆಗಳು, ಕುಡಿಯುವ ನೀರಿನ ಬಾವಿಗಳು, ರಸ್ತೆಗಳನ್ನು ಮಾಡಿಸುವುದು, ಹಳ್ಳಗಳಿಗೆ ಸೇತುವೆಗಳನ್ನು ಕಟ್ಟಿಸುವುದು ಇತ್ಯಾದಿ ಅನೇಕ ರಾಷ್ಟ್ರಾಭಿವೃದ್ಧಿಯ ಕೆಲಸ ಕಾರ್ಯಗಳನ್ನು ಪ್ರಜಾಸರ್ಕಾರ ಆಡಳಿತಕ್ಕೆ ಬಂದು 6-7 ವರ್ಷಗಳಾದಾಗ್ಯೂ ನಾವು ಕೇಳುತ್ತಿರುವಂಥ ಹೊಸಹೊಸ ಕೆಲಸಗಳೊಂದೂ ಆಗದೆ ಹಿಂದೇನು ಆಗಿತ್ತೋ ಅಷ್ಟಕ್ಕೇ ನಿಂತಿರುತ್ತದೆ. ಹೀಗಾಗಿರುವುದರಿಂದ ದೇಶದಲ್ಲಿ ಹೊಸಹೊಸ ತೆರಿಗೆಗಳನ್ನು ಹಾಕುವುದಕ್ಕೆ ಅವಕಾಶವಾಗುತ್ತಿಲ್ಲ. ಹೀಗೆ ನಾವು ಒಂದೇ ಸಮವಾಗಿ ರೈತನಮೇಲೆ ಪದೇಪದೇ ತೆರಿಗೆಗಳನ್ನು ಜಾರಿಗೆ ಕೊಡುತ್ತಾ ಬಂದರೆ ಮುಂದೆ ಇದರಿಂದ ಬಹಳ ತೊಂದರೆಗಳಾಗಬಹುದೆಂದು ಈ ಸಮಯದಲ್ಲಿ ಹೇಳ ಬಯಸುತ್ತೇನೆ.

ಮೈಸೂರು ದೇಶದಲ್ಲಿ ಜನರಿಗೆ ಸರ್ಕಾರದವರು ಬೇಕಾದಷ್ಟು ಸೌಕರ್ಯಗಳನ್ನು ಒದಗಿಸಿದ್ದಾರೆ. ಈ ಸೌಕರ್ಯ ಕಾರ್ಯರೂಪಕ್ಕೆ ಬರಬೇಕಾದರೆ ಸರ್ಕಾರಿ ಕೆಳದರ್ಜೆಯ ನೌಕರರು ತಾಲ್ಲೂಕು ಕಚೇರಿಗೆ ಹೋಗತಕ್ಕ ರೈತರಿಗೆ, ಅವರ ಕಷ್ಟಸುಖಗಳೇನೆಂಬುದನ್ನು ಅರಿತುಕೊಳ್ಳದೆ, ಅವರಿಗೆ ಬೇಕಾಗುವ ನೆರವನ್ನು ನೀಡದೆ ಇರುವ ಕಾರಣದಿಂದ, ಜನರು ಅಸಮಾಧಾನಗೊಂಡು ಈ ದಿವಸ ಸರ್ಕಾರದವರನ್ನು ದೂರುವುದಕ್ಕೆ ಅವಕಾಶವಾಗಿದೆ.

5-30 P.M.

ಕೂಡಲೇ ಸಂಬಂಧಪಟ್ಟವರು ಎಲ್ಲೆಲ್ಲಿ ಈ ಅಪಾಯಗಳಿವೆ, ಗ್ರಾಮಾಂತರಗಳಲ್ಲಿ ಏನೇನು ಅನುಕೂಲಗಳನ್ನು ಕಲ್ಪಿಸಿಕೊಡಬೇಕು ಎಂಬುದನ್ನೆಲ್ಲಾ ತಿಳಿದುಕೊಂಡು ತಕ್ಷಣ ಅವುಗಳನ್ನು ಒದಗಿಸಿಕೊಡುವುದಾದರೆ ರೈತರಿಗೆ ಬಹಳ ಸಂತೋಷವಾಗುತ್ತದೆ. ಈ ಅನುಕೂಲಗಳು ಎಲ್ಲಿಯವರೆಗೆ ಪ್ರಜಾಸರ್ಕಾರ ಬಂದಮೇಲೆ ಆಗುವುದಿಲ್ಲವೋ ಅಲ್ಲಿಯವರೆಗೂ ರೈತಾಪಿ ಜನರಿಗೆ ಸಂತೋಷವಾಗುವುದಿಲ್ಲ ಎಂಬ ಅಂಶವನ್ನು ಈ ಸಂದರ್ಭದಲ್ಲಿ ನಾನು ತಿಳಿಸಲಿಚ್ಛಿಸುತ್ತೇನೆ.

ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನ ವಿಚಾರದಲ್ಲಿ ಈಗಾಗಲೇ ನಮ್ಮ ಮಾನ್ಯ ಸ್ನೇಹಿತರು ಅನೇಕರು ಅನೇಕ ವಿಧದಲ್ಲಿ ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಸುಮಾರು 5-6 ವರ್ಷಗಳಿಂದಲೂ ಈ ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನಿಂದ ಸಂಸ್ಥಾನದ ಎಲ್ಲಾ ಜನರಿಗೂ ನೀರಾವರಿ ಸೌಕರ್ಯ ಬಹಳ ಯಶಸ್ವಿಯಾಗಿ ದೊರೆಯುತ್ತಾ ಇದೆ ಎಂಬ ಅಂಶವನ್ನು ಈ ಸಭೆಯ ಮೂಲಕ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಕಾರಣಾಂತರದಿಂದ ಅಪಾಯ ಸಂಭವಿಸಿರಬಹುದು. ಮನುಷ್ಯನಾಗಿರತಕ್ಕವನೇ ಅಪಾಯಕ್ಕೆ ಸಿಕ್ಕಿ ಒಂದಾನೊಂದು ದಿನ ತನ್ನ ಘಟವನ್ನು ನೀಗತಕ್ಕ ಸಂಭವ ಇರುವಾಗ ಮನುಷ್ಯನಿಂದ ನಿರ್ಮಿತವಾಗಿರುವ ಕೆರೆಗಳು, ಕಟ್ಟೆಗಳು ಅಕಸ್ಮಾತ್ತಾಗಿ ನೀರಿನ ಪ್ರವಾಹ ಹೆಚ್ಚಾಗಿ ಬಂದು ಅಪಾಯಕ್ಕೆ ಈಡಾಗಿರಬಹುದು ಎಂದ ಮಾತ್ರಕ್ಕೆ ಡಿಪಾರ್ಟ್‌ಮೆಂಟಿನ ಎಲ್ಲಾ ಅಧಿಕಾರ ವರ್ಗದವರನ್ನೂ ಏಕಕಂಠದಿಂದ ದೂಷಿಸುವುದು ಸಾಧುವಾದದ್ದಲ್ಲ ಎಂಬ ಅಂಶವನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಮೈಸೂರು ಸಂಸ್ಥಾನದ ಎಲ್ಲಾ ಇಲಾಖೆಗಳಲ್ಲೂ ದಕ್ಷರು ಇದ್ದಾರೆ. ನಮ್ಮ ಸಂಸ್ಥಾನದಲ್ಲೂ, ಇತರ ಸಂಸ್ಥಾನಗಳಲ್ಲೂ ನಡೆಯತಕ್ಕ ಕೆಲಸ ಕಾರ್ಯಗಳನ್ನು ನಾನು ಚೆನ್ನಾಗಿ ಅರಿತಿದ್ದೇನೆ. ಮೈಸೂರು ಸಂಸ್ಥಾನದ ಅಧಿಕಾರಿಗಳ ವಿಷಯದಲ್ಲಿ ಬಹಳ ಒಳ್ಳೆಯ ಅಭಿಪ್ರಾಯ ಇದೆ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ನಾನು ತಿಳಿಸಬೇಕಾಗಿದೆ.

ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ಎಲ್ಲ ಪಂಗಡದವರಿಗೂ ಈಗ ಒದಗಿಸಿರತಕ್ಕ ಸ್ಕಾಲರ್‌ಷಿಪ್ಪು ಬಹಳ ಕಡಮೆ. ಸುಮಾರು 8-10 ವರ್ಷಗಳಿಂದ ಒದಗಿಸುತ್ತಾ ಇದ್ದುದನ್ನೇ ಈಗಲೂ ಒದಗಿಸುತ್ತಾ ಇದ್ದೀರಿ. ಸ್ಕೂಲುಗಳ ಸಂಖ್ಯೆ, ವಿದ್ಯಾರ್ಥಿಗಳ ಸಂಖ್ಯೆ ಮಾತ್ರ ದಿನದಿನಕ್ಕೆ ಜಾಸ್ತಿಯಾಗುತ್ತಾ ಇದೆ; ಸ್ಕಾಲರ್‌ಷಿಪ್ಪಿಗೆ ಕೊಟ್ಟಿರತಕ್ಕ ಹಣ 10 ವರ್ಷಗಳಿಂದ ಇದ್ದದ್ದು ಇದ್ದಹಾಗೆಯೇ ಇದೆ. ಬೆಂಗಳೂರು ಡಿಸ್ಟ್ರಿಕ್ಟಿನ ಸ್ಕಾಲರ್‌ಷಿಪ್ ಕಮಿಟಿಯಲ್ಲಿ ನಾನೂ ಒಬ್ಬ ಸದಸ್ಯ. ನ್ಯಾಯವಾದ ರೀತಿಯಲ್ಲಿ ದೊರಕಬೇಕಾಗಿರತಕ್ಕ ಒಬ್ಬ ಹುಡುಗನಿಗೂ ಕೂಡ ಹೆಚ್ಚಿಗೆ ಸ್ಕಾಲರ್‌ಷಿಪ್ ಕೊಡುವುದಕ್ಕೆ ಅವಕಾಶವಿಲ್ಲ. ಬಹಳ ಕಷ್ಟವಾಗಿದೆ. ಇದನ್ನು ಸರ್ಕಾರದವರು ಗಮನಿಸಿ ತಕ್ಷಣ ಸೂಕ್ತ ಕಂಡ ಅನುಕೂಲಗಳನ್ನು ಕಲ್ಪಿಸಬೇಕು. ಇವು ಸಣ್ಣ ಸಣ್ಣ ವ್ಯವಹಾರಗಳು ಎಂದು ತಾವು ಯಾರೂ ಉಪೇಕ್ಷೆಮಾಡಬಾರದು. ಇಂಥ ಸಣ್ಣ ಸಣ್ಣ ಕೆಲಸಗಳನ್ನೇ ಹಳ್ಳಿಯ ಜನರಿಗೆ ಮಾಡಿಕೊಡಬೇಕಾದದ್ದು. ಅವರೇನೂ ಅರಮನೆ ಕೇಳುತ್ತಾ ಇಲ್ಲ, ದೊಡ್ಡ ದೊಡ್ಡ ಆಸ್ತಿಪಾಸ್ತಿಗಳನ್ನು ಕೇಳುತ್ತಾ ಇಲ್ಲ. ಅವರ ಮಕ್ಕಳಿಗೆ ವಿದ್ಯಾಭ್ಯಾಸ, ಕುಡಿಯುವುದಕ್ಕೆ ನಿರ್ಮಲವಾದ ನೀರು, ಓಡಾಡುವುದಕ್ಕೆ ಸಂಚಾರ ಸೌಕರ್ಯ ಇಷ್ಟುಮಾತ್ರ ಅವರು ಕೇಳುವುದು. ಹತ್ತಾರು ವರ್ಷಗಳಿಂದ ಇವನ್ನೂ ಕೇಳುತ್ತಾ ಇದ್ದರೂ ಕೂಡ ಈ ಸೌಲಭ್ಯಗಳು ಇನ್ನೂ ಹೆಚ್ಚಿನ ಮಟ್ಟದಲ್ಲಿ ಆಗಿಲ್ಲ. ಇದನ್ನು ಸರ್ಕಾರದವರು ಮನಗಂಡು ಬಹಳ ಜಾಗ್ರತೆಯಾಗಿ ಈ ಅನುಕೂಲಗಳನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತೇನೆ.

ಇವೊತ್ತಿನ ದಿವಸ ನಮ್ಮ ಮುಂದೆ ಹೊಸ ತೆರಿಗೆಯನ್ನು ಹಾಕತಕ್ಕ ವಿಷಯ ಬಂದಿದೆ. ಹೊಸ ತೆರಿಗೆಯನ್ನು ಕೊಡತಕ್ಕದ್ದು ಸಹಜವಾಗಿಯೇ ಇದೆ. ಅದಕ್ಕೆ ಮೊದಲು ಪ್ರತಿಯೊಬ್ಬನಿಗೂ ಅನುಕೂಲಗಳನ್ನು ಯಾವ ಯಾವ ಮಟ್ಟದಲ್ಲಿ ಕಲ್ಪಿಸಬೇಕೋ ಅವನ್ನು ಕಲ್ಪಿಸಿ ತದನಂತರ ಈ ತೆರಿಗೆಗಳನ್ನು ನೀವು ಕೇಳುವುದಾದರೆ ನಮ್ಮ ರೈತರು ಯಾರೂ ಕೂಡ ಕೊಡುವುದಕ್ಕೆ ಹಿಂತೆಗೆಯತಕ್ಕವರಲ್ಲ. ಆದರೆ ಈಗ ನಮ್ಮ ಮುಂದೆ ಮಂಡಿಸಿರತಕ್ಕ ರೀತಿಯಲ್ಲಿ ತೆರಿಗೆಯನ್ನು ಕೊಡುವವರು ಯಾರು, ಯಾರಮೇಲೆ ತೆರಿಗೆ ಬೀಳುತ್ತದೆ ಎಂಬುದನ್ನು ಮತ್ತೊಮ್ಮೆ ಪರ್ಯಾಲೋಚಿಸಬೇಕಾಗಿದೆ. ಇದನ್ನು ಕೂಲಂಕಷವಾಗಿ ಆಲೋಚನೆಮಾಡಿ ಸರಿಯಾದ ಸುಂಕವನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ನಾನು ತಿಳಿಸಬಯಸುತ್ತೇನೆ.

ಅಕ್ವಿಸಿಷನ್ ವಿಚಾರ. ಸುಮಾರು 10-15-20 ವರ್ಷಗಳಿಂದಲೂ ಒಂದೊಂದು ಗ್ರಾಮದಲ್ಲಿ ಅಕ್ವಿಸಿಷನ್ ಕೇಸುಗಳು ಮುಗಿದಿಲ್ಲ. ಇದು ಅನೇಕ ಅಧಿಕಾರ ವರ್ಗದವರಿಗೆ, ಇಲ್ಲಿರತಕ್ಕ ಮಂತ್ರಿ ವರ್ಗದವರಿಗೆ ಗೊತ್ತಿರತಕ್ಕ ವಿಚಾರ. ಹರಿಜನರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅಕ್ವಿಸಿಷನ್ ಕೇಸುಗಳು ಪ್ರಾರಂಭವಾಗಿ ಇನ್ನೂ ಮುಗಿಯದೇ ಮನೆ ಕಟ್ಟಿಕೊಳ್ಳಬೇಕಾಗಿರತಕ್ಕವರು ಕೆಲವರು ಬದುಕಿಯೇ ಇಲ್ಲ. ಅಂಥ ಒಂದು ಸನ್ನಿವೇಶವೂ ಕೂಡ ಇದೆ. ಇದೆಲ್ಲಾ ಸಾಮಾನ್ಯವಾದ ವಿಚಾರ. ಇವುಗಳು ಜಾಗ್ರತೆ ಕಾರ್ಯಗತವಾಗಬೇಕಾಗಿದ್ದರೆ ಇದಕ್ಕೆ ತಕ್ಕ ಒಂದು ಕಾರ್ಯಕ್ರಮ ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಸ್ವಾಮಿ, ಎಕ್ಸೈಜ್ ಬಾಬುಗಳನ್ನು ರದ್ದುಗೊಳಿಸಬೇಕೆಂದು ಮಾನ್ಯ ಸ್ನೇಹಿತರನೇಕರು ಈ ಸಭೆಯಲ್ಲಿ ತಿಳಿಸಿದ್ದಾರೆ. ನಾನೂ ಕೂಡ ಅದನ್ನು ಒತ್ತಾಯ ಮಾಡುತ್ತೇನೆ. ಆದರೆ ನಮ್ಮ ಖರ್ಚು ಮತ್ತು ಆದಾಯ ಒಂದು ಸ್ಥಿಮಿತಕ್ಕೆ ಬರುವವರೆಗೂ ಕೆಲಕೆಲವು ಭಾಗಗಳಲ್ಲಿ—ಎಂದರೆ ಈಗ ಹಾಸನ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ತೆಗೆದಿದ್ದೀರಿ—ಆ ರೀತಿ ತೆಗೆಯಬೇಕೆಂದು ಬಡ್ಜೆಟ್‌ನಲ್ಲಿ ನಮೂದಾಗಿದೆ. ಹಾಗೆ ತೆಗೆಯಬೇಕಾದ್ದು ನ್ಯಾಯ; ಏಕೆಂದರೆ ಶಿವಮೊಗ್ಗ, ಕಡೂರು ವಗೈರೆ ಅಜುಬಾಜು ತಾಲ್ಲೂಕುಗಳಲ್ಲಿ ತೆಗೆದು, ಹಾಸನ ಡಿಸ್ಟ್ರಿಕ್ಟಿನ 6 ತಾಲ್ಲೂಕುಗಳಲ್ಲಿ ಮಾತ್ರ ಪಾನನಿರೋಧ ಮಾಡಿರುವುದರಿಂದ ಇತರ ಕಡೆಗಳಲ್ಲಿ ತೊಂದರೆಯಾಗುತ್ತಿದೆ. ಆದ್ದರಿಂದ ಇನ್ನು ಉಳಿದ ಕಡೆಗಳಲ್ಲೂ ಸಹ ಎಕ್ಸೈಜ್ ಬಾಬನ್ನು ದಿನೇ ದಿನೇ ನಮ್ಮ ಆದಾಯದ ಮಟ್ಟ ಹೆಚ್ಚಿದಂತೆ ಕಮ್ಮಿ ಮಾಡುವುದಕ್ಕೆ ಪ್ರಭುತ್ವದವರು ಆಲೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

ಕೆಲವು ಮಾನ್ಯ ಸ್ನೇಹಿತರು ಈ ಸಭೆಯ ಮೂಲಕ ಸರ್ಕಾರದ ವ್ಯವಸ್ಥೆಯಲ್ಲಿ ಕೈಹಾಕುವುದು ಸರಿಯಲ್ಲ ಎಂದು ತಿಳಿಸಿದರು. ಯಾರೂ ಕೂಡ ಕೈ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ಅಂಥ ಸನ್ನಿವೇಶಗಳು ಕೂಡ ಕೆಲವು ದಿನಗಳಿಂದೀಚೆಗೆ ಕಾಣುತ್ತಾ ಇಲ್ಲ.

ಸ್ವಾಮಿ, ನಾನು ಇನ್ನು ಹೆಚ್ಚಿಗೆ ಹೇಳುವುದಕೆ ಪ್ರಯತ್ನಮಾಡುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ಆಹಾರದ ಇಲಾಖೆಯನ್ನು ತೆಗೆಯುವುದರ ಮೂಲಕ ಬೇಕಾದಷ್ಟು ಹಣ ಉಳಿತಾಯವಾಗುತ್ತದೆ. ಸುಮಾರು 30 ಲಕ್ಷ ರೂಪಾಯಿಗಳಷ್ಟು ಉಳಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಸಂಸ್ಥಾನದಲ್ಲಿರತಕ್ಕಂಥ ಸಬ್ ಡಿವಿಜನ್ ಆಫೀಸುಗಳ ಅವಶ್ಯಕತೆ ಅಷ್ಟೇನೂ ಇಲ್ಲ. ಅದನ್ನು ತೆಗೆದು ಹಾಕಿದರೆ ಬಹಳ ಮೊಬಲಗು ಸರ್ಕಾರದವರಿಗೆ ಉಳಿತಾಯವಾಗುತ್ತದೆ. ಮತ್ತು ಮೈಸೂರು ಸಂಸ್ಥಾನದಲ್ಲಿ ಅನವಶ್ಯಕವಾದಂಥ ಇನ್ನೂ ಅನೇಕ ಇಲಾಖೆಗಳು ಇವೆ. ಅವುಗಳನ್ನು ತೆಗೆಯಬೇಕು ಎಂದು ಹೇಳಿ ಅನೇಕ ಕಾಲದಿಂದಲೂ ಸರ್ಕಾರದವರು ಆಲೋಚನೆಮಾಡಿ ಅವು ಇನ್ನೂ ಕಾರ್ಯರೂಪಕ್ಕೆ ಬರಲಲ್ಲ. ಸರ್ಕಾರದವರು ಆಲೋಚನೆಮಾಡಿ ನೋಡಿದರೆ ಅನೇಕ ಬಾಬುಗಳಲ್ಲಿ ಮೊಬಲಗನ್ನು ಉಳಿತಾಯಮಾಡತಕ್ಕ ಒಂದು ಸನ್ನಿವೇಶವಿದೆ. ವಯಸ್ಕರ ಶಿಕ್ಷಣ ಸಮಿತಿ, ಸೇವಾದಳ, ಮತ್ತು ಸಂಸ್ಕೃತಿ ಪ್ರಚಾರ ಇವುಗಳನ್ನೆಲ್ಲಾ ಒಂದುಗೂಡಿಸಿ ಒಂದೇ ಒಂದು ಸಂಸ್ಥೆಯನ್ನಾಗಿ ಮಾಡಿ ತನ್ಮೂಲಕ ಬಡ್ಜೆಟ್ಟಿನಲ್ಲಿ ಹಣ ಒದಗಿಸಿ ಆ ಕಾರ್ಯಗಳೆಲ್ಲಾ ಕಾರ್ಯರೂಪಕ್ಕೆ ಬರಲು ಒಂದು ಅವಕಾಶವನ್ನು ಕಲ್ಪಿಸಬೇಕೆಂದು ಈ ಸನ್ನಿವೇಶದಲ್ಲಿ ನಾನು ವಿನಂತಿಮಾಡಿಕೊಳ್ಳಲು ಪ್ರಯತ್ನಮಾಡುತ್ತೇನೆ.

ರೋಡ್‌ಟ್ರ್ಯಾನ್ಸ್‌ಪೋರ್ಟ್ ವಿಚಾರ. ಸಂಸ್ಥಾನಾಮಳೆ ರೋಡ್ ಟ್ರ್ಯಾನ್ಸ್‌ಪೋರ್ಟ್ ವ್ಯವಸ್ಥೆಯನ್ನು ಸರ್ಕಾರದವರೇ ಕೈಕೊಳ್ಳಲು ಹಿಂದಿನ ಮಂತ್ರಿ ಮಂಡಲದವರು ಪ್ರಾರಂಭಿಸಿದ್ದನ್ನು ಕಾರ್ಯಗತಮಾಡಿ ದೇಶದ ಪ್ರಜೆಗಳಿಗೆ ಆದಷ್ಟೂ ಅನುಕೂಲವಾದ ಸಂಚಾರ ಸೌಲಭ್ಯಗಳನ್ನೇರ್ಪಡಿಸಲು ಪ್ರಯತ್ನಪಟ್ಟಿರುವುದು ಬಹಳ ಸಂತೋಷದಾಯಕವಾದ ವಿಚಾರ. ಆದರೆ ಇದು ಪೂರ್ಣ ಫಲಕಾರಿಯಾಗದೇ ಕೆಲವು ತೊಂದರೆಗಳಾಗುತ್ತಾ ಇವೆ. ಈಗ ಕೆಲವು ಖಾಸಗಿ ಬಸ್‌ಗಳವರಿಗೆ ಬಸ್ ಓಡಿಸಲು ಅವಕಾಶ ಕೊಟ್ಟಿದ್ದಾರೆ. ಒಳ್ಳೆಯ ಉತ್ತಮವಾದ ರಸ್ತೆಗಳು, ಟಾರ್ ರಸ್ತೆಗಳು, ಸಿಮೆಂಟ್ ಕಾಂಕ್ರೀಟ್ ರಸ್ತೆಗಳು–

(ಶ್ರೀ ಎಸ್. ಸಿದ್ದಪ್ಪ.)

ಇವುಗಳನ್ನು ಸರ್ಕಾರದವರೇ ಉಳಿಸಿಕೊಂಡಿದ್ದಾರೆ. ಸಂತೋಷವಾದ ವಿಚಾರ. ಏಕೆಂದರೆ ಸರ್ಕಾರದಿಂದ ನಡೆಯುತಕ್ಕ ಯಾವ ಒಂದು ನಡವಳಿಕೆಯೇ ಆಗಲಿ ಸಾರೋದ್ಧಾರವಾಗಿ ನಡೆದು ಶಾಶ್ವತವಾಗಿ ಉಳಿಯುತ್ತದೆ. ಆದರೂ ದೇಶದಲ್ಲಿ ಪ್ರಜೆಗಳು ನಿಮ್ಮ ವಿಷಯದಲ್ಲಿ ನಿಮ್ಮ ಕಾರ್ಯಾಚರಣೆಯ ವಿಷಯದಲ್ಲಿ, ನಡವಳಿಕೆಗಳ ವಿಚಾರದಲ್ಲಿ, ಪ್ರಭುತ್ವದ ವಿಚಾರದಲ್ಲಿ ಏನು ಅನ್ನುತ್ತಾರೆ ಎಂಬ ವಿಷಯವನ್ನು ನಾನು ಈ ಸಭೆಯಲ್ಲಿ ತಿಳಿಸಬೇಕಾದದ್ದು ನನ್ನ ಕರ್ತವ್ಯ. ಆದುದರಿಂದ ಬೆಂಗಳೂರು ಮತ್ತು ಮೈಸೂರಿನಲ್ಲಿ ಅನೇಕ ಅನುಕೂಲಗಳಿದ್ದೂ ರೋಡ್ ಟ್ರಾನ್ಸ್‌ಪೋರ್ಟನ್ನ ಬೇರೆಯವರಿಗೆ ಕೊಟ್ಟು ಗ್ರಾಮಾಂತರಗಳಲ್ಲಿ ಒಂದೊಂದು ಬಸ್ಸಿನಿಂದ ಎಂಟು ಹತ್ತು ಸಂಸಾರಗಳು ಜೀವನ ನಡೆಸುತ್ತಿದ್ದುದನ್ನು ತಪ್ಪಿಸಿ ಬೆಂಗಳೂರಿನಲ್ಲಿರುವವರಿಗೆ ಬಸ್ಸು ಅನುಕೂಲ ಮಾಡಿರುವುದು ಸರಿಯಾದ ಸನ್ನಿವೇಶವಲ್ಲ. ಆದುದರಿಂದ ರಾಷ್ಟ್ರೀಕರಣ ಮಾಡಿ, ಪ್ರಯಾಣ ಸೌಕರ್ಯವನ್ನು ಯಶಸ್ವಿಯಾಗಿ ಕಲ್ಪಿಸಿ ಸರ್ಕಾರದವರು ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ನಿಮಗೆ ಕೊಟ್ಟಿದ್ದ ಕಾಲಾವಕಾಶ ಮುಗಿಯಿತು.

Sri J. MOHAMED IMAM.—How long are we going to sit ? When are the Ministers going to speak, Sir ?

Mr. DEPUTY SPEAKER.—After six.

ಶ್ರೀ ಎಸ್. ಸಿದ್ದಪ್ಪ.—ಸ್ವಾಮಿ, ಅನೇಕ ಉಪಯುಕ್ತ ಸಲಹೆಗಳನ್ನು ಅರಿಕೆ ಮಾಡಿರುವುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಕಾರ್ಯಗತಮಾಡುವುದರಿಂದ ಜನರಿಗೂ ಅನುಕೂಲ, ಹಣವೂ ಉಳಿತಾಯವಾಗುತ್ತದೆ. ದೇಶದಲ್ಲಿ ಹೊಸ ತೆರಿಗೆಗಳನ್ನು ಹಾಕುವ ಮಟ್ಟವನ್ನೂ ಕಡಮೆಮಾಡುವುದಕ್ಕವಕಾಶವಾಗುತ್ತದೆ. ಸರ್ಕಾರಕ್ಕೂ ಬಹಳ ಮಟ್ಟಿಗೆ ಅನುಕೂಲವಾಗುತ್ತದೆ.

ವಿಧಾನ ಸೌಧದ ನಿರ್ಮಾಣ ಬಹು ಮುಖ್ಯವಾದ ವಿಷಯ. ನಮ್ಮ ದೇಶದ ನಾಯಕರಾದ ನೆಹರೂರವರು ಇದಕ್ಕೆ ಅಸ್ತಿಭಾರ ಹಾಕಿದ್ದರೂ ಈ ಕೆಲಸ ನಿಂತುಹೋಗಿತ್ತು. ಇಂಥ ಒಂದು ಕಟ್ಟಡ ಬಹಳ ಅವಶ್ಯಕವಾಗಿತ್ತು. ಈಗ ಸೆಕ್ರೆಟೇರಿಯಟ್ಟಿಗೆ ಜಾಗ ಸಾಲದೆ ಬಹಳ ಇಕ್ಕಟ್ಟಾಗಿದೆ. ಅಲ್ಲದೆ ಇನ್ಷೂರೆನ್ಸ್ ಆಫೀಸಿಗೆ ಜಾಗವಿಲ್ಲ. ಆದಕಾರಣ ಈ ಕಟ್ಟಡವನ್ನು ಜಾಗ್ರತೆ ಮುಗಿಸಿ ಸೆಕ್ರೆಟೇರಿಯಟ್ ಮತ್ತು ಇತರ ಕಚೇರಿಗಳಿಗಿರುವ ಅನಾನುಕೂಲವನ್ನು ತಪ್ಪಿಸಬೇಕು. ನನಗೆ ಮಾತನಾಡಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೂ ಮಾನ್ಯ ಸದಸ್ಯರಿಗೂ ಅಭಿನಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಮಾನ್ಯ ಮುಖ್ಯ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯದ ಅಂದಾಜಿನ ಪಟ್ಟಿಯನ್ನು ನೋಡಿದ್ದರಲ್ಲಿ, 1954-55 ನೆಯ ಸಾಲಿನಲ್ಲಿ ಮೈಸೂರು ಸಂಸ್ಥಾನದ ಭವಿಷ್ಯ ಹೇಗಿದೆ ಎಂಬುದನ್ನು ಯೋಚಿಸಿದರೆ, ಸಾಧಾರಣ ಜನತೆಯಲ್ಲಿ ಒಂದು ಸಂದೇಹಕ್ಕೆ, ಭಯಕ್ಕೆ ಅವಕಾಶವನ್ನು ಕಲ್ಪಿಸಿದೆಯೋ ಏನೋ ಎಂದು ಹೇಳುವ ಸನ್ನಿವೇಶ ಬಂದಿದೆ. ಈ ಒಂದು ಸಂದೇಹ ಮತ್ತು ಶಂಕೆ ನಿಜವೇ, ಇದಕ್ಕೆ ನಾವು ಕೂಡ ಹೆಚ್ಚಿನ ಮಹತ್ವವನ್ನು ಕೊಡಬೇಕೇ ಎಂಬುದನ್ನು ಕೂಲಂಕಷವಾಗಿ, ಸೂಕ್ಷ್ಮವಾಗಿ ಆಲೋಚಿಸತಕ್ಕ ಪರಿಸ್ಥಿತಿ ಈಗ ಈ ಮಾನ್ಯ ಸಭೆಗೆ ಬಂದಿದೆ ಎನಿಸುತ್ತದೆ. ಕಳೆದ ನಾಲ್ಕು ದಿವಸಗಳಲ್ಲಿ ನಡೆದಿರುವ ಬಜೆಟ್ ವಿಮರ್ಶೆಯಲ್ಲಿ ಅನೇಕ ಸದಸ್ಯರು ಈ ಬಜೆಟ್ಟಿನ ಕೆಲವು ಕ್ಲಿಷ್ಟವಾದ ಭಾಗಗಳನ್ನು ವಿಮರ್ಶೆ ಮಾಡಿ ಮಾತನಾಡಿದ್ದಾರೆ. ನಾನಾದರೋ ಒಂದೆರಡು ಮುಖ್ಯ ಅಂಶಗಳ ಬಗ್ಗೆ ನನ್ನ ಗಮನವನ್ನು ಕೇಂದ್ರೀಕರಿಸಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದು ಮನಸ್ಸುಮಾಡಿದ್ದೇನೆ.

ಸ್ವಾಮಿ, ಈ ಆಯವ್ಯಯದ ಅಂದಾಜಿನಲ್ಲಿ ಸರ್ಕಾರದವರು ಕಳೆದ ಎರಡು ವರ್ಷಗಳಿಂದಲೂ ಅನುಸರಿಸಿರುವ ಆಡಳಿತ ರೀತಿ ನೀತಿಗಳನ್ನು ನೋಡುವುದಾದರೆ ಸರ್ಕಾರದ ಆಡಳಿತ ನಡೆಸಿರುವ ಮತ್ತು ದೇಶಾಭಿವೃದ್ಧಿ ಕಾರ್ಯಗಳನ್ನು ನಡೆಸಿಕೊಂಡು ಬಂದಿರುವುದರಲ್ಲಿ ಬಹುಮಟ್ಟಿಗೆ ನೀವು ಮೆಚ್ಚತಕ್ಕ ರೀತಿಯಲ್ಲಿ ಅನೇಕ ಉಪಯುಕ್ತ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಮೆಡಿಕಲ್, ಪಬ್ಲಿಕ್ ಹೆಲ್ತ್ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳ ಕೆಲಸವನ್ನು ನೋಡಿದರೆ ಅನೇಕ ಕೆರೆ ಕಾಮಗಾರಿಗಳು, ರಸ್ತೆ ಕಾಲುವೆ ಕೆಲಸ ಕಾರ್ಯಗಳು, ಗ್ರೋಮೋರ್ ಫುಡ್ ಕೆಲಸಗಳು ಬೇಕಾದಷ್ಟು ನಡೆದು ಲಕ್ಷಾಂತರವಲ್ಲದಿದ್ದರೂ ಸಾವಿರಾರು ಎಕರೆಗಳು ನೀರಾವರಿಗೆ ಬಂದು ಆಹಾರ ಸಮಸ್ಯೆಯನ್ನು ಬಗೆಹರಿಸುವ ಸನ್ನಿವೇಶ ಕಂಡುಬಂದಿದೆ. ಹಾಗೆಯೇ ಜನತೆಯ ಆರೋಗ್ಯ ಎಷ್ಟೋಮಟ್ಟಿಗೆ ಉತ್ತಮ ಸ್ಥಿತಿಗೆ ಬರುತ್ತಿದೆ. ದೇಶಾದ್ಯಂತ ಜಾರಿಗೆ ಬಂದರೆ ನ್ಯಾಷನಲ್ ಮಲೇರಿಯಾ ಕಂಟ್ರೋಲ್ ಯೋಜನೆಯಿಂದಲೂ ಡಿ. ಡಿ. ಟಿ. ಯಿಂದಲೂ ಮಲೇರಿಯಾ ಪ್ರದೇಶಗಳಲ್ಲಿ ಜನತೆಯ ಆರೋಗ್ಯ ಉತ್ತಮವಾಗಿರುವುದರಿಂದ ತನ್ಮೂಲಕ ಹೆಚ್ಚಿನ ಆಹಾರ ಉತ್ಪತ್ತಿಗೆ ಹೆಚ್ಚಿನ ಅವಕಾಶ ಸಿಕ್ಕಿದೆ ಎಂಬುದು ಸ್ವಯಂವೇದ್ಯವಾಗಿದೆ. ಈ ಯೋಜನೆಗಳನ್ನು ಹೆಚ್ಚು ಮಾಡಿಕೊಂಡು ಹೋಗುವುದು ಬಹಳ ಅವಶ್ಯಕ. ಹೆಚ್ಚು ಪ್ರಮಾಣದಲ್ಲಿ ದಕ್ಷತೆಯಿಂದ ಕೆಲಸ ನಡೆಸಿಕೊಂಡು ಹೋಗುವುದರಿಂದ ಜನರ ಆರೋಗ್ಯ ಇನ್ನೂ ಹೆಚ್ಚಲು ಅವಕಾಶವಾಗುತ್ತದೆಂದು ಅರಿಕೆ ಮಾಡುತ್ತೇನೆ. ಈ ಬಜೆಟ್ಟನ್ನು ವಿಮರ್ಶೆಮಾಡುವಾಗ ಸುಲಭವಾಗಿ ಇದನ್ನು ಸ್ವಾಗತಿಸುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ಒಂದು ಕಹಿಯಾದ ಗುಳಿಗೆಯನ್ನು ಕೊಟ್ಟಿದ್ದಾರೆ. ಅದು ರೆವೆನ್ಯೂ ತೆರಿಗೆಯನ್ನು ಹೆಚ್ಚುಮಾಡುವುದು. ದೇಶದ ಆದಾಯ ವರ್ಷ ವರ್ಷವೂ ಕಡಮೆಯಾಗುತ್ತಾ ಬಂದಿರುವಾಗ ಈ ಖರ್ಚಿಗೆ ಹಣವನ್ನೊದಗಿಸುವುದು ನಮ್ಮ ದೇಶದ ಪ್ರಜೆಗಳ ಕರ್ತವ್ಯ. ಹಾಗೆ ಕೊಡದೆ ಹೋದರೆ ಹೆಚ್ಚು ಸೌಕರ್ಯವನ್ನು ಒದಗಿಸಿ ಎಂದು ಸರ್ಕಾರವನ್ನು ಕೇಳುವುದಕ್ಕೆ ಬಾಯಿ ಇರುವುದಿಲ್ಲವೆಂಬುದು ವಾಸ್ತವ. ಆದರೆ ಯಾರನ್ನು, ಎಷ್ಟುಮಟ್ಟಿಗೆ, ಯಾವ ಕಾಲದಲ್ಲಿ ಕೇಳಬೇಕು, ಯಾರಿಂದ ಎಷ್ಟುಮಟ್ಟಿಗೆ ವಸೂಲು ಮಾಡಿಕೊಳ್ಳಬೇಕು ಎಂಬುದು ಪ್ರಶ್ನೆ. ಇದನ್ನು ಆಡಳಿತ ನಡೆಸುವವರು ಬಹಳ ಎಚ್ಚರಿಕೆಯಿಂದ, ಸಮರ್ಪಕವಾಗಿ, ದೀರ್ಘವಾಗಿ ಆಲೋಚನೆ ಮಾಡುವುದು ಒಳ್ಳೆಯದು. ವಿದ್ಯುಚ್ಛಕ್ತಿಯ ದರವನ್ನು ಹೆಚ್ಚಿಸಬೇಕೆಂದು ಮಾಡಿರುವ ಸರ್ಕಾರದ ನಿರ್ಧಾರದ ಬಗ್ಗೆ ಹೇಳುವುದಾದರೆ, ಹಿಂದೆ ಇದೇ ಸಭೆಯಲ್ಲಿ ನಾನು ವ್ಯವಸಾಯಗಾರನ ಕಷ್ಟಗಳೇನು, ಒಂದು ಎಕರೆ ಜಮೀನಿನಲ್ಲಿ ಒಂದು ಬೆಳೆ ತೆಗೆಯಬೇಕಾದರೆ ಅವನಿಗೆಷ್ಟು ಕಷ್ಟ, ಇದರಿಂದ ಅವನಿಗೆ ಎಷ್ಟು ಉತ್ಪತ್ತಿ ಬರುತ್ತದೆ ಎಂಬ ಬಗ್ಗೆ ಸಮಗ್ರವಾದ ಅಂಕಿ ಅಂಶಗಳನ್ನು ಸಭೆಯ ಮುಂದಿಟ್ಟಿದ್ದೆ. ಇದೇ ವಿಚಾರದ ಬಗ್ಗೆ ಇದು

ವರೆಗೆ ಅನೇಕ ಗ್ರಾಮಗಳಲ್ಲಿ ಪರಿಶೀಲನೆ ನಡೆಸಿದ್ದೇನೆ, ಅನೇಕ ರೈತರ ಹತ್ತಿರ ಮಾತನಾಡಿದ್ದೇನೆ, ಇದರಿಂದ unrebuttable conclusionಗೆ ಬಂದಿದ್ದೇನೆ. ಆಹಾರ ಬೆಳೆಯುವ ರೈತ ಯಾವುದೇ ಸಂದರ್ಭದಲ್ಲೂ ಹೆಚ್ಚಿನ ತೆರಿಗೆಯನ್ನು ವಹಿಸುವುದಕ್ಕೆ ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಅವನಿಗೆ ನಿಜವಾಗಿ ವ್ಯವಸಾಯದಿಂದ ಹೆಚ್ಚಿನ ಲಾಭ ಬರುವುದಾದರೆ, ಉಳಿತಾಯವಾಗುವುದಾದರೆ ಅವನೇಕೆ ಜಮೀನು ಬಿಟ್ಟು ಬೇರೆ ಕೆಲಸಗಳಿಗೆ, ಕೈಗಾರಿಕೆಗಳಲ್ಲಿ ಕೂಲಿ ಕೆಲಸಕ್ಕೆ ಹೋಗಬೇಕು ? ವ್ಯವಸಾಯದಿಂದ ಲಾಭ ವಿಲ್ಲದ್ದರಿಂದಲೇ ಜಮೀನ್ದಾರನಾಗಿ ವ್ಯವಸಾಯ ಮಾಡುವುದು ಬೇಡ ಎಂದು ತೀರ್ಮಾನ ಮಾಡುವ ಕಾಲ ಬಂದಿದೆ. ಖರ್ಚು ಬಾಬನ್ನು ಉಳಿತಾಯ ಮಾಡುವುದಕ್ಕೆ ಮಾರ್ಗವಿಲ್ಲದೇ ಹೋದರೆ ಆಗ ತೆರಿಗೆ ಹೆಚ್ಚುಮಾಡಲು ಅವಕಾಶ ಮಾಡುವುದು ನ್ಯಾಯ. ಆದರೆ ನನಗನ್ನಿಸುತ್ತದೆ, ಸೇಲ್ಸ್ ಟ್ಯಾಕ್ಸ್ ಇಲಾಖೆ ಯ ಆಡಳಿತವನ್ನು ಸರಿಯಾಗಿ ನಡೆಸುವುದರ ಮೂಲಕ ಲೀಕೇಜ್ ತಪ್ಪಿಸಿದರೆ ಸಂಸ್ಥಾನದ ವರಮಾನವನ್ನು ಎರಡರಷ್ಟು ಹೆಚ್ಚು ಮಾಡುವುದಕ್ಕೆ ಖಂಡಿತವಾಗಿಯೂ ಅವಕಾಶವಿದೆ. ಅನೇಕ ಮುನಿಸಿಪಲ್ ಆಡಳಿತದಲ್ಲಿ ಅನುಭವ ಪಡೆದು ನಾನು ಹೇಳುತ್ತಿದ್ದೇನೆ. ಇದನ್ನು ಸರಿಯಾಗಿ ಸರ್ಕಾರದವರು ಪರ್ಯಾಲೋಚನೆ ಮಾಡ ಬೇಕಾಗಿದೆ. ಅಲ್ಲದೆ ರೈಲ್ವೆ ಇಲಾಖೆಯನ್ನು ಬಿಟ್ಟು ಕೊಟ್ಟಿದ್ದರಿಂದ ನಮಗೆ ಎಷ್ಟು ನಷ್ಟವಾಗಿದೆಯೋ ಅಷ್ಟನ್ನು ಮೈಸೂರು ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಿಂದ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಿದೆ. ಇನ್ನೂ ಇದರಿಂದ ಬರುವ ವರಮಾನವನ್ನು ಹೆಚ್ಚಿಸ ಬಹುದು. By the gradual extension of the scheme, if necessary, and by better administration. Collection ಸರಿಯಾಗಿ ಮಾಡಬೇಕು, ವರ್ಕ್‌ಷಾಪ್ ಮ್ಯಾನೇಜ್‌ಮೆಂಟ್ ಸರಿ ಯಾಗಿ ಮಾಡಬೇಕು. ಇದನ್ನು ಸರಿಯಾಗಿ ಸರ್ಕಾರ ಆಲೋಚನೆ ಮಾಡಬೇಕು.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಮಾನ್ಯ ಅಧ್ಯಕ್ಷರೆ, 1954-55ನೆಯ ಸಾಲಿನ ಬಡ್ಜೆಟ್ಟನ್ನು ವಿಮರ್ಶೆ ಮಾಡುವಾಗ ನಮ್ಮನ್ನು ಯಾರು ಚುನಾಯಿಸಿ ಕಳುಹಿಸಿದ್ದಾರೋ ಯಾವ ಜನಾಂಗ ನಮ್ಮನ್ನು ಚುನಾಯಿಸಿ ಕಳುಹಿಸಿದೆಯೋ ಅವರ ಭಾವನೆ ಹೇಗಿದೆ, ಅವರು ಈ ವಿಷಯದಲ್ಲಿ ಏನು ಅಭಿ ಪ್ರಾಯ ವ್ಯಕ್ತಪಡಿಸುತ್ತಾರೆ ಎಂಬುದನ್ನು ಮನಸ್ಸಿ ನಲ್ಲಿಟ್ಟುಕೊಂಡು ನಾವು ಈ ಬಡ್ಜೆಟ್ಟನ್ನು ವಿಮರ್ಶೆ ಮಾಡಬೇಕಾಗಿದೆ. ಅದರಲ್ಲೂ ಈ ವರ್ಷದ ಬಡ್ಜೆಟ್ಟನ್ನು ವಿಮರ್ಶೆ ಮಾಡುವಾಗ ದೇಶದ ಮೂಲೆ ಮೂಲೆಯಲ್ಲಿ ರುವ ಇಡೀ ಒಂದು ಕೋಟಿ ಜನಾಂಗಕ್ಕೆ ಕೂಡ ಈ ಬಡ್ಜೆಟ್ಟಿನ ವಿಷಯ ಮನಸ್ಸಿಗೆ ತಾಕಿದೆ, ಬಡ್ಜೆಟ್ಟಿನ ವಿಷಯ ತಿಳಿಯದೆ ಇದ್ದಂಥ, ಬಡ್ಜೆಟ್ ಅಧಿವೇಶನ ವನ್ನು ಅರಿಯದೆ ಇದ್ದಂಥ ಜನಾಂಗಕ್ಕೆ ಕೂಡ ಈ ದಿವಸ ಈ ಬಡ್ಜೆಟ್ ನಮ್ಮಮೇಲೆ ಏನು ಭಾರ ಹೊರಿಸು ತ್ತದೆ ಎಂಬುದು ತಿಳಿದು ಪ್ರತಿಯೊಬ್ಬ ಪ್ರಜೆಯ ಮನ ಸ್ಸಿನಮೇಲೆ ಕೂಡ ಪರಿಣಾಮವನ್ನುಂಟು ಮಾಡಿದೆ ಎಂದು ತಿಳಿಸಬೇಕಾಗಿದೆ. ಆದ್ದರಿಂದ ಜನತೆಗೆ ಎಚ್ಚರಿಕೆ ಉಂಟಾಗಿರುವುದು ನಮಗೆ ಸ್ಪಷ್ಟವಾಗಿದೆ. ನಮ ಗುಂಟಾಗುವ ಅನುಕೂಲವೇನು ಮತ್ತು ನಾವು ಕೊಡ ಬೇಕಾದ ತೆರಿಗೆಯೆಷ್ಟು ಎಂಬುದು ಜನತೆಗೆ ಈ ದಿವಸ ಅರ್ಥವಾಗಿದೆ.

ಸ್ವಾಮಿ, ಒಂದು ವಿಷಯವನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಸೌಲಭ್ಯ ಬೇಕು ಎಂದು ಹೇಳು ವಾಗ ನಾವೆಷ್ಟು ಭಾರ ಹೊರುವುದಕ್ಕೆ ಸಾಧ್ಯ, ಯಾರು ಹೊರಬಲ್ಲರು ಎಂಬುದನ್ನು ಕೂಡ ವಿಮರ್ಶೆ ಮಾಡುವುದು ಬಹಳ ಅಗತ್ಯವಾಗಿದೆ. ಈ ವಿಮರ್ಶೆ ಮಾಡುವುದಕ್ಕೆ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸುವುದು ಸೂಕ್ತವೆ ಅಥವಾ ಹಣಕಾಸಿನ ಇಲಾಖೆಗೆ ಇದನ್ನು ವಹಿಸಬಹುದೆ ಎಂಬುದು ಕೂಡ ವಿಮರ್ಶೆಗೆ ಅರ್ಹವಾದ ವಿಷಯ. ತಜ್ಞರನ್ನು ಒಳಗೊಂಡ ಭೂಸುಧಾರಣಾ ಸಮಿತಿಯ Reportನ್ನು ಒಂದು ಕಡೆ ಇಟ್ಟು ಇನ್ನೊಂದುಕಡೆ ಹಣಕಾಸಿನ ಇಲಾಖೆ ಏನು ತೆರಿಗೆಯ ಭಾರವನ್ನು ಹೊರಿಸಬಹುದೆಂದು ನಿರ್ದಿಷ್ಟ ಗೊಳಿಸಿ ತೆರಿಗೆಗಳ ಪಟ್ಟಿಯನ್ನು ಕೊಟ್ಟಿರುವುದನ್ನು ನೋಡಿದರೆ ಈ ತೆರಿಗೆ ಸರಿಯಾದ ತಜ್ಞರಿಂದ ಪರಿಶೋ ಧಿಸಲ್ಪಟ್ಟಿಲ್ಲ ಎಂಬುದು ಈ ದಿವಸ ಸ್ಪಷ್ಟವಾಗಿ ಗೊತ್ತಾಗುತ್ತದೆ. ಬಹಳ ವರ್ಷಗಳಿಂದಲೂ ಕೂಡ ರೈತರಮೇಲೆ ನೇರವಾಗಿ ಬಿದ್ದಿರುವ ಭಾರವನ್ನು ಕಡಮೆಮಾಡಬೇಕೆಂಬ ವಾದವಿದೆ. ಬ್ಯೂರೋ ಕ್ರಾಟಿಕ್ ಸರ್ಕಾರವಿದ್ದಾಗಿನಿಂದ ಇದನ್ನು ಹೇಳು ತ್ತಿದ್ದೇವೆ. ಅಲ್ಲಿಂದ ಏಳು ವರ್ಷಗಳಿಂದ ಈ ಸರ್ಕಾರ ರಚನೆಯಾದಮೇಲೆ ಕೂಡ ಈ ಅಭಿಪ್ರಾಯವನ್ನು ಗಮನಿಸಬೇಕಾಗಿತ್ತು. ನೇರವಾಗಿ ರೈತರಮೇಲೆ ಭಾರಹಾಕುವ ಭಾವನೆ ಮೊದಲಿಂದಲೂ ಬಂದಿರಲಿಲ್ಲ. ಈ ದಿವಸ ಖರ್ಚು ಹೆಚ್ಚಾಗಿರುವುದು ನಿಜ. ಹಾಗಿರು ವಾಗ ಯಾವ ಬಾಬಿನಲ್ಲಿ ಯಾವರೀತಿ ಖರ್ಚು ಹೆಚ್ಚಾ ಗಿದೆ, ಯಾವುದನ್ನು ಕಡಮೆ ಮಾಡಬೇಕು ಎಂಬುದನ್ನು ನಾವು ವಿಮರ್ಶೆಮಾಡಿ ಅನಂತರ ಯಾವರೀತಿ ಭಾರವನ್ನು ಹೊರಿಸಬೇಕು, ನೇರವಾಗಿ ಭಾರ ಹೊರಿಸಬೇಕೇ ಅಥವಾ ಅಪ್ರತ್ಯಕ್ಷವಾಗಿ ಭಾರ ಹೊರಿಸಬೇಕೇ ಎಂಬುದನ್ನು ವಿಮರ್ಶೆ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಈಗ ಒಟ್ಟಿನಲ್ಲಿ 3 ಕೋಟಿ ಚಿಲ್ಲರೆ ಖೋತಾ ಬಂದಿರುವುದನ್ನು ವಿಮರ್ಶೆ ಮಾಡುವಾಗ 41 ಲಕ್ಷ ರೂಪಾಯಿ ಬಳ್ಳಾರಿ ಜಿಲ್ಲೆಯಿಂದ ಬಂದಿದೆಯೆಂದು ಹೇಳುತ್ತಾರೆ ; ಆಹಾರದ ಇಲಾಖೆಯಿಂದ 24½ ಲಕ್ಷ ಖೋತಾ ಎಂದು ಹೇಳು ತ್ತಾರೆ. ಹೀಗೆ 24½ ಲಕ್ಷ ಆಹಾರ ಇಲಾಖೆಯಿಂದ ಖೋತಾ ಬಂದಿದೆಯೆಂದು ಹೇಳುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಆ ದಿವಸ ಆಹಾರದ ಇಲಾಖೆ ನಡೆಯುತ್ತಿದ್ದ ಕಾಲದಲ್ಲಿ, ಕಂಟ್ರೋಲ್ ಸಂಪೂರ್ಣ ವಾಗಿ ದೇಶದಲ್ಲಿದ್ದಾಗ 35—40 ಲಕ್ಷ ಖರ್ಚಿತು. ಈ ಸರ್ಕಾರ ಆಹಾರದ ನೀತಿ ಬದಲಾಯಿಸಿದಮೇಲೆ ಆಹಾರ ಇಲಾಖೆಯ ಖರ್ಚು ತಾನಾಗಿಯೇ ಕಡಿಮೆ ಯಾಗಬೇಕು. ಹಾಗಿದ್ದರೂ ಈ ದಿವಸ ಕಂಟ್ರೋಲ್ ಸಂಪೂರ್ಣವಾಗಿ ತೆಗೆದಮೇಲೆ ಈ ಬಾಬಿನಲ್ಲಿ ಖರ್ಚು ತೋರಿಸಿರುವುದು ನಮಗೆ ಅರ್ಥವಾಗದಿರುವ ವಿಷಯ ವಾಗಿದೆ. ಖರ್ಚು ಬಾಬನ್ನು ಎಷ್ಟು ಕಡಮೆ ಮಾಡ ಬಹುದೋ ಅಷ್ಟನ್ನು ಮಾಡಿದ್ದೇವೆ, ಉಳಿದಿರುವ ಖೋತಾ ಸರಿದೂಗಿಸಲು ತೆರಿಗೆ ಹಾಕಿಕಥೆ ಗತ್ಯಂತರವಿಲ್ಲ ಎಂದು ಬಡ್ಜೆಟ್ಟಿನಲ್ಲಿ ಸೂಚನೆ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಆ ಸೂಚನೆ ಕೊಟ್ಟಿಲ್ಲದಿರುವುದರಿಂದ ಜನರಮೇಲೆ ತೆರಿಗೆ ಹೊರಿಸುವುದು ಸರಿಯೆ, ಅವರು ಹೇಗೆ ಅದನ್ನು ಹೊರಬಲ್ಲರು ಎಂಬುದು ನಮಗೆ ಅರ್ಥ ವಾಗಿಲ್ಲ.

ಈ ದಿವಸ ಬಡ್ಜೆಟ್ಟನ್ನು ಸರಿದೂಗಿಸಬೇಕಾಗಿದೆ, ನಿಜ. ವಿದ್ಯಾಭ್ಯಾಸದ ಇಲಾಖೆಯನ್ನು ತೆಗೆದು ಕೊಳ್ಳೋಣ. ಅದಕ್ಕೆ ಹೆಚ್ಚಾಗಿ ಹಣ ಒದಗಿಸಿದೆ, ಹಿಂದಿನ ವರ್ಷಕ್ಕಿಂತ ಹೆಚ್ಚಾಗಿ ಹಣ ಕೊಟ್ಟಿದೆ. ಆದರೆ ಆ ಇಲಾಖೆಯಿಂದ ಎಷ್ಟುಮಟ್ಟಿಗೆ ಸಹಾಯವಾಗಿದೆ ಯೆಂಬುದನ್ನು ನೋಡಬೇಕು. ಪ್ರಾಥಮಿಕ ವಿದ್ಯಾ ಭ್ಯಾಸಕ್ಕೆ 2 ಕೋಟಿ ರೂಪಾಯಿ ಚಿಲ್ಲರೆ ಖರ್ಚಾಗ್ಯ

(ಶ್ರೀ ಟಿ. ಎಸ್. ಮೂಡಲಗಿರಿಗೌಡ.)

ವಾಗ ಪ್ರಯೋಗ ಎಷ್ಟರಮಟ್ಟಿಗಾಗುತ್ತಿದೆಯೆಂದು
ಅರಿಯಬೇಕಾಗಿದೆ. ನಾವು ಖರ್ಚುಮಾಡುವ ಹಣ
ನಿಜವಾಗಿಯೂ ಸಾಕಷ್ಟು ಪ್ರಯೋಜನಕಾರಿಯಾಗಿ
ದೆಯೆ ಎಂದು ಯೋಚನೆ ಮಾಡಬೇಕು. ಈ ದಿವಸ
ವೀರಣ್ಣಗೌಡರು ತಮ್ಮ ಭಾಷಣವನ್ನು ಸರಿಯಾದ
ಭಾಷೆಯಲ್ಲಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಅವರು
ಆ ರೀತಿಯಾಗಿ ಮಾತನಾಡಬಾರದಾಗಿತ್ತು ಎಂಬುದು
ಎಲ್ಲರ ಅಭಿಪ್ರಾಯ. ಪಾಠಶಾಲೆಗಳನ್ನು ನೋಡಿದರೆ
ಉಪಾಧ್ಯಾಯರಿದ್ದರೆ ಮಕ್ಕಳಿರುವುದಿಲ್ಲ, ಮಕ್ಕಳಿದ್ದರೆ
ಉಪಾಧ್ಯಾಯರಿರುವುದಿಲ್ಲ. ಇಷ್ಟು ಹಣ ವ್ಯಯ
ಮಾಡುವಾಗ ಯಾವುದಾದರೂ ಒಂದು ಊರಿನ ಪ್ರಜೆ
ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಸರಿಯಾಗಿ ಸಿಕ್ಕಲಿಲ್ಲ
ವೆಂದು ಹೇಳಿದರೆ ತಕ್ಕ ಜವಾಬನ್ನು ಸರ್ಕಾರ ತಿಳಿಸು
ವಂತಿರಬೇಕು. ಬಡ್ಜೆಟ್ಟನ್ನು ವಿಮರ್ಶೆ ಮಾಡುವಾಗ
ಬೆಂಗಳೂರು ಕಾಲೇಜಿನಲ್ಲಿರುವವರನ್ನು ಅಥವಾ ಪಟ್ಟಣ
ದಲ್ಲಿರುವ ವಿದ್ಯಾವಂತರನ್ನು ನೋಡಿ ವಿದ್ಯಾಭ್ಯಾಸ
ವೆಷ್ಟು ಹರಡಿದೆಯೆಂದು ಹೇಳಿದರೆ ಅದು ಸರಿಯಲ್ಲ.
ಈ ಹಣ ಖರ್ಚಾಗುವುದು ಸದುಪಯೋಗವಾಗಬೇಕು.
ಹೆಲ್ತ್ ಇಲಾಖೆಗಾಗಲಿ ವಿದ್ಯಾ ಇಲಾಖೆಗಾಗಲಿ
ಅಥವಾ ಬೇರೆ ಯಾವ ಇಲಾಖೆಗಾಗಲಿ ಖರ್ಚುಮಾಡು
ವುದು ನೇರವಾಗಿ ಜನಾಂಗಕ್ಕೆ ಹೆಚ್ಚು ಪ್ರಯೋಜನ
ಕಾರಿಯಾಗಿರಬೇಕು. ಹಾಗಿಲ್ಲದಿದ್ದರೆ ಒದಗಿಸಿರುವ
ಹಣ ವ್ಯರ್ಥವಾಗುತ್ತದೆಂದು ಹೇಳದೆ ಗತ್ಯಂತರವಿಲ್ಲ.

ಈಗ ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಚಾರದಲ್ಲಿ
ಎಲ್ಲರೂ ಹೇಳಿದ್ದಾರೆ. ಹಿಂದೆ ಯಾವಕಾಲದಲ್ಲೂ ಖರ್ಚು
ಮಾಡದಿರುವಷ್ಟು ಹಣವನ್ನು ಈ ಒಂದೆರಡು ವರ್ಷಗಳಲ್ಲಿ
ಮಾಡಿದ್ದಾರೆ. ಜನಾಂಗದ ನಿರೀಕ್ಷೆಗಿಂತ ಹೆಚ್ಚಾದ
ಕೆಲಸ ಕಾರ್ಯ ಮಾಡಿದ್ದಾರೆ. ಈ ಇಲಾಖೆಯಲ್ಲಿ
ಅನೇಕ ನ್ಯೂನತೆಗಳಿವೆಯೆಂಬುದನ್ನು ಒಪ್ಪುತ್ತೇವೆ.
ಒಬ್ಬಿಬ್ಬರು ಆಫೀಸರು ಮಾಡುವ ಅನ್ಯಾಯಗಳು ಇಡೀ
ಇಲಾಖೆಯ ಮೇಲೆ, ಆ ಸಂಸ್ಥೆಯಮೇಲೆ ದುಷ್ಪರಿಣಾಮ
ವನ್ನುಂಟು ಮಾಡುತ್ತಿವೆ. ಈ ಇಲಾಖೆ ಈ ಎರಡು
ವರ್ಷಗಳಿಂದ ಹಿಂದೆ ನಾಲ್ಕಾರು ವರ್ಷಗಳಲ್ಲಿ ಮಾಡ
ದಿರುವಷ್ಟು ಉತ್ತಮ ಕೆಲಸ ಮಾಡಿದೆ. ಕೆರೆ ಕಟ್ಟೆಗಳ
ರಿಪೇರಿ, ರಸ್ತೆ ರಿಪೇರಿ ಮುಂತಾದ ಅನೇಕ ಕೆಲಸ
ಗಳನ್ನು ಮಾಡಿದೆ. ಬಸ್ಸಿನಲ್ಲಿ ಅಥವಾ ಗಾಡಿಯಲ್ಲಿ
ಹೋಗುವುದಕ್ಕೆ ರಸ್ತೆಗಳು ಚೆನ್ನಾಗಿರಲಿಲ್ಲ. ಈ ದಿವಸ
ಶೇಕಡ 75 ರಸ್ತೆಗಳು ಚೆನ್ನಾಗಿವೆ. ಈ ಇಲಾಖೆ
ಕಳೆದ ಎರಡು ವರ್ಷಗಳಿಂದ ಸಾರ್ಥಕವಾದ ಕೆಲಸ
ಮಾಡಿದೆಯೆಂದು ಹೇಳಿದರೆ ಅದು ಎಲ್ಲರೂ ಒಪ್ಪುವ
ವಿಷಯ.

ಕುಡಿಯುವ ನೀರಿನ ಭಾವಿ ವಿಷಯವನ್ನು ಅನೇಕರು
ಹೇಳಿದ್ದಾರೆ. ಅನೇಕ ಕಡೆ ಒದಗಿಸಿದ್ದಾರೆ. ಆದರೆ
ಒಂದು ವಿಷಯ ಹೇಳಬೇಕಾಗಿದೆ. ಪಟ್ಟಣದಲ್ಲಾದರೆ,
ನಲ್ಲಿಯಲ್ಲಿ ಎಲ್ಲಾದರೂ ನೀರು ಸ್ವಲ್ಪ ಕಡಮೆಯಾದರೆ
ಇಡೀ ದೇಶದಲ್ಲಿ ಅಲ್ಲಕಲ್ಲೋಲವಾಗುತ್ತದೆ. ಅದೇ
ಹಳ್ಳಿಯಲ್ಲಿ ಎಷ್ಟು ಕಷ್ಟವಿದೆಯೆಂಬುದನ್ನು ನೋಡ
ಬೇಕು. ಎಷ್ಟೋ ವರ್ಷಗಳಿಂದ ಅನೇಕರು ಕಷ್ಟಪಡು
ತ್ತಿದ್ದಾರೆ. ಬೇಸಗೆಯಲ್ಲಿ ನಾಲ್ಕಾರು ತಿಂಗಳು
ಮೂರು ನಾಲ್ಕು ಮೈಲಿಗಳಷ್ಟು ದೂರಹೋಗಿ ನೀರು
ತಂದು ಜೀವನ ಮಾಡಬೇಕಾದ ಪರಿಸ್ಥಿತಿ ಅನೇಕ ಕಡೆ
ಇದೆ. ಹೀಗಿರುವಾಗ ಅವರನ್ನು ತೆರಿಗೆ ಹೊರಿ ಎಂದು
ಹೇಳಿದರೆ ಅದು ಸಮಂಜಸವೆ ಎಂದು ಯೋಚನೆ ಮಾಡ
ಬೇಕು. ಯಾವುದೇ ಬಾಬಿಗೆ ಹಣ ಒದಗಿಸಿದರೂ
ತೃಪ್ತಿಕರವಾದ ರೀತಿಯಲ್ಲಿ ಕೆಲಸ ಕಾರ್ಯ ಶೀಘ್ರ
ವಾಗಿ ನಡೆಯಬೇಕೆಂದು ಒತ್ತಿ ಹೇಳುತ್ತೇನೆ.

ತೆರಿಗೆ ವಿಚಾರದಲ್ಲಿ ಒಂದು ಮಾತು. ಶ್ರೀನಿವಾಸ
ಅಯ್ಯಂಗಾರ್‌ರವರು ಬೆಟಿಂಗ್ ಟ್ಯಾಕ್ಸ್ ತೃಪ್ತಿಕರವಾದ
ರೀತಿಯಲ್ಲಿ ಮಾರ್ಪಾಡು ಮಾಡಬೇಕೆಂದು ಹೇಳಿದರು.
ಮಾಸ್ಕರೆನ್ಹಾಸ್‌ರವರು ಸೇಲ್ಸ್‌ಟ್ಯಾಕ್ಸ್ ಸರಿಯಾದ ರೀತಿ
ಯಲ್ಲಿ ವಿಧಿಸಲ್ಪಡಬೇಕೆಂದು ಹೇಳಿದರು. ಈಗ ವರ
ಮಾನ ತೆರಿಗೆಯನ್ನು ತೆಗೆದುಕೊಳ್ಳೋಣ. ಇಂಡಿಯಾ
ಸರ್ಕಾರದವರು ಈ ಇಲಾಖೆಯನ್ನು ವಹಿಸಿಕೊಂಡ
ಮೇಲೆ ಅಲ್ಲಿನ ಯಾವ ನೌಕರರನ್ನು ಕೇಳಿದರೂ ಹೊರ
ಗಡೆ ಒಂದು ನಿಮಿಷಕಾಲ ಹೋದರೂ ಆಗ ಮಾಡ
ಬೇಕಾಗಿದ್ದ ಕೆಲಸ (work-load) ತಮ್ಮ ತಲೆಯ
ಮೇಲೆ ಬೀಳುತ್ತದೆ, ತಮ್ಮ ಜವಾಬ್ದಾರಿ ಅಷ್ಟುಮಟ್ಟಿ
ಗಿದೆ ಎಂದು ಈ ದಿವಸ ಹೇಳುತ್ತಾರೆ. ಸರ್ಕಾರದ
ಎಲ್ಲಾ ಇಲಾಖೆಗಳಲ್ಲೂ ಸಹ ಅದೇರೀತಿ ನೀತಿಯನ್ನನು
ಸರಿಸಬೇಕು. ಸರ್ಕಾರದವರು ಇದನ್ನು ಯೋಚನೆ
ಮಾಡಬೇಕಾಗಿದೆ. ವರಮಾನ ತೆರಿಗೆ ಇಲಾಖೆ ಹಿಂದೆ
ನಮ್ಮಲ್ಲಿದ್ದಾಗ ಎಷ್ಟು ಹಣ ನಮಗೆ ಬರುತ್ತಿತ್ತು, ಈ
ದಿವಸ ಎಷ್ಟು ಬರುತ್ತಿದೆ ಎಂಬುದನ್ನು ನೋಡಿ ಸೇಲ್ಸ್
ಟ್ಯಾಕ್ಸ್ ವಿಚಾರದಲ್ಲಿ ತಕ್ಕ ವ್ಯವಸ್ಥೆ ಮಾಡಬೇಕು.
ಈಗ ಸೇಲ್ಸ್‌ಟ್ಯಾಕ್ಸ್ ಕೊಡುವವರು ನಾವು, ವರ್ತಕ
ರಲ್ಲ. ವರ್ತಕರು ಕೊಡುತ್ತಾರೆಂಬ ವಾದವನ್ನು
ಯಾರೂ ಒಪ್ಪುವುದಕ್ಕಾಗುವುದಿಲ್ಲ. ಅದನ್ನು ಸರಿಯಾಗಿ
ವಸೂಲು ಮಾಡುವುದು ಸರ್ಕಾರದ ಜವಾಬ್ದಾರಿ.
ಹಾಗೆ ಮಾಡಿದ್ದೇ ಆದರೆ ಈ ಬಾಬಿನಿಂದ ಬರುವ
ಉತ್ಪತ್ತಿಯನ್ನು ಒಂದಕ್ಕೆ ಎರಡರಷ್ಟು ಮಾಡಬಹು
ದೆಂದು ಮಾಸ್ಕರೇನ್ಹಸ್‌ರವರು ಹೇಳಿರುವುದು ಒಪ್ಪತಕ್ಕ
ವಿಷಯ. ಆದ್ದರಿಂದ ಹಣಕಾಸನ್ನು ಹೆಚ್ಚಾಗಿ
ಉತ್ಪತ್ತಿಮಾಡಲು ಬೇಕಾದಷ್ಟು ಅವಕಾಶವಿದೆ. ರೈಲ್ವೆ
ಇಲಾಖೆ ನಮಗೆ ಸೇರಿತ್ತು; ಈ ದಿವಸ ಇಲ್ಲ. ಆ
ಇಲಾಖೆ ನಮ್ಮ ಕೈಕೆಳಗಿಲ್ಲದಿರುವಾಗ ರೋಡ್
ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ಹೊಸದಾಗಿ ವಹಿಸಿ
ಕೊಂಡೆವು. ಆದರೆ ಇಷ್ಟು ವರ್ಷಗಳಾದರೂ ಅದನ್ನು
ಸರಿಯಾಗಿ ನಡೆಸಲಿಲ್ಲ, ಸರಿಯಾದ ಆದಾಯ ಪಡೆಯು
ವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದರೆ ಅದು ಸರಿ
ಯಾದ ಮಾತಲ್ಲ. ಆದ್ದರಿಂದ ಇದನ್ನು ಸಂಪೂರ್ಣ
ವಾಗಿ ವಿಮರ್ಶೆ ಮಾಡಬೇಕು.

6 P.M.

Sri M. PALANIYAPPAN.—How long we have to sit ?

Mr. DEPUTY SPEAKER.—We will sit till 7 o'clock. There are still three or four members anxious to speak. I want to know how much time the Hon'ble Ministers will require ?

Sri H. SIDDAVEERAPPA (Minister for Home and Industries).—I think about half an hour.

ಶ್ರೀ ಎಸ್. ಗೋಪಾಲಗೌಡ.—ಅಧ್ಯಕ್ಷರೇ, ಕಾಲಾ
ವಕಾಶವಿಲ್ಲದಿರುವುದರಿಂದ ನಾನು ಮಾತನಾಡಬೇ
ಕೆಂದಿದ್ದ ಅಷ್ಟು ವಿಷಯಗಳನ್ನೂ ಪ್ರಸ್ತಾಪಮಾಡುವು
ದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ನನ್ನನ್ನು
ನಾನೇ ದೂರಿಕೊಳ್ಳಬೇಕಾಗಿದೆ, ಅಷ್ಟೆ.

ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣವನ್ನು
ಒಂದು ಪದ್ಯದಿಂದ ಆರಂಭ ಮಾಡಿದರು. ನಾನೂ
ಅದೇ ರೀತಿ ಒಂದು ಪದ್ಯದಿಂದಲೇ ಪ್ರಾರಂಭ ಮಾಡ
ಬಯಸುತ್ತೇನೆ. ಆದರೆ ಮನಸ್ಸು ಮಾತ್ರ ಅಷ್ಟು
ಹಗುರವಾಗಿಲ್ಲ. ಕಾಲದ ಮಿತಿ ಮೈಮೇಲೆ ಬಂದಾಗ

ಅಂಥ ಹಗುರವಾದ mood ನಲ್ಲಿರುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಹನುಮಂತಯ್ಯನವರು ತೆರಿಗೆ ಹೊರಿಸುವುದನ್ನು ಸಮರ್ಥಿಸುತ್ತಾ, 'ಸಾಲವನು ಕೊಂಬಾಗ ಹಾಲೋಗರುಂಡಂತೆ' ಎಂದು ಸರ್ವಜ್ಞನನ್ನು ಉದಾಹರಿಸಿ ಸದಸ್ಯರನ್ನು ಮೊದಲಿಸಿ ಮಾತನಾಡಿದರು. ಅವರು ಹೇಳುವುದು. ಯಾವರೀತಿಯದೆಯೆಂದರೆ:

"ಅಟ್ಟ ಏರಿದಮೇಲೆ ಏಣಿಯಾ ಹಂಗೇನು ?
ಗದ್ದುಗೆಯನ್ನೇರಿದಮೇಲೆ ಜನರ ಹಂಗೇನು ?
ನಾನು ಸರಕಾರ ; ನೀ ಪ್ರಜೆ !
ಕೊಡು ತೆರಿಗೆ—ಇಲ್ಲದಿರೆ ನಡೆ ಸೆರೆಮನೆಗೆ
ಎಂದನಾ ಮೈಸೂರು ಮುಖ್ಯ ಮಂತ್ರಿ !"

ಇನ್ನೂ ಹೀಗೆಯೇ ಬಹಳವಿದೆ. ಒಂದನ್ನು ಮಾತ್ರ ಹೇಳುತ್ತೇನೆ. ಈಗ ಜನರ ಪರಿತಾಪ ಯಾವರೀತಿಯದೆಯಂದರೆ.

"ಉಣಲಿಲ್ಲ; ಉಡಲಿಲ್ಲ,
ದಂಡತೆರುವುದು ಮಾತ್ರ ನಿಲಲಿಲ್ಲ !
ಬಿಡಲಾರೆ, ಬಿಡದಿರಲಾರೆ,
ಈ ಕಾಂಗ್ರೆಸ್ ಗಂಡನಾ ಎಂದು
ಮರುಗಿತು ಮೈಸೂರು ಜನತೆ."

ಇನ್ನೂ ಬೇಕಾದಷ್ಟು ಹೀಗೆಯೇ ಹೇಳಿ ಭಾಷಣ ಮಾಡಬಹುದು. ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಾ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಆದರೆ ಮುಖ್ಯವಾಗಿ ಈಗ ಸಭೆಯ ಮುಂದೆ ಮಂಡಿಸಲ್ಪಟ್ಟು, ಸಭೆ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸತಕ್ಕಂಥ 1954-55 ನೆಯ ಸಾಲಿನ ಆಯವ್ಯಯದ ಅಂದಾಜಿನ ಬಗ್ಗೆ ನಾನು ಸಂಕ್ಷೇಪವಾಗಿ ನನ್ನ ಅಭಿಪ್ರಾಯವನ್ನು ಕೊಡಬೇಕೆಂದಿದ್ದೇನೆ. ಮೊದಲನೆಯದಾಗಿ ನಾನು ಮುಂಚೆಯೇ ಹೇಳಿದಂತೆ ಕಂದಾಯವನ್ನು ಕೇಳುವುದಕ್ಕೆ, ತೆರಿಗೆಗಳನ್ನು ಕೇಳುವುದಕ್ಕೆ ಅಥವಾ ಸಾಲ ಕೇಳುವುದಕ್ಕೆ ಎಂಥ ಮನುಷ್ಯನಿಗೂ, ಸಂಸ್ಥೆಗೂ ಅಥವಾ ಸರ್ಕಾರಕ್ಕೂ ಒಂದು ಹೊಣೆಗಾರಿಕೆ ಬೇಕು, ಜವಾಬ್ದಾರಿ ಬೇಕು ಎನ್ನತಕ್ಕದ್ದು ಒಂದು ಬಹಳ ಮೂಲಭೂತವಾದ ಪ್ರಶ್ನೆ. ಶ್ರೀಮಾನ್ ಹನುಮಂತಯ್ಯನವರು ಅಪ್ಪಣೆಕೊಡಿಸಿದರು, ನಿಮಗೆ ಸೌಕರ್ಯಗಳನ್ನು ಕೇಳುವಾಗ ಹಾಲೋಗರವನ್ನು ಉಂಡಂತಿರುತ್ತದೆ, ಆದರೆ ತೆರಿಗೆಗಳನ್ನು ಕೊಡುವಾಗ ಕಿಬ್ಬದಿಯ ಕೀಲು ಮುರಿದಂತಾಗುತ್ತದೆ ಎಂದು. ನಿಜ, ಎಲ್ಲರೂ ತೆರಿಗೆ ಕೊಡಬೇಕು. ಆದರೆ ಯಾರು ? ಯಾವಾಗ ? ಜನತೆ ತನ್ನ ಉತ್ಪತ್ತಿಯಲ್ಲಿ ತನ್ನ ಅವಶ್ಯಕತೆಗಿಂತ ಜಾಸ್ತಿಯಾದ ಎಲ್ಲ ಭಾಗವನ್ನೂ ಸರ್ಕಾರಕ್ಕೆ ಒಪ್ಪಿಸಬೇಕು. ಅದು ಜನತಾ ಸರಕಾರ. ಯಾರು ತಮ್ಮ ಅವಶ್ಯಕತೆಗಿಂತ ಹೆಚ್ಚಿಗೆ ಇಟ್ಟು ಕೊಳ್ಳುತ್ತಾರೋ, ಅದು ಕಳ್ಳತನ, ಸ್ತೇಯ. ಹೀಗೆ ಸಂಗ್ರಹಿಸಿ ಕೂಡಿಟ್ಟುಕೊಂಡ ವಸ್ತುವನ್ನು, ಅಧಿಕಾರವನ್ನು, ಹಣವನ್ನು, ಬುದ್ಧಿಯನ್ನು ಅವರು ತಮ್ಮ ಸ್ವಂತ ಉಪಯೋಗಗಳಿಗಾಗಿ, ಸಮಾಜ ಶೋಷಣೆಗಾಗಿ ಉಪಯೋಗಿಸಬಾರದು. ಇದು ಅನ್ಯಾಯ ! ಇದು ಪಾಪ! ಅದು ನಡೆಯಬಾರದು. ಇದು ನ್ಯಾಯವಾಗಿ ಇರಬೇಕಾದ ತತ್ವ. ಈಗ ಕಾಂಗ್ರೆಸ್ ಅಥವಾ ಕಾಂಗ್ರೆಸ್ ಮಂತ್ರಿಗಳು ಈ ಒಂದು ಜವಾಬ್ದಾರಿಯನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವುದಕ್ಕೆ ಸಾಧ್ಯವಿಲ್ಲ. ಅಥವಾ ನಮಗೆ ಕಾಲಾವಕಾಶ ದೊರೆಯಲಿಲ್ಲ ಈ ಪ್ರಯೋಗ ನಡೆಸಲಿಕ್ಕೆ ಎಂದು ಹೇಳಲು ಸಾಧ್ಯವಿಲ್ಲ. ಅವರ ರಾಜ್ಯ ಬಂದು ಏಳು ವರ್ಷಗಳಾದುವು, ಅವರ ಪಂಚವಾರ್ಷಿಕ ಯೋಜನೆ ನಮ್ಮ ದೇಶದಲ್ಲಿ ಪ್ರಾರಂಭವಾಗಿ ಈಗಾಗಲೇ ನಾಲ್ಕು ವರ್ಷಗಳಾದವು. ಅವರು ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ದೇಶದ ಜನತೆಗೆ ಕೊಟ್ಟ ಆಶ್ವಾಸನಗಳೇನು, ಇದುವರೆಗೆ ಅವುಗಳನ್ನು ಎಷ್ಟರಮಟ್ಟಿಗೆ ಕಾರ್ಯಗತಮಾಡಿದ್ದಾರೆ ಎನ್ನುವುದನ್ನು ಇವೊತ್ತು ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸಾಮಾಜಿಕ ಪರಿಸ್ಥಿತಿಯನ್ನು ತೋರಿಸಬಲ್ಲದು. ಜನತೆಗೆ ಇದು ಗೊತ್ತು. ಈ ಸರ್ಕಾರ ಎಷ್ಟರಮಟ್ಟಿಗೆ ಸಾಮಾನ್ಯರ ಜನಜೀವನವನ್ನು ಸುಧಾರಿಸಿದೆ, ಜೀವನ ಮಟ್ಟವನ್ನು ಹೆಚ್ಚುಮಾಡಿದೆ ಉದ್ಯೋಗದ ಅವಕಾಶ ಕಲ್ಪಿಸಿಕೊಟ್ಟಿದೆ ಎಂಬದನ್ನು ಜನತೆ ಹೇಳಬಲ್ಲದು. ಈ ಹೊತ್ತು ತಿರುವಾಂಕೂರು ಕೊಚ್ಚಿನ್ನಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ ಅದನ್ನು. ಕಾಂಗ್ರೆಸ್ ಸರ್ಕಾರದ ಮುಖ್ಯ ಮಂತ್ರಿಗಳು, ಪ್ರಧಾನ ಮಂತ್ರಿ ಶ್ರೀ ಜವಹರ ಲಾಲ್ ನೆಹ್ರೂರವರಿಂದ ಹಿಡಿದು, ಮುಖ್ಯ ಮಂತ್ರಿಗಳಾದ ಹನುಮಂತಯ್ಯನವರಿಂದ ಹಿಡಿದು, ಈ ಅಸಂಖ್ಯಾತ ಸಂಖ್ಯೆಯಲ್ಲಿರುವ ಕಾಂಗ್ರೆಸ್ ಮುಖಂಡರುಗಳೆಲ್ಲರೂ ಕೂಡ ದೇಶದ ಈ ಪರಿಸ್ಥಿತಿಯನ್ನು ಸ್ವಲ್ಪ ಆಳವಾಗಿ ಯೋಚನೆ ಮಾಡಬೇಕು. ರಾಜ್ಯಭಾರ ಮಾಡತಕ್ಕದ್ದು ಅಷ್ಟು ಹಗುರವಾದ ಮಕ್ಕಳಾಟವಲ್ಲ !! ಲಕ್ಷಾಂತರ ಕೋಟ್ಯಾಂತರ ಜನರ ಜೀವನದೊಂದಿಗೆ ತಾವಿಂದು ಆಟವಾಡುತ್ತಿದ್ದೀರಿ ! ಒಂದು ಕ್ಷಾಮ ಬಂದರೆ, ಲಕ್ಷಾಂತರ ಜನರು ಶ್ಮಶಾನ ಯಾತ್ರೆ ಮಾಡುತ್ತಾರೆ. ತಮಗೆ ಈ ಅರಿವೇ ಇಲ್ಲದೆ ಅಧಿಕಾರ ಸ್ಥಾನದಲ್ಲಿದ್ದು ಜವಾಬ್ದಾರಿಯನ್ನು ಅರ್ಥ ಮಾಡಿಕೊಳ್ಳದೇ ಇದ್ದರೆ ದೇಶದಲ್ಲಿ ಜನರು ದಂಗೆ ಏಳುತ್ತಾರೆ, ಕ್ರಾಂತಿಯಾಗುತ್ತದೆ. ಅಂತಹ ಸರಕಾರಗಳು ಉರುಳುತ್ತವೆಂಬದನ್ನು ನಾವಿಂದು ನೋಡುತ್ತಿಲ್ಲವೇ ? ದಿನನಿತ್ಯದ ಇತಿಹಾಸದಲ್ಲಿ ಇದು ನಮಗೆ ಮನವರಿಕೆಯಾಗುತ್ತಿಲ್ಲವೇ ? ಕಾಂಗ್ರೆಸ್ಸೇನೂ ವರಪ್ರಸಾದದಿಂದ ಹುಟ್ಟಿದ ದೈವೀ ಸಂಸ್ಥೆಯೇನಲ್ಲ. ಅದೇನೂ ಇಲ್ಲೇ ಶಾಶ್ವತವಾಗಿ ಇರತಕ್ಕ ಸಂಸ್ಥೆಯೇ ? ಕಾಲಾನುಕ್ರಮದಲ್ಲಿ ಅಳಿಸಿ ಹೋಗತಕ್ಕ ಸಂಸ್ಥೆ ಅದೂಕೂಡ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಎಲ್ಲ ಸಂಸ್ಥೆಗಳೂ ಹಾಗೆಯೇ!

ಶ್ರೀ ಎಸ್. ಗೋಪಾಲಗೌಡ.—ಆದರೂ, ತಮ್ಮ ಸಂಸ್ಥೆಗೆ ಈ ಮಾತು ಹೆಚ್ಚಾಗಿ ಅನ್ವಯಿಸುತ್ತದೆ. ಇದನ್ನು ತಾವು ಅರ್ಥಮಾಡಿಕೊಂಡರೆ ತಾವು ಮಾತನಾಡತಕ್ಕ ಸರಣಿ ವಿಚಿತ್ರವಾಗಿ ತೋರುತ್ತದೆ. ಇಂಥ ಕಂದಾಯವನ್ನು ಹೇರತಕ್ಕ ಪರಿಸ್ಥಿತಿಯಲ್ಲೂ ಕೂಡ ಒಂದು ಪಾರ್ಟಿಯ ಬಹುಮತವೂ ಸಹ ಇಲ್ಲದೆ ಮುಂದುವರಿಯುತ್ತಿದ್ದರೂ ತೆರಿಗೆ ಕೊಡುವುದಕ್ಕೆ ಜನರು ಹಿಂತೆಗೆಯುತ್ತಿದ್ದಾರೆಂದರೆ, ಅದು ವಿಚಿತ್ರವಾದ ವಾದ.

ಪುಸ್ತಕದಲ್ಲಿ, ಆ ದಿವಸ ಅವರು ಏನು ತಿಳಿಸಿದ್ದಾರೋ ಅದನ್ನೇ ಈ ದಿವಸ ಈ ರೀತಿಯಾಗಿ ಪ್ರಸ್ತಾಪಿಸಿದ್ದಾರೆ. ಅವರು ತಮ್ಮ ಭಾಷಣದ ಪುಸ್ತಕದಲ್ಲಿ "ನಾವು ಬಜೆಟ್ಟಿನಲ್ಲಿ ರಾಷ್ಟ್ರಾಭಿವೃದ್ಧಿ ಕೆಲಸ ಕಾರ್ಯಗಳಿಗಾಗಿ ಹೆಚ್ಚಿನ ಹಣವನ್ನು ಒದಗಿಸಿದ್ದೇವೆ." ಎಂದೂ, ಅದಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತಿದೆಯೆಂದೂ ತಿಳಿಸಿದ್ದಾರೆ. ಅಂಕಿಅಂಶಗಳನ್ನು ತೆಗೆದು ನೋಡಿದರೂ ಕೂಡ ಇರತಕ್ಕ ವಸ್ತುಸ್ಥಿತಿಯೇ ಒಂದಾಗಿರುತ್ತದೆ. ಹೀಗೆ ಒಂದಕ್ಕೊಂದಕ್ಕೆ ವ್ಯತ್ಯಾಸವಿರುವುದನ್ನು ನೋಡಿದರೆ ಬಹಳ ನಿರಾಶೆ ಉಂಟಾಗುತ್ತದೆ. ಅಷ್ಟೇ ಅಲ್ಲದೆ ನಮಗೆ ಪರರಾಷ್ಟ್ರಗಳಿಂದ ಯುದ್ಧದ ಭಯವೂ ಕೂಡ ಇದೆ. ಅದನ್ನು ಬೇರೆ ಎದುರಿಸಬೇಕಾಗಿದೆ. ಗೆಳೆಯ ಮುಲ್ಕಾರವರು ತಮ್ಮ

(ಶ್ರೀ ಎಸ್. ಗೋಪಾಲಗೌಡ.)

ಭಾಷಣ ಕಾಲದಲ್ಲಿ ಒಂದು ವಿಷಯವನ್ನು ಹೇಳಿದರು. ಆ ಒಂದು ಅಂಶವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ಈಗ ವಿಶ್ವದಲ್ಲಿ ಎರಡು ಶಕ್ತಿ ಕೂಟಗಳು ಯುದ್ಧಕ್ಕಾಗಿ ಕತ್ತಿ ಮಸೆಯುತ್ತಿರುವ ರಾಷ್ಟ್ರಕೂಟಗಳ ಮಧ್ಯೆ ನಾವು ಇದ್ದೇವೆ. ಅಲ್ಲದೆ ಈಗ ತಾನೆ ನಾವು ಶತಮಾನಗಳ ದಾಸ್ಯದಿಂದ ಪರಕೀಯರ ಧಾಳಿಯನ್ನು ತಪ್ಪಿಸಿಕೊಂಡು ಒಂದು ಸ್ವತಂತ್ರ ರಾಷ್ಟ್ರವನ್ನು ನಿರ್ಮಾಣಮಾಡತಕ್ಕಂಥ ಕಾಲದಲ್ಲಿದ್ದೇವೆ. ನಮ್ಮ ಆರ್ಥಿಕ ವ್ಯವಸ್ಥೆಯು ಇನ್ನೂ ತೀರಾ ಹೀನಸ್ಥಿತಿಯಲ್ಲಿದೆ. ನಮಗೆ ದೇಶಕಟ್ಟಬೇಕೆಂಬ ಆಶೆಯಿದ್ದರೂ ಅದಕ್ಕೆ ತಕ್ಕಷ್ಟು ಬಂಡವಾಳವಿಲ್ಲ, ಸಹಕಾರವಿಲ್ಲ, ಉತ್ಸಾಹವಿಲ್ಲ, ಒಮ್ಮತವಿಲ್ಲ ಮತ್ತು ಅಂತಹ ಆಡಳಿತವಿಲ್ಲದಿರುವುದು ದುರದೃಷ್ಟ. ಅಂಥ ಒಂದು ಹಿನ್ನೆಲೆಯ ಬಲವು ನಮಗಿರುವುದಿಲ್ಲ. ಹೀಗಿರುವಾಗ ಅಮೆರಿಕಾ ರಾಷ್ಟ್ರವು ನಮ್ಮ ನೆರೆಹೊರೆಯ ರಾಷ್ಟ್ರವಾದ ಪಾಕೀಸ್ತಾನದವರಿಗೆ ಬೇಕಾದ ಬೆಂಬಲವನ್ನು ಕೊಟ್ಟು ಅದನ್ನು ತಮ್ಮ ಮುಂದಿನ ಯುದ್ಧ ಭೂಮಿಯನ್ನಾಗಿ ಮಾಡಿಕೊಳ್ಳಲು ಹವಣಿಸಿದ್ದಾರೆ. ಇದಕ್ಕೆ ಪೂರ್ವ......

Mr. DEPUTY SPEAKER.—There is no time for all this. We have very limited time and there are so many speakers wanting to speak. Further, members are also anxious to hear Government's reply. I have to accommodate other members also. I request the Member to realise all this.

ಶ್ರೀ ಎಸ್. ಗೋಪಾಲಗೌಡ.—ಅಮೆರಿಕಾ ದೇಶದವರು ನಮ್ಮ ದೇಶದಲ್ಲಿ ಏನು ಕ್ರೈವಾಡ ಮಾಡುತ್ತಿದ್ದಾರೆಂಬುದನ್ನು ತೋರಿಸಲು ಈ ಸಂದರ್ಭದಲ್ಲೇ ಒಬ್ಬ ಮಹನೀಯರು ಈ ವಿಚಾರವಾಗಿ ಏನು ಬರೆದಿರುತ್ತಾರೆಂದರೆ — ಅವರು ಅಮೇರಿಕದವರು — ತಮ್ಮ ಲೇಖನದಲ್ಲಿ ಬರೆಯುತ್ತಾರೆ,

> "The question is sometimes asked: What does America expect to get out of its contribution to Indo-American co-operation in community projects, tube-well drilling, river valley development and other programmes? For our part, we can say that what America expects is what India expects-- success in bettering the lives of India's citizens. If this is achieved, by the democratic means by which it is being approachrd, Americans feel that India's people will lend increasing strength to a work in which peace and human betterment are the first concern of us all."

ಈ ಸದುದ್ದೇಶದಿಂದಲೇ ಅಮೇರಿಕ ಪಾಕಿಸ್ತಾನದೊಂದಿಗೆ ಸೈನ್ಯ ಒಪ್ಪಂದ ಮಾಡಿಕೊಂಡಿದೆಯೇನು?

ಈ ಪುಸ್ತಕದ ಹೆಸರು ಕುರುಕ್ಷೇತ್ರ ಎಂದು. ಇದು ಧರ್ಮಕ್ಷೇತ್ರವೂ ಆಗಬಹುದು ತಪ್ಪಿದರೆ ಶ್ಮಶಾನ ಕುರುಕ್ಷೇತ್ರವೂ ಆಗಬಹುದು. ಎಲ್ಲಿಯಾದರೂ ಜನರು "ನೀರು-ನೆರಳು" ಇಲ್ಲದಿದ್ದ ಸ್ಥಳವನ್ನು ನೋಡಿದರೆ "ಇದೇನಪ್ಪಾ ಕುರುಕ್ಷೇತ್ರ ಇದ್ದಹಾಗೆ ಇದೆ" ಎಂದು ಹೇಳುವುದುಂಟು. ಈ ದಿವಸ ಯಾರು ಮಂತ್ರಿಗಳಾಗುತ್ತಾರೋ ಅವರ ಕೈಲಿ ಅಧಿಕಾರವಿರುತ್ತದೆ, ಅವರ ಕೈಲಿ ಖಜಾನೆಯೂ ಇರುತ್ತದೆ. ಆದುದರಿಂದ ತಾವ್ ಯಾವುದನ್ನು ಮಾಡಿದರೂ ಮಾಡಬಹುದು. ಆದರೆ ತಾವು ಇಂಥ ಬಡ್ಜೆಟ್ಟನ್ನು ನಮ್ಮ ಮುಂದೆ ತರಬೇಡಿ. ಇಷ್ಟೊಂದು ತೆರಿಗೆಗಳನ್ನು ಹೊರುವುದಕ್ಕೆ ಜನರಿಗೆ ಶಕ್ತಿಯಿಲ್ಲ. ಆದರೆ ನಮಗೆ ಇರತಕ್ಕ ಅವಕಾಶದಲ್ಲಿ ನಾವು ಏನು ಸಹಾಯ ನೀಡಬಹುದೋ ಅಷ್ಟನ್ನು ನೀಡಬಹುದು. ಹಾಗೂ ತಾವು ಇದೇ ರೀತಿಯಲ್ಲಿ ಮುಂದುವರಿಯುವುದಾದರೆ ಅದಕ್ಕೇನು ಪ್ರತೀಕಾರ ಮಾಡಬೇಕೋ ಅದನ್ನು ಮಾಡುವುದು ನಮ್ಮ ಕರ್ತವ್ಯ. ಏನು ಮಾಡಬೇಕೆಂಬುದನ್ನು ತಾವು ಉಪದೇಶಿಸಬೇಕಾಗಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಅಧ್ಯಕ್ಷರೇ, ನಮಗೆ ಸ್ವಾತಂತ್ರ್ಯ ಬಂದು ಏಳು ವರ್ಷಗಳಾಯಿತು. ಈ ಏಳು ವರ್ಷಗಳಲ್ಲಿ ಪ್ರಜಾ ಮುಖಂಡರುಗಳು ದೇಶದ ಆಡಳಿತವನ್ನು ವಹಿಸಿಕೊಂಡು ರಾಜ್ಯಭಾರವನ್ನು ನಡೆಸುತ್ತಿದ್ದಾರೆ. ಜನರಿಗೆ ಈ ಸರ್ಕಾರದ ವಿಚಾರದಲ್ಲಿ ಪೂರ್ವದಲ್ಲಿ ಏನೊಂದು ಭಾವನೆಯಿತ್ತೋ ಅದೇ ಭಾವನೆಯೇ ಈಗಲೂ ಇದೆ. ಇದು ಹೀಗೆ ಇನ್ನೂ ಮುಂದುವರಿಯುತ್ತಿದ್ದಾರೆ ಮುಂದೇನಾಗಬಹುದೆಂಬುದನ್ನು ನಾವು ಇಂದೇ ಕೂಲಂಕಷವಾಗಿ ಪರ್ಯಾಲೋಚಿಸಬೇಕಾಗಿದೆ.

ಉಪಾಧ್ಯಕ್ಷರು — ಅದಕ್ಕೆಲ್ಲಾ ಈಗ ಕಾಲವಿಲ್ಲ. ಅದನ್ನೆಲ್ಲಾ ನೀವು ಕೈಬಿಟ್ಟು ಮುಂದೆ ಹೋಗಿ ಬಡ್ಜೆಟ್ಟಿನಮೇಲೆ ಮಾತನಾಡಿ.

ಶ್ರೀ ಪಿ. ಆರ್. ರಾಮಯ್ಯ.—ನಾನು ಏತಕ್ಕಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ ನಮ್ಮ ಸರ್ಕಾರದ ಯಂತ್ರ ಬಹಳ ಹಳೆಯ ಯಂತ್ರ. ಈ ಯಂತ್ರದ ನಾನಾ ಭಾಗಗಳು ಮುರಿದುಹೋಗಿವೆ. ಚಕ್ರ ಇತ್ಯಾದಿ ಅನೇಕ ಭಾಗಗಳು ಬಹಳವಾಗಿ ಸವೆದು ಹೋಗಿವೆ. ಚಕ್ರಗಳು ಸರಿಯಾಗಿ ತಿರುಗುವುದೇ ಇಲ್ಲ. ವರ್ಷಂಪ್ರತಿ 20ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಪ್ರಜೆಗಳಿಗೆ ಪ್ರಯೋಜನ ಲಭಿಸುತ್ತಿಲ್ಲ. ಈ ಕಾರಣದಿಂದಲೇ ಜನರು ಸರ್ಕಾರದ ಮೇಲೆ ಟೀಕೆ ಮಾಡಲು ಅವಕಾಶ ಉಂಟಾಗಿದೆ. ಈ ಸ್ವಭಾವದಿಂದ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ.

ಒಬ್ಬ ಪ್ರಜೆಯು ಒಂದು ತಾಲ್ಲೂಕಾಫೀಸಿಗೆ ಹೋಗಿ ಒಂದು ಅರ್ಜಿಯನ್ನು ಕೊಟ್ಟರೆ, ಆತನ ಅರ್ಜಿಗೇನೂ ಪುರಸ್ಕಾರ ದೊರೆಯುತ್ತಿಲ್ಲ. ಇದು ಬಹಳ ಮುಖ್ಯವಾದ ಅಂಶ. ಇಲ್ಲಿ ತಾವು ಈ ಬಾಬಿಗೆ ಅಷ್ಟು ಖರ್ಚುಮಾಡುತ್ತೇವೆ, ಆ ಬಾಬಿಗೆ ಇಷ್ಟು ಖರ್ಚು ಮಾಡುತ್ತೇವೆಂದು ಹೇಳವಾಗ ತಮ್ಮ ರಥ ಸರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ನೋಡಬೇಕು. ತಜ್ಞರ ಅಭಿಪ್ರಾಯದ ಪ್ರಕಾರ ಕೂಡ ನಮ್ಮ ಸರ್ಕಾರ ಸರಿಯಾಗಿ ನಡೆಯುತ್ತಿಲ್ಲವೆಂದು ಕಂಡುಬಂದಿದೆ. ಮಂತ್ರಿಗಳು ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಎಷ್ಟೋ ಆಶಾಪೂರಿತರಾಗಿದ್ದಾರೆ, ಎಷ್ಟು ವೇಗದಲ್ಲಿ ಹೋಗಬೇಕೆಂದರೂ ಅದಕ್ಕೆ ಸಿದ್ಧರಾಗಿದ್ದಾರೆ. ಈ ಸಭೆ ಎಷ್ಟೇ ನಿರ್ಣಯಮಾಡಿದರೂ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಇದಕ್ಕೆಲ್ಲಾ ಈ ಕೆಟ್ಟುಹೋಗಿರತಕ್ಕ ಯಂತ್ರವೇ ಕಾರಣ. ಆದುದರಿಂದ ಇದನ್ನು ಯಾವ ರೀತಿ ಸರಿಪಡಿಸಬೇಕು ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಮುಖ್ಯ ಮಂತ್ರಿಗಳು ಮಾಡಿದಂಥ ಭಾಷಣದಲ್ಲಿ ಈ ಬಗ್ಗೆ ಒಂದು ಅಂಶ ಅಡಕವಾಗಿದೆ. ಆದರೆ ಅದಕ್ಕೆ

ಇವರು ಅಷ್ಟು ಗಮನಕೊಟ್ಟಂತೆ ಕಾಣುವುದಿಲ್ಲ. ಯಾವುದಕ್ಕೂ ಯಂತ್ರ ಸರಿಯಾಗಿರಬೇಕು. ಇಲ್ಲದಿದ್ದರೆ ಕೆಲಸ ಕೋ-ಆರ್ಡಿನೇಷನ್ ಇಲ್ಲದೆ ಕೆಟ್ಟುಹೋಗುತ್ತದೆ. ಸರ್ಕಾರಿ ನೌಕರರಿಗೂ ಪ್ರಜೆಗಳಿಗೂ ಒಂದು ಕೋ-ಆರ್ಡಿನೇಷನ್ ಇರಬೇಕು. ಅಂಥ ಒಂದು ಕೋ-ಆರ್ಡಿನೇಷನ್ ಈ ದಿವಸ ಇಲ್ಲವೆಂಬುದಾಗಿ ಪ್ರಜೆಗಳು ಅಭಿಪ್ರಾಯಪಟ್ಟಿದ್ದಾರೆ. ಸರ್ಕಾರಿ ಇಲಾಖೆಗಳಲ್ಲೇ ಇರತಕ್ಕವರಿಗೆ ಒಬ್ಬರಿಗೊಬ್ಬರಿಗೇ ಆ ಕೋ-ಆರ್ಡಿನೇಷನ್ ಇಲ್ಲ. ಹಾಗೆ ಅವರವರಲ್ಲಿ ಒಂದು ಸರಿಯಾದ ಕೋ-ಆರ್ಡಿನೇಷನ್ ವ್ಯವಸ್ಥೆ ಬರಬೇಕಾದರೆ ಅದಕ್ಕೆ ಸರಿಯಾದ ನೀತಿ ನೇಮಕಗಳನ್ನು ಏರ್ಪಡಿಸಬೇಕು. ಈ ವಿಷಯಕ್ಕೆ ಸರ್ಕಾರದವರು ತಮ್ಮ ಮುಖ್ಯ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಬೆಂಗಳೂರು ಸಿಟಿ ವಿಚಾರವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಬೆಂಗಳೂರು ನಗರವನ್ನು ಶೃಂಗಾರ ಮಾಡಲಿಕ್ಕೇ ವಿಶೇಷವಾಗಿ ಹಣವನ್ನು ಸುರಿಯುತ್ತಿದ್ದಾರೆಂದು ಕೆಲವರು ಹೇಳಿದರು. ಆದರೆ ನಮ್ಮ ನಗರದ ನೀರಿನ ಒಂದು ವ್ಯವಸ್ಥೆಯೇನಾಗಿದೆ ಎಂಬುದನ್ನು ನೋಡಬೇಕು. ಸರ್ಕಾರದವರು ಈ ವೆಹಿಕಲ್ಸ್‌ಗಳಮೇಲೆ ಎಷ್ಟು ಟ್ಯಾಕ್ಸನ್ನು ವಸೂಲ್ಮಾಡುತ್ತಾರೋ ಅಷ್ಟು ಹಣವನ್ನು ಸರಿಯಾಗಿ ನಮಗೆ ಕೊಡುತ್ತಿಲ್ಲ. ಅದನ್ನು ಸರಿಯಾಗಿ ಕೊಟ್ಟಿದ್ದರೆ ನಮಗೆ ಈ ತೊಂದರೆಗಳೇ ಇರುತ್ತಿರಲಿಲ್ಲ. ಈ ವೆಹಿಕಲ್ಸ್‌ಗಳಿಂದ ಈ ವರ್ಷ 87·05 ಲಕ್ಷ ಟ್ಯಾಕ್ಸ್ ಬರುತ್ತದೆಯೆಂದು ಬಡ್ಜೆಟ್ಟಿನಲ್ಲಿ ನಮೂದಿಸಿದ್ದಾರೆ. ಆದರೆ ಕಳೆದ ವರ್ಷಕ್ಕಿಂತ ಈ ಆದಾಯ 20 ಲಕ್ಷ ಹೆಚ್ಚಾಗಿರುತ್ತೆಂದು ಹೇಳಲಾಗಿದೆ. ಅವರು ಈ ಬಾಬಿನಿಂದ ನಮ್ಮ ಕಾರ್ಪೊರೇಷನ್ನಿಗೆ ಎಷ್ಟರಮಟ್ಟಿಗೆ ಸಹಾಯ ನೀಡುತ್ತಿದ್ದಾರೆಂದರೆ, on the basis of the average income from Vehicles Tax levied for three years prior to 1st July 1935. 1935ನೇ ಫಸ್ಟ್ ಜುಲೈಗೆ ಹಿಂದೆ ಯಾವ ಬೇಸಿಸ್ ಇತ್ತೋ ಆ ಬೇಸಿಸ್ ಮೇಲೆಯೇ ಕೊಡುತ್ತಾ ಇದ್ದಾರೆ. 20 ವರ್ಷಗಳ ಮೇಲೆ ಎಷ್ಟು ಕೊಡಬೇಕೆಂಬುದನ್ನು ಸರಿಯಾಗಿ ಆಲೋಚನೆ ಮಾಡಬೇಕು. ಬೆಂಗಳೂರಿನಲ್ಲಿ ಎಕ್ಸ್‌ಟೆನ್ಷನ್‌ಗಳು ಹೆಚ್ಚಾಗಿ ಇವೆ, ಜನಸಂಖ್ಯೆ ಹೆಚ್ಚಾಗುತ್ತಾ ಇದೆ. ಇವೆಲ್ಲಕ್ಕೂ ಹಣ ಬೇಕು. ನೀರು ಸರಬರಾಯಿ ಅತ್ಯಂತ ಮುಖ್ಯವಾದದ್ದು. ಬೆಂಗಳೂರು ನಗರದವರು ಮಾತ್ರವೇ ಇದರ ಪ್ರಯೋಜನವನ್ನು ಹೊಂದುತ್ತಿಲ್ಲ. ನಮ್ಮ ದೇಶದವರು ಮತ್ತು ಪರದೇಶದವರೂ ಕೂಡ ಪ್ರಯೋಜನ ಹೊಂದುತ್ತಿದ್ದಾರೆ. ಆದ್ದರಿಂದ ಇದಕ್ಕೆ ಹೆಚ್ಚಿನ ಗಮನ ಕೊಡಬೇಕು.

ಇನ್ನೊಂದು ವಿಷಯ ಏನೆಂದರೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸು ಮತ್ತು ಬೆಟಿಂಗ್ ಟ್ಯಾಕ್ಸು. ಇವುಗಳ ವಿಷಯದಲ್ಲಿ ಆಡಳಿತ ಸರಿಯಾಗಿಲ್ಲ. ಬಹಳ ಹಣ ಸೋರಿ ಹೋಗುತ್ತಾ ಇದೆ. ಡೆಪ್ಯುಟಿ ಕಮೀಷನರು ಕಲೆಕ್ಟ್ ಮಾಡುತ್ತಾರೆ. ಎಷ್ಟು ಮಾಡಬೇಕೋ ಅಷ್ಟು ಮಾಡುತ್ತಿಲ್ಲ ಮತ್ತು ಕಾರ್ಪೊರೇಷನವರಿಗೆ ಬರುತ್ತಾ ಇರುವ ಭಾಗ ಸರಿಯಾಗಿ ಬರುತ್ತಾ ಇಲ್ಲ. ಈ ಎರಡು ಮುಖ್ಯವಾದ ವಿಚಾರಗಳಿಗೆ ಗಮನ ಕೊಟ್ಟರೆ ಕಾರ್ಪೊರೇಷನ್ನಿಗೆ ಬರತಕ್ಕ ಹುಟ್ಟುವಳಿಯಿಂದಲೇ ನಾವು ನಮ್ಮ ನಗರದ ಆಡಳಿತವನ್ನು ಸರಿಯಾಗಿ ನಡೆಸುವುದಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಗಮನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೊಟ್ರ ಬಸವನಗೌಡ್ (ಕೂಡ್ಲಗಿ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ನಮ್ಮ ಮುಂದೆ ಮಂಡಿಸಿರುವ 1954-55ನೇ ಸಾಲಿನ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ಇದರಲ್ಲಿ ಕೆಲವು ಅಂಶಗಳಲ್ಲಿ ತಿದ್ದುಪಡಿಗೆ ಅವಕಾಶವಿದೆ ಎಂದು ಹೇಳಲಿಚ್ಛಿಸುತ್ತೇನೆ. ಅದೇನೆಂದರೆ, ಈ ವರ್ಷದ ಬಡ್ಜೆಟ್ಟಿನಲ್ಲಿ ಮೂರು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಖೋತಾ ಬಿದ್ದಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆ. ಇದು ಮೈಸೂರು ದೇಶದ ಪ್ರಜೆಗಳಿಗೆ ಬಹಳ ತೊಂದರೆ ಮತ್ತು ಮನಸ್ಸಿಗೆ ತಾಪವನ್ನುಂಟುಮಾಡುವುದಾಗಿದೆ. ಇದನ್ನು ಯಾವ ರೀತಿ ಪರಿಹರಿಸಬೇಕೆಂಬುದನ್ನು ಸರ್ಕಾರದವರು ಮತ್ತು ಸದಸ್ಯರು ಎಲ್ಲರೂ ಸೇರಿ ಸರಿಯಾಗಿ ಮತ್ತು ಸ್ವಲ್ಪ ಸಾವಕಾಶವಾಗಿ ಆಲೋಚನೆ ಮಾಡಿ ಕೆಲಸ ಮಾಡಬೇಕಾಗಿದೆ. ಸರ್ಕಾರದವರು ಈ ಖರ್ಚಿನ ಪಟ್ಟಿಯಲ್ಲಿ ಕೆಲವು ಬಾಬುಗಳಿಗೆ ಬಹಳ ಹೆಚ್ಚು ಹಣ ಒದಗಿಸಿದ್ದಾರೆ. ಅವುಗಳಲ್ಲಿ ಎಷ್ಟು ಮಾತ್ರ ಕೆಲಸ ನಡೆಸಬೇಕು, ಎಷ್ಟು ಭಾಗ ಕೆಲಸ ನಿಲ್ಲಿಸಬಹುದು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಈಗ ತಕ್ಷಣ ಎಷ್ಟು ಹಣ ಖರ್ಚು ಮಾಡಬೇಕಾದ ಅವಶ್ಯಕತೆ ಇದೆ, ಯಾವುದು ಮಾಡಬೇಕು, ಇನ್ನು ಒಂದೆರಡು ವರ್ಷ ತಡೆಯುವಂಥ ಕೆಲಸಗಳು ಯಾವುವು ಇವೆ ಎಂಬ ಅಂಶಗಳನ್ನು ಸ್ವಲ್ಪ ವಿಚಾರ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಒಂದೆರಡು ವಿಷಯಗಳನ್ನು ನಾನೂ ಸಹ ತಿಳಿಸಬಯಸುತ್ತೇನೆ. ಎಂಪ್ಲಾಯ್‌ಮೆಂಟ್ ಸ್ಕೀಂ ಎಂದು ಹೇಳಿ unproductive schemes like buildings for Government servants and for Government offices, cement roads, G.M.F. campaign, cultural development adult education, electric department and others. ಸಾರ್ವಜನಿಕ ಕಟ್ಟಡಗಳನ್ನು (Public Buildings) ಕಟ್ಟುವುದಕ್ಕಾಗಿ ಬಹಳ ಹಣ ಒದಗಿಸಿದ್ದೀರಿ. ಇವುಗಳಿಗೆ ಎಷ್ಟು ಮಾತ್ರ ಅವಶ್ಯಕತೆ ಇದೆ ಎಂಬುದನ್ನು ನೋಡಿ ಈ ವರ್ಷಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಒದಗಿಸಿ ಬಾಕಿ ಕಟ್ಟಡಗಳ ಕೆಲಸವನ್ನು ಮುಂದೆ ಬರತಕ್ಕ ವರ್ಷಗಳಲ್ಲಿ ಮಾಡಬಹುದು. ಇದೂ ಅಲ್ಲದೆ ಇತರ ಕೆಲವು ಸರ್ಕಾರಿ ಇಲಾಖೆಗಳು ಅನಾವಶ್ಯಕವಾಗಿ ಇವೆ. ಅವುಗಳಲ್ಲಿ ಕೆಲವನ್ನು ಸೂಚಿಸುತ್ತೇನೆ. ಈ ಜಿ. ಎಂ. ಎಫ್. ಕ್ಯಾಂಪೇನ್ ಎಲ್ಲಾ ಸ್ಟೇಟ್‌ಗಳಲ್ಲೂ ನಡೆಯುತ್ತಾ ಇದೆ. ಅದರ ಫಲಿತಾಂಶ ಎಷ್ಟು ಮಾತ್ರ ಜನರಿಗೆ ಆಗಬೇಕೋ ಅಷ್ಟು ಮಾತ್ರ ಆಗಿಲ್ಲ. ಅದನ್ನು ಸರ್ಕಾರದವರು ಗಮನಿಸಬೇಕಾಗಿವೆ. ಈ ಡಿಪಾರ್ಟ್‌ಮೆಂಟು ಅನಾವಶ್ಯಕ ಎಂದು ಹೇಳುತ್ತೇನೆ. ಇದಲ್ಲದೆ ಅಡಲ್ಟ್ ಎಜ್ಯುಕೇಷನ್ನಿಗಾಗಿ ಸರ್ಕಾರದವರು ಹಣ ಖರ್ಚು ಮಾಡುತ್ತಾ ಇದ್ದಾರೆ. ಅದರಿಂದ ಅಷ್ಟು ಉಪಯೋಗವಾಗುತ್ತಾ ಇಲ್ಲ. ಆದ್ದರಿಂದ ಇವುಗಳನ್ನು ಪೂರ್ತಿಯಾಗಿ ನಿಲ್ಲಿಸದೇ ಇದ್ದರೂ ಸ್ವಲ್ಪ ಭಾಗ ಕಡಮೆ ಮಾಡಿ ಹಣ ಉಳಿತಾಯ ಮಾಡಬಹುದು. ಇದೇ ರೀತಿ ಇನ್ನೂ ಕೆಲವು ಇವೆ. ಸರ್ಕಾರದವರು ಆ ಬಾಬುಗಳಲ್ಲಿ ಈಗ ಎಷ್ಟು ಸಾಧ್ಯವೋ ಅಷ್ಟು ಮಾತ್ರ ಖರ್ಚು ಮಾಡಿ ಬಾಕಿ ಕೆಲಸವನ್ನು ಮುಂದಿನ ವರ್ಷಗಳಲ್ಲಿ ಮುಂದುವರಿಸಬಹುದು. ನಾವು ನಮ್ಮ ದೃಷ್ಟಿಯನ್ನು ಒಂದು ಕಡೆ ಸರ್ಕಾರದ ಕಡೆಗೂ ಇನ್ನೊಂದು ಜನರ ಕಡೆಗೂ ಸಮನಾಗಿ ನೋಡಬೇಕಾಗಿದೆ. ರೈತರು ಮತ್ತು ವರ್ತಕರು ಸಹ ಈಗಾಗಲೇ ಹಣದ ಮುಗ್ಗಟ್ಟಿನಿಂದ ಬಹಳ ತೊಂದರೆಗೆ ಈಡಾಗಿದ್ದಾರೆ. ಹೀಗಿರುವಾಗ

(ಶ್ರೀ ಕೊಟ್ರುಬಸವನಗೌಡ್.)

ಹೆಚ್ಚು ಕಂದಾಯ ಕೊಡಬೇಕೆಂದರೆ ಎಷ್ಟು ಮಾತ್ರ ಸಾಧ್ಯ ಇದೆ ಎಂಬುದನ್ನು ಸರ್ಕಾರದವರು ನೋಡಿ ಎಷ್ಟು ವಸೂಲು ಮಾಡಬಹುದು, ಎಷ್ಟು ಮಾತ್ರ ಜನಗಳಿಗೆ ತೊಂದರೆಯಾಗುವುದಿಲ್ಲ ಎಂಬುದನ್ನು ಗಮನಿಸಿ ಕೆಲವು ಬಾಬುಗಳಲ್ಲಿ ಸಾಧ್ಯವಾದಷ್ಟು ಖರ್ಚು ಕಡಮೆ ಮಾಡಿ, ಅನಿವಾರ್ಯಬಂದಲ್ಲಿ ಕಂದಾಯವನ್ನು ಸ್ವಲ್ಪ ಹೆಚ್ಚಿಸಬಹುದು ಎಂದು ಹೇಳುತ್ತೇನೆ.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಅಧ್ಯಕ್ಷ ಮಹಾಶಯರೇ,

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು

ಎನ್ನುವಂತೆ, ತಾವು ನನಗೆ 20 ನಿಮಿಷವಾದರೂ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅನೇಕ ಮಹಾಶಯರು ಈ ಬಡ್ಜೆಟ್ಟಿನ ವಿಚಾರದಲ್ಲಿ ಮಾತನಾಡಿದ್ದಾರೆ ಎಂದಮೇಲೆ ನಾನು ಏನೂ ಹೆಚ್ಚಾಗಿ ಮಾತನಾಡಬೇಕಾಗಿಲ್ಲ. ಇದು ಬಹಳ ದೊಡ್ಡ ಸಮಸ್ಯೆ. ಆದರೆ ನಮ್ಮ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಎರಡು ವಿಷಯಗಳನ್ನು ಮಾತ್ರ ಹೇಳೋಣ ಎಂದು ಇದ್ದೇನೆ. ಈಗ ಮೂರು ಕೋಟಿ ರೂಪಾಯಿಗಳಷ್ಟು ಖೋತಾ ಆಗಿದೆ ಎಂದು ಹೇಳಿದ್ದೀರಿ. ಮುಖ್ಯವಾಗಿರತಕ್ಕ ಒಂದು ಅಂಶವನ್ನು ಮಾತ್ರ ತಮ್ಮ ಮುಂದೆ ತಿಳಿಸಲು ಇಷ್ಟಪಡುತ್ತೇನೆ. ಇಂದಿನ ಪ್ರಜಾಪ್ರಭುತ್ವದಲ್ಲಿ ಉದ್ಧಾರವಾಗಬೇಕಾಗಿರತಕ್ಕವರು ಎಂದರೆ ದೇಶದಲ್ಲಿರತಕ್ಕ ಕಾರ್ಮಿಕರು, ರೈತರು ಮತ್ತು ಬಡ ಜನರು ಎಂದು ಹೇಳುತ್ತೇನೆ. ಅವರ ಉದ್ಧಾರವಾಗದ ಹೊರತು ದೇಶದಲ್ಲಿ ಸುಖ ಶಾಂತಿಗಳು ಇರುವುದಿಲ್ಲ. ಸರ್ಕಾರದವರು ಇದನ್ನು ಸ್ವಲ್ಪ ಮಟ್ಟಿಗಾದರೂ ಕಾರ್ಯಗತ ಮಾಡುತ್ತಾರೆ ಎಂಬ ನಂಬಿಕೆ ಇದೆ ಎಂಬುದನ್ನು ತಮ್ಮ ಮುಂದೆ ತಿಳಿಸುತ್ತೇನೆ. ತೆರಿಗೆ ವಿಷಯವನ್ನು ಅನೇಕರು ಹೇಳಿದ್ದಾರೆ. ಕಾಲಾವಕಾಶವಿಲ್ಲದೇ ಇರುವುದರಿಂದ ಜಾಗ್ರತೆ ಜಾಗ್ರತೆಯಾಗಿ ಹೇಳುತ್ತೇನೆ. ಒಟ್ಟಿನಲ್ಲಿ ತಾವು ಈಗ ವಿಧಿಸಿರುವ ತೆರಿಗೆಯ ಪರಿಣಾಮವಾಗಿ ಲಕ್ಷಾಂತರ ಜನ ನಿರುದ್ಯೋಗಿಗಳಾಗುತ್ತಾರೆ. ಇದರಲ್ಲಿ ಸಂಶಯವಿಲ್ಲ ಎಂಬುದನ್ನು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಹೋಟಲುಗಳ ಮೇಲೆ ವಿಧಿಸಿರುವ ತೆರಿಗೆಯನ್ನಂತೂ ಹೇಳುವುದಕ್ಕೇ ಸಾಧ್ಯವಿಲ್ಲ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 30 ಸಾವಿರ ಜನ ಹ್ಯಾಂಡ್‌ಲೂಂ ವೀವರ್ಸ್ ಇದ್ದಾರೆ; 40 ಸಾವಿರ ಮಂದಿ ಊದುಬತ್ತಿ ಕೆಲಸಗಾರರು ಇದ್ದಾರೆ. ಹೀಗೆಯೇ ಇನ್ನು ಸಾವಿರಾರು ಜನ ನಾನಾ ಉದ್ಯೋಗಗಳಲ್ಲಿ ನಿರತರಾಗಿರುವವರು ಇದ್ದಾರೆ. ಇವರೆಲ್ಲರಿಗೂ ಈ ತೆರಿಗೆಯಿಂದ ತೊಂದರೆಯಾಗತಕ್ಕ ಸಂಭವ ಇದೆ. ಆದ್ದರಿಂದ ಇದನ್ನು ಮತ್ತೊಂದು ಸಾರಿ ಪರಿಶೀಲನೆ ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ನಮ್ಮ ಮಲ್ಲೇಶ್ವರದಲ್ಲಿ ತಾವು ಮಂತ್ರಿಗಳಾಗಿದ್ದಾಗ್ಯೆ—ಈಗ ಹೇಳುವುದಕ್ಕೆ ಸಂತೋಷವಾಗುತ್ತದೆ—ತಮ್ಮ ಅಮೃತ ಹಸ್ತದಲ್ಲಿ ಸ್ಥಾಪನೆ ಮಾಡಿದ ಸ್ವತಂತ್ರ ನಗರ ಇಂದು ಬೆಳೆದು 10 ಸಾವಿರ ಜನ ವಾಸಮಾಡತಕ್ಕ ಕ್ಷೇತ್ರ ಆಗಿದೆ. ಈಗ ಅಲ್ಲಿ ಇನ್ನು ಅನೇಕ ಸೌಕರ್ಯಗಳು ಆಗಬೇಕಾಗಿವೆ. ಅದನ್ನು ಶ್ರದ್ಧೆವಹಿಸಿ ಮಾಡಿಕೊಡಬೇಕೆಂದು ಮತ್ತೊಮ್ಮೆ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಎಚ್. ಜಿ. ಓಗಳು ಮತ್ತು ಪೋಲೀಸ್ ಕಾನ್ಸ್ಟೇಬಲ್ಲುಗಳ ವಿಚಾರ, ಬೆಳಿಗ್ಗೆ ಕೂಡ ಚರ್ಚೆ ನಡೆಯಿತು. ಇಂಥ ಬೆಂಗಳೂರು ನಗರದಲ್ಲಿ ಬಡಕಾನ್ಸ್ಟೇಬಲ್ಲುಗಳ ಕಷ್ಟ ಹೇಳತೀರದು. ಆದ್ದರಿಂದ ಮಾನ್ಯ ಸಚಿವರು ನಿಜವಾಗಿಯೂ ಎಚ್.ಜಿ. ಓಗಳು ಮತ್ತು ಅದರಲ್ಲೂ ಬಡವರಾಗಿರತಕ್ಕ ಪೋಲೀಸ್ ದಫೇದಾರರು ಮತ್ತು ಕಾನ್ಸ್ಟೇಬಲ್ಲುಗಳ ಸ್ಥಿತಿಗಳನ್ನು ಉತ್ತಮಪಡಿಸಬೇಕೆಂದು ಬಹಳ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ ಈ ದಿವಸ 1954-55ನೇ ಸಾಲಿನ ಬಡ್ಜೆಟ್‌ನ್ನು ನಾನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ಇದ್ದೇನೆ. ಬಡ್ಜೆಟ್ಟನ್ನು ಯಾವ ಯಾವ ದೃಷ್ಟಿಯಿಂದ ಮಾಡಿದ್ದಾರೋ ಆ ದೃಷ್ಟಿಗಳನ್ನು ಈ ಮಾನ್ಯ ಸಭೆಯವರು ಇನ್ನೂ ಮನದಟ್ಟಾಗುವಂತೆ, ಸರಿಯಾದ ರೀತಿಯಲ್ಲಿ ವ್ಯಾಸಂಗಮಾಡಿಕೊಂಡು ಬಂದು ಅಲ್ಲಿ ತಮ್ಮ ನಿರ್ದಿಷ್ಟವಾದ ಸಲಹೆಗಳನ್ನು ಕೊಡುವುದಕ್ಕೆ ಕಾಲಾವಕಾಶವಿಲ್ಲದಂತಾಗಿದೆ ಎಂದು ನಾನು ಹೇಳುತ್ತೇನೆ. ಈಗ ಕಾಲಾವಧಿ ಕಡಮೆಯಾಗಿದೆ. ಈ ಆಯವ್ಯಯದ ಒಂದೊಂದು ಬಾಬಿನ ಅಂಕಿ ಅಂಶಗಳನ್ನು ಮಾನ್ಯ ಸಭೆಯ ಮುಂದೆ ಇಡಲು ಕಾಲಾವಕಾಶವಿಲ್ಲ. ಮೊದಲನೆಯದಾಗಿ ಸರ್ಕಾರಕ್ಕೆ ಬರತಕ್ಕ ನಿರೀಕ್ಷಿಸಿದಷ್ಟು ವರಮಾನ ಕೆಲವು ಬಾಬುಗಳಲ್ಲಿ ಹತ್ತಾರು ವರ್ಷಗಳಿಂದ ಎಷ್ಟರ ಮಟ್ಟಿಗೆ ಬರುತ್ತಾ ಇದೆ. ಆ ವರಮಾನ ಬರುತ್ತಾ ಇದ್ದದ್ದು ಕ್ರಮಕ್ರಮೇಣ ನಿರೀಕ್ಷಿಸಿದಷ್ಟು ವರಮಾನಕ್ಕಿಂತ ಏಕೆ ಕಡಿಮೆ ಆಯಿತು ಎಂಬ ವಿಚಾರವನ್ನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ.

6-30 P.M.

ಇದರಲ್ಲಿ ನನ್ನ ಅಭಿಪ್ರಾಯವಿಷ್ಟೇ; ವರಮಾನ ಕಡಮೆಯಾಗುತ್ತಾ ಬಂದಿರುವುದಕ್ಕೆ ಕಾರಣ ಸರ್ಕಾರ ಎಷ್ಟು ಪ್ರಯತ್ನ ಮಾಡುತ್ತಿದೆಯೋ ಅಷ್ಟು ಪ್ರಯತ್ನ ಕಾರ್ಯತಃ ನಡೆಯುತ್ತಿಲ್ಲದಿರುವುದು. ಆಡಳಿತದ ಯಂತ್ರ ಇನ್ನೂ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು. ಈ ವಿಚಾರದಲ್ಲಿ ಬೇರೆ ಕಟ್ ಮೋಷನ್ ಕಳುಹಿಸಿದ್ದೇನೆ, ಈಗ ಕಾಲಾವಕಾಶವಿಲ್ಲದಿರುವುದರಿಂದ ಅದರ ಚರ್ಚೆ ಬಂದಾಗ ಹೇಳುತ್ತೇನೆ. ಅನೇಕ ಬಾಬುಗಳಲ್ಲಿ ನಮ್ಮ ವರಮಾನವನ್ನು ಹೆಚ್ಚಿಸಬಹುದು. ವೆಚ್ಚಗಳನ್ನು ಕಡಮೆ ಮಾಡಲೂಬಹುದು. ನಮ್ಮ ಮೈಸೂರು ದೇಶ ಬಹಳ ಉತ್ಕೃಷ್ಟವಾದ ದೇಶ. ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಬೇಕಾದರೆ, ದೇಶದ ಸಂಪತ್ತನ್ನು ಅಭಿವೃದ್ಧಿಮಾಡಬೇಕಾದರೆ, ಮೊದಲು ಹಣವನ್ನು ಹಿಂದುಳಿದಿರುವ ನಾಡಿನ ಹೆಚ್ಚಾಗಿ ಅರಣ್ಯಗಳ ಅಭಿವೃದ್ಧಿಗೆ ಖರ್ಚು ಮಾಡಬೇಕು.

ಉಪಾಧ್ಯಕ್ಷರು.—ತಾವು ಭಾಷಣಕ್ಕೆ ಬಹಳ ದೊಡ್ಡ ತಳಹದಿ ಹಾಕುತ್ತಿದ್ದೀರಿ; ಅದಕ್ಕೆ ಕಾಲವಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ನಮ್ಮ ದೇಶದಲ್ಲಿರುವ ಸಂಪತ್ತನ್ನು ಹೆಚ್ಚಿಸಬೇಕಾದರೆ ಮಾರ್ಗಗಳಿವೆ. ಇದು ವಿಜ್ಞಾನಯುಗ. ಸಂಶೋಧನೆಗಳನ್ನು ನಡೆಸಿ ಅನೇಕ ರೀತಿಗಳಲ್ಲಿ ಸಂಪತ್ತನ್ನು ಹೆಚ್ಚಿಸುವುದಕ್ಕೆ ಅವಕಾಶವಿದೆ. ಅದರಲ್ಲಿಯೂ ಹೆಚ್ಚಾಗಿ ಮಲೆನಾಡಿನಲ್ಲಿ

ಹೆಚ್ಚಾಗಿ ಸಂಶೋಧನೆ ನಡೆಯದೆ ಬಹುಮಟ್ಟಿಗೆ ಅಲ್ಲಿ ಪ್ರಕೃತಿದತ್ತವಾದ ಸಂಪತ್ತಿದ್ದೂ ಅದು ನಿಷ್ಪ್ರಯೋಜನವಾಗಿ ಹಾಳಾಗುತ್ತಿದೆ. ಇಂಥ ಸಂಶೋದನೆಗಳು ನಮ್ಮ ದೇಶದಲ್ಲಿ ಹೆಚ್ಚು ನಡೆಯುತ್ತಿಲ್ಲ. ಎಲ್ಲಾ ಕ್ಷೇತ್ರಗಳನ್ನೂ ವ್ಯಾಪಿಸಿಲ್ಲ. ಅದರಲ್ಲೂ ಮಲೆನಾಡಿಗೆ ಅನ್ವಯಿಸುವಂಥವು ತೀರವಿರಳ. ಜನತೆಯ ಹಿತದೃಷ್ಟಿಯಿಂದ ಸರ್ಕಾರದವರು ಈಗಲಾದರೂ ಮಲೆನಾಡಿನಲ್ಲಿ ಸರ್ವೆ ನಡೆಸಿ ದೇಶಾಭಿವೃದ್ಧಿ ಕಾರ್ಯಕ್ಕೆ ಹೆಚ್ಚು ಶ್ರದ್ಧೆ ವಹಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಟಿ. ನಾಗಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೆ, ಈ ದಿನ ಆಯವ್ಯಯದ ಪಟ್ಟಿಯಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ಈ ಸಂದರ್ಭದಲ್ಲಿ, ನಮ್ಮ ಉತ್ಪತ್ತಿಗಿಂತ ಖರ್ಚು ಮೂರುಕೋಟಿ ರೂಪಾಯಿ ಜಾಸ್ತಿಯಾಗಿದೆಯೆಂಬುದನ್ನು ವಿಷಾದದಿಂದ ತಿಳಿಸಬೇಕಾಗಿದೆ. ಹೀಗೆ ಉತ್ಪತ್ತಿಗಿಂತ ಖರ್ಚು ಜಾಸ್ತಿಯಾಗಿರುವುದನ್ನು ನೋಡಿದರೆ ಸರ್ಕಾರ ಹೆಚ್ಚು ಮುತುವರ್ಜಿ ವಹಿಸಿಲ್ಲವೆಂದು ಹೇಳಬೇಕಾಗಿದೆ. ಉದಾಹರಣೆಗೆ ಭದ್ರಾವತಿಯ ಕಾರ್ಖಾನೆಯಲ್ಲಿ ferro-silicon ಮಾಡುವುದರ ಬದಲು ferro-manganese ಮಾಡಲು ವಿಚಕ್ಷಣೆಯಿಲ್ಲದೆ ಪ್ರಯತ್ನಪಟ್ಟಿದ್ದರಿಂದ ಮೂರು ತಿಂಗಳಕಾಲ ಕೆಲಸ ನಿಂತಿತು. ಅಲ್ಲದೆ ಒಂದುಲಕ್ಷ ರೂಪಾಯಿ ಬೆಲೆಬಾಳುವ ಜೋಡಣೆಕೆ ಇಟ್ಟಿಗೆ ಗೂಡು ಒಡೆದು ಹೋಯಿತೆಂದು ಹೇಳುತ್ತಾರೆ. ಇದರಿಂದ ಬಹಳ ನಷ್ಟವಾಯಿತು. ಫಾರೆಸ್ಟ್‌ನಲ್ಲಿ ರಸ್ತೆಗಳು ಇಲ್ಲದಕಡೆ ಮರಗಳನ್ನು ಕಡಿದಿದ್ದಾರೆ. ಅಂಥ ಅರಣ್ಯಗಳಲ್ಲಿ ಬೆಂಕಿಯಿಂದ ಅನೇಕ ಮರಗಳು ಸುಟ್ಟು ಹೋಗಿ ಕೆಲವು ಸುಟ್ಟ ಮರಗಳು ಹರಾಜಾಗುತ್ತಿವೆ. ಇದನ್ನೆಲ್ಲಾ ತಪ್ಪಿಸಿ ಮಲೆನಾಡಿಗೆ ಹೆಚ್ಚು ಮಾರ್ಗಗಳ ಅನುಕೂಲ ಮಾಡಬೇಕು. ಹಿಂದೆ ಇಂಡಿಯಾ ಸರ್ಕಾರದವರು ಶ್ರೀಮಾನ್ ಎ. ವಿ. ರಾಮನಾಥನ್‌ರವರ ಅಧ್ಯಕ್ಷತೆಯಲ್ಲಿ ಮಲೆನಾಡು ಅಭಿವೃದ್ಧಿಯ ಸಮಿತಿಯೆಂದು ಒಂದು ಸಮಿತಿಯನ್ನು ಮಾಡಿದ್ದರು. ಈ ಬಗ್ಗೆ ಕಮಿಟಿಯೂ ಸಲಹೆಯಂತೆ ಯಾವ ಅಭಿವೃದ್ಧಿಯೂ ಆಗುತ್ತಿಲ್ಲ. ಅಲ್ಲದೆ ಫಾರೆಸ್ಟಿಗೆ ಹೆಚ್ಚು ತೊಂದರೆಯಾಗುತ್ತಿದೆ. ಮಲೆನಾಡು ಮುಂದುವರಿಯಬೇಕಾದರೆ ಅಲ್ಲಿ ರಸ್ತೆಗಳಾಗಬೇಕು. ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಮಲೆನಾಡಿನಲ್ಲಿ ರಸ್ತೆ ಮತ್ತು ಸೇತುವೆಗಳಿಗಾಗಿ ಸರ್ಕಾರದವರು 12 ಲಕ್ಷ ರೂಪಾಯಿಗಳನ್ನು ಒದಗಿಸಿರುವುದಾಗಿ ಹೇಳಿದ್ದಾರೆ. ಇದರಿಂದ ಮಲೆನಾಡು ಎಷ್ಟು ಅಭಿವೃದ್ಧಿಯಾಗುತ್ತದೆಂಬುದನ್ನು ಯೋಚಿಸಬೇಕು. ಅವರ ಭಾಷಣದ ಇನ್ನೊಂದುಕಡೆಯಲ್ಲಿ ಗಂಧದ ಎಣ್ಣೆಯಕಾರ್ಖಾನೆಯಿಂದ ಶೇಕಡ 70ರಷ್ಟು ಲಾಭ ಬಂದಿದೆ ಎಂದು ಹೇಳಿದ್ದಾರೆ. ಗಂಧದ ಮರ ಹೆಚ್ಚಾಗಿ ಬರುವುದು ಮಲೆನಾಡಿನಿಂದ. ಆದರೂ ಕೂಡ ಅದಕ್ಕೆ ಸರ್ಕಾರ ಎಷ್ಟುಮಟ್ಟಿಗೆ ನಿಗಾ ಕೊಟ್ಟಿದೆಯೆಂಬುದನ್ನು ನೋಡಬೇಕು. ಯಾವುದರಿಂದ ಎಷ್ಟು ಲಾಭ ಬರುತ್ತದೆ, ಯಾವುದಕ್ಕೆ priority ಕೊಡಬೇಕು ಎಂಬುದನ್ನು ಪರ್ಯಾಲೋಚನೆ ಮಾಡದೆ ವಿಧಾನ ಸೌಧ, ಮಂತ್ರಿಗಳ ವಾಸಕ್ಕೆ ಕಟ್ಟಡ ಇವುಗಳ ಮೇಲೆ ಹೀಗೆ ಹಣ ಹಾಕಿದರೆ ಏನು ಪ್ರಯೋಜನ? ಮಲೆನಾಡಿನಲ್ಲಿ ಸೇತುವೆಗಳನ್ನು ಕಟ್ಟಿಸಿ, ರಸ್ತೆಗಳನ್ನು ಮಾಡಿಸಿದರೆ ಮರಗಳನ್ನು ಸಾಗಿಸಲು ಅನುಕೂಲವಾಗುತ್ತದೆ, ಇದರಿಂದ ಉತ್ಪತ್ತಿ ಹೆಚ್ಚಾಗಿ ತೆಗೆದುಕೊಳ್ಳಬಹುದು. ಇಂಥ ಕಡೆ ಗಮನ ಕೊಡದೆ ತಮ್ಮ ಅನುಕೂಲವನ್ನು ತಾವು ನೋಡಿಕೊಳ್ಳುತ್ತಿದ್ದಾರೆ. ಹಿಂದೆ ಇವರೇ ಹಳ್ಳಿಗಳನ್ನು ಪಟ್ಟಣಗಳಾಗಿ ಮಾಡಬೇಕೆಂದು ಹೇಳುತ್ತಿದ್ದರು. ಆದರೆ ಈಗ ಹಳ್ಳಿಗಳಿಂದ ಹಣ ತಂದು ಪಟ್ಟಣಗಳನ್ನು ಡೆಲ್ಲಿ ಮಾಡುತ್ತಿದ್ದಾರೆ!

ಈಗ ಹೊಸದಾಗಿ ಕಂದಾಯವನ್ನು ವಿಧಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಮಲೆನಾಡಿನಲ್ಲಿ ಕಾಫಿ ತೋಟ ಇರುವುದು, ಅದಕ್ಕೆ ಹೆಚ್ಚಾಗಿ ಬೆಲೆ ಬರುತ್ತಿದೆ, ಆದ್ದರಿಂದ ಹೆಚ್ಚು ಕಂದಾಯ ಹಾಕುತ್ತೇವೆಂದು ಹೇಳುತ್ತಾರೆ. ಕಾಫಿ, ಅಡಿಕೆ ತೋಟದವರಿಗೆ ಎಷ್ಟು ಕಷ್ಟವಿದೆಯೆಂಬುದನ್ನು ಗಮನಿಸುವುದಿಲ್ಲ. ಬತ್ತ ಬೆಳೆಯುವವರಿಗೂ ಮಲೆನಾಡಿನಲ್ಲಿ ಬಹಳ ಕಷ್ಟವಿದೆ. ಸರಿಯಾದ ಧಾರಣೆಯಿಲ್ಲದೆ ಕಷ್ಟಪಡುತ್ತಿದ್ದಾರೆ. ಅಲ್ಲದೆ ರಸ್ತೆಗಳಿಲ್ಲದೆ ಬೆಳೆದ ಬತ್ತವನ್ನು ಸಾಗಿಸುವುದಕ್ಕೆ ಅನುಕೂಲವಿಲ್ಲದೆ ಅನೇಕ ಹಳ್ಳಿಗಳಲ್ಲಿ ಬೆಳೆಯನ್ನು ಅಲ್ಲೇ ಬಿಟ್ಟು ಗಾಡಿ ಹೋಗಲು ಸಹ ಅನುಕೂಲವಿಲ್ಲದೆ ಬರಿಯ ಎತ್ತುಗಳನ್ನೇ ಮನೆಗೆ ಹೊಡೆದುಕೊಂಡು ಹೋಗುತ್ತಾರೆ. ಆದುದರಿಂದ ಮಲೆನಾಡು ಹಳ್ಳಿಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕು. ಮಲೆನಾಡಿನಲ್ಲಿ ದೀಪದ ಸೌಕರ್ಯವಿಲ್ಲ. ಕಾಡು ಪ್ರದೇಶ. ತಿರುಗಬೇಕಾದರೆ ಜನರು ಪಂಜುಗಳನ್ನು ಹಚ್ಚಿಕೊಂಡು ಹೋಗುತ್ತಿದ್ದಾರೆ. ಅಲ್ಲದೆ ಆಗಾಗ ಕಾಡುಗಳಲ್ಲಿ ಬೀಳುವ ಬೆಂಕಿಯನ್ನು (ಕಾಡುಕಿಚ್ಚು) ತಪ್ಪಿಸಿದರೆ ಅನುಕೂಲವಾಗುತ್ತದೆ.

ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕೆಲವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಸಣ್ಣಪುಟ್ಟ ನೌಕರರು ಮಾಡುವ ತಪ್ಪು ಸರ್ಕಾರಕ್ಕೆ ಕಾಣುತ್ತಿಲ್ಲ. ಇದನ್ನು ಜಾಗ್ರತೆ ಸರಿಪಡಿಸಬೇಕು. ಇದನ್ನು ಸರ್ಕಾರದಲ್ಲಿ ಹೇಳಿದರೆ ಇದೆಲ್ಲಾ ಸಣ್ಣ ವಿಷಯ, ನಮ್ಮಲ್ಲಿ ಹೇಳುತ್ತಾರಲ್ಲಾ ಎಂಬ ಭಾವನೆ ಬರಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಹಾಗಲ್ಲ, ಸಣ್ಣದು ದೊಡ್ಡದು ಎಲ್ಲವನ್ನೂ ಹೇಳಿ.

ಶ್ರೀ ಟಿ. ನಾಗಪ್ಪ.—ಅನೇಕ ಸಂದರ್ಭಗಳಲ್ಲಿ ಒಂದು ಕೆಲಸವಾಗಬೇಕಾದರೆ, ಅಸಿಸ್ಟೆಂಟ್ ಇಂಜಿನಿಯರುಗಳನ್ನು ಕರೆದುಕೊಂಡು ಹೋಗುವುದು ಸುಲಭ, ಆದರೆ ಸಬ್ ಓವರ್ಸಿಯರನ್ನು ಕರೆದುಕೊಂಡು ಹೋಗುವುದು ಕಷ್ಟ. ಆ ಇಲಾಖೆಯವರು ಚೆನ್ನಾಗಿ ಕೆಲಸ ಮಾಡುತ್ತಾರೆಂದು ಹೇಳುತ್ತೀರಿ, ಚಿಕ್ಕಮಗಳೂರು ಹತ್ತಿರ ಮಾಡಿರುವ ಕಾಂಕ್ರೀಟ್ ರಸ್ತೆ ಕೆಟ್ಟುಹೋಗಿ ಈಗಾಗಲೇ ತಾರು ಹಾಕುತ್ತಿದ್ದಾರೆ. ಬೆಂಗಳೂರು ತುಮಕೂರು ರಸ್ತೆಯಲ್ಲಿ ಹೀಗೆ ಏನಾದರೂ ಆಗಿದೆಯೇ? ಇಲ್ಲ. ಭದ್ರಾವತಿಯಲ್ಲಿ ಸಿಮೆಂಟ್ ಕಾಂಕ್ರೀಟ್ ರೋಡು ಆಗಲೇ ಚಕ್ಕಳಿಕೆ ಬರುತ್ತಿದೆ. ಇಂಥ ತಪ್ಪುಗಳನ್ನು ತಿದ್ದಿಕೊಳ್ಳಬೇಕು. ಮಾಡಿದ ಕೆಲಸವನ್ನು ಸರಿಯಾಗಿ ಮಾಡಿ ಉಳಿಸಿಕೊಂಡರೆ, ಅದೂ ಒಂದು ವರಮಾನದ ಹಾಗೆ. ಭಟ್ಕಳ್ ಯೋಜನೆ ಎಂದು ಹೇಳುತ್ತಿದ್ದರು. ಸರ್ ಎಂ. ವಿಶ್ವೇಶ್ವರಯ್ಯನವರೂ ಹೇಳುತ್ತಿದ್ದರು. ಇಂಥ ಒಳ್ಳೆಯ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಪ್ರಯತ್ನ ನಡೆಯುತ್ತಿಲ್ಲ. ಇಂಥದ್ದಕ್ಕೆ ಜಾಗ್ರತೆ ಮನಸ್ಸು ಮಾಡಬೇಕು.

ಕಂದಾಯ ಹೆಚ್ಚಿಸುವುದನ್ನು ನಾನು ವಿರೋಧಿಸುತ್ತೇನೆ. ಬಡರೈತರ ಹೆಂಗಸರನೇಕರು ತಲೆಗೆ ಎಣ್ಣೆ ಇನ್ನೂ ಹಾಕಿಕೊಂಡಿಲ್ಲ. ತಮ್ಮಂಥವರು ಬಂದರೆ ನೀರು ಹಾಕಿಕೊಂಡು ತಲೆ ಕೂದಲನ್ನು ನುಣ್ಣಗೆಮಾಡಿಕೊಂಡು ಬರುತ್ತಾರೆ. ಹೀಗಿರುವಾಗ ಇಂಥವರ ಮೇಲೆ ಕಂದಾಯ ಹೆಚ್ಚು ಹಾಕಬಾರದು. ಈ ಬಗ್ಗೆ ನಾನು ವಿರೋಧಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ ಅಧ್ಯಕ್ಷರೇ, ಮೊಟ್ಟಮೊದಲು ನನ್ನ ಮೇಲೆ ಬಂದಿರತಕ್ಕ ಒಂದು ದೊಡ್ಡ ಅಪಾದನೆಯ ಬಗ್ಗೆ ನಾನು ಜವಾಬು ಕೊಡುವುದು ನನ್ನ ಕರ್ತವ್ಯ. ನನ್ನ ಮಿತ್ರರಾದ ಶ್ರೀಮಾನ್ ನಾಗರಾಜಮೂರ್ತಿಯವರು ನಿನ್ನೆಯದಿವಸ ಮಾತನಾಡುವಾಗ ನಾನು ಈ ಶಾಸನಸಭಾ ಸದಸ್ಯರೊಬ್ಬರ ಪ್ರಭಾವಕ್ಕೊಳಗಾಗಿ ಲಕ್ಷಾಂತರ ರೂಪಾಯಿ ಸೇಲ್ಸ್ ಟ್ಯಾಕ್ಸನ್ನು ವಜಾ ಮಾಡಿದ್ದೇನೆಂದು ಹೇಳಿದರು......

ಒಬ್ಬ ಸದಸ್ಯರು.—ಸಾವಿರಾರು ರೂಪಾಯಿ ಎಂದು ಹೇಳಿದರು, ಸಾವಿರಾರೇ ಆಗಲಿ, I stand corrected. ಆ ಮೇಲೆ ನಿದರ್ಶನ ಹೇಳಬೇಕೆಂದು ಕೇಳಿದೆ. ಅಲಾಯಿದ ಕರೆದು ಹೇಳಿದರು. ನಾನು ಆ ಕೇಸು ಡೀಲ್ ಮಾಡಲೇ ಇಲ್ಲ. ಸೇಲ್ಸ್ ಟ್ಯಾಕ್ಸ್ ಕಮೀಷನರನ್ನು ಆ ವಿಷಯ ವೇನಾಗಿದೆಯೆಂದು ಕೇಳಿದೆ. ಅದರಮೇಲೆ ಅವರು ನನಗೆ ಫೈಲು ಕಳುಹಿಸಿದ್ದಾರೆ. ಅದು ಬೆಂಗಳೂರಿನ ಇಂಟರ್ ನ್ಯಾಷನಲ್ ಏಜನ್ಸೀಸ್ ಎಂಬ ಫರ್ಮಿಗೆ ಸಂಬಂಧಪಟ್ಟಿದೆ. ಆ ಫರ್ಮಿನವರು ಸೇಲ್ಸ್ ಟ್ಯಾಕ್ಸ್ ಕಮೀಷನರ ಮುಂದೆ ಅಪೀಲು ಹಾಕಿದ್ದರಮೇಲೆ ಕಮೀಷನರು ಕಾನೂನು ಪ್ರಕಾರ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. Order of the Sales Tax Commissioner is here. I am prepared to show it to anybody. ಶ್ರೀ ನಾಗರಾಜಮೂರ್ತಿಯವರು ಸದುದ್ದೇಶದಿಂದ ಹೇಳಿದ್ದಾರೆಂದು ಭಾವಿಸುತ್ತೇನೆ. ಆದರೆ ಹೇಳಿರುವುದರ ಪರಿಣಾಮವಾಗಿ ರೆವೆನ್ಯೂ ಮಂತ್ರಿಗಳು ಸಾವಿರಾರು ರೂಪಾಯಿಗಳ ದಾಕ್ಷಿಣ್ಯಕ್ಕೆ ಒಳಗಾಗಿಬಿಟ್ಟರೆಂಬ ಅಭಿಪ್ರಾಯ ಬಂದರೆ ನನ್ನ ಮೇಲೆ ಒಂದು ದುಷ್ಪರಿಣಾಮವುಂಟಾಗುತ್ತದೆ.

ಆಮೇಲೆ ಪಬ್ಲಿಕ್ ವರ್ಕ್ಸ್ ಇಲಾಖೆಯಮೇಲೆ ಅನೇಕ ಟೀಕೆಗಳು ಬಂದಿವೆ. ಕೆಲವರು ಕಟುವಾಗಿ ಕೂಡ ಈ ಇಲಾಖೆಯನ್ನು ಟೀಕಿಸಿದ್ದಾರೆ. ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಇಷ್ಟಪಡದೆ ಸಂಕ್ಷೇಪವಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಕಾರ್ಯಕಲಾಪಗಳನ್ನು ವಿವರಿಸುವುದು ಅವಶ್ಯಕವೆಂದು ಭಾವಿಸಿದ್ದೇನೆ. 1950-51 ರಿಂದ ಇಲ್ಲಿಯವರೆಗೆ ಈ ಇಲಾಖೆ ಎಷ್ಟು ಜಮೀನಿಗೆ ನೀರು ಕೊಟ್ಟಿದೆಯೆಂಬುದು ಅಂಕಿಗಳನ್ನು ಕೊಡುವುದರಿಂದ ವ್ಯಕ್ತವಾಗುತ್ತದೆ. 1950-51 ಮತ್ತು 1951-52ನೆಯ ಸಾಲುಗಳಲ್ಲಿ 34,145 ಎಕರೆ ಹಳೆ ಅಚ್ಚುಕಟ್ಟಿಗೆ ಮತ್ತು 3,240 ಎಕರೆ ಹೊಸ ಅಚ್ಚುಕಟ್ಟಿಗೆ ಕೂಡ ನೀರನ್ನು ಒದಗಿಸಲಾಗಿದೆ. 1952-53 ಮತ್ತು 1953-54ರಲ್ಲಿ 36,266 ಎಕರೆ ಹಳೆ ಅಚ್ಚುಕಟ್ಟಿಗೆ, 21,696 ಎಕರೆ ಹೊಸ ಅಚ್ಚುಕಟ್ಟಿಗೆ ಕೂಡ ನೀರು ಕೊಡಲಾಗಿದೆ. ಶ್ರೀ ಚಿಕ್ಕಲಿಂಗಯ್ಯನವರು tail- nd ವಿಚಾರ ಕೇಳಿದರು. ಅವರ ಜಿಲ್ಲೆಯಲ್ಲಿ ಹೆಬ್ಬಳ್ಳ ಪಿಕಪ್ ಎಂಬುದು ನಿರ್ಮಾಣವಾಗಿದೆ. ಮೈಸೂರು ಸಂಸ್ಥಾನದಲ್ಲಿ ಅದು ಅತ್ಯಂತ ದೊಡ್ಡದು, 22 ಮೈಲಿಯಿದೆ. ಆರು ತಿಂಗಳಲ್ಲಿ 11 ಮೈಲಿ ಪಿಕಪ್ ನಾಲೆಯನ್ನು ಮಾಡಿಸಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಆಮೇಲೆ ನಾನಾ ಬಾಬುಗಳಲ್ಲಿ ಎಷ್ಟು ಕೆಲಸ ನಡೆದಿದೆಯೆಂಬುದನ್ನು ಬಹಳ ಸಂಕ್ಷೇಪವಾಗಿ ಹೇಳುತ್ತೇನೆ. Improvements to rivers, tanks and feeder channels—ಈ ಸಂಬಂಧದಲ್ಲಿ 1952-53 ನೆಯ ಇಸವಿಯಲ್ಲಿ 2,149 ಕೆಲಸಗಳನ್ನು ಕೈಗೊಂಡಿದೆ, 1953-54ರಲ್ಲಿ ಒಂದು ಸಾವಿರ ಕೆಲಸಗಳನ್ನು ಕೈಗೊಂಡಿದೆ. ಆಮೇಲೆ ಕೆರೆಗಳ ಜೀರ್ಣೋದ್ಧಾರದ ಕಾರ್ಯ 1952-53 ಮತ್ತು 1953-54ರಲ್ಲಿ ಮೈಸೂರು ಸಂಸ್ಥಾನದಲ್ಲಿ ಯಾವಾಗಲೂ ಆಗದಿರುವಷ್ಟು ಪ್ರಮಾಣದಲ್ಲಿ ನಡೆದಿದೆ. ಕ್ಷಾಮ ಪರಿಸ್ಥಿತಿ ಬಂದುದರಿಂದ ಹೆಚ್ಚು ಕಡೆಗಳಲ್ಲಿ ಜನರಿಗೆ ಕೆಲಸ ಒದಗಿಸುವ ಉದ್ದೇಶದಿಂದ ಈ ಕಾರ್ಯವನ್ನು ಮಾಡಬೇಕಾಗಿ ಬಂತು. 1952-53ರಲ್ಲಿ 1,028 ಕೆರೆಗಳ ಜೀರ್ಣೋದ್ಧಾರ ಕಾರ್ಯ ಕೈಗೊಂಡಿದೆ, 1953-54ರಲ್ಲಿ 800 ಕೆರೆಗಳ ಕೆಲಸವನ್ನು ತೆಗೆದುಕೊಂಡಿದೆ. ಡೀ ಸಿಲ್ಟಿಂಗ್‌ಗೆ 1952-53ರಲ್ಲಿ 862 ಕೆರೆಗಳನ್ನು ತೆಗೆದುಕೊಂಡಿದ್ದೆವು, 1953-54ರಲ್ಲಿ 500 ಕೆರೆಗಳನ್ನು ತೆಗೆದುಕೊಂಡಿದ್ದೇವೆ.

ಆಮೇಲೆ ಪಂಚವಾರ್ಷಿಕ ಯೋಜನೆಯ ವಿಚಾರವಾಗಿ ಒಂದು ಮಾತು ಹೇಳುವುದು ಅಗತ್ಯ. ನಾಲ್ಕೈದು ಕೆಲಸಗಳ ವಿನಾ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿದ್ದ ಉಳಿದ ಎಲ್ಲಾ ಯೋಜನೆಗಳಲ್ಲೂ ಕೂಡ ನಾವು ಕೆಲಸವನ್ನು ಪ್ರಾರಂಭಿಸಿದ್ದೇವೆ. ಅವುಗಳ ಪೈಕಿ ಕೆಲವು ಪೂರೈಸಿವೆ, ಇನ್ನೂ ಕೆಲವು ಯೋಜನೆಗಳ ಕೆಲಸ ನಡೆಯುತ್ತಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿದ್ದ ಕೆಲಸಗಳ ಪೈಕಿ ಚಳ್ಳಘಟ್ಟ ಕೆರೆ, ಹೆನ್ನಾರ್—ಕುಮುದ್ವತಿ ಸೀರಿಸ್‌ಗೆ ಸಂಬಂಧಪಟ್ಟ ಕಾಂಗಾರಿ, ಶ್ರೀನಿವಾಸಸಾಗರ ಕೆರೆ ಕಾಂಗಾರಿ, ತಿರುಮಣಿ ಅಣೆ ಕಾಂಗಾರಿ ಇವು ವಿನಾ ಬಾಕಿ ಎಲ್ಲಾ ಕೆಲಸಗಳಲ್ಲೂ ಕೂಡ ಕೆಲವು ಕಾರ್ಯಗತವಾಗಿವೆ, ಮತ್ತೆ ಕೆಲವು ಹೊಸದಾಗಿ ಆಗುತ್ತಿವೆ. ಇದೂ ಅಲ್ಲದೆ ನಾಲ್ಕು ಹೊಸ ಕಾಂಗಾರಿಗಳನ್ನು ಕೂಡ ತೆಗೆದುಕೊಂಡಿದೆ. ಇದಕ್ಕಿಂತ ಹೆಚ್ಚಾಗಿ ವಿವರ ಕೊಡಬೇಕಾಗಿಲ್ಲ.

ಸಿಮೆಂಟ್ ಕಾಂಕ್ರೀಟು ಮತ್ತು ಟಾರು ಮಾಡುವ ಅಗತ್ಯದ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ಎರಡು ವರ್ಷಗಳ ಹಿಂದೆ ಇದೇ ಮಾನ್ಯ ಸಭೆಯಲ್ಲಿ ಕೆಲವು ರಸ್ತೆಗಳು ನಾದುರಸ್ತಾಗಿವೆಯೆಂದು ವಿರುದ್ಧಪಕ್ಷದ ನಾಯಕರು ಅಪ್ಪಣೆ ಕೊಟ್ಟಿದ್ದರು. ಆ ರಸ್ತೆ ದುರಸ್ತಿ ಮಾಡಬೇಕೆಂದು ನಾವು ತಕ್ಕ ಪ್ರಯತ್ನ ಮಾಡಿದ್ದೇವೆ. ಆ ಪ್ರಯತ್ನದ ಅಂಗವಾಗಿ ಸಿಮೆಂಟ್ ರಸ್ತೆಯ ನಿರ್ಮಾಣ ಕಾರ್ಯವನ್ನು ಕೂಡ ಕೈಗೊಂಡಿದ್ದೇವೆ.

ಆಮೇಲೆ ಪಬ್ಲಿಕ್‌ವರ್ಕ್ಸ್ ಇಲಾಖೆ ಬಡ್ಜೆಟ್ಟಿನಲ್ಲಿ ಒದಗಿಸಲಾಗಿದ್ದ ಹಣದಲ್ಲಿ ಬಹುಭಾಗ ಖರ್ಚುಮಾಡಿಲ್ಲವೆಂದು ಮಾನ್ಯ ಸದಸ್ಯರು ಅಪ್ಪಣೆ ಕೊಡಿಸಿದರು. ನಿಜ ಕೆಲವು ಬಾಬುಗಳಲ್ಲಿ ಬಡ್ಜೆಟ್ ಹಣ ಪೂರ್ತಿಯಾಗಿ ಖರ್ಚುಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಕೆಲವು ಸಂದರ್ಭಗಳಲ್ಲಿ ಯೋಜನೆಗೆ ಮಂಜೂರಾತಿ ದೊರೆಯುವುದಕ್ಕೆ ತಡವಾದ್ದರಿಂದ ಆ ಕೆಲಸಗಳು ನಡೆಯದೆ ಹೋಗಿ ಹಣ ಲ್ಯಾಪ್ಸ್ ಆಗಿರುವ ನಿದರ್ಶನಗಳಿವೆ. ಕೆಲವು ಸಂದರ್ಭಗಳಲ್ಲಿ ವರ್ಷಾಖೈರಿನೊಳಗಾಗಿ ಕಂಟ್ರಾಕ್ಟರುಗಳಿಗೆ ಹಣ ಪಾವತಿಯಾಗದೆ ಲ್ಯಾಪ್ಸ್ ಆಗಿದೆ.

ಶ್ರೀ ಎಂ. ವಿ. ರಾಮರಾವ್ (ತುಮಕೂರು).—ಮಾನ್ಯ ಮಂತ್ರಿಗಳೇ ಕೆಲಸ ನಡೆಯಬೇಕೆಂದು ಖುದ್ದಾಗಿ ಹೇಳಿದ್ದರೂ ಸಹ ಚೀಫ್ ಇಂಜಿನಿಯರು ಅದನ್ನು ಮಾಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹತೋಟಿಗೆ ಮೀರಿದ ಕಾರಣಗಳಿಂದ ಹಾಗಾಗಿರಬಹುದು. ಶ್ರೀ ಕೆಂಪರಾಜ್‌ರವರು ಕೆಂಗೇರಿ ಕೆರೆಗೆ ನೀರನ್ನೊದಗಿಸಲು ನಾಲೆ ಮಾಡುವುದನ್ನು ತಡಮಾಡಿದ್ದಾರೆಂದು ಹೇಳಿದರು. ಅದು ಸೂಯೇಜ್ ನೀರನ್ನು ಆ ಕೆರೆಗೆ ಬಿಡುವ ಸಂದರ್ಭಕ್ಕೆ ಸಂಬಂಧಪಟ್ಟಿದ್ದು. ಆದರೆ ಅಲ್ಲಿರುವ

ರೈತರು ಆ ನೀರನ್ನು ಬಿಟ್ಟರೆ ಕೆರೆಯ ನೀರು ಕೆಟ್ಟು ದನಗಳು ಅಲ್ಲಿ ನೀರು ಕುಡಿಯುವುದರಿಂದ ಅವುಗಳ ಆರೋಗ್ಯ ಕೆಡುತ್ತದೆ, ಅದರಿಂದ ತೊಂದರೆ, ಆ ಕೆಲಸ ಮಾಡಕೂಡದು ಎಂದು ಗಲಾಟೆ ಮಾಡಿದರು. ಅದ್ದರಿಂದ ಬೇರೆಕಡೆ ಒಂದು ಫೀಡರ್ ಛಾನಲ್ ನಿರ್ಮಾಣ ಮಾಡಬೇಕೆಂದು ಇಲಾಖೆಯವರು ಯೋಚನೆಮಾಡುತ್ತಿದ್ದಾರೆ.

ಆಮೇಲೆ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ವೆಚ್ಚ ಕಡಮೆ ಮಾಡಲು ಅವಕಾಶವಿದೆಯೆಂದು ಶ್ರೀ ಮರಿಯಪ್ಪನವರು ಹೇಳಿದ್ದಾರೆ. ಶ್ರೀ ಮಾಸ್ಕರೆನ್ಹಾಸ್‌ರವರು ಮಾತನಾಡುವಾಗ ಲಕ್ಕವಳ್ಳಿ ಜಲಾಶಯ ನಿರ್ಮಾಣದ ಕೆಲಸಕ್ಕೆ ಆರು ಜನ ಎಗ್ಸಿಕ್ಯೂಟಿವ್ ಇಂಜನಿಯರುಗಳನ್ನು ನೇಮಿಸಿದ್ದಾರೆ, ಅದಕ್ಕೆ ಅಷ್ಟು ಸಿಬ್ಬಂದಿಯಿರುವುದು ಅನಾವಶ್ಯಕ ಎಂದು ಹೇಳಿದ್ದಾರೆ. ಆದರೆ ಲಕ್ಕವಳ್ಳಿಯಲ್ಲಿ ಆರು ಜನ ಎಗ್ಸಿಕ್ಯೂಟಿವ್ ಇಂಜಿಯರುಗಳಿಲ್ಲ; ಐದು ಜನರಿದ್ದಾರೆ. ಅದೂ dam construction ಕೆಲಸಕ್ಕೆ ಅಲ್ಲ ಐದು ಜನ ನೇಮಕವಾಗಿಲ್ಲ. ಸುಮಾರು 29 ಅಥವಾ 30 ತಿಂಗಳ ಅವಧಿಯೊಳಗೆ 5 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ.

ಅದಕ್ಕೆ ಸಾಕಷ್ಟು ಸಲಕರಣೆಗಳನ್ನು ಕೂಡ ಒದಗಿಸಬೇಕು. ಈ ಸಲಕರಣೆಗಳಿಗಾಗಿ ಒಂದು material sub-division ಏರ್ಪಡಿಸಿದೆ. ಆಮೇಲೆ ಸಾಕಷ್ಟು Equipmentಗಳನ್ನು ಒದಗಿಸಿಕೊಳ್ಳಬೇಕಾಗಿದೆ. ಈ ಲಾರಿ, ಪೆಟ್ರೋಲ್ ಮುಂತಾದ equipmentಗಳನ್ನು ಒದಗಿಸಿಕೊಡುವ ಬಗ್ಗೆ ಒಬ್ಬ ಎಗ್ಸಿಕ್ಯೂಟಿವ್ ಇಂಜನಿಯರ ಅವಶ್ಯಕತೆಯಿದೆ. ಆಮೇಲೆ, ರೈಟ್ ಬ್ಯಾಂಕ್ ಚಾನಲ್, ಲೆಫ್ಟ್ ಬ್ಯಾಂಕ್ ಚಾನಲ್ ಎಂದು ಎರಡು ನಾಲೆಗಳನ್ನು ತೆಗೆಯಬೇಕಾಗಿದೆ. ಒಂದೊಂದು ನಾಲೆಗಳಿಗೂ ಒಬ್ಬೊಬ್ಬರು ಎಗ್ಸಿಕ್ಯೂಟಿವ್ ಇಂಜನಿಯರು ಇರಬೇಕಾದ್ದು ಅಗತ್ಯ. ಅನಂತರ constructionಗಳ ಬಗ್ಗೆ ಒಬ್ಬರು ಇಂಜಿನಿಯರು ಇರಬೇಕು. ಹೀಗೆ ಐದು ಜನರಿದ್ದಾರೆ. ಇದೂ ಅನಾವಶ್ಯಕವೆಂದರೆ, ಅದನ್ನೂ ಯೋಚನೆಮಾಡಿ ಕಡಮೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನೋಡುತ್ತೇವೆ.

ಶ್ರೀ ಟಿ. ಮರಿಯಪ್ಪ.—ಈ 5 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ಬಲದಡದ ನಾಲೆಗೆ ನೀರು ಆಗುತ್ತದೆಯೇ? ಏಕೆಂದರೆ 35 ಅಡಿ ತೆಗೆದುಕೊಂಡರೆ ಬರೀ ಎಡದಡದ ನಾಲೆ ಮಾತ್ರ ಆಗುತ್ತದೆ. 182 ಅಡಿಗಳನ್ನು ತೆಗೆದುಕೊಂಡರೇನೇ ಬಲದಡದ ನಾಲೆಗೆ ನೀರು ಹೋಗುತ್ತದೆ.

Sri Kadidal MANJAPPA.—I will be able to tell that tomorrow.

ಇನ್ನು ಖರ್ಚು ಖೋತಾ ಮಾಡಿರುವ ವಿಷಯ ಹೇಳುವುದಾದರೆ, ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕಳೆದ ವರ್ಷದಿಂದ ಕೆಲವು ರೆಗ್ಯುಲರ್ ಡಿವಿಜನ್‌ಗಳನ್ನು ಕಡಮೆ ಮಾಡುವ ಮುಖೇನ 1,92,000 ರೂಪಾಯಿಗಳನ್ನು ಮಿಗಿಸಿದ್ದೇವೆ. ಉದಾಹರಣೆಗೆ ಹೇಳುವುದಾದರೆ 1952ರಿಂದ ಇಲ್ಲಿಯವರೆಗೆ ಏಳು ಪ್ರಾಜೆಕ್ಟುಗಳ ಸಬ್ ಡಿವಿಜನ್‌ಗಳನ್ನು ವಜಾಮಾಡಿದ್ದೇವೆ. ರಿಕ್ಲಮೇಷನ್ ಸಬ್ ಡಿವಿಜನ್ ಎಂದು ಮಳವಳ್ಳಿಯಲ್ಲಿತ್ತು; ಅದನ್ನು ವಜಾಮಾಡಿದ್ದೇವೆ. ದಾವಣಗೆರೆಯಲ್ಲಿದ್ದ ಸ್ಪೆಷಲ್ ಬಿಲ್ಡಿಂಗ್ ಸಬ್ ಡಿವಿಜನ್ನನ್ನೂ ವಜಾಮಾಡಿದೆ. ಇರ್ಕನಂದ್ರ ಸಬ್ ಡಿವಿಜನ್, ಮಂಡ್ಯ ಡ್ರೈನೇಜ್ ಸಬ್ ಡಿವಿಜನ್, ಚಿತ್ರದುರ್ಗ ಡ್ರೈನೇಜ್ ಸಬ್ ಡಿವಿಜನ್, ಸ್ಪೆಷಲ್ ಸಬ್ ಡಿವಿಜನ್, ಬಳ್ಳಾರಿ, ಕಪಿನೀ ವರ್ಕ್ಸ್ ಸಬ್ ಡಿವಿಜನ್, ತುಮಕೂರು ಡ್ರೈನೇಜ್ ಸಬ್ ಡಿವಿಜನ್ ಮತ್ತು ಸ್ಪೆಷಲ್ ಸಬ್ ಡಿವಿಜನ್ ಕೆ.ಜಿ.ಎಫ್.—ಇವುಗಳನ್ನೆಲ್ಲಾ ವಜಾಮಾಡಿದ್ದೇವೆ.

ಶ್ರೀ ಟಿ. ಮರಿಯಪ್ಪ.—ಇವೆಲ್ಲಾ ಟೆಂಪೊರರಿ ಸಬ್ ಡಿವಿಜನ್‌ಗಳೆಂದು ನಮ್ಮ ಸ್ಕೀಮಿನಲ್ಲೇ ಹೇಳಿತ್ತು; ಆಯಾ ಕೆಲಸಗಳು ಮುಗಿದಮೇಲೆ ಅವುಗಳನ್ನು ವಜಾ ಮಾಡಬೇಕಾಗಿತ್ತು, ಅದರಂತೆ ಮಾಡಿದ್ದೀರಿ.

ಶ್ರೀ ಕಡಿದಾಳ್ ಮಂಜಪ್ಪ.—ಆಮೇಲೆ, ಇತ್ತೀಚೆಗೆ ಮೈಸೂರಿನ ಬಿಲ್ಡಿಂಗ್ ಸಬ್ ಡಿವಿಜನ್ ಮತ್ತು ಷುಗರ್‌ಕೇನ್ ಸೆಸ್ ಡಿವಿಜನ್—ಇವೆರಡನ್ನೂ ವಜಾ ಮಾಡಬೇಕೆಂದು ಮಾಡಿದ್ದಾರೆ.

ಶ್ರೀ ಟಿ. ಮರಿಯಪ್ಪ.—Sugarcane Sub-Divisionನನ್ನು ವಜಾಮಾಡಿಬಿಟ್ಟರೆ ಅಲ್ಲಿನ ರಸ್ತೆಗಳ ಗತಿಯೇನು? ಅಲ್ಲಿ 25 ಲಕ್ಷ ರೂಪಾಯಿಗಳಿವೆ. ಅವರು ತಮ್ಮ ಕೈಯಿಂದಲೇ ದುಡ್ಡು ಕೊಡುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—Sugarcane Sub-Division ಇರುತ್ತದೆ; ಆದರೆ ಆ ಸಬ್ ಡಿವಿಜನ್ನಿಗೆಂದೇ ಬೇರೆ ಅಧಿಕಾರಿಗಳಿರುವುದಿಲ್ಲ. ಬೇರೆ ಅಧಿಕಾರಿಗಳ ಕೈಕೆಳಗೆ ಅದು ಕೆಲಸಮಾಡುತ್ತದೆ. ಇವಲ್ಲದೆ, ಹೊನ್ನಾಳಿ ಸಬ್ ಡಿವಿಜನ್, ಚನ್ನಗಿರಿ ಸಬ್ ಡಿವಿಜನ್, ಅಂಜನಾಪುರ ಸಬ್ ಡಿವಿಜನ್ ಮತ್ತು ಸಿರಾ ಸಬ್ ಡಿವಿಜನ್ ಇವುಗಳನ್ನು ವಜಾಮಾಡಬೇಕೆಂದು ಈಗತಾನೆ ಸರ್ಕಾರದ ಆಜ್ಞೆಯಾಗಿದೆ.

ಇನ್ನು, ಮಂತ್ರಿಗಳಿಗೆ ಬಂಗಲೆಗಳು ಅನಾವಶ್ಯಕವೆಂದು ಹೇಳಿ ಕೆಲವರು ವಾದಮಾಡಿದ್ದಾರೆ. ತಾವು ಹೇಳಿದ್ದನ್ನು ನಾನೂ ಒಪ್ಪುತ್ತೇನೆ. ಅದರಂತೆ ಅದನ್ನು ಈ ವರ್ಷ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಒಂದು ಗುಡಿಸಲು ಕಟ್ಟಿಕೊಂಡಿರಲಿ.

ಶ್ರೀ ಕಡಿದಾಳ್ ಮಂಜಪ್ಪ.—ಗುಡಿಸಿಲಿನಲ್ಲಿದ್ದ ಅಭ್ಯಾಸವೂ ಇದೆ. ಆದ್ದರಿಂದ ಮಂತ್ರಿಗಳ ಬಂಗಲೆಗಳಿಗೆಂದು ಬಡ್ಜೆಟ್ಟಿನಲ್ಲಿ ಹಣ ಒದಗಿಸಿದ್ದರೂ ಅದನ್ನು ಕಟ್ಟುವ ಗೋಡೆವೆಗೆ ಹೋಗುವುದಿಲ್ಲ.

ಶ್ರೀ ಮಹಮ್ಮದ್ ಇಮಾಂ.—ಹಾಗಾದರೆ ಏಕೆ ಸೇರಿಸಿದಿರಿ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಸಮಯ ಬಂದಾಗ ಹೇಳುತ್ತೇನೆ. ಸದ್ಯಕ್ಕೆ ಸೇರಿಸಿದ್ದೆವು. ಆದರೆ ತಮ್ಮಲ್ಲನೇಕರು ಅದು ಬೇಡವೆಂದು ಹೇಳಿದ್ದೀರಿ. ಪ್ರಜೆಗಳ ಅಭಿಮತದಂತೆ ನಡೆಯುವುದು ಪ್ರಜಾಪ್ರಭುತ್ವದ ತತ್ವ. ಅದಕ್ಕನುಸಾರವಾಗಿ ಇದನ್ನು ಕೈಬಿಡಲಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗೆಯೇ ತೆರಿಗೆಗಳನ್ನೂ ಬಿಡಿರಿ.

ಶ್ರೀ ಕಡಿದಾಳ್ ಮಂಜಪ್ಪ.—ತೆರಿಗೆಗಳಲ್ಲಿಯೂ ಹಾಗೆಯೇ ಮಾನ್ಯ ಸದಸ್ಯರು ಯಾವ ರೀತಿ ಅಭಿಪ್ರಾಯ ಕೊಡುತ್ತೀರೋ ಆ ರೀತಿ ನಡೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ತಮ್ಮ ಸ್ವಂತ ಅಭಿಪ್ರಾಯವೇನು ಇದರಲ್ಲಿ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಈ ಸ್ಥಾನದಲ್ಲಿಲ್ಲದೆ ಆ ಸ್ಥಾನದಲ್ಲಿದ್ದರೆ ನನ್ನ personal ಅಭಿಪ್ರಾಯ ಹೇಳುತ್ತಿದ್ದೆ.

ಆಮೇಲೆ, ಮಂತ್ರಿಗಳಿಗೆ ಮೆಡಿಕಲ್ ಚಾರ್ಜಸ್ ಎಂದು ಹೇಳಿ 10,000 ರೂಪಾಯಿಗಳನ್ನು ಕೊಟ್ಟಿರುವ ವಿಷಯವನ್ನು ಕುರಿತು ಮುಖ್ಯ ಮಂತ್ರಿಗಳು ಸಂಕ್ಷೇಪವಾಗಿ ವಿವರಿಸಿದ್ದಾರೆ. ಇಷ್ಟು ಒದಗಿಸಿದ್ದರೂ ಒಬ್ಬೊಬ್ಬರಿಗೂ 200—300 ರೂಪಾಯಿಗಳ ಮೇಲೆ ಹೋಗುವುದಿಲ್ಲ. ಅಂದಮೇಲೆ ಏಕೆ ಇಷ್ಟನ್ನು ಒದಗಿ

(ಶ್ರೀ ಕಡಿದಾಳ್ ಮಂಜಪ್ಪ.)

ಸಿದರೆಂದು ಕೇಳಬಹುದು. ನಮ್ಮಲ್ಲಿ ಒಬ್ಬರು I.A.S. ಅಧಿಕಾರಿಗಳು ಆಸ್ಪತ್ರೆಯಲ್ಲಿ ಇದ್ದ ಸಂದರ್ಭದಲ್ಲಿ ಅದಕ್ಕೆ 3,000 ರೂಪಾಯಿಗಳವರೆಗೂ ಖರ್ಚಾಯಿತು. ಅದನ್ನೇ ಆಧಾರವಾಗಿಟ್ಟುಕೊಂಡು 6 ಜನ ಮಂತ್ರಿಗಳಿಗೆ ಒಟ್ಟು 10,000 ರೂಪಾಯಿಗಳನ್ನು ಒದಗಿಸಿದ್ದಾರೆ. ಬಡ್ಜೆಟ್ಟಿನಲ್ಲಿ ಒದಗಿಸಿದಾಕ್ಷಣಕ್ಕೇ ಅಷ್ಟೂ ಖರ್ಚಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅದರಲ್ಲೂ ಯಾರೂ ಹೆಚ್ಚಿಗೆ ಖಾಯಿಲೆ ಬೀಳುವುದಿಲ್ಲ. ಖಾಯಿಲೆ ಬೀಳುವುದರಲ್ಲಿ ನಾನೊಬ್ಬನೇ ಸ್ವಲ್ಪ ಹೆಚ್ಚು.

ಶ್ರೀ ಎಸ್. ಗೋಪಾಲಗೌಡ.—ಆದರೂ, ಹೀಗೆ ಹೆಚ್ಚಿಗೆ ದುಡ್ಡು ಒದಗಿಸಿದ್ದರೆ ಮಂತ್ರಿಗಳು ಎಷ್ಟು ರೋಗಗ್ರಸ್ತರೆಂದು ಜನ ತಿಳಿದುಕೊಳ್ಳುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಈಗ ಅದಕ್ಕೆಲ್ಲಾ ಕಾಲಾವಕಾಶವಿಲ್ಲ. ಇದಕ್ಕೂ ಉತ್ತರಕೊಡಬಲ್ಲೆ.

ಶ್ರೀ ಮರಿಯಪ್ಪನವರು, ನೀರಾವರಿ ಯೋಜನೆಗಳ ಸಂಬಂಧದಲ್ಲಿ ಕೆಲವು ಹಣವನ್ನು ಒದಗಿಸಿದ್ದರಲ್ಲಿ ಖರ್ಚು ಕಡಮೆಮಾಡುವುದಕ್ಕೆ ಆಸ್ಪದವಿದೆಯೆಂದು ಹೇಳಿದರು.

ಶ್ರೀ ಟಿ. ಮರಿಯಪ್ಪ.—ಒಟ್ಟಿನಲ್ಲಿ ತಾವು ಬಡ್ಜೆಟ್ಟಿನಲ್ಲಿ ಇದಕ್ಕಾಗಿ ಒದಗಿಸಿರುವ ಹಣವನ್ನು ಕಡಮೆ ಮಾಡುವುದಕ್ಕೆ ಆಸ್ಪದವಿದೆಯೆಂದು ಹೇಳಿದೆ.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಎಲ್ಲವನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಖಂಡಿತವಾಗಿ ಹಣವನ್ನು ಉಳಿಸುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಟಿ. ಮರಿಯಪ್ಪ.—ಈ ವರ್ಷ 95 ಲಕ್ಷ ರೂಪಾಯಿಗಳು ಉಳಿಯಿತು ಎಂದು ಹೇಳಿದಮೇಲೆ, ಅದೇ ಆಧಾರದಮೇಲೆ ನಾನು ಉಳಿಸಬಹುದೆಂದು ಹೇಳಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಆದರೆ ಈ ವರ್ಷ 95 ಲಕ್ಷ ರೂಪಾಯಿ ಉಳಿಯುವುದಿಲ್ಲ. 1953–54ರಲ್ಲಿ 83.8 ಲಕ್ಷ ರೂಪಾಯಿಗಳು ಉಳಿದಿವೆ, ಅದಕ್ಕೆ ಅನೇಕ ಕಾರಣಗಳಿವೆ. ಅಲ್ಲಿ ಆದುದು 12 ಲಕ್ಷ (ಚಿಲ್ಲರೆ) ರೂಪಾಯಿ ಆ ಹಣ ಷುಗರ್ ಕೇನ್ ಸೆಸ್‌ಗೆ ಡೆಬಿಟ್ ಆಗಬೇಕಾಗಿದ್ದುದರಿಂದ ಅಲ್ಲಿಗೆ ಡೆಬಿಟ್ ಮಾಡಲಾಯಿತು. ಇದರಿಂದಾಗಿ ಪಬ್ಲಿಕ್ ವರ್ಕ್ಸ್‌ನಲ್ಲಿ 12 ಲಕ್ಷ ರೂಪಾಯಿ ಉಳಿತಾಯ ಕಂಡುಬಂದಿದೆ ಅಷ್ಟೆ. ಟೂಲ್ಸ್ ಅಂಡ್ ಪ್ಲಾಂಟ್‌ನಲ್ಲಿ ಮೂರು ಲಕ್ಷ ಚಿಲ್ಲರೆ ಉಳಿತಾಯವಾಗಿದೆ. ಇದು ಕಂಟ್ರಾಕ್ಟರುಗಳಿಗೆ ವರ್ಷದ ಆಖೈರಿನಲ್ಲಿ ಹಣ ಪಾವತಿಯಾಗದಿರುವುದರಿಂದ ಸ್ವಲ್ಪ ಲ್ಯಾಪ್ಸ್ ಆಗಿದೆ. ಆಮೇಲೆ ಕೆಲವು case ಗಳಲ್ಲಿ ಅಕ್ವಿಸಿಷನ್ ಆಗಿದ್ದು ಅಕ್ವಿಸಿಷನ್ ಅವಾರ್ಡ್ ಬಾರದಿರುವುದರಿಂದ ಕೊಂಚ ಹಣ ಲ್ಯಾಪ್ಸ್ ಆಗಿದೆ. ಆಮೇಲೆ ವಿಧಾನಸೌಧದಲ್ಲಿ capital works ಕೆಲಸವನ್ನು change ಮಾಡಿದ್ದರಿಂದ Public Works ಇಲಾಖೆಯ ಬಡ್ಜೆಟ್ಟಿನಲ್ಲಿ ಉಳಿತಾಯ ಕಂಡುಬಂದಿದೆ. ಪ್ರಕೃತ ಸಾಲಿನಲ್ಲಿ ಇಷ್ಟೊಂದು ಲ್ಯಾಪ್ಸ್ ಆಗುವುದಿಲ್ಲ. ಏಕೆಂದರೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈಸಾರಿ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಸುಮಾರು 22 ಲಕ್ಷ ರೂಪಾಯಿಗಳನ್ನು ನಾವು ಹೆಚ್ಚಾಗಿ ಕೇಳಿ ತಮ್ಮ ಅನುಮತಿಯನ್ನು ಪಡೆದುಕೊಂಡಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಎಸ್ಟಿಮೇಟನ್ನು ಸ್ಯಾಂಕ್ಷನ್ ಮಾಡದೆ ಇದ್ದರೆ ಹಾಗೆಯೇ ಉಳಿಯುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಮಾಡುವುದಿಲ್ಲ. ಉದಾಹರಣೆಗೆ, ಕಪಿನಿ ರಿಸರ್ವಾಯರ್ ವಿಷಯವನ್ನು ಬಹಳ ಕಾತರದಿಂದ ಮಾಡಬೇಕೆಂದಿದ್ದೆವು. ಬಡ್ಜೆಟ್ಟಿನಲ್ಲಿ ಹಣವನ್ನೂ ಕೂಡ ಒದಗಿಸಿದ್ದೆವು. ಇದ್ದಕ್ಕಿದ್ದ ಹಾಗೆ ಪ್ಲಾನಿಂಗ್ ಕಮಿಷನ್ನಿನವರಿಂದ ಕಾಗದ ಬಂತು. ಪಾಂಚವಾರ್ಷಿಕ ಯೋಜನೆಗೆ ಸೇರಿಸಿದ ಕಾಮಗಾರಿಗಳನ್ನು ಕಾರ್ಯಗತ ಮಾಡಿದನಂತರ ಉಳಿದ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಇದರಿಂದಾಗಿ ಅದನ್ನು ನಿಲ್ಲಿಸಬೇಕಾಗಿಬಂತು. ಆಮೇಲೆ ಕೋಲಾರ ಜಿಲ್ಲೆಯಲ್ಲಿ ಕೆಲವು ಕಾಮಗಾರಿಗಳನ್ನು ಕೈಕೊಳ್ಳದಿರುವುದಕ್ಕೆ ಕಾರಣ, ಮೈಸೂರು ಸರ್ಕಾರದವರು ಮದ್ರಾಸ್ ಸರ್ಕಾರದವರೊಡನೆ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರ ನಾವು ಕೆಲವು ಅಂಕಿ ಅಂಶಗಳನ್ನು ಒದಗಿಸಬೇಕಾಗಿತ್ತು. ಅದನ್ನು ಒದಗಿಸುವ ಪೂರ್ವ ಆ ಕೆಲಸಗಳನ್ನು ಕಾರ್ಯಗತಮಾಡಲಿಕ್ಕಾಗಲಿಲ್ಲ.

7 P.M.

ಈ ಅನೇಕ ಕಾರಣಗಳಿಂದ P.W.D. ಬಡ್ಜೆಟ್ಟಿನಲ್ಲಿ ಹಣ ಲ್ಯಾಪ್ಸಾಗಿದೆ.

ಶ್ರೀ ಆರ್. ಅನಂತರಾಮಯ್ಯನವರು ಮಾತನಾಡುತ್ತ ಬೆಂಗಳೂರು ನಗರಕ್ಕೆ ನೀರನ್ನು ಸರಬರಾಯಿ ಮಾಡುತ್ತಿರುವುದರಲ್ಲಿ ಸರ್ಕಾರದವರಿಗೆ ಯಾವ ನಷ್ಟವೂ ಆಗುವುದಿಲ್ಲವೆಂಬುದಾಗಿ ಹೇಳಿದರು. ಶ್ರೀ ಪಿ. ಆರ್. ರಾಮಯ್ಯನವರೂ ಸಹ ಅದೇ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕನ್ನಂಬಾಡಿ ಕಟ್ಟೆಯಲ್ಲಿ ನೀರನ್ನು ತಡೆಯತಕ್ಕ ಬಗ್ಗೆ ಮೈಸೂರು ಸರ್ಕಾರಕ್ಕೂ ಮತ್ತು ಮದ್ರಾಸ್ ಸರ್ಕಾರಕ್ಕೂ ಒಂದು ಒಪ್ಪಂದವು 1924ರಲ್ಲಿ ಆಗಿತ್ತು. ಇದು ಬಹಳ ಹಿಂದಿನ ಕಾಲದಲ್ಲಿ ಮಾಡಿದಂಥ ಒಪ್ಪಂದವಾದುದರಿಂದ ಇದನ್ನು ಈಗಿನ ಪರಿಸ್ಥಿತಿಗಳಿಗನುಸಾರವಾಗಿ ಸೂಕ್ತ ಬದಲಾವಣೆಗಳನ್ನು ಮಾಡಬೇಕೆಂಬುದಾಗಿ ನಾವು ಪದೇ ಪದೇ ಸರ್ಕಾರದವರನ್ನು ಒತ್ತಾಯಪಡಿಸುತ್ತಲೇ ಇದ್ದೇವೆ. ಆದರೆ ಅದರ ಬಗ್ಗೆ ಏನು ಕಾರ್ಯಕ್ರಮಗಳನ್ನು ಸರ್ಕಾರದವರು ಕೈಕೊಂಡಿದ್ದಾರೆ ಎಂಬ ವಿಚಾರದಲ್ಲಿ ಒಂದು ಶಬ್ದವೂ ಸಹ ತಮ್ಮಿಂದ ಕೇಳಿ ಬರುತ್ತಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಈಗ ಮಾತನಾಡುತ್ತಿರುವುದು ಬೆಂಗಳೂರು ನಗರದ ನೀರಿನ ಸರಬರಾಯಿಯ ವಿಚಾರ...

ಶ್ರೀ ಟಿ. ಮರಿಯಪ್ಪ.—ಶ್ರೀನಿವಾಸ ಸಾಗರದ ವಿಚಾರ ಏನಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ಆ ಕೆಲಸವನ್ನು ಕೈಗೊಳ್ಳುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಆ ಶ್ರೀನಿವಾಸ ಸಾಗರ ನಾಗಮಂಗಲ ತಾಲ್ಲೋಕಿನಲ್ಲಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ ಅದು ಕೋಲಾರ ಜಿಲ್ಲೆಯಲ್ಲಿ ಇದೆ. ನಾನೀಗ ಬೆಂಗಳೂರು ನಗರಕ್ಕೆ ನೀರನ್ನೊದಗಿಸುವುದರ ಸಂಬಂಧವಾಗಿ ಆಗತಕ್ಕ ಖರ್ಚು ವೆಚ್ಚಗಳನ್ನು ತಮ್ಮ ಮುಂದಿಡಬೇಕೆಂದಿದ್ದೇನೆ. ಈ ಪಟ್ಟಣದ ನೀರಿನ ಸರಬರಾಯಿಗಾಗಿ ತಗಲತಕ್ಕ ವೆಚ್ಚ ಸುಮಾರು 155 ಲಕ್ಷ ಚಿಲ್ಲರೆ ಆಗುತ್ತದೆ. ಈ ಯೋಜನೆಯಿಂದ ಸರ್ಕಾರಕ್ಕೆ ಲಾಭವೇನೂ ಬರುತ್ತಿಲ್ಲವೆಂದು ತಿಳಿಸಿದ್ದಾರೆ. ಅದು ವಾಸ್ತವಾಂಶ. ಇನ್ನು ಮುಂದಕ್ಕೆ ಈ ಬಾಬಿನಿಂದ ಸರ್ಕಾರಕ್ಕೆ ಯಾವ ರೀತಿಯಲ್ಲಿಯೂ ನಷ್ಟವಾಗದಂತೆ ಕೆಲಸ ನಡೆಸುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಬಿ. ಎಂ. ಶೀನಪ್ಪ (ಕಬ್ಬನ್‌ಪೇಟೆ).—ಹಾಗಾದರೆ ನಿಮಗೆ ಈ ಬಾಬಿನಿಂದ ಏನೂ ಆದಾಯ ಬರುತ್ತಿಲ್ಲವೇ!

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಎಂ. ವಿ. ರಾಮರಾಯರೂ ಮತ್ತು ಒಬ್ಬಿಬ್ಬರು ಸದಸ್ಯರೂ ಡೆಲಿಗೇಟೆಡ್ ಲೆಜಿಸ್ಲೇಷನ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಯಾವ ಯಾವುದನ್ನು ಕಾನೂನು ಪ್ರಕಾರ ರಾಜ್ಯಾಂಗದಲ್ಲಿ ನಿರೂಪಿಸಲಾಗಿರುತ್ತದೆಯೋ ಅಂಥಾದ್ದೆಲ್ಲವನ್ನೂ ಶಾಸನ ಸಭೆಗಳ ಮುಂದೆ ಇಡಬೇಕು, ಅವುಗಳ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿದ್ದಾರೆ. ಯಾವ ದೇಶದಲ್ಲೂ ಕೂಡ ಎಲ್ಲವನ್ನೂ ಶಾಸನ ಸಭೆಗಳ ಮುಂದೆ ಇಡುವುದಿಲ್ಲ. ಕಾನೂನಿನಲ್ಲಿ ಯಾವಯಾವುವನ್ನು ಹಾಗೆ ಶಾಸನ ಸಭೆಗಳ ಮುಂದಿಡಬೇಕೆಂದು ವಿಧಾಯಕಮಾಡಿರುತ್ತದೆಯೋ ಅವೆಲ್ಲವನ್ನೂ ಶಾಸನ ಸಭೆಗಳ ಮುಂದಿಟ್ಟು, ಶಾಸನ ಸಭೆಗಳ ಅಭಿಪ್ರಾಯವನ್ನು ಪಡೆದು ಅವುಗಳನ್ನು ಯಾವ ರೀತಿ ಮುಂದುವರಿಸಬೇಕೋ ಆ ರೀತಿ ಮುಂದುವರಿಸುತ್ತಿದ್ದೇವೆ.

ಇನ್ನು ಕೆಲವು ಮಾನ್ಯಸದಸ್ಯರು ಸಂಗೇನಹಳ್ಳಿ, ತುಪ್ಪದಹಳ್ಳಿ ಕೆರೆಗಳ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಈಗಾಗಲೇ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಆ ಬಗ್ಗೆ ಒಂದು ಸ್ಪೆಷಲ್ ವಿಚಾರಣಾ ಸಮಿತಿಯನ್ನೇ ನೇಮಕಮಾಡಲಾಗಿತ್ತು. ಆ ಸಮಿತಿಯು ಈಗಾಗಲೇ ತನ್ನ ಒಂದು ವರದಿಯನ್ನು ಸಹ ಸರ್ಕಾರಕ್ಕೆ ಒಪ್ಪಿಸಿದೆ. ಆ ವರದಿಯಲ್ಲಿ ಏನೇನು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಲಾಗಿದೆಯೆಂಬುದನ್ನು ಮಾನ್ಯಸದಸ್ಯರಿಗೆಲ್ಲಾ ತಿಳಿಯುವಂತೆ ಮಾಡಲು ಆ ಪ್ರತಿಗಳನ್ನೆಲ್ಲಾ ಹಂಚಿಸಿ, ಅವುಗಳು ಈಗಾಗಲೇ ತಮ್ಮ ಕೈಸೇರಿರುತ್ತವೆ. ಆ ಸಮಿತಿ ಶಿಫಾರ್ಸುಗಳ ಪ್ರಕಾರ ಸರ್ಕಾರ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದೆಂದು ನಾನೀಗ ತಮಗೆಲ್ಲಾ ಭರವಸೆ ಕೊಡುತ್ತೇನೆ.

ಇನ್ನು ಶ್ರೀ ಪಿ. ಆರ್, ರಾಮಯ್ಯನವರು ಈ ಧಾರ್ಮಿಕ ಸಂಸ್ಥೆಗಳ ವಿಚಾರಕ್ಕೂ, ಇನಾಂ ಅಬಾಲಿಷನ್ ಸಂಬಂಧವಾಗಿ ಕೈಹಾಕುತ್ತೀರಾ ಎಂದು ಒಂದು ಪ್ರಶ್ನೆ ಹಾಕಿದ್ದಾರೆ. ಇನ್ನು ಈ ವ್ಯಕ್ತಿ ಸಂಬಂಧವಾದ ಮಸೂದೆಯನ್ನು ಸರ್ಕಾರ ತಂದಿರುವುದರ ಬಗ್ಗೆ ಯಾರೂ ಭಿನ್ನಾಭಿಪ್ರಾಯವು ಇಲ್ಲ. ಆದರೆ ಮೊದಲು ಈ ಧಾರ್ಮಿಕ ಸಂಸ್ಥೆಗಳಲ್ಲಿ ಕೈಹಾಕಬೇಕೆಂಬ ಅಭಿಪ್ರಾಯ ಸರ್ಕಾರಕ್ಕೇನೂ ಇರಲಿಲ್ಲ. ಆದರೆ ಶಾಸನ ಸಭೆಯ ಮುಂದೆ ಈ ವ್ಯಕ್ತಿ ಸಂಬಂಧವಾದ ಇನಾಂ ರದ್ದಿಯಾತಿ ಮಸೂದೆಯನ್ನು ಮೊದಲನೆಯ ಬಾರಿ ತಂದಾಗ ಅದರ ಜೊತೆಯಲ್ಲೇ ಈ ರಿಲಿಜಿಯಸ್ ಇನಾಂಗಳನ್ನು ರದ್ದುಪಡಿಸುವಂಥ ಕಾನೂನನ್ನೂ ತರಬೇಕಾಗಿತ್ತು, ಆದರೆ ಹಾಗೆ ತಾರದೆ ಬಿಟ್ಟಿರುವುದು ಸರಿಯಾದ್ದಲ್ಲವೆಂದು, ಅನೇಕ ಸದಸ್ಯರು ಸರ್ಕಾರವನ್ನು ಬಹಳ ಕಟುವಾಗಿ ಟೀಕೆ ಮಾಡಿದರು. ಸುಮಾರು 35 ಜನರು ಆಗ ತಂದಿದ್ದ ಮಸೂದೆಯ ಮೇಲೆ ಮಾತನಾಡಿದ್ದಾರೆ. ಆ ಪೈಕಿ ಸುಮಾರು 30 ಜನರು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಬಿಲ್ಲನ್ನು ತರಲಿಲ್ಲವೆಂದು ಅದಕ್ಕೆ ಅವರ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಆ ವೇಳೆಯಲ್ಲಿ ನಾನು ಅವರಿಗೆಲ್ಲಾ ಈ ಬಗ್ಗೆ ಬೇರೊಂದು ಮಸೂದೆಯನ್ನೇ ತರುವುದಾಗಿ ಆಶ್ವಾಸನವನ್ನು ಕೊಟ್ಟಿದ್ದೆನು. ಈಗ ಅದೇ ರೀತಿಯಾಗಿ ಆ ಮಸೂದೆಯನ್ನೂ ಸಭೆಯ ಮುಂದಿಟ್ಟಿದ್ದೇನೆ. ಸುಮಾರು ಶೇಕಡ 95 ಏಕೆ 99 ರಷ್ಟು ಮಂದಿ ಸದಸ್ಯರುಗಳೆಲ್ಲಾ ಈ ಇನಾಂಗಳನ್ನು ರದ್ದುಮಾಡಬೇಕೆಂದು ಹೇಳಿದ್ದಾರೆ. ಈಗ ಜನರಿಗೆಲ್ಲಾ ಭೂಸುಧಾರಣೆ ಮೇಲೆ ಆಸಕ್ತಿ ಹೆಚ್ಚಾಗಿದೆ. ಇಷ್ಟೆಲ್ಲವನ್ನು ತಿಳಿದಿದ್ದರೂ ಕೂಡ ಇದನ್ನು ಕೈಬಿಡುತ್ತೀರಾ ಎಂದು ಕೇಳತಕ್ಕವರಿಗೆಲ್ಲಾ, ಇದನ್ನು ಕೈಬಿಡತಕ್ಕಷ್ಟು ಧೈರ್ಯ ನನಗಿಲ್ಲವೆಂದು ಹೇಳಬೇಕಾಗಿದೆ. ಆದರೆ ಈ ಸಂಬಂಧವಾಗಿ ಜನರು ಹೊರಗಡೆ "ಈಗ ಬಂದಿರತಕ್ಕ ರೆವೆನ್ಯೂ ಮಂತ್ರಿಗಳು ನಾಸ್ತಿಕ" ಎಂಬುದಾಗಿ ಕೆಲವರು ಆಡಿಕೊಳ್ಳುತ್ತಿದಂಥ ಮಾತುಗಳೂ ನನ್ನ ಕಿವಿಗೆ ಬಿದ್ದಿವೆ. ಹೆದರಿಕೆ, ಬೆದರಿಕೆಯ ಮೂಗರ್ಜಿಗಳೂ ಸಹ ಬಂದಿರುತ್ತವೆ...

ಶ್ರೀ ಎಸ್. ಸಿದ್ದಪ್ಪ.—ಮುಂದಕ್ಕೆ ನೀವು ಸ್ವರ್ಗದಲ್ಲೇ ಹುಟ್ಟುತ್ತೀರಿ ಎಂತಲೂ ಕೆಲವರು ಹೇಳುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಈ ಮಸೂದೆಯನ್ನೂ ತರಲೇಬೇಕೆಂಬ ಆಸಕ್ತಿ ಸರ್ಕಾರದವರಿಗೂ ಇದೆ; ಅಂಥ ಹಟವಾದ ಮನೋಭಾವನೆಯೇ ಇದೆ. ಆದರೆ ಶೃಂಗೇರಿಯ ವಿಚಾರ ಅನೇಕ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿದೆ. ಆದರೆ ಈ ವಿಚಾರವಾಗಿ ನಾನೀಗ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ. ಆ ಮಸೂದೆ ಈ ಮಾನ್ಯಸಭೆಯ ಮುಂದೆ ಬಂದಾಗ ಮಾನ್ಯಸದಸ್ಯರುಗಳೆಲ್ಲರಿಗೂ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿದೆ. ಆಗ ನಾನು ಸಹ ನನಗೆ ತಿಳಿದುದನ್ನು ಹೇಳುತ್ತೇನೆ. ಆದರೆ ಇದರಿಂದ ಯಾರ ಮನಸ್ಸನ್ನೂ ನೋಯಿಸಬೇಕೆಂಬ ಉದ್ದೇಶ ಸರ್ಕಾರದವರಿಗೆ ಖಂಡಿತ ಇರುವುದಿಲ್ಲ. ಈಗ ತರುವಂಥ ಆ ಮಸೂದೆಯಿಂದ ಯಾರೊಬ್ಬರ ಧರ್ಮಕ್ಕೂ ಧಕ್ಕೆ ಬರುವಂಥ ಅವಕಾಶವೂ ಸಹ ಇರುವುದಿಲ್ಲ. ಆದ್ದರಿಂದ ಈ ಸಭೆಯ ಬಹುಮತದ ಅಭಿಪ್ರಾಯ ಸ್ಪಷ್ಟವಾಗಿ ಗೊತ್ತಾಗಿರುವುದರಿಂದ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಮಸೂದೆಯನ್ನು ಸರ್ಕಾರದವರು ಕೈಬಿಡುವುದಿಲ್ಲ ಎಂದು ಹೇಳಿ ಮಾನ್ಯ ಸದಸ್ಯರಾದ ಶ್ರೀಮಾನ್ ರಾಮಯ್ಯನವರಲ್ಲಿ ಅರಿಕೆಮಾಡಿಕೊಳ್ಳಬೇಕಾಗಿದೆ.

ಆಮೇಲೆ ಶ್ರೀಮಾನ್ ರಾಮರಾಯರು ಮಾತನಾಡಬೇಕಾದರೆ ಈ ಸರ್ಕಾರದ ಆಡಳಿತದಲ್ಲಿ ಖಾಸಗಿ ಜನರ ಕೈವಾಡ ಇದೆ ಎಂದು ಹೇಳಿದ್ದಾರೆ. ಸರ್ಕಾರದವರು ಅನೇಕ ಬಾರಿ ಅಧಿಕಾರಿಗಳಿಗೆ ಅವರು ಯಾರ ಪ್ರಭಾವಕ್ಕೂ ಒಳಗಾಗಬಾರದು ಎಂದು ಸೂಚನೆ ಕೊಟ್ಟಿದ್ದಾರೆ. ನನ್ನ ಮಾತಿನಲ್ಲಿ ಹೇಳುವುದಾದರೆ: they should be fearless, fair, firm and polite in dealing with the public ಎಂದು ಹೇಳಿ ನಾನು ಎಷ್ಟೋಸಾರಿ ಹೇಳಿದ್ದೇನೆ. ಇನ್ನೂ ಒಂದು ಹೆಜ್ಜೆ ಮುಂದೆಹೋಗಿ ಹೇಳಿದ್ದೇನೆ, ಆಯಾ ಡಿಸ್ಟ್ರಿಕ್ಟ್‌ನಲ್ಲಿ ಯಾವ ಒಬ್ಬ ಪ್ರತಿಭಾವಂತ ಮನುಷ್ಯ ಇರಲಿ, ಮುಖಂಡರು ಇರಲಿ ಅವರ ಮಾತು ನ್ಯಾಯಕ್ಕೆ ವಿರುದ್ಧವಾಗಿದ್ದರೆ ಅದನ್ನು ನೀವು ಕೇಳಬೇಕಾಗಿಲ್ಲ ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ.

ಆಮೇಲೆ ಇಲಾಖೆಗಳಲ್ಲಿ ಕೆಲಸ ಕಾರ್ಯಗಳು ತ್ವರಿತವಾಗಿ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ತಮಗೆ ಎಷ್ಟು ಒಂದು ಉದ್ವೇಗ, ಆಸಕ್ತಿ, ಸಮಾಧಾನ ಇದೆಯೋ ನನಗೂ ಅಷ್ಟೇ ಉದ್ವೇಗ, ಆಸಕ್ತಿ ಅಸಮಾಧಾನ ಇದೆ. ಕೆಲವು ಸಂದರ್ಭಗಳಲ್ಲಿ ನಿಧಾನವಾಗುತ್ತಾ ಇರುವುದು ನಿಜ. ಮಾನ್ಯ ಸದಸ್ಯರಾದ ಶ್ರೀಮಾನ್ ರಾಮಯ್ಯನವರು ಹೇಳಿದಹಾಗೆ ಅಡ್ಮಿನಿಸ್ಟ್ರೇಟೀವ್ ಮೆಷಿನರಿ ತಾಪತ್ರಯ ಕೊಡುತ್ತಾ ಇದೆ.

ಶ್ರೀ ಎಂ. ವಿ. ರಾಮರಾವ್.—ತಾವು ಹೇಳುತ್ತಿರುವುದು ನಾನು ಹೇಳಿದ್ದಕ್ಕೋ, ರಾಮಯ್ಯನವರು ಹೇಳಿದ್ದಕ್ಕೋ? ನಾನು ಹೇಳಿದ್ದು ಅಡ್ಮಿನಿಸ್ಟ್ರೇಟಿವ್ ಟೆಕ್ನಿಕ್ ಎಂಪ್ಲಾಯ್ ಮಾಡುತ್ತಾರೆ. ಮಾಡುವುದರಲ್ಲಿ ಒಂದು ಹೊಸ ಟೆಕ್ನೀಕು ಬಂದಿದೆ. ಎಜ್ಯುಕೇಷನ್ ರಿಫಾರಮ್ಸ್ ಕಮಿಟಿ ಈಚೆಗೆ ರಚನೆಯಾಗಿತ್ತು, ಅಂಥ ಸಮಿತಿಗಳಿಗೆ ಚೀಫ್ ಮಿನಿಸ್ಟರನ್ನೋ ಅಥವಾ ತಮ್ಮಂಥ ಮಂತ್ರಿಗಳನ್ನೋ ಚೇರ್ಮನ್ ಆಗಿ ನೇಮಕ ಮಾಡಿದರೆ ಬೇಗ ಕೆಲಸ ಆಗಿ ಹೋಗುತ್ತದೆ ಎಂದು ತಿಳಿದುಕೊಂಡಿದ್ದೀರಿ. ಉದಾಹರಣೆಗೆ ಸೇಲ್ಸ್ ಟ್ಯಾಕ್ಸ್ ಕಮಿಟಿ ತೆಗೆದುಕೊಳ್ಳಿ. ಈಗೇನೋ ತಾವು ಒಂದು ವರದಿ ಕೊಟ್ಟಿದ್ದೀರಿ. ಸರ್ಕಾರದ ವಿಮರ್ಶೆ ಆಗಬೇಕು, ಶಾಸನ ಸಭೆಯಲ್ಲಿ ವಿಮರ್ಶೆ ಆಗಬೇಕು. ಆಮೇಲೆ ಇನ್ನು ಏನೇನು ಆಗಬೇಕೋ ಅದೆಲ್ಲಾ ಆಗಬೇಕು. ಈರೀತಿ ಅಡ್ಮಿನಿಸ್ಟ್ರೇಟಿವ್ ಟೆಕ್ನಿಕ್ ವಿಚಾರ ಸೂಚನೆ ಮಾಡಿದ್ದೇನೆಯೇ ಹೊರತು ಕೆಲಸಗಳು ನಿಧಾನವಾಗುತ್ತಾ ಇದೆ, ಅವಸರವಾಗಿ ನಡೆಯುತ್ತಿಲ್ಲ ಎಂದು ಹೇಳಲಿಲ್ಲ. ಅವಸರವಾಗಿ ನಡೆದರೆ ಕೆಲಸ ಆಗುತ್ತಿದೆ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಭಿನ್ನಾಭಿಪ್ರಾಯದ ಮಾತು. ಆಡಳಿತ ಯಂತ್ರದಲ್ಲಿ ಸುಧಾರಣೆ ಅವಶ್ಯಕವಾಗಿ ಆಗಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ.—ನಮ್ಮ ಕಾನ್ಸ್ಟಿಟ್ಯುಯನ್ಸಿನಲ್ಲಿ ಅನೇಕರು ಬಂದು ನಮಗೆ ಕೆಲವು ವಿಷಯಗಳಲ್ಲಿ ಅನ್ಯಾಯವಾಗಿವೆ ಎಂದು ಅವರ ಪ್ರತಿನಿಧಿಗಳಾದ ನಮ್ಮ ಮುಂದೆ ಹೇಳುತ್ತಾರೆ. ಅಂಥ ಸಂದರ್ಭಗಳಲ್ಲಿ ಅದನ್ನು ಸರಿಪಡಿಸಲು ಪ್ರಯತ್ನ ಪಡಬೇಕಾದದ್ದು ನಮ್ಮ ಕರ್ತವ್ಯ. ನಮ್ಮ ಕಾನ್ಸ್ಟಿಟ್ಯುಯನ್ಸಿಯಲ್ಲಿ serve ಮಾಡಬೇಕಾದರೆ ನಾವು ಯಾರಿಗೆ ಅನ್ಯಾಯವಾಗಿದೆಯೋ ಅವರ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದಾಗಲಿ ಅಥವಾ ಬೇರೆ ರೂಪದಲ್ಲಿ ಕೆಲಸ ಮಾಡಿಯಾಗಲಿ ಅದನ್ನು ಪರಿಹಾರಮಾಡಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದರೆ ಅದು ಸರಿಯಲ್ಲ interference ಎಂದು ಭಾವಿಸುವುದಾದರೆ ನಮ್ಮ ಗತಿಯೇನು?

ಶ್ರೀ ಕಡಿದಾಳ್ ಮಂಜಪ್ಪ.—ಅದು interference ಎಂದು ಆಗುವುದಿಲ್ಲ. ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯಗಳನ್ನು ಸರ್ಕಾರಿ ಅಧಿಕಾರಿಗಳ ಅಥವಾ ಸರ್ಕಾರದವರ ಗಮನಕ್ಕೆ ತರಲು ಈ ಮಾನ್ಯ ಸಭೆಯ ಸದಸ್ಯರಿಗೆ ಹಕ್ಕು ಇದೆ. ಇತರ ಸಾರ್ವಜನಿಕರಿಗೂ ಕೂಡ ಹಕ್ಕು ಇದೆ. ನಾನು ಹೇಳುವುದು ಯಾವ ಅಧಿಕಾರಿಗಳೂ ಕೂಡ ಅಡ್ಡದಾರಿ ಹಿಡಿದು ಪ್ರಭಾವಕ್ಕೆ ಒಳಗಾಗಬಾರದು ಎಂದು ಹೇಳಿದ್ದೇನೆ.

ಶ್ರೀಮಾನ್ ಸಿ. ಟಿ. ಹನುಮಂತಯ್ಯನವರು ಮಾತನಾಡುವಾಗ ನಿಮ್ನ ತರಗತಿಯವರ ವಿಚಾರದಲ್ಲಿ ಜಮೀನು ಹಂಚುವಾಗ ಸರ್ಕಾರದವರು ಉದಾಸೀನ ಮನೋಭಾವ ತಾಳಿದ್ದಾರೆ ಎಂದು ವಾದಿಸಿದರು. ಈಗ ಅವರು ಈ ಸಭೆಯಲ್ಲಿ ಇಲ್ಲ. 1947ನೇ ಇಸವಿಯಿಂದ ಇಲ್ಲಿಯವರೆಗೂ ಸರ್ಕಾರದವರು ಹಂಚಿರತಕ್ಕ ಜಮೀನಿನಲ್ಲಿ $\frac{1}{4}$ ಭಾಗದ ಜಮೀನನ್ನು ನಿಮ್ನ ತರಗತಿಯವರಿಗೆ ಕೊಟ್ಟಿದ್ದಾರೆ ಎಂಬುದನ್ನು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಎಷ್ಟು ಸಾವಿರ ಎಕರೆ ಎಂಬುದನ್ನು ಹೇಳಬಲ್ಲಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಒಟ್ಟಿನಲ್ಲಿ ಒಂದು ಲಕ್ಷ ಎಕರೆ.

ಶ್ರೀ ಕೆ. ಪ್ರಭಾಕರ್.—ಲಕ್ಷ ಎಕರೆ ಜಿ. ಎಂ. ಎಫ್. ಸ್ಕೀಂನಲ್ಲಿ ಕೊಟ್ಟಿದ್ದರೂ ಈಗ ಎಕರೆ ಒಂದಕ್ಕೆ 50 ರೂಪಾಯಿಗೆ ಕಡಮೆ ಇಲ್ಲದಂತೆ ತೆಗೆದುಕೊಳ್ಳಬೇಕೆಂದು ಫಿಕ್ಸ್ ಮಾಡಿದಮೇಲೆ ಅನೇಕರು ಜಮೀನು ಕಳೆದುಕೊಂಡಿದ್ದಾರೆ ಎಂಬುದನ್ನು ಅನೇಕಸಾರಿ ಈ ಸಭೆಯಲ್ಲಿ ಹೇಳಿದ್ದಾರೆ. ಸರ್ಕ್ಯುಲರ್ ಆರ್ಡರ್ ಮಾಡಿ ಜಿ. ಎಂ. ಎಫ್. ನಲ್ಲಿ ಕೊಟ್ಟಿರತಕ್ಕ ಜಮೀನು ನಿಮ್ನ ತರಗತಿಯವರಿಗೆ ಡಿಪ್ರೆಸ್ಡ್ ಕ್ಲಾಸ್ ರೂಲ್ಸ್ ಪ್ರಕಾರ ಕೊಟ್ಟಿದ್ದೇವೆ ಎಂದು ಡಿಕ್ಲೇರ್ ಮಾಡಬೇಕೆಂದು ಹೇಳಿದರೂ ಮಾಡಿಲ್ಲ. Issues ಮಾತ್ರ ಲಕ್ಷ ಎಕರೆ ಎಂದು ಹೇಳುತ್ತಾ ಇದ್ದೀರಿ. ಅದು ಪುಸ್ತಕದಲ್ಲಿಯೇ ವಿನಾ ಜಮೀನು ಅನೇಕರ ಕೈ ಬಿಡುತ್ತಾ ಇದೆ. ಇದನ್ನು ಸರಿಪಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಶ್ನೆಯ ಸಂಬಂಧವಾಗಿ ಅನೇಕಬಾರಿ ಸರ್ಕಾರದ ಸ್ಪಷ್ಟವಾದ ನೀತಿಯನ್ನು ತಿಳಿಸಿದ್ದೇನೆ. ಒಂದುವೇಳೆ ಜಮೀನು ಕೊಡುವಾಗ ಯಾವುದಾದರೂ ಷರತ್ತಿಗೆ ಅನುಸಾರವಾಗಿ ಕೊಟ್ಟಿದ್ದರೂ ಕೂಡ ಬಡವರಾಗಿದ್ದಲ್ಲಿ, ಜಮೀನು ಇಲ್ಲದವರಾಗಿದ್ದಲ್ಲಿ ಅವರಿಗೇ ಜಮೀನು ಕೊಡಬೇಕೆಂದು ಹೇಳಿ ನಿಬಂಧನೆ ಕೂಡ ಇದೆ. ರೂಲ್ಸಿಗೆ ವಿರುದ್ಧವಾಗಿ ಯಾರಾದರೂ ಅಧಿಕಾರಿಗಳು ವರ್ತಿಸಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಸರಿಪಡಿಸುವುದಕ್ಕೆ ಸದಾ ಸಿದ್ಧನಾಗಿದ್ದೇನೆ.

ಶ್ರೀ ಕೆ. ಪ್ರಭಾಕರ್.—ಕಿಮ್ಮತ್ತು ಕೊಡಲು ಶಕ್ತಿ ಇಲ್ಲದೇ ಇರುವವರಿಂದ ವಾಪಸು ತೆಗೆದುಕೊಳ್ಳುತ್ತಾರೆ. ಆ ರೀತಿ ತೆಗೆದುಕೊಳ್ಳಬಾರದು, ಮುಫತ್ತಾಗಿ ಕೊಡಬೇಕು ಎಂದು ಆರ್ಡರ್ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—Individual cases ಗಮನಕ್ಕೆ ತಂದರೆ ಸರಿಪಡಿಸುವುದಕ್ಕೆ ಸಿದ್ಧನಾಗಿದ್ದೇನೆ ಎಂದು ಹೇಳಿದೆ.

ಉಪಾಧ್ಯಕ್ಷರು.—ಜಿ. ಎಂ. ಎಫ್. ಸ್ಕೀಂ ಪ್ರಕಾರ ಕೊಟ್ಟಿರುವ ಜಮೀನಿಗೆ ಜಮೀನು ಕೊಡುವಾಗಲೇ ಕಿಮ್ಮತ್ತು ನಿಗದಿ ಮಾಡಿರುತ್ತಾರೆ; 5 ವರ್ಷ ಕಳೆದಮೇಲೆ ಮತ್ತೆ ಕಿಮ್ಮತ್ತು ನಿಗದಿ ಮಾಡುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ಇತ್ತೀಚೆಗೆ ಎಲ್ಲಾ ಕಡೆಗಳಲ್ಲೂ ಇಷ್ಟು ಬೆಲೆಗಿಂತ ಕಡಮೆ ಇರಕೂಡದು ಎಂದು ಷೆಡ್ಯೂಲ್ ಆಫ್ ರೇಟ್ಸ್ ಒಂದನ್ನು ರೆವೆನ್ಯೂ ಕಮಿಷನರು ಸೂಚಿಸಿದ್ದಾರೆ. ಅದು ಯಾವ ಆಧಾರದಮೇಲೆ ಇದೆ ಎಂದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಸಬ್ ರಿಜಿಸ್ಟ್ರಾರರ ಆಫೀಸಿನಲ್ಲಿ ರಿಜಿಸ್ಟರಾಗಿ ಮಾರಾಟವಾಗಿರತಕ್ಕ ಜಮೀನಿನ ಬೆಲೆಯಮೇಲೆ ಇದೆ. ಅದರ ಪ್ರಕಾರ ಬೆಂಗಳೂರು ಡಿಸ್ಟ್ರಿಕ್ಟಿನ ನೆಲಮಂಗಲ ತಾಲ್ಲೂಕಿನಲ್ಲಿ ಎಕರೆಗೆ 50 ರೂಪಾಯಿ ಇದೆ. ಇಷ್ಟು ಕಿಮ್ಮತ್ತು ಕೊಡಲು ಶಕ್ತಿಇಲ್ಲದೇ ಇರತಕ್ಕ ನೂರಾರು ಜನ ಜಮೀನು ಕಳೆದುಕೊಳ್ಳುತ್ತಾ ಇದ್ದಾರೆ.

Sri Kadidal MANJAPPA.—It is open to the Hon'ble Member to move a cut motion in this respect, Sir. ಶ್ರೀಮಾನ್ ಪರಮೇಶ್ವರಪ್ಪನವರು ಮಾತನಾಡುವಾಗ ತುಂಗಭದ್ರ ಪ್ರಾಜೆಕ್ಟಿನಲ್ಲಿ ಪೆಟ್ರೋಲ್ ದುರುಪಯೋಗವಾಗುತ್ತಾ ಇದೆ, ಸಿಮೆಂಟ್ ದುರುಪಯೋಗವಾಗುತ್ತಾ ಇದೆ ಎಂದು ಹೇಳಿದರು. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ತುಂಗಭದ್ರಾ ಪ್ರಾಜೆಕ್ಟು ಬೋರ್ಡಿನ ಅಧಿಕಾರಕ್ಕೆ ಒಳಪಟ್ಟಿದೆ. ಸರ್ಕಾರದ ನೇರವಾದ ಅಧಿಕಾರಕ್ಕೆ ಒಳಪಟ್ಟಿಲ್ಲ. ನಮ್ಮ ಚೀಫ್ ಇಂಜಿನಿಯರು ಮತ್ತು ಎಲೆಕ್ಟ್ರಿಕಲ್ ಚೀಫ್ ಇಂಜಿನಿಯರು ಇಬ್ಬರೂ ಆ ಬೋರ್ಡಿನಲ್ಲಿ ಸದಸ್ಯರಾಗಿದ್ದಾರೆ

ಲು ಆಗದ ಹಾಗೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಡುತ್ತೇವೆ.

ಶ್ರೀಮಾನ್ ಸಿದ್ದಪ್ಪನವರು ಸಬ್ ಡಿವಿಜನ್ ಆಫೀಸು ನ್ನು ವಜಾ ಮಾಡುವುದು ಅಗತ್ಯ ಎಂದು ಹೇಳಿ ದ್ದಾರೆ. ಈಗ ಟೆನೆನ್ಸಿ ಆಕ್ಟು ಸಂಸ್ಥಾನದ ಎಲ್ಲಾ ಕಡೆಯಲ್ಲೂ ಜಾರಿಯಲ್ಲಿರುವುದರಿಂದ ಈ ಸಬ್ ಡಿವಿಜನ್ ಆಫೀಸರುಗಳಿಗೆ ಆ ಟೆನೆನ್ಸಿ ಆಕ್ಟಿನಮೇಲೆ ಬರತಕ್ಕ ಂತಾದ ವಿವಾದಗಳನ್ನು ತೀರ್ಮಾನಮಾಡುವುದಕ್ಕೆ ಅಧಿ ಕಾರ ಕೊಡಬೇಕೆಂದು ಸರ್ಕಾರದವರು ಯೋಚನೆ ಮಾಡುತ್ತಾ ಇದ್ದಾರೆ. ಆದ್ದರಿಂದ ಅವರಿಗೆ ಕೆಲಸ ಇದೆ, ಇನ್ನೂ ಹೆಚ್ಚಾಗುತ್ತದೆ ಎಂದು ಹೇಳಿ ಸರ್ಕಾರದ ಅಭಿಪ್ರಾಯ.

ಜೋಮಾಳದ ವಿಚಾರದಲ್ಲಿ ನಾನು ಹೊಸದಾಗಿ ಹೇಳ ಬೇಕಾಗಿಲ್ಲ. ಎಲ್ಲೆಲ್ಲಿ ಹೆಚ್ಚಾಗಿದೆಯೋ ಆ ಭಾಗ ವನ್ನು ಸಾಗುವಳಿಗೆ ಕೊಡುವುದಕ್ಕೆ ಸಿದ್ಧವಾಗಿ ದ್ದೇವೆ. ಬೇರೆ ಕಡೆಗಳಲ್ಲಿ ಜಮೀನಿದೆ; ಆದರೆ ಅಲ್ಲಿಗೆ ಜಮೀನಿಲ್ಲದಿರುವವರು ಹೋಗುವುದಕ್ಕೆ ತಯಾರಾಗಿಲ್ಲ. ಉದಾಹರಣೆಗೆ ಪೆರಿಯಾಪಟ್ಟಣ ತಾಲ್ಲೂಕಿನಲ್ಲಿ ಸಾವಿ ರಾರು ಎಕರೆ ಜಮೀನಿದೆ; ಶಿವಮೊಗ್ಗ, ಕಡೂರು ಪ್ರದೇಶಗಳಲ್ಲಿ ಬೇಕಾದಷ್ಟು ಜಮೀನಿದೆ; ಅಲ್ಲಿಗೆ ಜನರು ಹೋಗುವುದಕ್ಕೆ ಸಿದ್ಧವಾಗಿದ್ದರೆ ಅಲ್ಲಿ ಜಮೀನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ.

ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ, ಅದರಲ್ಲಿಯೂ ಹೋಟೆಲುಗಳವರ ಮೇಲೆ ಹೊರಿಸಬೇಕೆಂದಿರುವ ತೆರಿಗೆಯ ವಿಚಾರದಲ್ಲಿ ಮಾನ್ಯ ಸದಸ್ಯರು ಕೆಲವರು ಮಾತನಾಡಿದ್ದಾರೆ. ಈ ವಿಚಾರದಲ್ಲಿಯೂ ಕೂಡ ಮಾನ್ಯ ಸದಸ್ಯರು ಯಾವ ರೀತಿ ಅಭಿಪ್ರಾಯ ಪಡು ತ್ತಾರೋ ಆ ರೀತಿ ನಡೆದುಕೊಳ್ಳುವುದಕ್ಕೆ ಸಿದ್ಧ......

ಶ್ರೀ ಎಂ. ವಿ. ರಾಮರಾವ್.—ತಮ್ಮ ಸಲಹೆಯ ಪ್ರಕಾರ ನಡೆದುಕೊಳ್ಳಲು ಸರ್ಕಾರದವರು ಸಿದ್ಧ ರಾಗಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ತಮ್ಮ ಕೈಯ್ಯ ದೆ. ನನ್ನ ಕೈ ಬಿಟ್ಟುಹೋಗಿದೆ.

ಉಳಿದ ತೆರಿಗೆಗಳ ವಿಚಾರದಲ್ಲಿಯೂ ನಾನು ಗಲೇ ಅರಿಕೆ ಮಾಡಿಕೊಂಡ ಹಾಗೆ, ಮಾನ್ಯ ಸದ ಸ್ಯರು ಯಾವರೀತಿ ಅಭಿಪ್ರಾಯಪಡುತ್ತಾರೋ ರೀತಿ ನಡೆಯುವುದಕ್ಕೆ ಸಿದ್ಧ. ಕೆಲವು ತೆರಿಗೆಗಳ ಸಂಬಂಧವಾಗಿ ಬದಲಾವಣೆ ಮಾಡುವುದಕ್ಕೆ ಅಗತ್ಯ ದೆಯೆಂದು ನಾನು ಭಾವಿಸುತ್ತೇನೆ.

ಮುಖ್ಯವಾಗಿ, ನಾನು ಮಲೆನಾಡಿನಿಂದ ಬಂದ ಪ್ರತಿನಿಧಿಯಾಗಿರುವುದರಿಂದ ಕಾಫಿ, ಅಡಿಕೆ, ಭತ್ತ ಇವು ಗಳ ಮೇಲೆ ವಿಧಿಸಬೇಕೆಂದಿರುವ ತೆರಿಗೆಯ ವಿಚಾರ ದಲ್ಲಿ ಒಂದು ಮಾತು ಹೇಳುವುದು ಅಗತ್ಯವೆಂದು ನನ್ನ ಭಾವನೆ. ತೆರಿಗೆ ಹಾಕಬಾರದೆಂದು ಹೇಳುವ ವಾದ ವನ್ನು ನಾನು ಒಪ್ಪುವುದಿಲ್ಲ. ತೆರಿಗೆಯೇ ಇಲ್ಲದಿದ್ದರೆ ಯಾವ ಸರ್ಕಾರವೂ ನಡೆಯುವುದಿಲ್ಲ ಸೋಷಿಯ ಲಿಸ್ಟ್ ಸರ್ಕಾರ ಬಂದರೂ ಅಥವಾ ಕಮ್ಯುನಿಸ್ ಸರ್ಕಾರ ಬಂದರೂ ತೆರಿಗೆ ಹಾಕಲೇಬೇಕು. ಯಾರ ಮೇಲೆ, ಎಲ್ಲಿ, ಯಾವ ವಿಧದಲ್ಲಿ ತೆರಿಗೆ ಹಾಕಬೇಕೆಂಬು ದನ್ನು ಯೋಚನೆಮಾಡಬೇಕಾಗುತ್ತದೆ. ಕೆಲವು ತೆರಿಗೆಗಳ ರೇಟುಗಳನ್ನು ಬದಲಾವಣೆ ಮಾಡಬೇಕಾ ದುದು ಅಗತ್ಯವೆಂದು ನಾನು ವೈಯ್ಯಕ್ತಿಕವಾಗಿ ಭಾವಿಸುತ್ತೇನೆ. ಪುನಃ, ಈ ವಿಚಾರದಲ್ಲ ತಾವು ಯಾವರೀತಿ ಅಭಿಪ್ರಾಯ ಪಡುತ್ತೀರೋ ಆ ರೀತಿ ನಡೆದುಕೊಳ್ಳುವುದಕ್ಕೆ ಸಿದ್ಧವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Is the Hon'ble Minister for Agriculture going to speak?

Dr. R. NAGAN GOWDA (Minister for Agriculture).—Sir, it is already 7-30 and I would like to have answered many of the points that have been raised under Electricity, Agriculture and Forests. But, since it is so late, I would like to take an opportunity at the time of the cut motions to reply to these points which have been raised. So I am not speaking.

Mr. DEPUTY SPEAKER.—The House will now rise for the day and meet on Monday at 12 NOON.

The House adjourned for the day at Thirty Minutes past seven of the Clock, to meet again on Monday, the 15th March 1954 at Twelve of the Clock.